ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಮ್ಮ ಹೆಮ್ಮೆಯ ಸಾಧಕರು ಪ್ರಶಸ್ತಿ ಪ್ರದಾನ ಸಮಾರಂಭದ ವಿಶೇಷ ಪುಟಗಳು
2, 3, 4 ▶▶

ನಾಡಿನ ಸಾಧಕರಿಗೆ ಲೋಕ ಧ್ವನಿಯ ಗೌರವ

ವಿವಿಧ ಕ್ಷೇತ್ರಗಳ 30 ವಿಶಿಷ್ಟ ಸಾಧಕರಿಗೆ ಪ್ರಶಸ್ತಿ ಪ್ರದಾನ | ಸಿಎಂ ಸಿದ್ದರಾಮಯ್ಯ ಸೇರಿ ಗಣ್ಯರಿಂದ ಗೌರವ ಪುರಸ್ಕಾರ | ವಿಶ್ವವಾಣಿ ಸೋದರ ಸಂಸ್ಥೆ ಲೋಕಧ್ವನಿಯಿಂದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಹುಟ್ಟು ಆಕಸ್ಮಿಕ , ಸಾವು ಖಚಿತ, ಹುಟ್ಟುಸಾವುಗಳ ನಡುವೆ ನಾವು ಸಾರ್ಥಕತೆ ಕಂಡುಕೊಳ್ಳಬೇಕು. ಯಾವುದೇ ಜಾತಿಧರ್ಮದಲ್ಲಿ ಹುಟ್ಟಿದರೂ ನಾವೆಲ್ಲರೂ ಮನುಷ್ಯರಾಗಿ ಬಾಳುವುದು ಮುಖ್ಯ. ಯಾವ ಜಾತಿಧರ್ಮದ ಆಧಾರದ ಮೇಲೆ ಮನುಷ್ಯತ್ವವನ್ನು ಅಳೆಯಬಾರದು. ಜಾತಿಧರ್ಮದ ಆಧಾರದಲ್ಲಿ ಸಮಾಜ ಒಡೆಯಬಾರದು.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಲೋಕಧ್ವನಿ ದಿನಪತ್ರಿಕೆಯ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 30 ಜನರಿಗೆ ಲೋಕಧ್ವನಿ ಹೆಮ್ಮೆಯ ಸಾಧಕ -2026 ಪ್ರಶಸ್ತಿ ನೀಡುತ್ತಿರುವುದು ಉತ್ತಮ ಸಂಗತಿ. ಈ ಪ್ರಶಸ್ತಿಗೆ ಭಾಜನರಾಗಿರುವ ಸಾಧಕರು ಮುಂದಿನ ದಿನಗಳಲ್ಲಿ ಇನ್ನೂ ಶ್ರೇಷ್ಠವಾದ ಕೆಲಸ ಮಾಡಲು ಸ್ಫೂರ್ತಿ ಸಿಗಲಿ.

-ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

ಕಳೆದ ನಾಲ್ಕು ದಶಕಗಳಿಂದ ಉತ್ತರ ಕನ್ನಡ ಜಿಲ್ಲೆಯ ಜನಜೀವನದ ಅವಿಭಾಜ್ಯ ಅಂಗವಾಗಿ ಲೋಕಧ್ವನಿ ಬೆಳೆದು ಬಂದಿದೆ. ಉತ್ತರ ಕನ್ನಡದಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಯಾವುದೇ ಸುದ್ದಿಯಿದ್ದರೂ ಅದು ಲೋಕಧ್ವನಿಯಲ್ಲಿಯೇ ಪ್ರಕಟವಾಗುತ್ತದೆ ಎನ್ನುವಷ್ಟರ ಮಟ್ಟಿಗೆ ಜನರ ನಂಬಿಕೆಯನ್ನು ಈ ಪತ್ರಿಕೆ ಗಳಿಸಿದೆ.

– ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕರು ವಿಶ್ವವಾಣಿ, ಧರ್ಮದರ್ಶಿ, ಜನಶಕ್ತಿ ವಿಶ್ವಸ್ಥ ಮಂಡಳಿ

ಬೆಂಗಳೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಲೋಕಧ್ವನಿ ಪತ್ರಿಕೆ ವತಿಯಿಂದ ಹಮ್ಮಿಕೊಂಡಿದ್ದ ನಮ್ಮ ಹೆಮ್ಮೆಯ ಸಾಧಕರು ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಶಿವರಾಜ್ ತಂಗಡಗಿ, ಮಂಕಾಳ ಎಸ್ ವೈದ್ಯ, ಬೈರತಿ ಸುರೇಶ್, ಶಾಸಕ ಶಿವರಾಮ್ ಹೆಬ್ಬಾರ್, ವಿಶ್ವವಾಣಿ ಪ್ರಧಾನ ಸಂಪಾದಕ, ಜನಶಕ್ತಿ ವಿಶ್ವಸ್ಥ ಮಂಡಳಿ ಧರ್ಮದರ್ಶಿ ವಿಶ್ವೇಶ್ವರ ಭಟ್ ಹಾಜರಿದ್ದರು.

ಪ್ರಶಸ್ತಿ ಪುರಸ್ಕೃತರು

- ಶ್ರೀ ಭೂತೇಶ್ವರ ಪತ್ತಿನ ಸಹಕಾರಿ ಸಂಘ ನಿಯಮಿತ ಶಿರಸಿ
- ಲಕ್ಷ್ಮೀನಾರಾಯಣ ಎಂ. ಹೆಗಡೆ ಶಿರಸಿ
- ನಾಗರಾಜ ಹಮ್ಮಣ್ಣ ನಾಯಕ ಅರೆಗದ್ದೆ
- ಸುಹಾಸ ಹೆಗಡೆ ಐತಾಳಿಮನೆ
- ನ್ಯಾಯವಾದಿ ನಾಗರಾಜ ವಿ. ನಾಯಕ
- ಬಾಲಕೃಷ್ಣ ನಾಯಕ ಯಲ್ಲಾಪುರ
- ಶ್ರೀಕಾಂತ್ ಕೃಷ್ಣ ಭಟ್ ತರಂಗ ಇಲೆಕ್ಟ್ರಾನಿಕ್ಸ್
- ಕೆಎಲ್‌ಸಿ ವಿಡಿಐಟಿ-ಹಳಿಯಾಳ
- ಸುರೇಶ್ಚಂದ್ರ ಹೆಗಡೆ ಕೇಶಿನಮನೆ
- ಎ.ರವೀಂದ್ರ ನಾಯ್ಕ ಶಿರಸಿ
- ನಾಗರಾಜ ಹಿತ್ತಲಮಕ್ಕಿ ಗೋಕರ್ಣ
- ಡಾ.ಮಧು ಹೆಗಡೆ ಶಿರಸಿ
- ಕಮಲಾಕರ ಗುರುನಾಥ ಹೆಗಡೆ ಬೊಮ್ಮನಳ್ಳಿ
- ಆದರ್ಶ್ ಪೈ ಬಿಳಗಿ
- ಎ.ಜೆ.ಎಫ್ ಲಯನ್ ಮನೋಹರ್ ಗೋವಿಂದ ಮಲ್ಮನೆ
- ಮಂಜುನಾಥ ಲಕ್ಷ್ಮಣ ನಾಯ್ಕ
- ಅಮೋದ್ ಸಿರ್ಸಿಕರ್
- ಜೈ ರಂಗನಾಥ್ ಬಿ.ಎಸ್.
- ರಾಜು ಎನ್. ಕದಂ
- ಯೋಗೇಶ್ ಪದ್ಮನಾಥ ಶಾನಭಾಗ
- ಸುಬ್ರಮಣ್ಯ ಗಾಂವಕರ್
- ವಿವೇಕ ಹೆಗಡೆ ಬಾಳೆಗದ್ದೆ
- ಡಾ.ಗಣೇಶ ನೀಲಪ್ಪ ಬಿಷ್ಟಣ್ಣನವರ್
- ಹಿತೇಂದ್ರ ನಾಯ್ಕ
- ಪ್ರದೀಪ ಕುಮಾರ್ ಎಲ್ಲನಕರ್
- ಶಿವರಾಜ್ ಸಂಗಪ್ಪ ಮುರಡಿ
- ಸೋಮನಾಥ ದೊಡ್ಡಮನೆ
- ಡಾ. ಬಸವರಾಜ ಅಂಗಡಿ
- ವೀರಣ್ಣ ಕಂಬಳ್ಳಿ
- ಶರಣೇಗೌಡ ಕೊಂತನೂರ್ ಪೊಲೀಸ್ ಪಟೇಲ್



ಭಾಗವಹಿಸಿದ್ದ ಪ್ರಮುಖರು

ಕಾರ್ಯಕ್ರಮದಲ್ಲಿ ಸಚಿವರಾದ ಶಿವರಾಜ ತಂಗಡಗಿ, ಮಂಕಾಳ ವೈದ್ಯ, ಬೈರತಿ ಸುರೇಶ, ಮುಖ್ಯಮಂತ್ರಿಗಳ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್, ಕೆಎಸ್‌ಟಿಡಿಸಿ ಅಧ್ಯಕ್ಷ ಸರೋವರ ಶ್ರೀನಿವಾಸ್, ಶಾಸಕರಾದ ಆರ್ .ವಿ.ದೇಶಪಾಂಡೆ, ಶಿವರಾಮ್ ಹೆಬ್ಬಾರ್, ಶಾಂತರಾಮ ಸಿದ್ದಿ, ದುಬೈ ಹೋಟೆಲ್ ಉದ್ಯಮಿ ಪ್ರವೀಣ್ ಶೆಟ್ಟಿ, ಅಡಿಗಾಸ್ ಯಾತ್ರಾ ಸಂಸ್ಥಾಪಕರಾದ ಕೆ.ನಾಗರಾಜ ಅಡಿಗ, ವ್ಯಾಲ್ಯೂ ಪ್ರಾಡೆಕ್ಟ್ ಎಂ.ಡಿ ಡಾ.ಶ್ರೀನಿವಾಸಮೂರ್ತಿ, ಪರ್ವ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಎಚ್.ಪಿ.ನೀಲೇಶ್, ಬಲ್ದೋಟ ಕಾರ್ಪೋರೇಟ್ ಅಧ್ಯಕ್ಷ ಎಚ್.ವೈ. ದೇಸಾಯಿ, ವಿಶ್ವೇಶ್ವರ ಭಟ್ ಪತ್ನಿ, ವಿಶ್ವವಾಣಿ ಪುಸ್ತಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕಿ ಸುಷ್ಮಾ ಭಟ್, ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ, ಎಸ್.ಎಂ.ಹೆಗಡೆ ಬಣಗಿ, ರಾಮಕೃಷ್ಣ ಹೆಗಡೆ ಮುದ್ದೇಪಾಲ, ಉದ್ಯಮಿ ಎಸ್.ಷಡಕ್ಷರಿ, ನ್ಯಾಯವಾದಿ ಬಾಲಚಂದ್ರ ಹೆಗಡೆ, ಕೆಡಿಸಿಸಿ ನಿರ್ದೇಶಕ ತಿಮ್ಮಯ್ಯ ಹೆಗಡೆ, ಜೇನು ಕೃಷಿಕ ಮಧುಕೇಶ್ವರ ಹೆಗಡೆ, ಉದ್ಯಮಿ ವಿದ್ಯಾಧರ, ಹೋಟೆಲ್ ಉದ್ಯಮಿ ನಾಗರಾಜ್, ದೇವಭಾಗ್ ಕ್ರೆಡಿಟ್ ಸೊಸೈಟಿಯ ಬಾಬಣ್ಣ ಶೇಟ್, ಸಿದ್ದೇಶ್ ಹಾರನಹಳ್ಳಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರು: ನಾಲ್ಕು ದಶಕಗಳ ಇತಿಹಾಸವಿರುವ, ಉತ್ತರ ಕನ್ನಡ ಜಿಲ್ಲೆಯ ಮೊದಲ ದೈನಿಕ ಪತ್ರಿಕೆ ಎನ್ನುವ ಹಿರಿಮೆ ಇರುವ 'ಲೋಕಧ್ವನಿ' ದಿನಪತ್ರಿಕೆ ವತಿಯಿಂದ ಹಮ್ಮಿಕೊಂಡಿದ್ದ 'ನಮ್ಮ ಹೆಮ್ಮೆಯ ಸಾಧಕರು' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಅದ್ದೂರಿಯಾಗಿ ನಡೆಯಿತು.

ವಿಶ್ವವಾಣಿ ಸೋದರ ಸಂಸ್ಥೆಯಾಗಿರುವ ಲೋಕಧ್ವನಿಯಿಂದ ಪ್ರಥಮ ಬಾರಿಗೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸುವ ಈ ವಿಭಿನ್ನ ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಹಾಗೂ ಕೊಪ್ಪಳ ಜಿಲ್ಲೆಯ ಅಪರೂಪದ ಸಾಧಕರನ್ನು ಗುರುತಿಸಿ ನಾಡಿಗೆ ಪರಿಚಯಿಸಲಾಯಿತು. ವಿಭಿನ್ನ ಸುದ್ದಿಯ ಮೂಲಕವೇ ಜನಜನಿತವಾಗಿರುವ ಲೋಕಧ್ವನಿ, ತೆರೆಮರೆಯ ಸಾಧಕರನ್ನು ಗುರುತಿಸುವ ನಿಟ್ಟಿನಲ್ಲಿ 'ಲೋಕಧ್ವನಿ ಹೆಮ್ಮೆಯ ಸಾಧಕ -2026' ನೀಡಲಾಯಿತು. ಎಲೆಮರೆಯ ಕಾಯಿಗಳಂತೆ ಗ್ರಾಮೀಣ ಪ್ರದೇಶದಲ್ಲಿ ಸಾಧನೆ ಮಾಡಿರುವ ಕರುನಾಡಿನ ಸಾಧಕರನ್ನು ಪರಿಚಯಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿತ್ತು. ಅದರಲ್ಲಿಯೂ ಉತ್ತರ ಕನ್ನಡ ಹಾಗೂ ಕೊಪ್ಪಳ ಜಿಲ್ಲೆಯ ಭಾಗದಲ್ಲಿ ಸಾಧನೆಯ ಶಿಖರವನ್ನೇರಿದ ಮಹನೀಯರನ್ನು ಪರಿಚಯಿಸುವುದೇ ಮೂಲ ಉದ್ದೇಶ.

ಗುರುವಾರ ಸಂಜೆ ಬೆಂಗಳೂರಿನ ರಾಡಿಸನ್ ಬ್ಲೂನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲು ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಶಿವರಾಜ ತಂಗಡಗಿ, ಮಂಕಾಳ ವೈದ್ಯ, ಹಿರಿಯ ಶಾಸಕ ಶಿವರಾಮ್ ಹೆಬ್ಬಾರ್, ವಿಧಾನಪರಿಷತ್ ಸದಸ್ಯ ಶಾಂತರಾಮ ಸಿದ್ದಿ ಸೇರಿದಂತೆ ಗಣ್ಯಾತಿಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರು, ಪ್ರಶಸ್ತಿ ಪುರಸ್ಕೃತರನ್ನು ವಿಶ್ವವಾಣಿಯ ವ್ಯವಸ್ಥಾಪಕ ನಾಗಾರ್ಜುನ್ ಮೋತಿಲಾಲ್, ಲೋಕಧ್ವನಿ ಉತ್ತರ ಕನ್ನಡ ಆವೃತ್ತಿನ ಸ್ಥಾನಿಕ ಸಂಪಾದಕ ನಾಗರಾಜು ಮತ್ತಿಗಾರ್ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ರೂಪಾ ಗುರುರಾಜ್ ನೆರವೇರಿಸಿದರು.

30 ಸಾಧಕರಿಗೆ ಸನ್ಮಾನ: ಸಹಕಾರ, ಶಿಕ್ಷಣ, ಬ್ಯಾಂಕಿಂಗ್, ಕೃಷಿ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 30 ಸಾಧಕರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ಎಲೆಮರೆಯ ಕಾಯಿಗಳಾಗಿ ದಶಕಗಳಿಂದ ಸೇವೆಸಲ್ಲಿಸಿದ್ದ ಅಪರೂಪದ ಸಾಧಕರನ್ನು ಮುಖ್ಯಮಂತ್ರಿಗಳು ಸನ್ಮಾನಿಸುವ ಕ್ಷಣವನ್ನು ಸೆರೆಹಿಡಿದಿಟ್ಟುಕೊಳ್ಳಲು ಸಾಧಕರ ಕುಟುಂಬ ಸದಸ್ಯರು, ಸ್ನೇಹಿತರು ಸಾಕ್ಷಿಯಾದರು.

ಕಾರ್ಯಕ್ರಮದ ಪ್ರಮುಖಾಂಶ

- ಉತ್ತರ ಕನ್ನಡ ಜಿಲ್ಲೆಯ ನಂ.1 ದಿನಪತ್ರಿಕೆಯಾಗಿರುವ ಲೋಕಧ್ವನಿ ಯಿಂದ 30 ಸಾಧಕರಿಗೆ ಸನ್ಮಾನ
- ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಹೆಕ್ಕಿ, ರಾಜ್ಯಕ್ಕೆ ಪರಿಚಯಿಸುವ ಪ್ರಯತ್ನ ಮಾಡಿದ ಲೋಕಧ್ವನಿ
- ಜಂಟಿ ಅಧಿವೇಶನ, ಸಚಿವ ಸಂಪುಟ ಸೇರಿದಂತೆ ಹಲವು ಕಾರ್ಯದೊತ್ತಡದ ನಡುವೆಯೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಿಎಂ ಸಿದ್ದರಾಮಯ್ಯ
- ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ಕಾರ್ಯಕ್ರಮದಲ್ಲಿದ್ದ ಸಿದ್ದರಾಮಯ್ಯ ಜತೆಗೆ ಪ್ರಶಸ್ತಿ ಪುರಸ್ಕೃತರು ಹಾಗೂ ಕುಟುಂಬ ಸದಸ್ಯರ ಸೆಲ್ಫಿ ಕ್ರೇಜ್
- 35 ನಿಮಿಷಕ್ಕೂ ಹೆಚ್ಚು ಕಾಲ ಭಾಷಣದಲ್ಲಿ ವಿಶ್ವೇಶ್ವರ ಭಟ್ ಹಾಗೂ ವಿಶ್ವವಾಣಿ ಸಮೂಹದೊಂದಿಗಿನ ಒಡನಾಟ ಹಂಚಿಕೊಂಡ ಸಿದ್ದರಾಮಯ್ಯ
- ಲೋಕಧ್ವನಿಯೂ ವಿಶ್ವವಾಣಿಯ ರೀತಿಯಲ್ಲಿ ರಾಜ್ಯ ಮಟ್ಟದ ಪತ್ರಿಕೆಯಾಗಲಿ ಎಂದು ಶುಭ ಹಾರೈಸಿದ ಸಿಎಂ
- ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮಿಸಿದ ಪ್ರಶಸ್ತಿ ಪುರಸ್ಕೃತರು ಹಾಗೂ ಕುಟುಂಬ ಸದಸ್ಯರು
- ಕಾರ್ಯಕ್ರಮದ ಆರಂಭದಲ್ಲಿ ಸುಗಮ ಸಂಗೀತ ಹಿರಿಯ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಹಾಗೂ ನಾಗಚಂದ್ರಿಕಾ ಭಟ್ ಅವರಿಂದ ಸಂಗೀತ ಸುಧೆ
- ನೆರೆದಿದ್ದ ಜನರ ಮನಸೂರೆಗೊಳಿಸಿದ ವಿ.ಸುಭ್ರತಾ ಅವರಿಂದ ಭರತನಾಟ್ಯ ಪ್ರದರ್ಶನ
- ಅನ್ಯಕಾರ್ಯಕ್ರಮವಿದ್ದರೂ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪುರಸ್ಕೃತರಿಗೆ ಶುಭ ಹಾರೈಸಿದ ಹಿರಿಯ ಶಾಸಕ ಆರ್.ವಿ. ದೇಶಪಾಂಡೆ

PARVA GROUP
AMRITH NONI
BALDOTA
FORTUNE GROUP OF HOTELS
A Praveen Shetty Enterprise
MRG Redefining Lifestyle & Hospitality
DIAGO FINANCE BUILD YOUR FUTURE
ಅಡಿಗಾಸ್ ಯಾತ್ರಾ
SANJEEVANA KALYANA FOUNDATION BANGALORE
OM GROUP OF HOTELS "Your Smile, Our Pleasure"



ವಿಶ್ವವಾಣಿ ರಾಜ್ಯಮಟ್ಟದಲ್ಲಿ ಜನಸಾಮಾನ್ಯರ ಧ್ವನಿಯಾಗಿದ್ದರೆ, ಲೋಕಧ್ವನಿ ಉತ್ತರ ಕನ್ನಡ ಜಿಲ್ಲೆಯ ಮೊದಲ ದೈನಿಕವಾಗಿ ಹಾಗೂ ಕಳೆದ ಒಂದು ವರ್ಷದಿಂದ ಕೊಪ್ಪಳ ಜಿಲ್ಲೆಯ ಜನರ ಬದುಕಿನ ಸಮಸ್ಯೆಗಳಿಗೆ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸ್ಥಳೀಯ ಜನರ ನೋವು, ನಿರೀಕ್ಷೆ, ಹೋರಾಟ ಮತ್ತು ಸಾಧನೆಗಳನ್ನು ಪ್ರತಿಬಿಂಬಿಸುವ ಮೂಲಕ ಲೋಕಧ್ವನಿ, ಜನಮನದ ನಿಜವಾದ ಧ್ವನಿಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ನಾಲ್ಕು ದಶಕಗಳಿಂದ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿದೆ.

-ವಿಶ್ವೇಶ್ವರ ಭಟ್, ಪ್ರಧಾನ ಸಂಪಾದಕರು, ವಿಶ್ವವಾಣಿ

ಪತ್ರಿಕಾರಂಗ, ಪ್ರವಾಸೋದ್ಯಮ, ಸಾಮಾಜಿಕ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಗೌರವ ನೀಡಿರುವುದು ಆದರ್ಶ ಕಾರ್ಯ. ನ್ಯಾಯವಾದಿ, ವೈದ್ಯ, ಪತ್ರಕರ್ತ, ಉದ್ಯಮಿ, ಕೈಗಾರಿಕೋದ್ಯಮ, ಕ್ರೀಡಾಪಟು ಸೇರಿದಂತೆ ಇನ್ನಿತರ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ಸಾಧನೆ ಮಾಡಿದವರನ್ನು ಸಮಾಜ ಗುರುತಿಸಬೇಕು. ಅಂತಹ ಸಾಧಕರನ್ನು ಗೌರವಿಸುವುದು ಸಮಾಜದ ಕರ್ತವ್ಯವಾಗಬೇಕು ಆ ಕೆಲಸವನ್ನು ವಿಶ್ವೇಶ್ವರ ಭಟ್, ವಿಶ್ವವಾಣಿ ಹಾಗೂ ಲೋಕಧ್ವನಿ ಪತ್ರಿಕೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ.

-ಆರ್.ವಿ.ದೇಶಪಾಂಡೆ, ಶಾಸಕರು

ದುಡಿಮೆಯೊಂದಿಗೆ ದಾನ-ಧರ್ಮವೂ ಇರಲಿ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಿರಿಯ ಶಾಸಕ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಅವರು ಮಾತನಾಡಿ, ಪ್ರತಿಯೊಬ್ಬರು ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡುವ ಜತೆಗೆ ಸಮಾಜಕ್ಕೂ ತಮ್ಮಿಂದಾದ ಕೊಡುಗೆ ನೀಡುವ ಕೆಲಸ ಮಾಡಬೇಕು. ಕೆಲವರು ಇಡೀ ಜೀವನ ದುಡ್ಡು ಮಾಡುವ ಕೆಲಸ ಮಾಡುತ್ತಾರೆ. ಆದರೆ ಕೇವಲ ದುಡ್ಡು ಮಾಡುವುದಷ್ಟೇ ಅಲ್ಲದೇ, ದುಡಿದ ಇಂತಿಷ್ಟು ಹಣವನ್ನು ದಾನ-ಧರ್ಮಕ್ಕೆ ಬಳಸಬೇಕು ಎಂದು ಅಭಿಪ್ರಾಯಪಟ್ಟರು.

ವಿಶ್ವೇಶ್ವರ ಭಟ್ಟರು ಕೇವಲ ಪತ್ರಿಕಾ ರಂಗಕ್ಕೆ ಸೀಮಿತವಾಗದೇ ವಿವಿಧ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಭಟ್ಟರ ದೂರದೃಷ್ಟಿಯನ್ನು ನಾನು ಮೆಚ್ಚುತ್ತೇನೆ. ಲೋಕಧ್ವನಿ ಪತ್ರಿಕೆ ಉತ್ತರ ಕನ್ನಡ ಸೇರಿ ರಾಜ್ಯದ ವಿವಿಧ ಭಾಗದ ಸಾಧಕರನ್ನು ಗುರುತಿಸುವ ಕೆಲಸ ಮಾಡಿರುವುದು ಶ್ಲಾಘನೀಯ. ಯಾವುದೇ ಕ್ಷೇತ್ರದಲ್ಲಾದರೂ, ಪ್ರಾಮಾಣಿಕವಾಗಿ ನಿಷ್ಠೆಯಿಂದ ಸಾಧನೆ ಮಾಡುವ ಸಾಧಕರನ್ನು ಗೌರವಿಸುವುದು ಪವಿತ್ರ ಕೆಲಸ ಎಂದರು. ಕಳೆದ 5 ದಶಕಗಳಿಂದ ರಾಜಕೀಯದಲ್ಲಿದ್ದು, ಸತತ 9 ಬಾರಿ ಶಾಸಕನಾಗಿದ್ದೇನೆ. ಇದಕ್ಕೆ ದೇವರ ಹಾಗೂ ಜನರ ಪ್ರೀತಿ ಮುಖ್ಯ. ಸ್ಥಾನಮಾನ ಪಡೆಯುವುದಕ್ಕಿಂತ ಜನರ ಪ್ರೀತಿ ಗಳಿಸಬೇಕು ಎಂದರು.

ವಿಶ್ವೇಶ್ವರ ಭಟ್ಟರು ಲೋಕಧ್ವನಿ ದಿನಪತ್ರಿಕೆಯನ್ನು ಮಾತ್ರವಲ್ಲದೆ ಪಾಟೀಲ್ ಪುಟ್ಟಪ್ಪ ಅವರು ಆರಂಭಿಸಿದ್ದ ವಿಶ್ವವಾಣಿ ಪತ್ರಿಕೆಗೆ ಮರುಹುಟ್ಟು ನೀಡಿ, ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಸ್ಥಗಿತಗೊಂಡಿದ್ದ ಎರಡು ಪತ್ರಿಕೆಗಳನ್ನು ಮತ್ತೆ ಜನರ ಬಳಿಗೆ ತರುವಲ್ಲಿ ವಿಶ್ವೇಶ್ವರ ಭಟ್ಟರ ಪಾತ್ರ ಮಹತ್ವದಾಗಿದೆ. ಇನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರನ್ನು ರಾಜ್ಯಕ್ಕೆ ತೋರಿಸುವ ನಿಟ್ಟಿನಲ್ಲಿ ಲೋಕಧ್ವನಿ ಹೆಮ್ಮೆಯ ಸಾಧಕ -2026 ಪ್ರಶಸ್ತಿ ನೀಡುತ್ತಿರುವುದು ಉತ್ತಮ ಸಂಗತಿ. ಈ ಪ್ರಶಸ್ತಿಗೆ ಭಾಜನರಾಗಿರುವ ಸಾಧಕರು ಮುಂದಿನ ದಿನಗಳಲ್ಲಿ ಇನ್ನೂ ಶ್ರೇಷ್ಠವಾದ ಕೆಲಸ ಮಾಡಲು ಸ್ಫೂರ್ತಿ ಸಿಗಲಿ.

- ಬಸವರಾಜ ಹೊರಟ್ಟಿ, ಸಭಾಪತಿ, ವಿಧಾನ ಪರಿಷತ್

ಉತ್ತರ ಕನ್ನಡದ ಧ್ವನಿ ಲೋಕಧ್ವನಿ

ಶೀಘ್ರದಲ್ಲಿಯೇ ಮೈಸೂರಿನಲ್ಲಿ ಲೋಕಧ್ವನಿ ಆವೃತ್ತಿ ಆರಂಭ | ಉತ್ತರ ಕನ್ನಡದ ಜನರೊಂದಿಗೆ ಲೋಕಧ್ವನಿಯ ಬಾಂಧವ್ಯ ವಿಭಿನ್ನ

ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಅವರೊಂದಿಗೆ ಪ್ರಶಸ್ತಿ ಪುರಸ್ಕೃತರು. ಈ ವೇಳೆ ವಿಶ್ವೇಶ್ವರ ಭಟ್, ಪ್ರವೀಣ್ ಶೆಟ್ಟಿ, ಶಶಿಧರ್ ನಾಗರಾಜಪ್ಪ, ಎಚ್.ಪಿ. ನಿಲೇಶ್, ಶ್ರೀನಿವಾಸಮೂರ್ತಿ ಇದ್ದರು.

ಸಿಎಂ ಸಿದ್ದರಾಮಯ್ಯ ಅವರು ಅಮೃತ್ ನೋನಿ ಶ್ರೀನಿವಾಸ ಮೂರ್ತಿ ಅವರನ್ನು ಸನ್ಮಾನಿಸಿದರು.

ಮುಖ್ಯಮಂತ್ರಿಗಳು ಅಡಿಗಾಸ್ ಯಾತ್ರಾ ಸಂಸ್ಥಾಪಕ ನಾಗರಾಜ್ ಅಡಿಗ ಅವರನ್ನು ಸನ್ಮಾನಿಸಿದರು.

ಸಿಎಂ ಸಿದ್ದರಾಮಯ್ಯ ಅವರು ಎಚ್.ವೈ.ದೇಸಾಯಿ ಅವರನ್ನು ಸನ್ಮಾನಿಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ನಾಲ್ಕು ದಶಕಗಳಿಂದ ಉತ್ತರ ಕನ್ನಡ ಜಿಲ್ಲೆಯ ಜನರ ಧ್ವನಿಯಾಗಿರುವ ಲೋಕಧ್ವನಿ ಶೀಘ್ರದಲ್ಲಿಯೇ ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಆವೃತ್ತಿ ಆರಂಭಿಸಲಿದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ, ಜನಶಕ್ತಿ ವಿಶ್ವಸ್ಥ ಮಂಡಳಿ ಧರ್ಮದರ್ಶಿ ವಿಶ್ವೇಶ್ವರ ಭಟ್ ಪ್ರಕಟಿಸಿದರು.

ಲೋಕಧ್ವನಿ ಪತ್ರಿಕೆಯ 42ನೇ ವರ್ಷದ ವಾರ್ಷಿಕೋತ್ಸವ ಹಾಗೂ ಲೋಕಧ್ವನಿ ನಮ್ಮ ಹೆಮ್ಮೆಯ ಸಾಧಕರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಲೋಕಧ್ವನಿ ಪತ್ರಿಕೆಯು ಉತ್ತರ ಕನ್ನಡ ಜಿಲ್ಲೆಯ ಮೊದಲ ದೈನಿಕವಾಗಿದ್ದು, ಕಳೆದ ನಾಲ್ಕು ದಶಕಗಳಿಂದ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ. ಉತ್ತರ ಕನ್ನಡದಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಯಾವುದೇ ಸುದ್ದಿಯಿದ್ದರೂ ಅದು ಲೋಕಧ್ವನಿಯಲ್ಲಿಯೇ ಪ್ರಕಟವಾಗುತ್ತದೆ ಎನ್ನುವಷ್ಟರ ಮಟ್ಟಿಗೆ ಜನರ ನಂಬಿಕೆಯನ್ನು ಈ ಪತ್ರಿಕೆ ಗಳಿಸಿದೆ ಎಂದು ಅಭಿಪ್ರಾಯಪಟ್ಟರು.

42 ವರ್ಷಗಳ ಇತಿಹಾಸ ಹೊಂದಿರುವ ಲೋಕಧ್ವನಿ ಪತ್ರಿಕೆ, ನಾನು ಓದುತ್ತಿದ್ದ ಕಾಲದಲ್ಲಿಯೇ ಶಿರಸಿಯಲ್ಲಿ ಆರಂಭವಾದದ್ದು. ಆ ದಿನಗಳಲ್ಲಿ ನನಗೆ ಪತ್ರಕರ್ತನಾಗಬೇಕು ಎಂಬ ಸ್ಪಷ್ಟ ಹಂಬಲವೂ ಇರಲಿಲ್ಲ. ಆದರೆ ಲೋಕಧ್ವನಿಯನ್ನು ಓದತೊಡಗಿದ ಕ್ಷಣದಿಂದಲೇ ಅದು ನನ್ನ ದಿನಚರಿಯ ಭಾಗವಾಗಿ, ಬೆಳಗಿನ ಓದಿನ ಅವಿಭಾಜ್ಯ ಅಂಗವಾಗಿ ನನ್ನ ಜೀವನವನ್ನು ಆವರಿಸಿಕೊಂಡಿದೆ. ಆರು ವರ್ಷಗಳ ಹಿಂದೆ, ನನ್ನ ಸಹೋದರಿಯ ಪತಿ, ಶಾಸಕರಾಗಿದ್ದ ದಿ. ಉಮೇಶ್ ಭಟ್ ಅವರ ನಿಧನದ ನಂತರ, ಲೋಕಧ್ವನಿ ಪತ್ರಿಕೆಯ ನೇತೃತ್ವವನ್ನು ನಾನು ವಹಿಸಿಕೊಂಡೆ. ಆ ದಿನದಿಂದ ಇಂದಿನವರೆಗೂ ಈ ಪತ್ರಿಕೆಯನ್ನು ಜನಪರ ಧ್ಯೇಯದೊಂದಿಗೆ ಮುನ್ನಡೆಸಿಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದರು.

ಈಗಾಗಲೇ ವಿಶ್ವವಾಣಿ ಮುನ್ನಡೆಸುತ್ತಿದ್ದ ನಾನು ಲೋಕಧ್ವನಿಯ ನೇತೃತ್ವವನ್ನು ವಹಿಸಿದಾಗ ಅನೇಕರು, 'ಲೋಕಧ್ವನಿ ಯಾಕೆ?' ಎನ್ನುವ ಪ್ರಶ್ನೆಯನ್ನು ಕೇಳಿದ್ದರು. ಈಗಲೂ ಕೇಳುತ್ತಿದ್ದಾರೆ. ರಾಜ್ಯಮಟ್ಟದ ಪತ್ರಿಕೆ ಇರುವಾಗ, ಇನ್ನೊಂದು ಜಿಲ್ಲಾ ಮಟ್ಟದ ಪತ್ರಿಕೆ ಏಕೆ ಬೇಕು ಎಂಬ ಆಲೋಚನೆಗಳು ಎಲ್ಲರಲ್ಲೂ ಮೂಡಿರಬಹುದು. ಆದರೆ 'ವಿಶ್ವ' ಮತ್ತು 'ಲೋಕ' ಎರಡೂ ಪದಗಳ ಅರ್ಥ ಒಂದೇ ಆಗಿದ್ದು, 'ವಾಣಿ' ಮತ್ತು 'ಧ್ವನಿ'ಯ ಅರ್ಥವೂ ಒಂದೇ ಆಗಿದೆ. ಅಂದರೆ ವಿಶ್ವವಾಣಿ ಎಂದರೆ ಲೋಕಧ್ವನಿ, ಲೋಕಧ್ವನಿ ಎಂದರೆ ವಿಶ್ವವಾಣಿ. ಹೆಸರುಗಳು ಬೇರೆ ಇದ್ದರೂ ಆತ್ಮ ಒಂದೇ, ಎರಡನ್ನೂ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಎರಡು ಪತ್ರಿಕೆಗಳು ಒಂದೇ ನಾಣ್ಯದ ಎರಡು ಮುಖಗಳ ಇದ್ದಂತೆ ಎಂದರು.

ರಾಜ್ಯಮಟ್ಟದ ಹಲವು ಪ್ರತಿಷ್ಠಿತ ಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ನಾನು ಕಾರ್ಯನಿರ್ವಹಿಸಿದ್ದರೂ, ಲೋಕಧ್ವನಿಯಲ್ಲಿ ಸಿಗುವಂತಹ ವಿಶೇಷ ಚೈತನ್ಯ ಮತ್ತು ಆತ್ಮೀಯತೆ ಬೇರೆ ಯಾವ ಪತ್ರಿಕೆಯಲ್ಲೂ ಸಿಗುವುದಿಲ್ಲ. ಕರ್ನಾಟಕದಲ್ಲಿ ಇರುವ ಯಾವುದೇ ಮಾಧ್ಯಮಗಳಿಗಿಂತ ಲೋಕಧ್ವನಿಯ ಜತೆಗಿನ ಜನರ ಸಂಬಂಧ ವಿಭಿನ್ನವಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಯಾವುದೇ ಸುದ್ದಿ ಮೊದಲು ಬ್ರೇಕ್ ಆಗುವುದಾದರೆ, ಅದು ಲೋಕಧ್ವನಿಯಲ್ಲೇ ಎಂಬ ನಂಬಿಕೆ ಜನರಲ್ಲಿ ಗಟ್ಟಿಯಾಗಿ ಬೆಳೆದಿದೆ ಎಂದರು.

ಈ ವೇಳೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಲೋಕಧ್ವನಿ ಪತ್ರಿಕೆಯನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. 1983ನೇ ಇಸವಿಯಲ್ಲಿ ನಾನು ಕಾರವಾರದಿಂದ ಚುನಾವಣೆ ನಿಲ್ಲುವಾಗ ಆ ಪತ್ರಿಕೆಯನ್ನು ನೋಡಿದ್ದೆ. ಪತ್ರಿಕೆ ಬಹಳ ಉತ್ತಮವಾದ ರೀತಿಯಲ್ಲಿ ಪ್ರಾರಂಭವಾಯಿತು. ಕಾರಣಾಂತರಗಳಿಂದ ಅದು ಮಧ್ಯದಲ್ಲೇ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ನಂತರ ವಿಶ್ವೇಶ್ವರ ಭಟ್ಟರ ಕೈಗೆ ಬಂದ ಬಳಿಕ ಅವರು ನೀರು ಹಾಕಿ ಬೆಳೆಸಿದಂತೆ ಪತ್ರಿಕೆಯನ್ನು ಬೆಳೆಸಿದ ಕಾರಣದಿಂದಾಗಿ ಹೆಮ್ಮರವಾಗಿ ಬೆಳೆದಿದೆ. ಇಂದು ಅತ್ಯಂತ ಉತ್ತಮವಾದಂಥ ರೀತಿಯಿಂದ ಲೋಕಧ್ವನಿ ಪತ್ರಿಕೆ ಕಾರವಾರ ಮತ್ತು ಕೊಪ್ಪಳದಲ್ಲಿ ಜನರ ಸಂಕಷ್ಟಗಳಿಗೆ ಪರಿಹಾರ ನೀಡುವ ಪತ್ರಿಕೆಯಾಗಿ ಬೆಳದಿದೆ ಎಂದರು.

ಶಶಿಧರ್ ನಾಗರಾಜಪ್ಪ ಅವರನ್ನು ಸಿಎಂ ಸಿದ್ದರಾಮಯ್ಯ ಸನ್ಮಾನಿಸಿದರು.

ಸಿದ್ದೇಶ್ ಹಾರನಹಳ್ಳಿ ಅವರನ್ನು ಸಿಎಂ ಸಿದ್ದರಾಮಯ್ಯ ಸನ್ಮಾನಿಸಿದರು.

ಹೋಟೆಲ್ ಉದ್ಯಮಿ ಪ್ರವೀಣ್ ಶೆಟ್ಟಿ ಅವರನ್ನು ಸಿಎಂ ಸಿದ್ದರಾಮಯ್ಯ ಸನ್ಮಾನಿಸಿದರು.

ಸಾಧಕ ಮಹನೀಯರಿಗೆ ಪುರಸ್ಕಾರದ ಗೌರವ



ಲೋಕಧ್ವನಿ ಹೆಮ್ಮೆಯ ಸಾಧಕರು: ಸಾಧಕ ಪ್ರಗತಿಮಿತ್ರ ವಿವೇಕ ಹೆಗಡೆ, ಉದಯೋನ್ಮುಖ ನಾಯಕ ಸೋಮನಾಥ ದೊಡ್ಡಮನೆ, ಶಿಕ್ಷಣ ಕ್ಷೇತ್ರದ ಧ್ರುವತಾರೆ ಡಾ.ಬಿಷ್ಟಣ್ಣವರ್, ಶಿಕ್ಷಕ ಸಮೂಹದ ದನಿ ಜೈರಂಗನಾಥ ಬಿ.ಎಸ್., 'ಪರಿವರ್ತನೆ'ಯ ಪಯಣಿಗ ಹಿತೇಂದ್ರ ನಾಯ್ಕ, ಬಹುಮುಖಿ ಸಾಧಕ ನಾಗರಾಜ ಹಿತ್ತಲಮಕ್ಕಿ, ಸಣ್ಣ ವ್ಯಾಪಾರಿಗಳ ಬಂಧು ಸುಬ್ರಹ್ಮಣ್ಯ ಗಾಂವಕರ್, ಬಡವರ ಪಾಲಿನ 'ದೇವರು' ಡಾ. ಬಸವರಾಜ ಅಂಗಡಿ.

ಲೋಕಧ್ವನಿ ಹೆಮ್ಮೆಯ ಸಾಧಕರು: ನೇಕಾರಿಕೆ ಕ್ಷೇತ್ರದ ಕ್ರಾಂತಿಕಾರಿ ಉದ್ಯಮಿ ಶಿವರಾಜ ಮುರುಡಿ, ತಾಂತ್ರಿಕ ಶಿಕ್ಷಣದ ಕಾಶಿ 'ವಿಡಿಐಟಿ ಹಳಿಯಾಳ ಕೆಎಲ್‌ಎಸ್ ವಿಡಿಐಟಿ ಪ್ರಿನ್ಸಿಪಾಲ್ ಡಾ.ವಿ.ಎ.ಕುಲಕರ್ಣಿ, ಬೆಳಗಾವಿ ಕೆಎಲ್‌ಎಸ್ ಅಧ್ಯಕ್ಷ ಪ್ರದೀಪ ಸವ್ವಾರ್, 'ಸಹಕಾರಿ ಶಕ್ತಿ' ಶರಣೇಗೌಡ ಕೊಂತನೂರು, ಅಕ್ಷರ ಸಾಮ್ರಾಜ್ಯ ಕಟ್ಟಿದ ಸಾಧಕ ವೀರಣ್ಣ ಕಂಬಳಿ, ಸಾಧಕ ಸಂಸ್ಥೆ ಶ್ರೀ ಭೂತೇಶ್ವರ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ವಿನಾಯಕ ಶೆಟ್ಟಿ, ಅಧ್ಯಕ್ಷ ಶ್ರೀಧರ ಮೊಗೇರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಿದರು. ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ, ಮೀನುಗಾರಿಕೆ ಹಾಗೂ ಬಂದರು ಸಚಿವ ಮಂಕಾಳ ವೈದ್ಯ, ಯಲ್ಲಾಪುರ-ಮುಂಡಗೋಡ ಶಾಸಕ ಶಿವರಾಮ ಹೆಬ್ಬಾರ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ದುಬೈ ಮೂಲದ ಹೋಟೆಲ್ ಉದ್ಯಮಿ ಪ್ರವೀಣ್ ಶೆಟ್ಟಿ, ವಿಶ್ವವಾಣಿ ಪ್ರಧಾನ ಸಂಪಾದಕ ಹಾಗೂ ಜನಶಕ್ತಿ ವಿಶ್ವಸ್ಥ ಮಂಡಳಿಯ ಧರ್ಮದರ್ಶಿ ವಿಶ್ವೇಶ್ವರ ಭಟ್ ಇದ್ದರು.

ವಿಶ್ವವಾಣಿಯಂತೆ ಲೋಕಧ್ವನಿಯೂ ಬೆಳಗಲಿ

ಪತ್ರಿಕೆಗಳು ವೈಚಾರಿಕತೆ, ವೈಜ್ಞಾನಿಕತೆಗೆ ಒತ್ತು ನೀಡಬೇಕು, ಸಮಾಜಮುಖಿ ಕೆಲಸಗಳಿಗೆ ಧ್ವನಿಯಾಗಬೇಕು

ಲೋಕಧ್ವನಿ ಹೆಮ್ಮೆಯ ಸಾಧಕ-2026 ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮತ

ಭಟ್ಟರು ಕ್ರಿಯಾಶೀಲ ವ್ಯಕ್ತಿ

ವಿಶ್ವೇಶ್ವರ ಭಟ್ಟರು ಕೇವಲ ಪತ್ರಕರ್ತರಾಗಿ ಮಾತ್ರ ಇರದೇ, ನಾಡಿನ ಶ್ರೇಷ್ಠ ಬರಹಗಾರರಾಗಿದ್ದಾರೆ, ಪತ್ರಿಕೋದ್ಯಮಿಯಾಗಿದ್ದಾರೆ. ಇದಕ್ಕೂ ಮಿಗಿಲಾಗಿ ಒಬ್ಬ ಅದ್ಭುತ ಪ್ರವಾಸಿಗರಾಗಿದ್ದಾರೆ. ಈಗಾಗಲೇ 110 ದೇಶಗಳನ್ನು ಸುತ್ತಿರುವ ಅವರು, ಕೇವಲ ದೇಶ ಸುತ್ತುವುದಷ್ಟೇ ಅಲ್ಲದೇ, ಅಲ್ಲಿನ ಕಲೆ, ಸಂಸ್ಕೃತಿಯ ಬಗ್ಗೆ ತಿಳಿಸುತ್ತಿದ್ದಾರೆ. 110 ದೇಶಗಳನ್ನು ಸುತ್ತಿರುವ ವಿಶ್ವೇಶ್ವರ ಭಟ್ಟರು ಕೆಲವೇ ವರ್ಷಗಳಲ್ಲಿ ವಿಶ್ವದಲ್ಲಿರುವ ಎಲ್ಲ ದೇಶಗಳ ಪ್ರಯಾಣವನ್ನು ಮಾಡುವ ವಿಶ್ವಾಸವಿದೆ ಎಂದು ಹೇಳಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಮುನ್ನಡೆಯುತ್ತಿರುವ ಉತ್ತರ ಕನ್ನಡ ಮೂಲದ ಲೋಕಧ್ವನಿ ಪತ್ರಿಕೆ ವಿಶ್ವವಾಣಿಯಂತೆ ರಾಜ್ಯಮಟ್ಟದ ಪತ್ರಿಕೆಯಾಗಿ ಬೆಳೆಯಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಿಸಿದರು.

ಲೋಕಧ್ವನಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವವಾಣಿ, ವಿಶ್ವೇಶ್ವರ ಭಟ್ಟರೊಂದಿಗಿನ ಒಡನಾಟವನ್ನು ಮೆಲುಕು ಹಾಕಿದರು. 2016ರಲ್ಲಿ ಮರುಲೋಕಾರ್ಪಣೆಗೊಂಡ ವಿಶ್ವವಾಣಿ ದಿನಪತ್ರಿಕೆಯನ್ನು, ಕಳೆದ ವರ್ಷ ಲೋಕಾರ್ಪಣೆಗೊಂಡ ಪ್ರವಾಸಿ ಪ್ರಪಂಚ ಪತ್ರಿಕೆಯನ್ನು ಬಿಡುಗಡೆಗೊಳಿಸಿದ್ದನ್ನು ನೆನಪಿಸಿಕೊಂಡ ಸಿದ್ದರಾಮಯ್ಯ ಅವರು ಲೋಕಧ್ವನಿಯೂ ರಾಜ್ಯ ಮಟ್ಟದ ಪತ್ರಿಕೆಯಾಗಿ ಬೆಳೆಯಲಿ, ಅದನ್ನು ತಾವೇ ಬಿಡುಗಡೆ ಮಾಡುವಂತಾಗಲಿ ಎಂದು ಅಭಿಮಾನದ ಮಾತುಗಳನ್ನಾಡಿದರು.

ವಿಶ್ವವಾಣಿ ಹಾಗೂ ಪ್ರವಾಸಿ ಪ್ರಪಂಚ ಬಿಡುಗಡೆಯಾಗುವ ಸಮಯದಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದೆ. 2016ರಲ್ಲಿ ವಿಶ್ವವಾಣಿ ಪತ್ರಿಕೆಯನ್ನು ಉದ್ಘಾಟನೆ ಮಾಡಿದ್ದೆ. ಈ ಪತ್ರಿಕೆ ರಾಜ್ಯದಲ್ಲಿ ಪ್ರಮುಖ ಪತ್ರಿಕೆಯಾಗಿ ಹೊರಹೊಮ್ಮಿದೆ. ವಿಶ್ವೇಶ್ವರ ಭಟ್ ಅವರು ವಿಶೇಷ ವ್ಯಕ್ತಿತ್ವ ಹೊಂದಿರುವ ವ್ಯಕ್ತಿ. ಅವರು ಆರಂಭಿಸಿರುವ ಪ್ರವಾಸಿ ಪ್ರಪಂಚ ವಾರ ಪತ್ರಿಕೆಯನ್ನೂ ನಾನೇ ಉದ್ಘಾಟಿಸಿದೆ. ವಿಶ್ವೇಶ್ವರ ಭಟ್ಟರು ಉತ್ತರ ಕನ್ನಡದ ಪ್ರಮುಖ ಪತ್ರಿಕೆಯಾಗಿರುವ ಲೋಕಧ್ವನಿಯ ಸಾರಥ್ಯವಹಿಸಿಕೊಂಡ ಬಳಿಕ ಈ ಪತ್ರಿಕೆಯನ್ನು ಕೊಪ್ಪಳಕ್ಕೂ ವಿಸ್ತರಿಸಿದ್ದಾರೆ. ಶೀಘ್ರದಲ್ಲಿಯೇ ಮೈಸೂರಿನಲ್ಲಿಯೂ ಆರಂಭಿಸುವುದಾಗಿ ಹೇಳಿದ್ದಾರೆ. ಆದ್ದರಿಂದ ಲೋಕಧ್ವನಿ ಜಿಲ್ಲಾಮಟ್ಟದ ಪತ್ರಿಕೆಯಾಗಿ ಉಳಿದಿಲ್ಲ. ಬದಲಿಗೆ ಅದೂ ಸಹ ರಾಜ್ಯಮಟ್ಟದ ಪತ್ರಿಕೆಯಾಗುವತ್ತ ಸಾಗುತ್ತದೆ. ಸಾಗುವುದಷ್ಟೇ ಅಲ್ಲದೇ, ಲೋಕಧ್ವನಿಯು ರಾಜ್ಯ ಪತ್ರಿಕೆಯಾಗುವ ಅರ್ಹತೆ ಪಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವಿಶ್ವೇಶ್ವರ ಭಟ್ಟರು ಮುಂದಿನ ದಿನದಲ್ಲಿ ಇನ್ನಷ್ಟು ಪತ್ರಿಕೆಗಳನ್ನು ಹೊರತರಬೇಕು. ಆ ಪತ್ರಿಕೆಗಳನ್ನು ನಾನೇ ಬಿಡುಗಡೆ ಮಾಡುತ್ತೇನೆ ಎಂದರು.

ಕಂದಾಚಾರಗಳಿಗೆ ಹೆಚ್ಚು ಮಹತ್ವ ನೀಡಬಾರದು: ಮಾಧ್ಯಮಗಳು ಕಂದಾಚಾರ, ಮೌಢ್ಯಗಳಿಗೆ ಹೆಚ್ಚು ಒತ್ತು ನೀಡದೇ ಸಮಾಜದಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆಗೆ ಹೆಚ್ಚಿನ ಮಹತ್ವ ನೀಡಬೇಕು. ಪತ್ರಕರ್ತರಾಗಿ ವಸ್ತುನಿಷ್ಠರಾಗಿ ಸತ್ಯವನ್ನು ಹೇಳುವ ಕೆಲಸ ಮಾಡಬೇಕು. ಸಮಾಜಕ್ಕೆ ಉಪಯೋಗವಲ್ಲದ ವಿಚಾರಗಳಿಗೆ ಮಹತ್ವವನ್ನು ನೀಡಬಾರದು. ಒಮ್ಮೆ ತಮ್ಮ ಕಾರಿನ ಮೇಲೆ ಕಾಗೆಯೊಂದು ಕೂತಿದ್ದಕ್ಕೆ ಪುಕಾರು ಎಬ್ಬಿಸಲಾಯಿತು. ಅಂತೆಯೇ ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟರೆ ಅವರು



> ಪಟ್ಟಭದ್ರ, ಹಿತಾಸಕ್ತರು ವ್ಯವಸ್ಥಿತವಾಗಿ ಶಿಕ್ಷಣದಿಂದ ಶೂದ್ರರನ್ನು ಹೊರಗಿಟ್ಟರು. ಮಂತ್ರ ಕೇಳಿದರೆ ಕಾದ ಶೀಸವನ್ನು ಕಿವಿಗೆ ಹಾಕುವ ಕಠೋರ ಪದ್ಧತಿಯಿತ್ತು. ಯಾವುದೇ ವ್ಯಕ್ತಿಗೆ ಅವಕಾಶ ಸಿಗದೇ, ಶಿಕ್ಷಣದಿಂದ ವಂಚಿತವಾದರೆ ಮುಂದೆ ಬರಲು ಹೇಗೆ ಸಾಧ್ಯ? ಮನೆಯಲ್ಲಿ ಒಬ್ಬರು ಪದವಿ ಪಡೆದರೆ ಮುಂದಿನ ಪೀಳಿಗೆ ವಿದ್ಯಾವಂತರಾಗುವುದು ಸುಲಭ.
>
> - ಸಿದ್ದರಾಮಯ್ಯ ಮುಖ್ಯಮಂತ್ರಿ

ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಯಿತು. ಆದರೆ ಈ ಘಟನೆಯ ನಂತರವೂ ನಾನು ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿಯೇ ಮುಂದುವರಿದಿದ್ದನ್ನು ಮುಖ್ಯಮಂತ್ರಿಗಳು ಸ್ಮರಿಸಿದರು.

ಹುಟ್ಟು ಆಕಸ್ಮಿಕ, ಸಾವು ಖಚಿತ, ಹುಟ್ಟುಸಾವುಗಳ ನಡುವೆ ನಾವು ಸಾರ್ಥಕತೆ ಕಂಡುಕೊಳ್ಳಬೇಕು. ಯಾವುದೇ ಜಾತಿಧರ್ಮದಲ್ಲಿ ಹುಟ್ಟಿದರೂ ನಾವೆಲ್ಲರೂ ಮನುಷ್ಯರಾಗಿ ಬಾಳುವುದು ಮುಖ್ಯ. ಯಾವ ಜಾತಿಧರ್ಮದ ಆಧಾರದ ಮೇಲೆ ಮನುಷ್ಯತ್ವ ವನ್ನು ಅಳೆಯಬಾರದು. ಯಾವ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಜಾತಿಧರ್ಮದ ಆಧಾರದ ಮೇಲೆ ಸಮಾಜ ಒಡೆಯಬಾರದು ಎಂದರು.

ಶಿಕ್ಷಣ ಒಂದು ವರ್ಗಕ್ಕೆ ಸೀಮಿತವಲ್ಲ: ಪತ್ರಕರ್ತರು ಮೌಢ್ಯಗಳಿಗೆ ಒತ್ತು ನೀಡದೆ ಸಮಾಜದಲ್ಲಿ ವೈಚಾರಿಕತೆ, ವೈಜ್ಞಾನಿಕತೆಯನ್ನು ಪ್ರೋತ್ಸಾಹಿಸಬೇಕು. ಇತ್ತೀಚಿನ ದಿನದಲ್ಲಿ ವಿದ್ಯಾವಂತರು ಕಂದಾಚಾರ, ಮೌಢ್ಯವನ್ನು ನಂಬುವುದು ಹೆಚ್ಚಾಗುತ್ತಿದೆ. ಜಾತಿವ್ಯವಸ್ಥೆಯಲ್ಲಿ ಚಲನೆಯಿಲ್ಲ. ಶಿಕ್ಷಣ ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿಲ್ಲ, ಸಮಾನ ಅವಕಾಶ ದೊರೆತರೆ ಎಲ್ಲರೂ ಉತ್ತಮ ಸಾಧನೆಗಳನ್ನು ಮಾಡುತ್ತಾರೆ. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಶಕ್ತಿ ಬಂದಾಗಲೇ ಜಾತಿ ವ್ಯವಸ್ಥೆ ತೊಲಗುತ್ತದೆ. ಸಮಾನ ಅವಕಾಶ ಮತ್ತು ಪ್ರಯತ್ನಗಳಿದ್ದರೆ ಸಮಾಜದ ಅಶಕ್ತರು ಅಭಿವೃದ್ಧಿ ಹೊಂದುತ್ತಾರೆ. ಪತ್ರಿಕೆಗಳು ಸಮಾಜವನ್ನು ತಿದ್ದುವ ಕೆಲಸ ಮಾಡುತ್ತಾ, ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಬೇಕು ಎಂದರು.

ಕೆಲವು ವೈದ್ಯರು, ಎಂಜಿನಿಯರ್, ವಿಜ್ಞಾನಿಗಳು ಈಗಲೂ 'ಕರ್ಮ', 'ಹಣೆಬರಹ'ದ ಮೇಲೆ ನಂಬಿಕೆ ಇಟ್ಟಿದ್ದಾರೆ. ದೇವರು ಯಾರಿಗಾದರೂ ಹಣೆಯಲ್ಲಿ ಬರೆದಿದ್ದಾನೆಯೇ? ನಮ್ಮ ಮನೆಯಲ್ಲಿ ಆರು ಜನ ಮಕ್ಕಳಲ್ಲಿ ನಾನೊಬ್ಬನೇ ಪದವಿ ಪಡೆದಿರುವುದು. ಇನ್ನುಳಿದವರೆಲ್ಲರೂ ಅವಿದ್ಯಾವಂತರು. ಹಾಗಾದರೆ, ದೇವರು ನನ್ನ ಹಣೆಯಲ್ಲಿ ಮಾತ್ರ ಮುಖ್ಯಮಂತ್ರಿಯಾಗುವಂತೆ ಬರೆದಿದ್ದನೇ? ಇಂತಹ ಸುದ್ದಿಗಳಿಗೆ ಮಾಧ್ಯಮಗಳು ಮಹತ್ವ ನೀಡಬಾರದು. ಅವಕಾಶ ಹಾಗೂ ಕಠಿಣ ಶ್ರಮದಿಂದ ಮಾತ್ರ ಮೇಲೆ ಬರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಭಾಷಣದ ಝಲಕ್

- ಜಾತಿ ಹಾಗೂ ಹುಟ್ಟಿನಿಂದ ಯೋಗ್ಯತೆ ಅಳೆಯಬಾರದು; ಸಮಾನ ಅವಕಾಶ ಸಿಕ್ಕರೆ ಎಲ್ಲರೂ ಉತ್ತಮ ಸಾಧನೆ ಮಾಡುತ್ತಾರೆ.
- ದಕ್ಷಿಣ ಕನ್ನಡ, ಉತ್ತರ ಕನ್ನಡ ಸೇರಿ ಕೆಲ ಜಿಲ್ಲೆಗಳಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಬಂದಿದ್ದರಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದಿವೆ.
- ನಾನು ಮತ್ತು ಬಸವರಾಜ ಹೊರಟ್ಟಿ ಅವರು ರಾಜಕೀಯ ಮೀರಿ ವೈಯಕ್ತಿಕ ನೆಲೆಯಲ್ಲಿ ಆತ್ಮೀಯರು, ಸ್ನೇಹಿತರು.
- ಹುಟ್ಟು ಆಕಸ್ಮಿಕ, ಸಾವು ಖಚಿತ; ಹುಟ್ಟು ಸಾವಿನ ನಡುವೆ ಜೀವನ ಸಾರ್ಥಕತೆಯನ್ನು ಗಮನಿಸಬೇಕು.
- ಯಾವ ಜಾತಿ, ಧರ್ಮದಲ್ಲಿ ಹುಟ್ಟಿದ್ದರೂ ಮನುಷ್ಯನಾಗಿ ಬಾಳುವುದು ಎಲ್ಲಕ್ಕಿಂತ ಮುಖ್ಯವಾಗಿರುತ್ತದೆ
- ಜಾತಿ, ಧರ್ಮದ ಆಧಾರದಲ್ಲಿ ಮನುಷ್ಯತ್ವವನ್ನು ಮರೆಯಬಾರದು; ಯಾವ ಜಾತಿ,ಧರ್ಮವೂ ದ್ವೇಷ ಮಾಡಬೇಕೆಂದು ಹೇಳಿಲ್ಲ
- ಕೆಲ ಮಾಧ್ಯಮಗಳು ಗಂಡ-ಹೆಂಡತಿ ಜಗಳವನ್ನೇ ತೋರಿಸುತ್ತಾರೆ; ಇಂತಹ ಸುದ್ದಿಗಳಿಗೆ ಮಹತ್ವ ನೀಡುವ ಅಗತ್ಯವೇನಿದೆ?
- ಸಮಾಜಕ್ಕೆ ಉಪಯೋಗವಿಲ್ಲದ ಸುದ್ದಿಗಳಿಗೆ ಮಾಧ್ಯಮಗಳು ಹೆಚ್ಚು ಮಹತ್ವ ನೀಡಬಾರದು. ಸಮಸ್ಯೆಗಳಿಗೆ ಸ್ಪಂದಿಸಬೇಕು.
- ನನ್ನ ಕಾರಿನ ಮೇಲೆ ಕಾಗೆ ಕೂತಿದ್ದನ್ನೇ ಮಾಧ್ಯಮಗಳು ದೊಡ್ಡ ವಿಷಯ ಮಾಡಿದ್ದವು; ಇಂತಹ ಕಂದಾಚಾರಕ್ಕೆ ಅವಕಾಶ ನೀಡಬಾರದು
- ಚಾಮರಾಜನಗರಕ್ಕೆ ಹೋದರೆ ಸಿಎಂ ಸ್ಥಾನ ಹೋಗುತ್ತದೆ ಎನ್ನುತ್ತಾರೆ; ಆದರೆ ನಾನು 15 ಬಾರಿ ಹೋಗಿದ್ದೇನೆ. ಏನೂ ಬದಲಾವಣೆ ಆಗಿಲ್ಲ
- ರಾಮಾಯಣ ಬರೆದ ವಾಲ್ಮೀಕಿ, ಮಹಾಭಾರತ ಬರೆದ ವ್ಯಾಸ, ಸಂವಿಧಾನ ನೀಡಿದ ಅಂಬೇಡ್ಕರ್ ಯಾವ ಜಾತಿಯವರು?

ಸಾಧಕ ಮಹನೀಯರಿಗೆ ಪುರಸ್ಕಾರದ ಗೌರವ

ಉತ್ತರ ಕನ್ನಡ ಜಿಲ್ಲೆಯ ಪ್ರಪ್ರಥಮ ದೈನಿಕ ಲೋಕಧ್ವನಿಯು ಜಿಲ್ಲೆಯ ಪತ್ರಿಕೋದ್ಯಮ ಇತಿಹಾಸದಲ್ಲಿ ಮೊದಲ ಬಾರಿಗೆ ರಾಜಧಾನಿ ಬೆಂಗಳೂರಿನ ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಮ್ಮ ಹೆಮ್ಮೆಯ ಸಾಧಕರು ಪ್ರಶಸ್ತಿ ಪ್ರದಾನ ಎಂಬ ಕಾರ್ಯಕ್ರಮವನ್ನು ಆಯೋಜಿಸಿತ್ತು. ಉತ್ತರ ಕನ್ನಡ, ಕೊಪ್ಪಳ್ಳ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಮಹನೀಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಈ ವೇಳೆ ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ, ಮೀನುಗಾರಿಕೆ ಹಾಗೂ ಬಂದರು ಸಚಿವ ಮಂಕಾಳ ಎಸ್.ವೈದ್ಯ, ಯಲ್ಲಾಪುರ- ಮುಂಡಗೋಡ ಶಾಸಕ ಶಿವರಾಮ ಹೆಬ್ಬಾರ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ದುಬೈನಲ್ಲಿ ನೆಲೆಸಿರುವ ಹೋಟೆಲ್ ಉದ್ಯಮಿ ಪ್ರವೀಣ್ ಶೆಟ್ಟಿ, ವಿಶ್ವವಾಣಿ ಪ್ರಧಾನ ಸಂಪಾದಕ ಹಾಗೂ ಜನಶಕ್ತಿ ವಿಶ್ವಸ್ಥ ಮಂಡಳಿಯ ಧರ್ಮದರ್ಶಿ ವಿಶ್ವೇಶ್ವರ ಭಟ್ ಅತ್ಯಂತ ಸಂಭ್ರಮದ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಲೋಕಧ್ವನಿ ಹೆಮ್ಮೆಯ ಸಾಧಕರು: ತರಂಗ ಇಲೆಕ್ಟ್ರಾನಿಕ್ಸ್ ಶ್ರೀಕಾಂತ ಭಟ್ಟರ ಪರವಾಗಿ ಪುರಸ್ಕಾರ ಸ್ವೀಕರಿಸಿದ ಜಯಾ ವಿ. ಹೆಗಡೆ, ಸಮಾಜ ಸೇವಕ ಆದರ್ಶ ಪೈ, ಆಯುರ್ವೇದ ವೈದ್ಯೆ ಡಾ. ಮಧು ಹೆಗಡೆ, ಚಂದನ ಶಿಕ್ಷಣ ಸಂಸ್ಥೆಯ ಲಕ್ಷ್ಮೀನಾರಾಯಣ ಎಂ. ಹೆಗಡೆ, ಕೃಷಿಕ, ಸಮನ್ವಯಕಾರ ಕಮಾಲಕರ ಹೆಗಡೆ ಬೊಮ್ನಳ್ಳಿ, ಉದ್ಯಮಿ ಪ್ರದೀಪ್ ಎಲ್ಲನಕರ್, ಸಾಹಿತಿ, ಸಮಾಜ ಸೇವಕ ಮನೋಹರ ಮಲ್ಮನೆ.

ಲೋಕಧ್ವನಿ ಹೆಮ್ಮೆಯ ಸಾಧಕರು: ಸಹಕಾರಿ ಸಾಧಕ ನಾಗರಾಜ ಹಮ್ಮಣ್ಣ ನಾಯಕ, ಯುವ ಧುರೀಣ ಅಮೋದ್ ಸಿರ್ಸಿಕರ್, ನ್ಯಾಯವಾದಿ ನಾಗರಾಜ ನಾಯಕ, ಸಾಮಾಜಿಕ ಕಾರ್ಯಕರ್ತ ಮಂಜುನಾಥ ನಾಯ್ಕ, ಕ್ಯಾಲೆಂಡರ್ ಮ್ಯಾನ್ ಯೋಗೇಶ ಶಾನಭಾಗ, ಬಹುಮುಖ ಉದ್ಯಮಿ ಬಾಲಕೃಷ್ಣ ನಾಯಕ ಡಿಜಿಟಲ್ ಕ್ರಾಂತಿಯ ಹರಿಕಾರ ಸುಹಾಸ ಹೆಗಡೆ ಐತಾಳಿಮನೆ, ಕೌಶಲ ಕ್ರಾಂತಿಯ ರಾಜು ಎನ್. ಕದಂ.

ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಶ್ವೇಶ್ವರ ಭಟ್ ಮತ್ತು ಶಾಸಕ ಶಿವರಾಮ ಹೆಬ್ಬಾರ ಅವರ ಮಾತುಕತೆಯ ಕ್ಷಣ.

ಮೀನುಗಾರಿಕೆ ಹಾಗೂ ಬಂದರು ಸಚಿವ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯರೊಂದಿಗೆ ವಿಶ್ವೇಶ್ವರ ಭಟ್.

ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ವಿಶ್ವೇಶ್ವರ ಭಟ್.

ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಶ್ವೇಶ್ವರ ಭಟ್, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರ ಚರ್ಚೆಯ ಕ್ಷಣ.

ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಶ್ವೇಶ್ವರ ಭಟ್ ಅವರ ಆಪ್ತ ಮಾತುಕತೆಯ ಕ್ಷಣ.

ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಸಂವಾದದ ನೋಟ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸರಣಿ ನಿರ್ಣಾಯಕ ಪಂದ್ಯ

ಭಾರತ - ನ್ಯೂಜಿಲೆಂಡ್ ನಡುವಣ ಮೂರನೇ ಟಿ-20 ಪಂದ್ಯ ಗುವಾಹಟಿಯಲ್ಲಿ ಭಾನುವಾರ ನಡೆಯಲಿದ್ದು, ಈ ಪಂದ್ಯ ಗೆದ್ದರೆ 5 ಪಂದ್ಯಗಳ ಸರಣಿ ಭಾರತದ ವಶವಾಗಲಿದೆ. ಸೂರ್ಯ ಕುಮಾರ್ ನೇತೃತ್ವದ ತಂಡ ಈಗ 2-0 ಮುನ್ನಡೆಯಲ್ಲಿದೆ.

ಸೊಂಪಾದ ಪುಟಗಳು



ಟೆಲ್ ಅವಿವ್‌ನ ಮನೆಯ ಗೋಡೆಯೂ ಬದುಕುಳಿಯುವ ಅದಮ್ಯ ಚೇತನಕ್ಕೆ ಸಾಕ್ಷಿ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ವನಭೋಜನ ಏಕೆ ವಿಶೇಷ ರುಚಿಕರ ಎಂದೆನಿಸುತ್ತದೆ?

ತಿಳಿರು ತೋರಣ
ಶ್ರೀವತ್ಸ ಜೋಶಿ 6

ದಾರಿದೀಪೋಕ್ತಿ

ಪರಿಶ್ರಮಕ್ಕೆ ಸೋಲಿಲ್ಲ ಮತ್ತು ಪ್ರಾಮಾಣಿಕ ಪ್ರಯತ್ನಕ್ಕೆ ಸಾವಿಲ್ಲ. ಇತಿಹಾಸವು ಕೇವಲ ಗೆದ್ದವರನ್ನು ನೆನಪಿಡುವುದಿಲ್ಲ, ಸೋತರೂ ಹೋರಾಟ ನಿಲ್ಲಿಸದ ಧೀರರನ್ನು ಸದಾ ಗೌರವಿಸುತ್ತದೆ.

ವಕ್ರತುಂಡೋಕ್ತಿ

ಡಯಟ್ ಮಾಡುವುದು ಅಂದ್ರೆ, ಇಷ್ಟವಾದದ್ದನ್ನೆಲ್ಲ ತಿಂದ ಮೇಲೆ 'ಅಯ್ಯೋ ತಿಂದ್ಬಿಟ್ಟೆನಲ್ಲಾ' ಅಂತ ಪಶ್ಚಾತ್ತಾಪ ಪಡುವುದು ಅಷ್ಟೇ!

ಟಿ-20 ವಿಶ್ವಕಪ್: ಸ್ಕಾಟ್ಲೆಂಡ್‌ಗೆ ಲಾಟರಿ

ಮುಂಬೈ: 2026ರ ಐಸಿಸಿ ಪುರುಷರ ಟಿ-20 ವಿಶ್ವಕಪ್‌ನಿಂದ ಬಾಂಗ್ಲಾದೇಶ ಹೊರಬಿದ್ದಿದ್ದು, ಈ ಸ್ಥಾನಕ್ಕೆ ಸ್ಕಾಟ್ಲೆಂಡ್‌ಗೆ ಅವಕಾಶ ಮಾಡಿಕೊಡಲಾಗಿದೆ. ಈ ಸಂಬಂಧ ಅಧಿಕೃತ ಮಾಹಿತಿಯನ್ನು ಐಸಿಸಿ ಹಂಚಿಕೊಂಡಿದೆ. ಭಾರತದಲ್ಲಿ ಆಯೋಜಿಸಲಾದ ಪಂದ್ಯಗಳನ್ನು ಲಂಕೆಗೆ ಹಸ್ತಾಂತರಿಸಬೇಕೆಂಬ ಬಾಂಗ್ಲಾ ದೇಶ ಕ್ರಿಕೆಟ್ ಮಂಡಳಿ ಮನವಿಯನ್ನು ಐಸಿಸಿ ತಳ್ಳಿ ಹಾಕಿದ ಬಳಿಕ ಪ್ರಸ್ತುತ ಐಸಿಸಿ ವಿಶ್ವ ಶ್ರೇಯಾಂಕದಲ್ಲಿ 14 ನೇ ಸ್ಥಾನದಲ್ಲಿರುವ ಸ್ಕಾಟ್ಲೆಂಡ್ ತಂಡವನ್ನು ಸೇರಿಸಿಕೊಳ್ಳಲಾಗಿದೆ. 2024ರ ಟಿ20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್, ಇಂಗ್ಲೆಂಡ್ ನಷ್ಟೇ ಅಂಕ ಪಡೆದು ಗ್ರೂಪ್ ಬಿಯಲ್ಲಿ ಮೂರನೇ ಸ್ಥಾನ ಪಡೆದಿತ್ತು. 2021 ಮ್ತು 2022ರಲ್ಲೂ ಸ್ಕಾಟ್ಲೆಂಡ್ ಸ್ಥಾನ ಗಿಟ್ಟಿಸಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಕಳಪೆ ನಿರ್ವಹಣೆಯಿಂದಾಗಿ ಬಿದ್ದ ಸಿಎಂ ಕಟ್‌ಔಟ್

ಸುದ್ದಿ

ಗಣರಾಜ್ಯೋತ್ಸವ ಭಾಷಣ ಓದಲು ರಾಜ್ಯಪಾಲರ ಷರತ್ತು

ಜ.26ರ ಭಾಷಣದಲ್ಲೂ ನರೇಗಾ ಪ್ರಸ್ತಾಪಕ್ಕೆ ಸರಕಾರ ಪಟ್ಟು

ಕೇಂದ್ರದ ವಿರುದ್ಧ ಟೀಕೆ ಇದ್ದರೆ ಬೇರೆ ಭಾಷಣವೆಂದ ಗೆಹ್ಲೋಥ್

ಮತ್ತೆ ಭಾಷಣ ಸಂಘರ್ಷ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

- ಲೋಕಭವನ - ವಿಧಾನಸೌಧ ಮುಂದುವರಿದ ಜಟಾಪಟಿ
- ರಾಜ್ಯಪಾಲರ ವಿರುದ್ಧ ಬೀದಿಗಿಳಿದು ಪ್ರತಿಭಟಿಸಲು ಕೈ ಪಡೆ ಸಜ್ಜು

ಕಳೆದೊಂದು ವಾರದಿಂದ ರಾಜ್ಯದಲ್ಲಿ ನಡೆಯುತ್ತಿರುವ 'ಲೋಕಭವನ ವರ್ಸಸ್ ರಾಜ್ಯ ಸರಕಾರ'ದ ಗದ್ದಲ ಮತ್ತೊಂದು ಹಂತಕ್ಕೆ ತಲುಪುವ ಸಾಧ್ಯತೆ ದಟ್ಟವಾಗಿದೆ. ಜಂಟಿ ಅಧಿವೇಶನದ ಭಾಷಣದ ಗದ್ದಲ ಮುಗಿಯುವ ಮೊದಲೇ, ಮತ್ತೊಂದು ಭಾಷಣಕ್ಕೆ ಸರಕಾರ ಹಾಗೂ ರಾಜ್ಯಪಾಲರ ನಡುವೆ ತಿಕ್ಕಾಟ ಜೋರಾಗಿದೆ.

ಕೇಂದ್ರ ಸರಕಾರವನ್ನು ವಿರುದ್ಧ ರಾಜ್ಯಪಾಲರ ಬಾಯಲ್ಲಿ ಟೀಕಿಸುವ ರಾಜ್ಯ ಸರಕಾರದ ನಡೆಯನ್ನು ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ತೀವ್ರವಾಗಿ ಖಂಡಿಸಿದ್ದಾರೆ. ಇದೇ ಕಾರಣಕ್ಕೆ ಈ ಬಾರಿಯ ಜಂಟಿ ಅಧಿವೇಶದಲ್ಲಿ ಒಂದೇ ಸಾಲಿನಲ್ಲಿ ತಮ್ಮ ಭಾಷಣಕ್ಕೆ ಇತಿಶ್ರೀ ಹಾಡಿದ್ದರು. ಇದೀಗ ಸೋಮವಾರ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣದ ಬಳಿಕ ರಾಜ್ಯಪಾಲರು ಸರಕಾರದ ಪ್ರತಿನಿಧಿಯಾಗಿ ಸಾರ್ವಜನಿಕ ಭಾಷಣ ಮಾಡಲಿದ್ದಾರೆ. ಈ ಭಾಷಣವನ್ನು ರಾಜ್ಯ ಸರಕಾರವೇ ಸಿದ್ಧಪಡಿಸಿಕೊಡಬೇಕು. ಈ ಭಾಷಣದಲ್ಲಿಯೂ ಕೇಂದ್ರ ಸರಕಾರದ ಧೋರಣೆಗಳನ್ನು ಟೀಕಿಸಿದರೆ ರಾಜ್ಯಪಾಲರು 'ಪ್ರತ್ಯೇಕ ಭಾಷಣ'ದ ಎಚ್ಚರಿಕೆ ರವಾನಿಸಿದ್ದಾರೆ ಎಂದು ಹೇಳಲಾಗಿದೆ. ಗಣರಾಜ್ಯೋತ್ಸವದ ಭಾಷಣದಲ್ಲಿಯೂ ಕೇಂದ್ರ ಸರಕಾರದ ಅನುದಾನ ತಾರತಮ್ಯ, ನರೇಗಾ ಯೋಜನೆ ಸೇರಿದಂತೆ ವಿವಿಧ ಯೋಜನೆಗಳನ್ನು ಉಲ್ಲೇಖಿಸಿ ಕೇಂದ್ರದ ವಿರುದ್ಧದ ಅಂಶಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಲಾಗಿದೆ. ಒಂದು ವೇಳೆ ಈ ರೀತಿಯ ಅಂಶಗಳಿದ್ದರೆ, ಪ್ರತ್ಯೇಕ ಭಾಷಣ ವನ್ನು ಓದುವುದಾಗಿ ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ರಾಜ್ಯಪಾಲರು ತಿಳಿಸಿದ್ದಾರೆ ಎಂದು ತಿಳಿದುಬಂದಿದೆ. → 8

27ಕ್ಕೆ ಲೋಕಭವನ ಚಲೋ

ಮೂರು ದಿನದ ರಜೆಯ ಬಳಿಕ ಮಂಗಳವಾರದಿಂದ ಜಂಟಿ ಅಧಿವೇಶನ ಆರಂಭವಾದರೂ 27ರಂದು ಅಧಿವೇಶನ ನಡೆಯುವುದು ಬಹುತೇಕ ಅನುಮಾನ ಎನ್ನಲಾಗುತ್ತಿದೆ.

ಆಸರೆ ಯೋಜನೆ ಫಲಾನುಭವಿಗಳಿಗೆ ಸಿದ್ದರಾಮಯ್ಯ, ಖರ್ಗೆ, ಜಮೀರ್ ಹಕ್ಕು ಪತ್ರ ವಿತರಿಸಿದರು.

ವಸತಿ ಯೋಜನೆಯಡಿ ಮನೆ ಹಕ್ಕು ಪತ್ರ ವಿತರಿಸಿದ ಸಿಎಂ

ರಾಜ್ಯದ 42,345 ಬಡ ಕುಟುಂಬಕ್ಕೆ ಮನೆಭಾಗ್ಯ

ಹುಬ್ಬಳ್ಳಿ: ಕೊಳಗೇರಿ ಜನರೂ ಮುಖ್ಯವಾಹಿನಿಗೆ ಬರಬೇಕು. ಇದಕ್ಕಾಗಿ ಇಷ್ಟು ಬೃಹತ್ ಪ್ರಮಾಣ ದಲ್ಲಿ ಮನೆ ವಿತರಣೆ ಮಾಡುತ್ತಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಇರುವುದೇ ಬಡವ ರನ್ನು ಮುಖ್ಯವಾಹಿನಿಗೆ ತರಲು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಸತಿ ಇಲಾಖೆ, ರಾಜ್ಯ ಗೃಹ ಮಂಡಳಿ, ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಶನಿವಾರ ಇಲ್ಲಿನ ಮಂಟೂರ ರಸ್ತೆಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಿರ್ಮಿಸಿರುವ 42,345 ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಿ, ಶುಭ ಹಾರೈಸಿ ಮಾತನಾಡಿದರು. ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ನಮ್ಮ ಕಾಂಗ್ರೆಸ್ ಸರಕಾರ 14,58000 ಮನೆ ಗಳನ್ನು ಕಟ್ಟಿ ಇತಿಹಾಸ ನಿರ್ಮಿಸಿ ವಸತಿ ಕ್ರಾಂತಿ ಮಾಡಿದ್ದೆವು. ಎರಡನೇ ಬಾರಿ ಮುಖ್ಯಮಂತ್ರಿ ಆದ ಬಳಿಕ 2024ರಲ್ಲಿ 36,789 ಮನೆಗಳನ್ನು ಮೊದಲನೇ ಹಂತದಲ್ಲಿ ವಿತರಿಸಿದ್ದ ನಮ್ಮ ಸರಕಾರ ಎರಡನೇ ಹಂತದಲ್ಲಿ 45 ಸಾವಿರ ಮನೆಗಳನ್ನು ಹಂಚುತ್ತಿದ್ದೇವೆ ಎಂದರು. → 8

> ನಮ್ಮ ಸರಕಾರ ಬಂದ ಬಳಿಕ 5500 ಕೋಟಿ ರು. ಹಣವನ್ನು 2 ವರ್ಷದಲ್ಲಿ ನಾವು, ನಮ್ಮ ಕಾಂಗ್ರೆಸ್ ಸರಕಾರ ಮನೆಗಳಿಗಾಗಿ ಖರ್ಚು ಮಾಡಿದ್ದೇವೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಿದ್ದರಾಮಯ್ಯ

ನಗರದ ಮಂಟೂರು ರಸ್ತೆಯಲ್ಲಿ ವೇದಿಕೆ ಹತ್ತಿರ ಸಮಾವೇಶಕ್ಕಾಗಿ ಹಾಕಲಾದ ಬೃಹತ್ ಕಟೌಟ್ ಬಿದ್ದು ಮೂವರು ಗಾಯಗೊಂಡಿದ್ದು ನಗರದ ಸುಚಿರಾಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬ್ಯಾಹಟ್ಟಿಯ ಶಂಕರ ಹಡಪದ (28), ಹುಬ್ಬಳ್ಳಿಯ ಶಾಂತಾ ಕ್ಯಾರಕಟ್ಟಿ (60) ಮತ್ತು ಧಾರವಾಡದ ಲಕ್ಷ್ಮಿ ನಗರದ ಮಂಜುನಾಥ (33) ಆಸ್ಪತ್ರೆಗೆ ದಾಖಲಾಗಿ ದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಮಾವೇಶದ ನಂತರ, ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಘಟನೆಯ ಕುರಿತು ವಿಷಾದ ವ್ಯಕ್ತಪಡಿಸಿದ ಅವರು, ಗಾಯಾಳುಗಳು ಸಂಪೂರ್ಣ ಗುಣಮುಖರಾಗು ವವರೆಗೆ ಉಚಿತವಾಗಿ ಅಗತ್ಯ ಚಿಕಿತ್ಸೆ, ಔಷಧಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಜೆಡಿಎಸ್ ಪಕ್ಷ 25 ವರ್ಷ ಪೂರೈಸಿದ ಹಿನ್ನೆಲೆ ಹಾಸನದಲ್ಲಿ ಆಯೋಜಿಸಿದ್ದ ಬೃಹತ್ ಸಮಾವೇಶದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಮಾತನಾಡಿದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿ ಹಲವರಿದ್ದರು.

ಟ್ರಂಪ್ ಸುಂಕ ವಾಪಸ್?

ವಾಷಿಂಗ್ಟನ್: ಅಮೆರಿಕದಿಂದ ಆಮದಾಗುವ ದ್ವಿದಳ ಧಾನ್ಯಗಳ ಮೇಲೆ ಶೇ. 30ರಷ್ಟು ವಿಧಿಸಿದ ಬೆನ್ನಿಗೇ ಟ್ರಂಪ್ ಸರಕಾರ ಭಾರತದ ಮೇಲೆ ಹೇರಿದ ಶೇ. 25ರ ಹೆಚ್ಚುವರಿ ಸುಂಕ ತೆಗೆದುಹಾಕಲು ತಯಾರಿ ನಡೆಸಿದೆ. ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಈ ಸಂಬಂಧ ಸುಳಿವು ನೀಡಿದ್ದಾರೆ. ಭಾರತದ ಮೇಲೆ ಶೇ.50 ಸುಂಕ ವಿಧಿಸಿದಾಗಿನಿಂದ ರಷ್ಯಾದಿಂದ ತೈಲ ಖರೀದಿಸುವುದು ಗಮನಾರ್ಹವಾಗಿ ಕಡಿಮೆಯಾಗಿದೆ. ಪ್ರಸ್ತುತ ಶೇ. 50 ಸುಂಕ ಇದ್ದು, ಇದು ಶಾಶ್ವತವಾಗಿ ಇರುವುದಿಲ್ಲ ಎಂದು ಸ್ಕಾಟ್ ಸುಂಕ ಕಡಿತಗೊಳಿಸುವ ಬಗ್ಗೆ ಸುಳಿವು ಕೊಟ್ಟಿದ್ದಾರೆ. ರಷ್ಯಾ ಕಚ್ಚಾ ತೈಲ ಆಮದಿಗೆ ಪ್ರತಿಯಾಗಿ ಟ್ರಂಪ್ ಸರಕಾರ ದಂಡದ ರೂಪದಲ್ಲಿ ಶೇ. 25ರಷ್ಟು ಹೆಚ್ಚುವರಿ ಸುಂಕ ಹೇರಿತ್ತು.

ಹಾಸನ ಜನತಾ ಸಮಾವೇಶದಲ್ಲಿ ಗುಡುಗಿದ ಎಚ್.ಡಿ. ದೇವೇಗೌಡ

ಜೆಡಿಎಸ್ ನಾಶ ಅಸಾಧ್ಯ

ಪಂಚಾಯಿತಿ ಚುನಾವಣೆ ಘೋಷಣೆಗೆ ಮುನ್ನ ಪಕ್ಷ ಬಲಪ್ರದರ್ಶನ

ಹಾಸನ: ಜೆಡಿಎಸ್ ಪಕ್ಷ ಸ್ಥಾಪನೆಯಾಗಿ 25 ವರ್ಷಗಳ ಬೆಳ್ಳಿ ಮಹೋತ್ಸವದ ಅಂಗವಾಗಿ ಜಿಲ್ಲೆಯಲ್ಲಿ ಆಯೋಜಿಸಿದ್ದ ಬೃಹತ್ ಜನತಾ ಸಮಾವೇಶದಲ್ಲಿ ಜೆಡಿಎಸ್ ದಳಪತಿಗಳು ವಿರೋಧಿಗಳ ವಿರುದ್ಧ ಗರ್ಜಿಸಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಶಕ್ತಿ ಪ್ರದರ್ಶನ ಮಾಡುವ ಮೂಲಕ ರಾಜಕೀಯವಾಗಿ ತಿರುಗೇಟು ನೀಡಿದರು.

ಜನತಾ ಸಮಾವೇಶದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದು, ಹಾಲಿ-ಮಾಜಿ ಶಾಸಕರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಉಪಸ್ಥಿತಿಯಿಂದ ಸಮಾವೇಶ ಶಕ್ತಿ ಪ್ರದರ್ಶನದ ರೂಪ ಪಡೆದುಕೊಂಡಿತು. ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪಕ್ಷದ ಕಾರ್ಯಕರ್ತರು ಸಜ್ಜಾಗಬೇಕೆಂದು ನಾಯಕರು ಕರೆ ನೀಡಿದರು.

ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ರೇವಣ್ಣ ಅವರ ಕುಟುಂಬವನ್ನು ಮುಗಿಸಲು ಹಲವು ಪ್ರಯತ್ನಗಳು ನಡೆದಿರುವುದು ಇಡೀ ರಾಜ್ಯಕ್ಕೆ ಗೊತ್ತಿದೆ. ಅವರನ್ನು ಬಂಧಿಸಲಾಯಿತು. ಎಸ್‌ಐಟಿ ತನಿಖೆ ಹೇಗೆ ನಡೆಯಿತು ಎಂಬುದನ್ನು ಜನರು ನೋಡಿದ್ದಾರೆ. ಈಗ ಅದೇ ತಂಡಕ್ಕೆ ಬಹುಮಾನ ನೀಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಬ್ಬ ರೈತನ ಮಗನಿಗೆ ರಾಜ್ಯ ಮತ್ತು ದೇಶವನ್ನು ಆಳುವ ಶಕ್ತಿಯನ್ನು ಜನರು ನೀಡಿದರು. ಆದರೆ ಜೆಡಿಎಸ್ ಪಕ್ಷವನ್ನು ಮುಗಿಸಲು ಯಾವೆಲ್ಲ ಕುತಂತ್ರಗಳು ನಡೆದಿವೆ ಎಂಬುದನ್ನೆಲ್ಲಾ ನಾನು ನೋಡಿದ್ದೇನೆ. ಎರಡು ಸಮಾವೇಶಗಳನ್ನು ಮಾಡಿ ಜೆಡಿಎಸ್ ನಾಶ ಮಾಡುತ್ತೇವೆ ಎಂದು ಭ್ರಮೆಯಲ್ಲಿದ್ದವರಿಗೆ, ಇಂದಿನ ಸಮಾವೇಶವೇ ತಕ್ಕ ಉತ್ತರವಾಗಿದೆ ಎಂದು ದೇವೇಗೌಡರು ಹೇಳಿದರು.

ನನಗೆ ದೈವದ ಮೇಲೆ ನಂಬಿಕೆ ಇದೆ; ಕಾಲ ಬರುತ್ತದೆ, ಆಗ ದೇವರೇ ತಕ್ಕ ನ್ಯಾಯ ಕೊಡುತ್ತಾನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕೈ ನಾಯಕ ರಾಹುಲ್ ಗಾಂಧಿ ದೇಶದ ಆರ್ಥಿಕತೆ ಸತ್ತಿದೆ ಎಂದು ಆರೋಪಿಸುತ್ತಿದ್ದಾರೆ. ಆದರೆ ವಾಸ್ತವ ಸ್ಥಿತಿ ಅವರಿಗೆ ತಿಳಿದಿಲ್ಲ. ವೋಟ್‌ಚೋರಿ ಎಂದು ಪದೇಪದೇ ಹೇಳಿಕೊಂಡ ಕಾಂಗ್ರೆಸ್ ಇಂದು ಕೇವಲ ಮೂರು ರಾಜ್ಯಗಳಲ್ಲಿ ಮಾತ್ರ ಅಧಿಕಾರದಲ್ಲಿದೆ ಎಂದು ವಾಗ್ದಾಳಿ ನಡೆಸಿದರು. ಕೇಂದ್ರ ಸಚಿವ ಕುಮಾರಸ್ವಾಮಿ, ಎಚ್.ಡಿ.ರೇವಣ್ಣ, ನಿಖಿಲ್ ಕುಮಾರಸ್ವಾಮಿ, ಟಿ.ಎ. ಶರವಣ ಸೇರಿ ಹಲವಾರು ನಾಯಕರು ಭಾಗವಹಿಸಿದ್ದರು.

> ಈ ಹಿಂದೆ ಕಾಂಗ್ರೆಸ್ ನಾಯಕರು ಜೆಡಿಎಸ್ ಪಕ್ಷವನ್ನು ಬಿಜೆಪಿಯ ಬಿ ಟೀಮ್ ಎಂದು ಕರೆದಿದ್ದರು. ಆದರೆ ಇಂದು ಅದೇ ಕಾಂಗ್ರೆಸ್ ಯಾವ ಸ್ಥಿತಿಗೆ ತಲುಪಿದೆ ಎಂಬುದು ದೇಶದ ಜನತೆಗೆ ಗೊತ್ತಿದೆ.
> -ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಕರ್ನಾಟಕದ 12 ವಿದ್ಯಾರ್ಥಿಗಳು ಆಯ್ಕೆ, ಮಿಲಿಟರಿ ಸಾಮರ್ಥ್ಯ ಅನಾವರಣಕ್ಕೆ ವೇದಿಕೆ

ದಿಲ್ಲಿ ಗಣತಂತ್ರ ಪರೇಡ್‌ಗೆ ಕ್ಷಣಗಣನೆ

ದೆಹಲಿ: 2026ರ ಸಾಲಿನ ಗಣರಾಜ್ಯೋತ್ಸವದ ಅಂಗವಾಗಿ ದೆಹಲಿಯ ಕರ್ತವ್ಯಪಥದಲ್ಲಿ ನಡೆಯುವ ಪಥ ಸಂಚಲನದಲ್ಲಿ ಹೆಜ್ಜೆ ಹಾಕಲು ರಾಜ್ಯದ 12 ಮಂದಿ ಎನ್‌ಸಿಸಿ ವಿದ್ಯಾರ್ಥಿಗಳು ಆಯ್ಕೆಯಾಗಿ ದ್ದಾರೆ. ವಿವಿಧ ಜಿಲ್ಲೆಗಳ 6 ಮಂದಿ ವಿದ್ಯಾರ್ಥಿನಿಯರು ಹಾಗೂ 6 ಮಂದಿ ವಿದ್ಯಾರ್ಥಿಗಳು ಕರ್ನಾಟವನ್ನು ಪ್ರತಿ ನಿಧಿಸಲಿದ್ದಾರೆ. ಎನ್‌ಸಿಸಿ 200 ಮಂದಿಯ ತಂಡದಲ್ಲಿ ರಾಜ್ಯದ 12 ಮಂದಿ ಸ್ಥಾನ ಪಡೆದಿದ್ದಾರೆ.

ಇದಲ್ಲದೆ ಎನ್ನೆಸ್ಸೆಸ್ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಮೂಲಕ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಪರೇಡ್‌ನಲ್ಲಿ ಭಾಗವಹಿಸಲಿದ್ದಾರೆ. ಈಗಾಗಲೇ ಕರ್ತವ್ಯಪಥದಲ್ಲಿ ತರಬೇತಿ ಪಡೆದಿರುವ ವಿದ್ಯಾರ್ಥಿಗಳು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸಾವಿರಾರು ಗಣ್ಯರ ಮುಂದೆ ಪರೇಡ್ ನಡೆಸಲು ಕಾತುರದಿಂದ ಕಾಯುತ್ತಿದ್ದಾರೆ. ಗೃಹಸಚಿವಾಲಯ, ಪ್ರಧಾನ ಮಂತ್ರಿ ಕಾರ್ಯಾಲಯ ಮತ್ತು ರಾಷ್ಟ್ರಪತಿಭವನದಿಂದ ವಿಶೇಷ ಆಹ್ವಾನ ಪಡೆದ ಸಾಧಕರಿಗೆ ಪರೇಡ್ ವೀಕ್ಷಣೆಗೆ ಅವಕಾಶ ನೀಡಲಾಗಿದೆ.

ಹೈಪರ್ ಸಾನಿಕ್ ಕ್ಷಿಪಣಿ: 77ನೇ ಗಣರಾಜ್ಯೋತ್ಸವದಲ್ಲಿ ಭಾರತೀಯ ನೌಕಾಪಡೆಯು ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಅತ್ಯಾಧುನಿಕ 'ದೀರ್ಘ ಶ್ರೇಣಿಯ ಹೈಪರ್‌ಸಾನಿಕ್ ಹಡಗು ವಿರೋಧಿ ಕ್ಷಿಪಣಿ'ಯನ್ನು ಮೊಟ್ಟ ಮೊದಲ ಬಾರಿಗೆ ಜಗತ್ತಿನ ಮುಂದೆ ಅನಾವರಣಗೊಳಿಸಲಿದೆ. → 8



ಕೆಂಪುಕೋಟೆಯಲ್ಲಿ ರಾಜ್ಯದ ಟ್ಯಾಬ್ಲೋ ಪ್ರದರ್ಶನ

ಆತ್ಮನಿರ್ಭರ ಭಾರತಕ್ಕೆ ಸಿರಿಧಾನ್ಯದಿಂದ ತಂತ್ರಜ್ಞಾನದವರೆಗೆ ರಾಜ್ಯದ ಸಮಗ್ರ ಕೊಡುಗೆಯ ಸಂಕೇತವಾಗಿ ಗಣರಾಜ್ಯೋತ್ಸವದ ಪರೇಡ್‌ಗೆ 'ಮಿಲೆಟ್ಸ್ ಟು ಮೈಕ್ರೋ ಚಿಪ್' ವಿಷಯಾಧಾರಿತ ಸ್ತಬ್ಧ ಚಿತ್ರ ಸಿದ್ಧಪಡಿಸಲಾಗಿದೆ. ಈ ಸ್ತಬ್ಧಚಿತ್ರದ ಮೂಲಕ ಕರ್ನಾಟಕದ ಬೆಳೆಗಳಾದ ರಾಗಿ, ಜೋಳ, ನವಣೆ, ಸಜ್ಜೆ ಬೆಳೆ ಹಾಗೂ ಕರ್ನಾಟಕದ ಮಾಹಿತಿ ತಂತ್ರಜ್ಞಾನ ಬೆಳವಣಿಗೆ ಬಗ್ಗೆಯೂ ವಿವರಣೆ ನೀಡಲಾಗಿದೆ. ಆದರೆ ಈ ಸ್ತಬ್ಧಚಿತ್ರಕ್ಕೆ ಕರ್ತವ್ಯಪಥದಲ್ಲಿ ನಡೆಯುವ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗಿಯಾಗಲು ಅವಕಾಶ ಸಿಕ್ಕಿಲ್ಲ. ಬದಲು ಕೆಂಪು ಕೋಟೆಯಲ್ಲಿ ಆಯೋಜಿಸುವ ಭಾರತ ಪರ್ವದಲ್ಲಿ ಈ ಸ್ತಬ್ಧ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇತರೆ ರಾಜ್ಯಗಳಿಗೂ ಅವಕಾಶ ನೀಡುವ ದೃಷ್ಟಿಯಿಂದ ಕರ್ನಾಟಕದ ಸ್ತಬ್ಧಚಿತ್ರವನ್ನು ಈ ಬಾರಿ ಪರೇಡ್ ನಿಂದ ಹೊರಗಿಡಲಾಗಿದೆ.

ಟೆಲ್ ಅವಿವ್‌ನ ಮನೆಯ ಗೋಡೆಯೂ ಬದುಕುಳಿಯುವ ಅದಮ್ಯ ಚೇತನಕ್ಕೆ ಸಾಕ್ಷಿ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಟೆಲ್ ಅವಿವ್‌ನ ಸುಂದರ ಬೀದಿಗಳು, ಕೆಫೆಗಳು ಮತ್ತು ಮೆಡಿಟರೇನಿಯನ್ ಸಮುದ್ರದ ಅಲೆಗಳನ್ನು ನೋಡುವಾಗ ಅಲ್ಲಿನ ಜೀವನ ಅತ್ಯಂತ ಸುಂದರ ಮತ್ತು ಶಾಂತಿಯುತವಾಗಿ ಕಾಣುತ್ತದೆ. ಆದರೆ, ಅಲ್ಲಿನ ಪ್ರತಿ ಮನೆಯ ಒಳಗೂ ಒಂದು ಕಟುಸತ್ಯ ಅಡಗಿದೆ. ಅದೇ 'ಮಮದ್'. ಇದು ಕೇವಲ ಒಂದು ಕೊಠಡಿಯಲ್ಲ, ಬದಲಿಗೆ ಸಾವು-ಬದುಕಿನ ನಡುವಿನ ಒಂದು ಭದ್ರಕೋಟೆ. ಇಸ್ರೇಲ್‌ನ ನಾಗರಿಕರು ದಶಕಗಳಿಂದ ಎದುರಿಸುತ್ತಿರುವ ಯುದ್ಧದ ಭೀತಿ ಮತ್ತು ಅನಿಶ್ಚಿತತೆಯ ನಡುವೆ, ಈ 'ಮಮದ್' ಎಂಬ ಬಾಂಬ್ ನಿರೋಧಕ ಕೊಠಡಿಗಳು ಅವರ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿವೆ.

'ಮಮದ್' ಎಂದರೇನು?

ಹೀಬ್ರೂ ಭಾಷೆಯಲ್ಲಿ 'ಮಮದ್' ಎಂದರೆ 'ವೈಯಕ್ತಿಕ ವಸತಿ ಸುರಕ್ಷಿತ ಸ್ಥಳ' ಎಂದರ್ಥ. ಇದು ಮನೆಯ ಒಳಗೇ ಇರುವ ಒಂದು ಬಲವಾದ ಕಾಂಕ್ರೀಟ್ ಕೊಠಡಿ. 1990-91ರ ಕೊಲ್ಲಿ ಯುದ್ಧದ ಸಮಯದಲ್ಲಿ ಇಸ್ರೇಲ್ ಮೇಲೆ ರಾಕೆಟ್ ದಾಳಿಗಳು ನಡೆದ ನಂತರ, ಇಸ್ರೇಲ್ ಸರಕಾರ ಒಂದು ಕಟ್ಟುನಿಟ್ಟಾದ ನಿಯಮವನ್ನು ಜಾರಿಗೆ ತಂದಿತು. ಅದರಂತೆ, 1992ರ ನಂತರ ನಿರ್ಮಿಸಲಾದ ಪ್ರತಿಯೊಂದು ಹೊಸ ಅಪಾರ್ಟ್‌ಮೆಂಟ್ ಅಥವಾ ಮನೆಯಲ್ಲಿ ಕಡ್ಡಾಯವಾಗಿ ಒಂದು 'ಮಮದ್' ಇರಲೇಬೇಕು. ಒಂದು ಸಾಮಾನ್ಯ ಕೊಠಡಿಗೂ 'ಮಮದ್'ಗೂ ಆಕಾಶ-ಭೂಮಿಯ ವ್ಯತ್ಯಾಸವಿದೆ. ಇದರ ನಿರ್ಮಾಣವು ಅತ್ಯಂತ ಕಟ್ಟುನಿಟ್ಟಾದ ಎಂಜಿನಿಯರಿಂಗ್ ಮಾನದಂಡಗಳಿಗೆ ಒಳಪಟ್ಟಿರುತ್ತದೆ. ಈ ಕೊಠಡಿಯ ಗೋಡೆಗಳನ್ನು ಅತ್ಯಂತ ದಪ್ಪನೆಯ ಮತ್ತು ಬಲವರ್ಧಿತ ಕಾಂಕ್ರೀಟ್‌ನಿಂದ ನಿರ್ಮಿಸಲಾಗುತ್ತದೆ. ಇದು ಸ್ಫೋಟದ ತೀವ್ರತೆಯನ್ನು ಮತ್ತು ಕಟ್ಟಡ ಕುಸಿತವನ್ನು ತಡೆದುಕೊಳ್ಳುವ ಶಕ್ತಿ ಹೊಂದಿದೆ.

ಇಲ್ಲಿನ ಬಾಗಿಲುಗಳು ಸಾಮಾನ್ಯ ಮರದ ಬಾಗಿಲುಗಳಲ್ಲ. ಇವು ಗಾಳಿಯಾಡದಂತೆ (Airtight) ಮುಚ್ಚಬಲ್ಲ ಭಾರಿ ತೂಕದ ಉಕ್ಕಿನ ಬಾಗಿಲುಗಳು. ಇವು ರಾಕೆಟ್ ಚೂರುಗಳು ಅಥವಾ ರಾಸಾಯನಿಕ ಅನಿಲ ಒಳಬರದಂತೆ ರಕ್ಷಿಸುತ್ತವೆ. ಆಧುನಿಕ ಮಮದ್‌ಗಳಲ್ಲಿ ರಾಸಾಯನಿಕ ದಾಳಿ ನಡೆದರೆ ಉಸಿರಾಡಲು ಅನುಕೂಲವಾಗುವಂತೆ ವಿಶೇಷವಾದ ಏರ್ ಫಿಲ್ಟರ್‌ಗಳನ್ನು ಅಳವಡಿಸಲಾಗಿರುತ್ತದೆ. ಈ ಕೊಠಡಿಯ ಅತ್ಯಂತ ಆಶ್ಚರ್ಯಕರ ವಿಷಯವೆಂದರೆ ಅದರ ಬಳಕೆ. ಸೈರನ್ ಇಲ್ಲದ ಸಾಮಾನ್ಯ ದಿನಗಳಲ್ಲಿ, ಇದು ಮನೆಯ ಇತರ ಕೊಠಡಿಗಳಂತೆಯೇ ಇರುತ್ತದೆ. ಅನೇಕ ಮನೆಗಳಲ್ಲಿ ಈ ಸುರಕ್ಷಿತ ಕೊಠಡಿಯನ್ನೇ ಮಕ್ಕಳ ಮಲಗುವ ಕೋಣೆಯನ್ನಾಗಿ ಮಾಡಿರುತ್ತಾರೆ. ಗೋಡೆಗಳಿಗೆ ಬಣ್ಣ ಹಚ್ಚಿ, ಆಟದ ಸಾಮಾನುಗಳನ್ನು ಜೋಡಿಸಿ, ಅದನ್ನು ಮಕ್ಕಳ ಕೋಣೆಯನ್ನಾಗಿ ಮಾರ್ಪಡಿಸಿರುತ್ತಾರೆ. ರಾತ್ರಿ ಮಕ್ಕಳು ಶಾಂತವಾಗಿ ಮಲಗಲು ಈ ದಪ್ಪ ಗೋಡೆಗಳೇ ಭರವಸೆ ನೀಡುತ್ತವೆ.

ಕೆಲವರು ಇದನ್ನು ತಮ್ಮ ಕೆಲಸದ ಕೋಣೆಯಾಗಿ ಅಥವಾ ಅತಿಥಿ ಗೃಹವಾಗಿ ಬಳಸುತ್ತಾರೆ. ಆದರೆ, ಯಾವಾಗ ಯುದ್ಧದ ಸೈರನ್ ಕೇಳಿಸುತ್ತದೆಯೋ, ಆಗ ಕೇವಲ 60ರಿಂದ 90 ಸೆಕೆಂಡುಗಳ ಒಳಗೆ ಇಡೀ ಕುಟುಂಬ ಈ ಕೋಣೆಯೊಳಗೆ ಓಡಿ ಬರಬೇಕು. ಮಲಗಿದ್ದ ಮಕ್ಕಳು ಎಚ್ಚರವಾಗುವ ಮೊದಲೇ ತಂದೆ-ತಾಯಿ ಅವರನ್ನು ಎತ್ತಿಕೊಂಡು ಈ ಕೋಣೆಯೊಳಗೆ ನುಗ್ಗಿ, ಭಾರವಾದ ಉಕ್ಕಿನ ಬಾಗಿಲನ್ನು ಭದ್ರವಾಗಿ ಮುಚ್ಚುತ್ತಾರೆ. ಅರೆಕ್ಷಣದಲ್ಲಿ ಒಂದು ಬೆಡ್‌ರೂಮ್ 'ಬಾಂಬ್ ಶೆಲ್ಟರ್' ಆಗಿ ಬದಲಾಗುತ್ತದೆ.

ಇದು ಇಸ್ರೇಲ್ ಜೀವನದ ಕಟುವಾಸ್ತವ. ಹೊರಗೆ ಆಕಾಶದಲ್ಲಿ ರಾಕೆಟ್‌ಗಳು ಹಾರಾಡುತ್ತಿದ್ದರೆ, ಒಳಗೆ ಮಮದ್‌ನಲ್ಲಿ ಕುಟುಂಬದ ಸದಸ್ಯರು ಒಬ್ಬರ ಕೈಯನ್ನು ಒಬ್ಬರು ಹಿಡಿದು ಮೌನವಾಗಿ ಕುಳಿತಿರುತ್ತಾರೆ. ದಪ್ಪನೆಯ ಕಾಂಕ್ರೀಟ್ ಗೋಡೆಯ ಆಚೆ ಸಾವು ಹೊಂಚು ಹಾಕುತ್ತಿದ್ದರೆ, ಈ ಮಮದ್ ಅವರಿಗೆ ಮರುಜನ್ಮ ನೀಡುತ್ತದೆ. ಈ ಕೊಠಡಿಗಳು ಕೇವಲ ಭೌತಿಕ ರಕ್ಷಣೆ ನೀಡುವುದಿಲ್ಲ, ಬದಲಿಗೆ ಮಾನಸಿಕ ಧೈರ್ಯವನ್ನೂ ನೀಡುತ್ತವೆ. 'ನಮ್ಮ ಮನೆಯಲ್ಲಿ ಮಮದ್ ಇದೆ' ಎಂಬ ಭಾವನೆಯೇ ಜನರಿಗೆ ರಾತ್ರಿ ನೆಮ್ಮದಿಯ ನಿದ್ರೆ ಮಾಡಲು ಸಹಾಯ ಮಾಡುತ್ತದೆ.

ನೀವು ಟೆಲ್ ಅವಿವ್ ನಗರದ ಹೊಸ ಕಟ್ಟಡಗಳನ್ನು ಗಮನಿಸಿದರೆ, ಅವುಗಳ ವಿನ್ಯಾಸದಲ್ಲಿ ಒಂದು ರೀತಿಯ ಗಡಸುತನ ಕಾಣುತ್ತದೆ. ಪ್ರತಿ ಮನೆಯ ಒಂದರ ಮೇಲೆ ಒಂದರಂತೆ ಬರುವ ಈ ಮಮದ್ ಕೊಠಡಿಗಳು ಇಡೀ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ಒಂದು ಭದ್ರವಾದ 'ಕಾಂಕ್ರೀಟ್ ಬೆನ್ನೆಲುಬನ್ನು' ನೀಡುತ್ತವೆ. ಯುದ್ಧದ ಭೀತಿಯೇ ಇಲ್ಲಿನ ವಾಸ್ತುಶಿಲ್ಪದ ದಿಕ್ಕನ್ನು ಬದಲಿಸಿದೆ ಎಂದರೆ ಆಶ್ಚರ್ಯವಿಲ್ಲ.

ಹಳೆಯ ಕಟ್ಟಡಗಳಲ್ಲಿ ಮಮದ್ ಇರುವುದಿಲ್ಲ. ಅಂಥ ಸಮಯದಲ್ಲಿ ಜನರು ಸಾರ್ವಜನಿಕ ಬಾಂಬ್ ಶೆಲ್ಟರ್‌ಗಳಿಗೆ ಅಥವಾ ಅಪಾರ್ಟ್‌ಮೆಂಟ್‌ನ ಮೆಟ್ಟಿಲುಗಳ ಕೆಳಗೆ ಓಡಬೇಕಾಗುತ್ತದೆ. ಹೀಗಾಗಿಯೇ, ಇಂದು ಟೆಲ್ ಅವಿವ್‌ನಲ್ಲಿ ಮನೆ ಬಾಡಿಗೆಗೆ ಪಡೆಯುವಾಗ ಅಥವಾ ಖರೀದಿಸುವಾಗ 'ಮಮದ್' ಇದೆಯೇ ಇಲ್ಲವೇ ಎಂಬುದು ಮೊದಲ ಪ್ರಶ್ನೆಯಾಗಿರುತ್ತದೆ.

'ಮಮದ್' ಎಂಬುದು ಇಸ್ರೇಲ್‌ನ ಜನರ ಸ್ಥಿತಿಸ್ಥಾಪಕತ್ವದ ಸಂಕೇತ. ದಾಳಿಗಳು ನಡೆಯುತ್ತಿದ್ದರೂ, ಬದುಕು ನಿಲ್ಲಬಾರದು ಎಂಬ ಅವರ ಹಠಕ್ಕೆ ಈ ಕೊಠಡಿಗಳು ಸಾಕ್ಷಿಯಾಗಿವೆ. ಬೆಳಗ್ಗೆ ರಾಕೆಟ್ ದಾಳಿಯಿಂದ ಮಮದ್ ಒಳಗೆ ಕುಳಿತಿದ್ದ ವ್ಯಕ್ತಿ, ಸಂಜೆ ಸೈರನ್ ನಿಂತ ಮೇಲೆ ಅದೇ ಉತ್ಸಾಹದಿಂದ ಕೆಲಸಕ್ಕೆ ಹೋಗುತ್ತಾನೆ.

ಸಾವು ಯಾವ ಕ್ಷಣದಲ್ಲೂ ಬರಬಹುದು ಎಂಬ ಅರಿವಿದ್ದರೂ, ಒಂದು ದಪ್ಪ ಗೋಡೆಯನ್ನು ನಂಬಿ ಜೀವನವನ್ನು ಪ್ರೀತಿಸುವ ಅಲ್ಲಿನ ಜನರ ಮನಸ್ಥಿತಿ ನಮಗೆ ಬೆರಗು ಮೂಡಿಸುತ್ತದೆ. ಟೆಲ್ ಅವಿವ್‌ನ ಪ್ರತಿ ಮನೆಯ ಗೋಡೆಯೂ ಮೌನವಾಗಿ ಒಂದು ಕಥೆಯನ್ನು ಹೇಳುತ್ತದೆ- ಅದು ಅಳಿವಿನ ಭಯವಲ್ಲ, ಬದಲಿಗೆ ಬದುಕಿ ಉಳಿಯುವ ಅದಮ್ಯ ಚೇತನದ ಕಥೆ.

ಹಳೆಯ ನಗರದ ಸುರಕ್ಷಾಕ್ರಮ

ಇಸ್ರೇಲ್‌ನ ಆಧುನಿಕ ನಗರಗಳಲ್ಲಿ 'ಮಮದ್' ಮನೆಗೊಂದು ರಕ್ಷಾಕವಚವಾಗಿದ್ದರೆ, ಅಲ್ಲಿನ ಹಳೆಯ ನಗರಗಳ (ಓಲ್ಡ್ ಸಿಟಿ) ಸುರಕ್ಷಾ ವ್ಯವಸ್ಥೆಯೇ ಬೇರೆ. ಸಾವಿರಾರು ವರ್ಷಗಳ ಇತಿಹಾಸವಿರುವ ಜೆರುಸಲೆಮ್, ಜಾಫಾ, ಅಕ್ಕೊ ಮತ್ತು ಸಫೇದ್‌ನಂಥ ನಗರಗಳು ಪುರಾತನ ಕಾಲದಿಂದಲೂ ಆಕ್ರಮಣಕಾರರನ್ನು ಎದುರಿಸುತ್ತಲೇ ಬಂದಿವೆ. ಹೀಗಾಗಿ, ಇಲ್ಲಿನ ಸುರಕ್ಷತೆಯು ಕೇವಲ ಆಧುನಿಕ ತಂತ್ರಜ್ಞಾನವಲ್ಲ, ಬದಲಿಗೆ ಶತಮಾನಗಳ ಹಿಂದಿನ ವಾಸ್ತುಶಿಲ್ಪದ ಚಾಣಾಕ್ಷತನವನ್ನು ಅವಲಂಬಿಸಿದೆ.

ಹಳೆಯ ನಗರಗಳ ಮೊದಲ ರಕ್ಷಣಾ ವ್ಯವಸ್ಥೆಯೇ ಅಲ್ಲಿನ ಬೃಹತ್ ಕಲ್ಲಿನ ಗೋಡೆಗಳು. ಉದಾಹರಣೆಗೆ, ಜೆರುಸಲೆಮ್‌ನ ಹಳೆಯ ನಗರವು ಸುಮಾರು ನಾಲ್ಕು ಕಿ.ಮೀ. ಉದ್ದದ ಬೃಹತ್ ಗೋಡೆಯಿಂದ ಆವೃತವಾಗಿದೆ. ಇದನ್ನು 16ನೇ ಶತಮಾನದಲ್ಲಿ ಸುಲ್ತಾನ್ ಸುಲೈಮಾನ್ ನಿರ್ಮಿಸಿದನು. ಈ ಗೋಡೆಗಳು ಎಷ್ಟು ದಪ್ಪವಾಗಿವೆ ಎಂದರೆ, ಇಂದಿಗೂ ಅವು ಸಣ್ಣಪುಟ್ಟ ಸ್ಫೋಟಗಳನ್ನು ತಡೆದುಕೊಳ್ಳಬಲ್ಲವು.

ಗೋಡೆಯ ಉದ್ದಕ್ಕೂ ಅಲ್ಲಲ್ಲಿ ಎತ್ತರದ ಗೋಪುರಗಳಿವೆ. ಪ್ರಾಚೀನ ಕಾಲದಲ್ಲಿ ಶತ್ರುಗಳ ಮೇಲೆ ನಿಗಾ ಇಡಲು ಇವುಗಳನ್ನು ಬಳಸಲಾಗುತ್ತಿತ್ತು, ಇಂದು ಇವು ಪ್ರವಾಸಿ ಕೇಂದ್ರಗಳಾಗಿದ್ದರೂ, ಇಸ್ರೇಲ್ ಪೊಲೀಸರು ಮತ್ತು ಭದ್ರತಾ ಪಡೆಗಳು ಇಲ್ಲಿಂದಲೇ ಇಡೀ ನಗರದ ಚಲನವಲನಗಳನ್ನು ಗಮನಿಸುತ್ತಾರೆ. ಇಸ್ರೇಲ್‌ನ ಹಳೆಯ ನಗರಗಳ ಕೆಳಗೆ ಒಂದು ಸಂಪೂರ್ಣ 'ಭೂಗತ ಜಗತ್ತೇ' ಇದೆ. ಯುದ್ಧದ ಸಮಯದಲ್ಲಿ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಅಥವಾ ಶತ್ರುಗಳಿಗೆ ತಿಳಿಯದಂತೆ ಸೈನಿಕರು ಚಲಿಸಲು ಈ ಸುರಂಗಗಳನ್ನು ಬಳಸಲಾಗುತ್ತಿತ್ತು.

ಅಕ್ಕೊ ನಗರದಲ್ಲಿ 12ನೇ ಶತಮಾನದಲ್ಲಿ 'ನೈಟ್ಸ್ ಟೆಂಪ್ಲರ್ಸ್' ನಿರ್ಮಿಸಿದ ಬೃಹತ್ ಭೂಗತ ಸುರಂಗಗಳಿವೆ. ಇಂದು ಪ್ರವಾಸಿಗರು ಇವುಗಳನ್ನು ನೋಡಬಹುದು. ಇವು ಅಂದು ಆಪತ್ಕಾಲದಲ್ಲಿ ನಗರದ ಒಂದು ತುದಿಯಿಂದ ಸಮುದ್ರದ ತುದಿಗೆ ತಪ್ಪಿಸಿಕೊಳ್ಳಲು ಇರುವ ರಹಸ್ಯ ಹಾದಿಗಳಾಗಿದ್ದವು. ಹಳೆಯ ನಗರಗಳ ಬೀದಿಗಳು ಎಷ್ಟು ಕಿರಿದಾಗಿರುತ್ತವೆ ಎಂದರೆ ಅಲ್ಲಿ ಒಂದು ಕಾರು ಹೋಗುವುದೂ ಕಷ್ಟ, ಇದು ಕೇವಲ ಜಾಗದ ಅಭಾವದಿಂದ ಮಾಡಿದ್ದಲ್ಲ, ಇದೊಂದು ರಕ್ಷಣಾ ತಂತ್ರ! ದೊಡ್ಡ ಸೈನ್ಯ ಅಥವಾ ವಾಹನಗಳು ವೇಗವಾಗಿ ನಗರದೊಳಗೆ ನುಗ್ಗದಂತೆ ತಡೆಯಲು ಈ ಕಿರಿದಾದ ದಾರಿಗಳು ಸಹಕಾರಿ. ಅಪರಿಚಿತರು ಈ ಬೀದಿಗಳಲ್ಲಿ ಸುಲಭವಾಗಿ ದಾರಿ ತಪ್ಪುತ್ತಾರೆ. ಸ್ಥಳೀಯರಿಗೆ ಮಾತ್ರ ಗೊತ್ತಿರುವ ರಹಸ್ಯ ಗಲ್ಲಿಗಳು ಶತ್ರುಗಳನ್ನು ಗೊಂದಲಕ್ಕೀಡುಮಾಡಲು ಬಳಕೆಯಾಗುತ್ತಿದ್ದವು.

ಹಳೆಯ ನಗರಗಳ ಮನೆಗಳನ್ನು ಅತ್ಯಂತ ಗಟ್ಟಿಯಾದ ಕಲ್ಲುಗಳಿಂದ ಕಟ್ಟಲಾಗಿದೆ. ಈ ಮನೆಗಳ ಗೋಡೆಗಳು ಸುಮಾರು 2ರಿಂದ 3 ಅಡಿಗಳಷ್ಟು ದಪ್ಪವಿರುತ್ತವೆ. ಇವು ನೈಸರ್ಗಿಕವಾಗಿಯೇ ಬಾಂಬ್ ಶೆಲ್ಟರ್‌ಗಳಂತೆ ಕೆಲಸ ಮಾಡುತ್ತವೆ. ಕಿಟಕಿಗಳು ಸಾಮಾನ್ಯವಾಗಿ ಚಿಕ್ಕದಾಗಿರುತ್ತವೆ ಮತ್ತು ಎತ್ತರದಲ್ಲಿರುತ್ತವೆ. ಇದರಿಂದ ಹೊರಗಿನಿಂದ ಯಾರೂ ಸುಲಭವಾಗಿ ಒಳಗೆ ನುಗ್ಗಲು ಸಾಧ್ಯವಾಗುವುದಿಲ್ಲ. ಇತಿಹಾಸ ಮತ್ತು ತಂತ್ರಜ್ಞಾನದ ಸಂಗಮವನ್ನು ನಾವು ಇಲ್ಲಿ ಕಾಣಬಹುದು. ಹಳೆಯ ನಗರಗಳಲ್ಲಿ ಕಲ್ಲಿನ ಗೋಡೆಗಳಿದ್ದರೂ, ಅದರ ಪ್ರತಿ ಮೂಲೆಯಲ್ಲೂ ಅತ್ಯಾಧುನಿಕ ಕ್ಯಾಮೆರಾಗಳು ಮತ್ತು ಸಂವೇದಕಗಳು (ಸೆನ್ಸರ್) ಇವೆ.

ಹಳೆಯ ಮನೆಗಳಲ್ಲಿ 'ಮಮದ್' ನಿರ್ಮಿಸಲು ಸಾಧ್ಯವಿಲ್ಲದ ಕಾರಣ, ನಗರದ ಆಡಳಿತ ಮಂಡಳಿಯು ಹಳೆಯ ಚರ್ಚ್‌ಗಳು, ಮಸೀದಿಗಳು ಅಥವಾ ಪುರಾತನ ನೆಲಮಾಳಿಗೆಗಳನ್ನು ಸಾರ್ವಜನಿಕ ಬಾಂಬ್ ಶೆಲ್ಟರ್‌ಗಳಾಗಿ ಪರಿವರ್ತಿಸಿದೆ. ಸೈರನ್ ಕೇಳಿಸಿದಾಗ ಜನರೆಲ್ಲರೂ ಈ ಸಾಮಾನ್ಯ ಜಾಗಗಳಿಗೆ ಓಡಿಹೋಗುತ್ತಾರೆ.

ಮಬತ್ 2000 ಅಂದರೇನು?

ಜೆರುಸಲೆಮ್‌ನ ಹಳೆಯ ನಗರ ಎಂದರೆ ಅಲ್ಲಿ ಕೇವಲ ಧರ್ಮ ಮತ್ತು ಇತಿಹಾಸ ಮಾತ್ರವಲ್ಲ, ಬದಲಿಗೆ ಜಗತ್ತಿನ ಅತ್ಯಂತ ಸುಧಾರಿತ ಮತ್ತು ಅತ್ಯಾಧುನಿಕ ನಿಗಾ ವ್ಯವಸ್ಥೆಯೂ ಇದೆ. ಸುಮಾರು 0.9 ಚದರ ಕಿಲೋಮೀಟರ್ ವಿಸ್ತೀರ್ಣದ ಈ ಪುಟ್ಟ ಪ್ರದೇಶದಲ್ಲಿ ಹತ್ತಾರು ಸಂಸ್ಕೃತಿಗಳು ಮತ್ತು ಲಕ್ಷಾಂತರ ಪ್ರವಾಸಿಗರು ಸಂಚರಿಸುತ್ತಾರೆ. ಇಂಥ ಸೂಕ್ಷ್ಮ ಪ್ರದೇಶದ ಭದ್ರತೆಗಾಗಿ ಇಸ್ರೇಲ್ ಪೊಲೀಸ್ ಜಾರಿಗೆ ತಂದಿರುವ ಅದ್ಭುತ ತಂತ್ರಜ್ಞಾನವೇ 'ಮಬತ್ 2000'.

'ಮಬತ್' ಎಂದರೆ ಹೀಬ್ರೂ ಭಾಷೆಯಲ್ಲಿ 'ನೋಟ' ಅಥವಾ 'ವೀಕ್ಷಣೆ' ಎಂದರ್ಥ. ಈ ವ್ಯವಸ್ಥೆಯು ಜೆರುಸಲೆಮ್‌ನ ಹಳೆಯ ನಗರವನ್ನು ಜಗತ್ತಿನ ಅತ್ಯಂತ ಸುರಕ್ಷಿತ ಮತ್ತು ಹೆಚ್ಚು ಕಣ್ಗಾವಲಿರುವ ಪ್ರದೇಶಗಳಲ್ಲಿ ಒಂದನ್ನಾಗಿ ಮಾಡಿದೆ.

ಏನಿದು 'ಮಬತ್ 2000'?

ಇದು ಜೆರುಸಲೆಮ್‌ನ ಹಳೆಯ ನಗರದ ಉದ್ದಗಲಕ್ಕೂ ಹರಡಿರುವ ಸಾವಿರಾರು ಹೈ-ಟೆಕ್ ಕೆಮರಾಗಳ ಒಂದು ಜಾಲ. 2000ನೇ ಇಸವಿಯ ಸುಮಾರಿಗೆ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಇದರ ಮುಖ್ಯ ಉದ್ದೇಶವೆಂದರೆ ನಗರದ ಪ್ರತಿಯೊಂದು ಇಂಚು ಜಾಗದ ಮೇಲೆ 24/7 ಕಣ್ಣಿಡುವುದು ಮತ್ತು ಯಾವುದೇ ಅಹಿತಕರ ಘಟನೆ ನಡೆದರೆ ತಕ್ಷಣ ಪ್ರತಿಕ್ರಿಯಿಸುವುದು.

ಹಳೆಯ ನಗರದ ಕಿರಿದಾದ ಗಲ್ಲಿಗಳು, ಪ್ರವೇಶ ದ್ವಾರಗಳು ಮತ್ತು ಪ್ರಾರ್ಥನಾ ಮಂದಿರಗಳ ಬಳಿ ಈ ಕೆಮರಾಗಳನ್ನು ಅಳವಡಿಸಲಾಗಿದೆ. ಇವು ಕೇವಲ ಸಾಮಾನ್ಯ ಸಿಸಿಟಿವಿಗಳಲ್ಲ; ಇವು 360 ಡಿಗ್ರಿ ತಿರುಗಬಲ್ಲ, ಅತ್ಯಂತ ದೂರದ ವಸ್ತುವನ್ನು ಝೂಮ್ ಮಾಡಿ ತೋರಿಸಬಲ್ಲ ಮತ್ತು ಕತ್ತಲಲ್ಲೂ ಸ್ಪಷ್ಟವಾಗಿ ಚಿತ್ರೀಕರಿಸಬಲ್ಲ (Night Vision) ಸಾಮರ್ಥ್ಯ ಹೊಂದಿವೆ. ಇಂದು ಈ ನಗರದಲ್ಲಿ ಸರಿಸುಮಾರು 400ರಿಂದ 500ಕ್ಕೂ ಹೆಚ್ಚು ಶಾಶ್ವತ ಕೆಮರಾಗಳಿದ್ದು, ಸಾವಿರಾರು ಇತರ ಸಂವೇದಕಗಳು (ಸೆನ್ಸರ್) ಇವುಗಳಿಗೆ ಪೂರಕವಾಗಿ ಕೆಲಸ ಮಾಡುತ್ತವೆ.

'ಮಬತ್ 2000' ವ್ಯವಸ್ಥೆಯ ಅತ್ಯಂತ ಶಕ್ತಿಶಾಲಿ ಅಂಶವೆಂದರೆ ಅದರ 'ಮುಖ ಗುರುತಿಸುವ ತಂತ್ರಜ್ಞಾನ'. ಕಂಟ್ರೋಲ್ ರೂಮ್‌ನ ಲ್ಲಿರುವ ಸಾಫ್ಟ್‌ವೇರ್, ಜನರ ಮುಖಗಳನ್ನು ಡೇಟಾಬೇಸ್‌ನಲ್ಲಿರುವ ಮಾಹಿತಿಯೊಂದಿಗೆ ಕ್ಷಣಾರ್ಧದಲ್ಲಿ ಹೋಲಿಕೆ ಮಾಡುತ್ತದೆ. ಯಾವುದೇ ಅಪರಾಧ ಹಿನ್ನೆಲೆ ಇರುವ ವ್ಯಕ್ತಿ ಅಥವಾ ನಿಷೇಧಿತ ವ್ಯಕ್ತಿ ನಗರದೊಳಗೆ ಪ್ರವೇಶಿಸಿದ ಕೂಡಲೇ ಈ ಸಿಸ್ಟಮ್ ಪೊಲೀಸರಿಗೆ ಎಚ್ಚರಿಕೆ ನೀಡುತ್ತದೆ. ಎಲ್ಲಿಯಾದರೂ ಅತಿಯಾದ ಜನದಟ್ಟಣೆ ಉಂಟಾದರೆ ಅಥವಾ ಜನರ ನಡುವೆ ಸಣ್ಣ ಜಗಳ ನಡೆದರೂ, ಕೃತಕ ಬುದ್ಧಿಮತ್ತೆ (ಎಐ) ಅದನ್ನು ಪತ್ತೆಹಚ್ಚಿ ಅಧಿಕಾರಿಗಳಿಗೆ ತಿಳಿಸುತ್ತದೆ.

ಹಳೆಯ ನಗರದ ಒಂದು ರಹಸ್ಯ ಮತ್ತು ಭದ್ರವಾದ ಸ್ಥಳದಲ್ಲಿ ಈ ಕಂಟ್ರೋಲ್ ರೂಮ್ ಇದೆ. ಇಲ್ಲಿ ನೂರಾರು ಸ್ಕ್ರೀನ್‌ಗಳ ಮುಂದೆ ಕುಳಿತಿರುವ ತರಬೇತಿ ಪಡೆದ ಸಿಬ್ಬಂದಿ ಪ್ರತಿ ಕ್ಷಣವನ್ನೂ ಗಮನಿಸುತ್ತಿರುತ್ತಾರೆ. ಒಂದು ವೇಳೆ ಗಲ್ಲಿಯೊಂದರಲ್ಲಿ ಏನಾದರೂ ಅನಾಹುತ ನಡೆದರೆ, ತಕ್ಷಣ ಹತ್ತಿರದ ಬೀದಿಯಲ್ಲಿರುವ ಪೊಲೀಸ್ ಸಿಬ್ಬಂದಿಗೆ ಮಾಹಿತಿ ನೀಡಲಾಗುತ್ತದೆ. ಇದರ ವಿಶೇಷ ಅಂದ್ರೆ, ಕಂಟ್ರೋಲ್ ರೂಮ್‌ನಿಂದಲೇ ಪೊಲೀಸರು ಬೀದಿಯಲ್ಲಿರುವ ಧ್ವನಿವರ್ಧಕಗಳ ಮೂಲಕ ಜನರಿಗೆ ಸೂಚನೆ ನೀಡಬಹುದು ಅಥವಾ ಶಂಕಿತರನ್ನು ಎಚ್ಚರಿಸಬಹುದು.

ಹಳೆಯ ನಗರದ ಐತಿಹಾಸಿಕ ಸೌಂದರ್ಯಕ್ಕೆ ಧಕ್ಕೆ ಬಾರದಂತೆ ಈ ಕೆಮರಾಗಳನ್ನು ಅಳವಡಿಸಲಾಗಿದೆ. ಅನೇಕ ಬಾರಿ ಪ್ರವಾಸಿಗರಿಗೆ ತಮ್ಮ ಮೇಲೆ ಕೆಮರಾ ಕಣ್ಣಿದೆ ಎನ್ನುವುದೇ ತಿಳಿಯುವುದಿಲ್ಲ. ಕಿಟಕಿಗಳ ಸಂದಿಯಲ್ಲಿ, ಪುರಾತನ ಕಲ್ಲುಗಳ ಬಣ್ಣಕ್ಕೆ ಹೊಂದುವಂತೆ ಅಥವಾ ಕಮಾನುಗಳ ಕೆಳಗೆ ಈ ತಂತ್ರಜ್ಞಾನವನ್ನು ಅಡಗಿಸಿಡಲಾಗಿರುತ್ತದೆ. ಇದು ಇತಿಹಾಸ ಮತ್ತು ಆಧುನಿಕತೆಯ ವಿಶಿಷ್ಟ ಸಂಗಮವಾಗಿದೆ.

ಇಂಥ ಬೃಹತ್ ಕಣ್ಗಾವಲು ವ್ಯವಸ್ಥೆಯು ಭದ್ರತೆಯ ದೃಷ್ಟಿಯಿಂದ ವರದಾನವಾಗಿದ್ದರೂ, ನಾಗರಿಕರ ಹಕ್ಕುಗಳು ಮತ್ತು ಗೋಪ್ಯತೆಯ (Privacy) ಬಗ್ಗೆ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ಆದರೆ, ಇಸ್ರೇಲ್ ಪೊಲೀಸರ ಪ್ರಕಾರ, ಲಕ್ಷಾಂತರ ಜನರು ಭೇಟಿ ನೀಡುವ ಈ ಅತ್ಯಂತ ಸೂಕ್ಷ್ಮ ಧಾರ್ಮಿಕ ಸ್ಥಳದಲ್ಲಿ ಶಾಂತಿಯನ್ನು ಕಾಪಾಡಲು 'ಮಬತ್ 2000' ಅನಿವಾರ್ಯವಾಗಿದೆ.

ಎಸ್ಪೆರಾಂಟೊ ಪ್ರಭಾವ

ಯಾವುದೇ ನಗರದ ಬೀದಿಗಳಲ್ಲಿ ಅಡ್ಡಾಡುವಾಗ ನಮಗೆ ಅಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯ ವಿವಿಧ ಮಜಲುಗಳು ಪರಿಚಯವಾಗುತ್ತವೆ. ಇದಕ್ಕೆ ಇಸ್ರೇಲಿನ ಟೆಲ್ ಅವಿವ್ ಸಹ ಹೊರತಾಗಿಲ್ಲ, ಆದರೆ ಅಲ್ಲಿನ ಒಂದು ವೈಶಿಷ್ಟ್ಯ ಅಂದ್ರೆ, ಜಗತ್ತಿನ ಯಾವುದೇ ದೇಶಕ್ಕೆ ಸೇರದ, ಯಾವುದೇ ನಿರ್ದಿಷ್ಟ ಜನಾಂಗದ ಆಸ್ತಿಯಲ್ಲದ 'ಎಸ್ಪೆರಾಂಟೊ' ಭಾಷೆಯ ಹೆಸರಿನಲ್ಲಿ ಒಂದು ರಸ್ತೆ ಇರುವುದು! ಅಷ್ಟೇ ಅಲ್ಲ, ಈ ಭಾಷೆಯ ಜನಕ ಎಲ್.ಎಲ್. ಜಾಮೆನ್‌ಹಾಫ್ ಹೆಸರಿನಲ್ಲೂ ಅಲ್ಲಿ ಒಂದು ರಸ್ತೆಯಿದೆ.

ಎಸ್ಪೆರಾಂಟೊ ಎಂಬುದು ಯಾವುದೇ ನೈಸರ್ಗಿಕ ವಿಕಾಸದಿಂದ ಹುಟ್ಟಿದ ಭಾಷೆಯಲ್ಲ, ಇದನ್ನು 1887ರಲ್ಲಿ ಪೋಲೆಂಡ್‌ನ ನೇತ್ರತಜ್ಞ ಎಲ್.ಎಲ್. ಜಾಮೆನ್‌ಹಾಫ್ ಅವರು ಅಭಿವೃದ್ಧಿಪಡಿಸಿದರು. ಜಾಮೆನ್‌ಹಾಫ್ ಬೆಳೆದದ್ದು ವಿವಿಧ ಭಾಷೆಗಳು ಮತ್ತು ಸಂಸ್ಕೃತಿಗಳ ಸಂಘರ್ಷವಿದ್ದ ಪರಿಸರದಲ್ಲಿ. ಭಾಷೆಯ ಅಡೆತಡೆಗಳೇ ಜನರ ನಡುವಿನ ದ್ವೇಷಕ್ಕೆ ಮೂಲ ಕಾರಣ ಎಂದು ಅವರು ನಂಬಿದ್ದರು.

ಒಂದು ಸಾಮಾನ್ಯ ಭಾಷೆಯಿದ್ದರೆ, ಜನರು ಪರಸ್ಪರ ಅರ್ಥ ಮಾಡಿಕೊಳ್ಳಬಹುದು ಮತ್ತು ಜಗತ್ತಿನಲ್ಲಿ ಶಾಂತಿ ನೆಲೆಸಬಹುದು ಎಂಬುದು ಅವರ ಆಶಯವಾಗಿತ್ತು. ಹೀಗಾಗಿ, ಅವರು ಕಲಿಯಲು ಅತ್ಯಂತ ಸುಲಭವಾದ, ವ್ಯಾಕರಣದ ತೊಡಕುಗಳಿಲ್ಲದ 'ಎಸ್ಪೆರಾಂಟೊ' ಭಾಷೆಯನ್ನು ಸೃಷ್ಟಿಸಿದರು. 'ಎಸ್ಪೆರಾಂಟೊ' ಎಂದರೆ ಆ ಭಾಷೆಯಲ್ಲಿ 'ಆಶಾವಾದಿ' ಎಂದರ್ಥ. ಟೆಲ್ ಅವಿವ್ ಅನ್ನು ಸಾಮಾನ್ಯವಾಗಿ 'ಎಲ್ಲವನ್ನೂ ಒಳಗೊಳ್ಳುವ ನಗರ' ಎಂದು ಕರೆಯಲಾಗುತ್ತದೆ. ಇಲ್ಲಿ ಎಸ್ಪೆರಾಂಟೊ ಹೆಸರಿನ ಬೀದಿ ಇರುವುದು ಆಕಸ್ಮಿಕವೇನಲ್ಲ. ಜಾಮೆನ್‌ಹಾಫ್ ಒಬ್ಬ ಯಹೂದಿ ಮೂಲದವರು. ಅವರ ಭಾಷಾ ಚಳವಳಿಯಲ್ಲಿ ಅನೇಕ ಯಹೂದಿಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಟೆಲ್ ಅವಿವ್ ಯಹೂದಿ ಸಂಸ್ಕೃತಿಯ ಆಧುನಿಕ ಕೇಂದ್ರವಾಗಿರುವುದರಿಂದ, ಅವರ ಸ್ಮರಣೆ ಇಲ್ಲಿ ಜೀವಂತವಾಗಿದೆ.

ಇಸ್ರೇಲ್ ನಿರ್ಮಾಣವಾದ ಕಾಲದಲ್ಲಿ ವಿವಿಧ ದೇಶಗಳಿಂದ ಬಂದ ಜನರು ಅಲ್ಲಿ ನೆಲೆಸಿದರು. ಎಸ್ಪೆರಾಂಟೊ ಭಾಷೆಯು 'ಎಲ್ಲರೂ ಸಮಾನರು' ಎಂಬ ಸಂದೇಶವನ್ನು ಸಾರುತ್ತದೆ. ಈ ಸಿದ್ಧಾಂತವು ಟೆಲ್ ಅವಿವ್‌ನ ಉದಾರವಾದಿ ಮನಸ್ಥಿತಿಗೆ ಒಪ್ಪುವಂಥದ್ದು. ಟೆಲ್ ಅವಿವ್ ನಗರವು ಜಗತ್ತಿನ ವಿಶಿಷ್ಟ ಸಾಧನೆಗಳನ್ನು ಗೌರವಿಸುವ ಸಂಪ್ರದಾಯವನ್ನು ಹೊಂದಿದೆ. ಎಸ್ಪೆರಾಂಟೊ ಒಂದು ಭಾಷೆಯಾಗಿ ಮಾತ್ರವಲ್ಲದೆ, ಒಂದು ಶಾಂತಿ ಆಂದೋಲನವಾಗಿ ಗುರುತಿಸಲ್ಪಟ್ಟಿರುವುದರಿಂದ ಅದಕ್ಕೆ ಇಲ್ಲಿ ಸ್ಥಾನ ಸಿಕ್ಕಿದೆ.

ಟೆಲ್ ಅವಿವ್‌ನ 'ಡಿಜೆಂಗೊಫ್ ಸೆಂಟರ್' ಬಳಿಯೇ 'ರೆಹೋವ್ ಜಾಮೆನ್‌ಹಾಫ್' ಇದೆ. ಇದು ನಗರದ ಅತ್ಯಂತ ಜನನಿಬಿಡ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಪ್ರದೇಶಗಳಲ್ಲೊಂದು. ಜಾಮೆನ್‌ಹಾಫ್ ಅವರ ಜೀವನವು ಕೇವಲ ಭಾಷಾ ವಿಜ್ಞಾನಕ್ಕೆ ಸೀಮಿತವಾಗಿರಲಿಲ್ಲ. ಅವರು 'ಹೋಮರನಿಸಂ' ಎಂಬ ತತ್ವವನ್ನು ಪ್ರತಿಪಾದಿಸಿದ್ದರು. ಇದರ ಪ್ರಕಾರ, ಮನುಷ್ಯನು ತನ್ನ ಧರ್ಮ ಅಥವಾ ರಾಷ್ಟ್ರೀಯತೆಗಿಂತ ಹೆಚ್ಚಾಗಿ ತನ್ನನ್ನು 'ಮನುಕುಲದ ಸದಸ್ಯ' ಎಂದು ಗುರುತಿಸಿಕೊಳ್ಳಬೇಕು. ಈ ವಿಶ್ವಮಾನವ ಸಂದೇಶವನ್ನು ಸಾರುವ ವ್ಯಕ್ತಿಯ ಹೆಸರನ್ನು ತನ್ನ ಹೃದಯಭಾಗದ ರಸ್ತೆಗೆ ಇಡುವ ಮೂಲಕ ಟೆಲ್ ಅವಿವ್ ತನ್ನ ವೈಶಾಲ್ಯವನ್ನು ಮೆರೆದಿದೆ.

ಒಂದು ದೇಶದ ಭಾಷೆಯಲ್ಲದ, ಅಲ್ಪಸಂಖ್ಯಾತರು ಮಾತ್ರ ಮಾತನಾಡುವ 'ಕೃತಕ' ಭಾಷೆಗೆ ರಸ್ತೆಯ ಹೆಸರಿಡುವುದು ಆ ನಗರದ ಬೌದ್ಧಿಕ ಪ್ರೌಢಿಮೆಯನ್ನು ತೋರಿಸುತ್ತದೆ. ಟೆಲ್ ಅವಿವ್ ಕೇವಲ ಹೀಬ್ರೂ ಭಾಷೆಯ ಕೇಂದ್ರವಲ್ಲ, ಅದು ಜಗತ್ತಿನ ವಿವಿಧ ಆಲೋಚನೆಗಳಿಗೆ ತೆರೆದುಕೊಂಡಿರುವ ಕಿಟಕಿ. ಟೆಲ್ ಅವಿವ್‌ನಲ್ಲಿ ಅರಬ್, ಇಂಗ್ಲಿಷ್, ರಷ್ಯನ್ ಮತ್ತು ಹೀಬ್ರೂ ಭಾಷೆಗಳ ಸಂಗಮವಿದೆ. ಈ ನಡುವೆ ಎಸ್ಪೆರಾಂಟೊ 'ತಟಸ್ಥ' ಭಾಷೆಯಾಗಿ ಶಾಂತಿಯ ಸಂಕೇತವಾಗಿ ನಿಂತಿದೆ. ಇಲ್ಲಿನ ಜನರು ಹೊಸತನ್ನು ಅಪ್ಪಿಕೊಳ್ಳುವಲ್ಲಿ ಸದಾ ಮುಂದು. ಎಸ್ಪೆರಾಂಟೊದಂಥ ವಿಶಿಷ್ಟ ಪ್ರಯೋಗಗಳನ್ನು ಗೌರವಿಸುವುದು ಅವರ ಸಂಸ್ಕೃತಿಯ ಭಾಗವಾಗಿದೆ.

ಇಂದು ಜಗತ್ತಿನಾದ್ಯಂತ ಸುಮಾರು 20 ಲಕ್ಷಕ್ಕೂ ಹೆಚ್ಚು ಜನರು ಎಸ್ಪೆರಾಂಟೊ ಮಾತನಾಡುತ್ತಾರೆ. ಇದು ಇಂಟರ್ನೆಟ್ ಯುಗದಲ್ಲಿ ವಿಕಿಪೀಡಿಯಾ, ಗೂಗಲ್ ಟ್ರಾನ್ಸ್‌ಲೇಟ್ ಮತ್ತು ಡ್ಯುಯೊಲಿಂಗೊದಂಥ ಆಪ್‌ಗಳಲ್ಲಿಯೂ ಲಭ್ಯವಿದೆ. ಯಾವುದೇ ದೇಶದ ಗಡಿಗಳಿಲ್ಲದ ಈ ಭಾಷೆಗೆ ಟೆಲ್ ಅವಿವ್‌ನಲ್ಲಿ ಒಂದು ಭೌತಿಕ ವಿಳಾಸ ಸಿಕ್ಕಿರುವುದು ಎಸ್ಪೆರಾಂಟೊ ಪ್ರೇಮಿಗಳಿಗೆ ಹೆಮ್ಮೆಯ ವಿಷಯ.

ಟೆಲ್ ಅವಿವ್‌ನ ಎಸ್ಪೆರಾಂಟೊ ಮತ್ತು ಜಾಮೆನ್‌ಹಾಫ್ ರಸ್ತೆಗಳು ನಮಗೆ ಒಂದು ಮುಖ್ಯವಾದ ಪಾಠವನ್ನು ಕಲಿಸುತ್ತವೆ- 'ಭಾಷೆಯು ಜನರನ್ನು ಬೇರ್ಪಡಿಸುವ ಗೋಡೆಯಾಗಬಾರದು, ಬದಲಿಗೆ ಜನರನ್ನು ಜೋಡಿಸುವ ಸೇತುವೆಯಾಗಬೇಕು'.

ಜಾಮೆನ್‌ಹಾಫ್ ಅಂದು ಕಂಡ ಕನಸು ಇಂದಿಗೂ ಟೆಲ್ ಅವಿವ್‌ನ ಬೀದಿಗಳಲ್ಲಿ ಹೆಸರಿನ ರೂಪದಲ್ಲಿ ಉಸಿರಾಡುತ್ತಿದೆ. ಇದು ಕೇವಲ ಭಾಷೆಯ ಮೇಲಿನ ಪ್ರೀತಿಯಲ್ಲ, ಬದಲಿಗೆ 'ಮನುಕುಲ ಒಂದೇ' ಎಂಬ ಉದಾತ್ತ ಚಿಂತನೆಗೆ ನೀಡಿದ ಗೌರವ. ಇಂಥ ಮನಸ್ಥಿತಿಗಳು ಜಗತ್ತಿನಾದ್ಯಂತ ಬೆಳೆದಾಗ ಮಾತ್ರ ನಿಜವಾದ ಶಾಂತಿ ಸಾಧ್ಯ.

ವನಭೋಜನ ಏಕೆ ವಿಶೇಷ ರುಚಿಕರ ಎಂದೆನಿಸುತ್ತದೆ?

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಶ್ವತ್ಥಕಟ್ಟೆಯ ಎದುರಿನಲ್ಲೇ ಒಂದು ಓಣಿ. ಅದನ್ನು ಸಮತಟ್ಟುಗೊಳಿಸಿ ಸ್ವಚ್ಛ ಮಾಡಿ ಒಂದೈವತ್ತು ಮಂದಿ ಕೂರಲಿಕ್ಕಾಗುವಷ್ಟು ಜಾಗದಲ್ಲಿ ಬಾಳೆಎಲೆ ಪಂಕ್ತಿಯೂಟ. ಈಗಿನಂತೆ ಟೇಬಲ್ ವ್ಯವಸ್ಥೆ ಅಲ್ಲ. ಚಾಪೆ ಹಾಸಿಯೋ ಮಣೆಗಳನ್ನಿಟ್ಟೋ ನೆಲದ ಮೇಲೆ ಚಕ್ಕಮಕ್ಕ ಹಾಕಿ ಕುಳಿತುಕೊಳ್ಳುವ ವ್ಯವಸ್ಥೆ. ಆವತ್ತು ಅಶ್ವತ್ಥ ವೃಕ್ಷಕ್ಕೆ ವಿಶೇಷ ಪೂಜೆ, ಪ್ರದಕ್ಷಿಣೆ, ಮಹಾಮಂಗಳಾರತಿ ಇತ್ಯಾದಿ ಒಂದಿಷ್ಟು ಧಾರ್ಮಿಕ ವಿಧಿವಿಧಾನಗಳೂ ಇದ್ದವು. ಅವೆಲ್ಲ ಮುಗಿದ ಮೇಲೆ ಪ್ರಸಾದ ರೂಪವಾಗಿ ಮಧ್ಯಾಹ್ನದ ಭೋಜನ ಅಲ್ಲಿ ಆ ಓಣಿಯಲ್ಲಿ ಏರ್ಪಾಡಾದದ್ದು. ಪೂಜೆ ಮಾಡಿಸಲಿಕ್ಕೆ ಬಂದಿದ್ದ ಪುರೋಹಿತವರ್ಗ, ಸುವಾಸಿನಿ-ಕುಮಾರಿಕೆಯರು, ಬಂಧುಮಿತ್ರರು, ನಾವು ಮನೆಮಂದಿ ಎಲ್ಲರೂ ಸೇರಿ ಎರಡು ಅಥವಾ ಮೂರು ಪಂಕ್ತಿಗಳು ಆಗಿರಬಹುದು. ಅಶ್ವತ್ಥಕಟ್ಟೆ ಇದ್ದದ್ದು ನಮ್ಮ ಅಡಿಕೆತೋಟದ ಒಂದು ಬದಿಯಲ್ಲಿ, ಮನೆಗೆ ಹತ್ತಿರದಲ್ಲೇ. ಆದ್ದರಿಂದ ಹೆಚ್ಚಿನೆಲ್ಲ ಶಾಕಪಾಕಾದಿ ಅಡುಗೆಯನ್ನು, ಚಿತ್ರಾನ್ನ, ಅಂಬೊಡೆ ಹಪ್ಪಳ-ಸಂಡಿಗೆ ಮುಂತಾದ ಭಕ್ಷ್ಯಗಳನ್ನು, ಮನೆಯಲ್ಲೇ ಮಾಡಿ ಅಲ್ಲಿಗೆ ತಗೊಂಡುಹೋದದ್ದು. ಸಾಂಕೇತಿಕವಾಗಿ ಒಂದೆರಡು ಐಟಂ ಮಾತ್ರ- ಸ್ವಲ್ಪ ಪಾಯಸ ಮತ್ತು ನೈವೇದ್ಯಕ್ಕೆ ಒಂದಿಷ್ಟು ಅನ್ನ- ಅಲ್ಲಿಯೇ ಬೇಯಿಸಿದ್ದಿರಬಹುದು. ಅಂತೂ ಎಲ್ಲ ವಿಧದಲ್ಲೂ ಪರಿಪೂರ್ಣ ಭೋಜನವೇ. ಚೂರ್ಣಿಕೆ (ಶ್ಲೋಕ) ಹೇಳುವುದೇ ಮೊದಲಾದ ಸಾಂಪ್ರದಾಯಿಕ ರಿವಾಜುಗಳನ್ನೂ ಪಾಲಿಸಿದ್ದ, ಪೊಗದಸ್ತಾದ ಔತಣ ಎನ್ನಲಿಕ್ಕಡ್ಡಿಯಿಲ್ಲ.

ಇದು, ತುಂಬ ಹಿಂದೆ, ನಾನು ಹೆಚ್ಚೆಂದರೆ ಐದೋ ಆರೋ ವರ್ಷದ ಚಿಕ್ಕ ಹುಡುಗನಾಗಿದ್ದಾಗ, ಊರಲ್ಲಿ ನಮ್ಮ ಮನೆಯಲ್ಲಿ (ಮನೆಯ ಸಮೀಪ ಎನ್ನೋಣ) ಒಮ್ಮೆ ಆಚರಿಸಿದ್ದ 'ವನಭೋಜನ'ದ ಒಂದು ಅಸ್ಪಷ್ಟ ನೆನಪು. ಅದೇಕೋ ಗೊತ್ತಿಲ್ಲ, ಆಮೇಲೂ ನಾವು ''ಈ ವರ್ಷವೂ ವನಭೋಜನ ಆಚರಿಸೋಣವೇ?'' ಎಂದು ನಮ್ಮ ತಂದೆಯವರನ್ನು ಅತ್ಯುತ್ಸಾಹದಿಂದ ಪೀಡಿಸುತ್ತಿದ್ದೆವಾದರೂ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಅಥವಾ, ಅದಕ್ಕಿಂತ ಹಿಂದೆ ಒಂದೆರಡು ಸಲ ಅದೇರೀತಿಯ ವೈಭವದ ವನಭೋಜನ ಆಗಿದ್ದಿರಬಹುದು, ನನ್ನ ನೆನಪಿನ ಪರಿಧಿಯ ಆಚೆಗೆ. ಹಾಗಾಗಿ ನನಗೆ ಗೊತ್ತಿಲ್ಲ ಅಷ್ಟೇ. ಈಗ ತಂದೆಯವರು ಗತಿಸಿಯೇ 25 ವರ್ಷ ಕಳೆದಿವೆ. ಅಲ್ಲದೇ ಆ ಮನೆ, ತೋಟ, ಅಶ್ವತ್ಥಕಟ್ಟೆ, ಓಣಿ... ಇಡೀ ಜಾಗವೇ ಮಾರಾಟವಾಗಿ ಅಲ್ಲಿ ಬೇರೆಯವರು ನೆಲೆಸಿದ್ದಾರೆ. ಆದರೂ 'ವನಭೋಜನ' ಎಂಬ ಶಬ್ದವು ಪ್ರತಿಸಲ ಮುಖಾಮುಖಿ ಆದಾಗಲೂ (ಕಣ್ಣಿಗೆ ಕಂಡಾಗ/ ಕಿವಿಗಳೊಳಗೆ ಬಿದ್ದಾಗ) ನನ್ನ ಚಿತ್ತಭಿತ್ತಿಯಲ್ಲಿ ಇದೇ ಅಸ್ಪಷ್ಟ ಚಿತ್ರಣವನ್ನು ಮೂಡಿಸುತ್ತದೆ.

ಹಾಗೆ ನೋಡುವುದಾದರೆ ಜೀವನದಲ್ಲಿ ಇದುವರೆಗೆ ನಾನು ಬೇರೆಯೂ ಅನೇಕ ಸಂದರ್ಭಗಳಲ್ಲಿ 'ವನಭೋಜನ' ಎನ್ನಬಹುದಾದ್ದನ್ನು ಸವಿದಿದ್ದೇನೆ. ಅಂಥ ಅವಕಾಶಗಳಲ್ಲಿ ಆಸಕ್ತಿಯಿಂದ ಪಾಲ್ಗೊಂಡಿದ್ದೇನೆ. ಆರನೆಯ ಅಥವಾ ಏಳನೆಯ ತರಗತಿಯಲ್ಲಿದ್ದಾಗ ಒಮ್ಮೆ ಶಾಲೆಯಿಂದ, ಇನ್ನೊಮ್ಮೆ ಊರ ಕೆಲ ಹಿರಿಯರೊಡನೆ, ಕುದುರೆಮುಖ ಪರ್ವತಶ್ರೇಣಿಯಲ್ಲಿರುವ ಕುರಿಂಗಲ್ಲಿಗೆ ಟ್ರೆಕ್ಕಿಂಗ್ ಮಾಡಿದ್ದು; ಪಿಯುಸಿ ಓದಿಗೆ ಉಜಿರೆಯಲ್ಲಿ ಸಿದ್ಧವನ ಗುರುಕುಲದಲ್ಲಿದ್ದಾಗ ಅಲ್ಲಿಂದ ನಾವೊಂದಿಷ್ಟು ಹುಡುಗರು ಗಡಾಯಿಕಲ್ಲು (ಜಮಾಲಾಬಾದ್ ಕೋಟೆ) ಹತ್ತುವ ಚಾರಣಸಾಹಸ ಕೈಗೊಂಡಿದ್ದು, ಅಲ್ಲೊಂದು ರಾತ್ರಿ ತಂಗಿದ್ದು; ಉದ್ಯೋಗಕ್ಕಾಗಿ ಸಿಕಂದರಾಬಾದ್‌ನಲ್ಲಿದ್ದಾಗ ಸಹೋದ್ಯೋಗಿಗಳೊಟ್ಟಿಗೆ ಅಲ್ಲಿ ಹತ್ತಿರದ ಕಾಡುಪ್ರದೇಶವೊಂದಕ್ಕೆ ಒಂದುದಿನದ ಹೊರಸಂಚಾರ ಮಾಡಿಬಂದಿದ್ದು; ಹಾಗೆಯೇ ಮುಂಬಯಿಯಲ್ಲಿ ಇದ್ದಾಗ ಅಲ್ಲಿ ಠಾಣೆಯ ಸಮೀಪ ಒಂದು ಬೆಟ್ಟ ಹತ್ತಲಿಕ್ಕೆ ಹೋಗಿದ್ದು; ಅಮೆರಿಕಕ್ಕೆ ಬಂದಮೇಲೆ ಇಲ್ಲಿ ವಾಷಿಂಗ್ಟನ್ ಡಿಸಿಗೆ ಹತ್ತಿರದ ಶೆನ್ಯಾಂಡೋ ಕಣಿವೆ ಪ್ರದೇಶದಲ್ಲಿ ಕ್ಯಾಂಪಿಂಗ್ ಮಾಡಿದ್ದು... ಹೀಗೆ ಅನೇಕ ಸಂದರ್ಭಗಳು ನೆನಪಿವೆ. ನಾನೇನೂ ಮಹಾಚಾರಣಿಗ ಅಲ್ಲವಾದರೂ ರುಚಿ ನೋಡಲಿಕ್ಕೆ ತಕ್ಕಷ್ಟು ಅಂಥ ಚಟುವಟಿಕೆಗಳಲ್ಲಿ ಭಾಗವಹಿಸಿದ್ದೆ. ಇಲ್ಲಿನ ಕನ್ನಡಕೂಟಗಳು ಬೇಸಗೆಯಲ್ಲಿ ಇಟ್ಟುಕೊಳ್ಳುವ ಪಿಕ್‌ನಿಕ್‌ಗಳಲ್ಲಿ ಭಾಗವಹಿಸಿದ್ದನ್ನೂ ಸೇರಿಸಿದರೆ ಸಂಖ್ಯೆ ದೊಡ್ಡದೇ ಇದೆ.

ಅಥವಾ, ಪಿಕ್‌ನಿಕ್‌ಗಳು ಹೈಕಿಂಗ್-ಟ್ರೆಕ್ಕಿಂಗ್‌ಗಳು ಕ್ಯಾಂಪ್‌ಗಳು ಸಾಂಪ್ರದಾಯಿಕ (ಧಾರ್ಮಿಕ) 'ವನಭೋಜನ'ದ ವ್ಯಾಖ್ಯೆಯಲ್ಲಿ ಬರುವುದಿಲ್ಲವಾದರೆ, ನಮ್ಮ ಕಾರ್ಕಳದ ವೇಂಕಟರಮಣ ದೇವಸ್ಥಾನದಲ್ಲಿ ಪ್ರತಿವರ್ಷ ಲಕ್ಷದೀಪೋತ್ಸವದ ವೇಳೆ ರಾಮಸಮುದ್ರ ಎಂಬ ಸುಂದರ ಸರೋವರದ ಬಳಿ ನಡೆಯುವ ವನಭೋಜನಕ್ಕೂ ನಾನು ಹೋಗಿದ್ದೇನೆ- ಪ್ರೌಢಶಾಲೆ ಶಿಕ್ಷಣದ ವರ್ಷಗಳಲ್ಲಿ. ಈ ವನಭೋಜನ ಎಂಬ ವಾರ್ಷಿಕ ಸಂಪ್ರದಾಯವು ಕರಾವಳಿಯ ಹಲವಾರು ದೇವಸ್ಥಾನಗಳಲ್ಲಿ ಇದೆಯಾದರೂ ನಮ್ಮ ಕಾರ್ಕಳದ್ದು ಹೆಚ್ಚು ಪ್ರಸಿದ್ಧ. ಕಾರ್ಕಳಕ್ಕೆ ಪಡುತಿರುಪತಿ ಎಂಬ ಖ್ಯಾತಿ ಇರುವುದು, ಮೂಲ ತಿರುಪತಿಯಲ್ಲೂ ವನಭೋಜನ ಕ್ರಮ ಇರುವುದು ಅದಕ್ಕೆ ಕಾರಣವಿರಬಹುದು. ಅಂದಹಾಗೆ ಮೂಲ ತಿರುಪತಿಯಲ್ಲಿ ವನಭೋಜನ ಸಂಪ್ರದಾಯವನ್ನು ಸುಮಾರು ಐನೂರು ವರ್ಷಗಳ ಹಿಂದೆ, ಅನ್ನಮಾಚಾರ್ಯರ ಹಿರಿಯ ಮಗ 'ಪೆದ್ದ ತಿರುಮಲಾಚಾರ್ಯುಲು' ಅವರು ಆರಂಭಿಸಿದ್ದಂತೆ. ಹಾಗೆಂದು ದಾಖಲೆಪತ್ರಗಳಲ್ಲಿ ಇದೆಯಂತೆ. ಕಾಲಕ್ರಮೇಣ ಅದು ನಶಿಸಿಹೋಯಿತೆಂದೂ, ತಿರುಮಲ-ತಿರುಪತಿ ದೇವಸ್ಥಾನಂ ಟ್ರಸ್ಟ್‌ನವರು 2010ರಿಂದೀಚೆಗೆ ಅದನ್ನು ಪುನರಾರಂಭಿಸಿದ್ದಾರೆಂದೂ ಹೇಳುತ್ತಾರೆ. ಒಟ್ಟಾರೆಯಾಗಿ ಆಂಧ್ರಪ್ರದೇಶದವರಿಗೆ, ಅರ್ಥಾತ್ ತೆಲುಗರಿಗೆ 'ವನಭೋಜನಮು' ಪರಿಚಿತವೂ ಪ್ರೀತಿಯದೂ ಎಂದು ಗೂಗಲ್ ಕೂಡ ತಿಳಿಸುತ್ತಿದೆ. ದೇವಸ್ಥಾನಗಳ ವನಭೋಜನ ಕಾರ್ಯಕ್ರಮ ಹೆಚ್ಚಾಗಿ ಕಾರ್ತಿಕ ಮಾಸದಲ್ಲಿ ನಡೆಯುತ್ತದೆ; ಆದರೆ ಪ್ರಸ್ತುತ ಚಾಲ್ತಿಯಿರುವ ಮಾಘ ಮಾಸವೂ ವನಭೋಜನಕ್ಕೆ ಪ್ರಶಸ್ತವೆಂದು ಕೆಲವು ಶಾಸ್ತ್ರಗಳಲ್ಲಿದೆ. ''ತನ್ಮಾಸೇ ತು ವಿಶೇಷೇಣ ವನಭೋಜನಮಾಚರೇತ್। ತಿಲದಾನಂ ಮಾಘಮಾಸೇ ಪಿತೄಣಾಂ ಪಿಂಡಮಾಚರೇತ್॥'' ಎಂದು ಅನಿರುದ್ಧ ಸಂಹಿತಾ ಎಂಬ ಶಾಸ್ತ್ರಗ್ರಂಥದಲ್ಲಿ, ಮಾಘ ಮಾಸದಲ್ಲಿ ವನಭೋಜನ ಆಚರಣೆ ಮತ್ತು ಪಿತೃಗಳಿಗೆ ತಿಲದಾನ ಮಾಡಬೇಕೆಂದು ಶಿಫಾರಸು.

ವನಭೋಜನ ಎಂಬ ಹೆಸರಿನಿಂದಲ್ಲದಿದ್ದರೂ ಆ ಕಾನ್ಸೆಪ್ಟ್ ಕರ್ನಾಟಕದ ಇತರೆಡೆಗಳಲ್ಲೂ ವ್ಯಾಪಕವಾಗಿ ಇದೆಯೆಂದು ನನ್ನ ಅರಿವಿಗೆ ಬಂದದ್ದು, 'ವಿಜಯವಾಣಿ' ಪತ್ರಿಕೆಯಲ್ಲಿ ನಾನು ನಿರ್ವಹಿಸುವ 'ಕಟ್ಟುವೆವು ನಾವು ಕನ್ನಡದ ಪದವೊಂದನು' ಅಂಕಣದಲ್ಲಿ ಹಿಂದೊಮ್ಮೆ Picnic ಪದಕ್ಕೆ ಸಂವಾದಿ ಕನ್ನಡಪದ ಸೂಚಿಸುವಂತೆ ಓದುಗರಿಗೆ ಆಹ್ವಾನವಿತ್ತಾಗ. ''ಯಲ್ಲಾಪುರದಲ್ಲಿ ಎರಡು ವರ್ಷಕ್ಕೊಮ್ಮೆ ನಡೆಯುವ ಅಮ್ಮನವರ ಜಾತ್ರೆಗೆ ಮೊದಲು, ಮಂಗಳವಾರ ಮನೆಯಲ್ಲಿ ಅಡುಗೆ ಮಾಡದೇ, ಊರಿನವರೆಲ್ಲ ಸೇರಿ ಊರ ಹೊರಗೆ ಒಂದುಕಡೆ ಒಟ್ಟಾಗಿ ಅಡುಗೆ ಮಾಡಿ ಊಟಮಾಡುತ್ತಾರೆ. ಅದಕ್ಕೆ ಹೊರೂಟ (ಹೊರ ಊಟ) ಎನ್ನುತ್ತಾರೆ. ಪಿಕ್‌ನಿಕ್‌ಗೂ ಹೊರೂಟ ಪದ ಸರಿಯಾಗಬಹುದು ಅಂತನಿಸುತ್ತದೆ'' ಎಂದು ಒಬ್ಬರು ಓದುಗರು ಬರೆದಿದ್ದರೆ ''ನನ್ನ ಬಾಲ್ಯದಲ್ಲಿ ಹಳ್ಳಿಯಲ್ಲಿ ಸುಗ್ಗಿ ಮುಗಿದ ಬಳಿಕ ಊರಾಚೆ ಸಾಮೂಹಿಕ ಭೋಜನಕೂಟ ಏರ್ಪಡಿಸುತ್ತಿದ್ದರು. ಬಯಲಲ್ಲೇ ಅಡುಗೆ ಮಾಡಿ ಎಲ್ಲರಿಗೂ ಬಡಿಸುತ್ತಿದ್ದರು. ಅದನ್ನು ಪರಾವು ಎನ್ನುತ್ತಿದ್ದರು. ಊರಿನ ಹಿರಿಯರು ಇಂಥ ದಿವಸ ಪರಾವು ಏರ್ಪಡಿಸಲಾಗಿದೆ ಎಂದು ತಳವಾರರ ಮೂಲಕ ಸಾರುತ್ತಿದ್ದರು'' ಎಂದು ಇನ್ನೊಬ್ಬ ಓದುಗಮಿತ್ರರು ತಿಳಿಸಿದ್ದರು. ತಾತ್ಪರ್ಯ ಇಷ್ಟೇ: ವನಭೋಜನದ ಬಗ್ಗೆ ಓದಿ/ಕೇಳಿ ಬಹುತೇಕ ಎಲ್ಲರಿಗೂ ಗೊತ್ತಿರುತ್ತದೆ.

ಪೀಠಿಕೆಯೇ ಅರ್ಧದಷ್ಟಾಯಿತು. ಆದರೆ ನಾನು ಹೇಳಹೊರಟಿದ್ದು ವನಭೋಜನದ ಬಗ್ಗೆಯಲ್ಲ. ವನಭೋಜನ ಅರ್ಥಾತ್ ಹೊರಾಂಗಣದಲ್ಲಿ ಪ್ರಕೃತಿಯ ಮಡಿಲಲ್ಲಿ ತಿನ್ನುವ ಯಾವುದೇ ತಿಂಡಿ-ತಿನಸು ಹೆಚ್ಚು ರುಚಿಕರ ಎನಿಸುವುದೇಕೆಂಬ ಕೌತುಕದ ಬಗ್ಗೆ. ಇದು ಖಂಡಿತ ನಿಮ್ಮ ಅನುಭವಕ್ಕೂ ಬಂದಿರುತ್ತದೆ. ಒಂದು ಪ್ಯಾಕೆಟ್ ಚಿಪ್ಸ್ ಇರಬಹುದು, ಒಂದು ಪ್ಲೇಟ್ ಭೇಲ್‌ಪುರಿ ಇರಬಹುದು, ಪಕೋಡಾ-ಬೋಂಡಾ-ಸಮೋಸಾಗಳೇ ಇರಬಹುದು, ಮನೆಯೊಳಗೆ ಇದ್ದು ತಿನ್ನುವಾಗಿನದಕ್ಕಿಂತ ಹೆಚ್ಚು ರುಚಿ ಹೊರಾಂಗಣದಲ್ಲಿರುವಾಗ ತಿಂದರೆ! ನಾನಂತೂ ಈ ವ್ಯತ್ಯಾಸವನ್ನು ಅತಿಸ್ಪಷ್ಟವಾಗಿ ಕಂಡುಕೊಂಡಿದ್ದೇನೆ.

ಬಹುಶಃ ಇಲ್ಲಿ ಅಮೆರಿಕದಲ್ಲಿ, ಅದರಲ್ಲೂ ಉತ್ತರದ ರಾಜ್ಯಗಳಲ್ಲಿ ಮನೆ ಅಥವಾ ವಾಸ್ತವ್ಯದ ಗೂಡಿನ ರಚನೆ ಮತ್ತು ವ್ಯವಸ್ಥೆಯದೂ ಇದರಲ್ಲಿ ಪಾತ್ರವಿದೆ. ಚಳಿಗಾಲದಲ್ಲಿ ತೀವ್ರ ಚಳಿಯಿಂದಾಗಿಯೂ, ಬೇಸಗೆಯಲ್ಲಿ ಏರ್‌ಕಂಡೀಷನ್‌ನಿಂದಾಗಿಯೂ ಕಿಟಕಿ ಬಾಗಿಲುಗಳನ್ನು ತೆರೆದಿಡದೆ ವಾಸಿಸುತ್ತೇವಲ್ಲ, ಅದರಿಂದ ನಮ್ಮ ಪಂಚೇಂದ್ರಿಯಗಳ- ಅದರಲ್ಲೂ ಮುಖ್ಯವಾಗಿ ಮೂಗು ಮತ್ತು ನಾಲಗೆಯ ಚುರುಕುತನ ಮಂಕಾಗುತ್ತದೆ. ವಿಮಾನದಲ್ಲಿ ಸರಬರಾಜು ಮಾಡುವ ಆಹಾರ ಅನೇಕರಿಗೆ ರುಚಿಸದಿರುವುದು, ಸ್ವಲ್ಪವಾದರೂ ರುಚಿ ಹೆಚ್ಚಲಿ ಎಂದು ಅಂಥ ಆಹಾರಕ್ಕೆ ಬೇಕೆಂದೇ ಹೆಚ್ಚು ಉಪ್ಪು ಸೇರಿಸಿರುವುದು- ಎಂಬ ಥಿಯರಿಗೆ (ಬರೀ ಥಿಯರಿಯಲ್ಲ ಸತ್ಯ ಕೂಡ) ಸನ್ನಿಹಿತವಾದದ್ದೇ ಇದು ಕೂಡ.

ಇದರ ಬಗ್ಗೆ ಮೊನ್ನೆ ಒಂದು ಸೈನ್ಸ್ ಜರ್ನಲ್‌ನಲ್ಲಿ ಓದುತ್ತಿದ್ದೆ. ಅಲ್ಲಿನ ವಿವರಣೆಯ ಸಾರಾಂಶ ಹೀಗಿದೆ: ''ಹೊರಾಂಗಣದಲ್ಲಿ ಇರುವುದರಿಂದ ನಮ್ಮ ದೇಹ ಮತ್ತು ಮನಸ್ಸಿಗೆ ಆಗುವ ಲಾಭಗಳ ಬಗ್ಗೆ ನಮಗೆಲ್ಲ ಹೆಚ್ಚು ಅರಿವು ಬಂದಿದೆ. ಇದೇ ವಿಷಯ ನಮ್ಮ ಜೀರ್ಣಕ್ರಿಯೆಗೂ ಅನ್ವಯಿಸುತ್ತದೆ. ಇಂದಿನ ಜೀವನಶೈಲಿಯಲ್ಲಿ ಅನೇಕರು ಒತ್ತಡ ಮತ್ತು ಆತಂಕದಿಂದ ಬಳಲುತ್ತಾರೆ. ಇದರಿಂದ ದೇಹದೊಳಗೆ ಒಂದು ನಮೂನೆಯ 'ಹೋರಾಟ ಮತ್ತು ಓಟ (fight or flight) ಸಕ್ರಿಯವಾಗುತ್ತದೆ. ಕೈಗಳು ಮತ್ತು ಕಾಲುಗಳಿಗೆ ಹೆಚ್ಚು ರಕ್ತಸಂಚಾರವಾಗಿ, ಜೀರ್ಣಾಂಗಗಳಿಗೆ ಹೋಗುವ ರಕ್ತ ಕಡಿಮೆಯಾಗುತ್ತದೆ. ಇದರಿಂದ ಆಹಾರವನ್ನು ಸವಿಯುವ ಮತ್ತು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಆದರೆ ನಾವು ಪ್ರಕೃತಿಯ ಮಡಿಲಲ್ಲಿ ಇದ್ದಾಗ ಕೋಪ, ಆತಂಕ ಮತ್ತು ಒತ್ತಡ ಕಡಿಮೆಯಾಗುತ್ತವೆ. ಸಂತೋಷದ ಭಾವನೆಗಳು ಹೆಚ್ಚಾಗುತ್ತವೆ. ಪ್ರಕೃತಿಯಲ್ಲಿ ಇರುವುದರಿಂದ ಮನಸ್ಸಿಗೆ ಮಾತ್ರವಲ್ಲ, ದೇಹಕ್ಕೂ ಲಾಭವಾಗುತ್ತದೆ. ರಕ್ತದ ಒತ್ತಡ, ಹೃದಯದ ಸ್ಪಂದನ, ಸ್ನಾಯುಗಳ ಒತ್ತಡ ಕಡಿಮೆಯಾಗುತ್ತದೆ. ಒತ್ತಡದ ಹಾರ್ಮೋನುಗಳು ಸ್ರವಿಸುವುದು ಕಡಿಮೆಯಾಗುತ್ತದೆ. ಇದರಿಂದ ದೇಹದೊಳಗೆ ಶಾಂತ ಪರಿಸ್ಥಿತಿ (rest and digest) ಸಕ್ರಿಯವಾಗುತ್ತದೆ. ಇದು ದೇಹದಲ್ಲಿ ಜೀರ್ಣಕ್ರಿಯೆಯನ್ನು ಸರಿಯಾಗಿ ನಡೆಸುತ್ತದೆ. ಈ ವ್ಯವಸ್ಥೆ ಕೆಲಸ ಮಾಡುವಾಗ ದೇಹವು ಶಕ್ತಿಯನ್ನು ಉಳಿಸುತ್ತದೆ, ಹೃದಯದ ಗತಿ ನಿಧಾನಗೊಳ್ಳುತ್ತದೆ, ಜೀರ್ಣಕ್ರಿಯೆ ಉತ್ತಮವಾಗುತ್ತದೆ. ಪ್ರಕೃತಿಯಲ್ಲಿದ್ದಾಗ ಸಸ್ಯಗಳನ್ನು ಮುಟ್ಟುವುದು, ಹೂವು-ಹಣ್ಣುಗಳ ವಾಸನೆ ಮತ್ತು ರುಚಿ ನೋಡುವುದು, ಪ್ರಾಣಿ-ಪಕ್ಷಿಗಳ ಸಹಜ ಕಲರವವನ್ನು ಕೇಳುವುದು... ಈ ಎಲ್ಲವೂ ಸೇರಿ ಒಂದು ಬಹು-ಇಂದ್ರಿಯ ಅನುಭವವನ್ನು ಕೊಡುತ್ತವೆ. ಇಂಥ ಅನುಭವಗಳು ಇಂದಿನ ಕಾಲಘಟ್ಟದ FOMO (ಏನನ್ನಾದರೂ ಕಳೆದುಕೊಳ್ಳುತ್ತಿದ್ದೇವೆ, ಬೇರೆಯವರಿಗಿಂತ ಹಿಂದುಳಿಯುತ್ತೇವೆ ಎಂಬ ಭಯ, ಕೀಳರಿಮೆ) ಮತ್ತು ನಿರಂತರವಾಗಿ ಸ್ಮಾರ್ಟ್‌ಫೋನ್ ಸ್ಕ್ರೋಲ್ ಮಾಡುವ ದುರಭ್ಯಾಸಗಳಂಥ ಸಮಸ್ಯೆಗಳಿಂದ ನಮ್ಮನ್ನು ಗುಣಪಡಿಸುತ್ತವೆ. ಇನ್ನು ಆಹಾರಸೇವನೆಯ ವಿಚಾರಕ್ಕೆ ಬಂದರೆ, ನಮ್ಮ ಘ್ರಾಣಶಕ್ತಿಯು ರುಚಿಯನ್ನು ಬಹಳವಾಗಿ ಪ್ರಭಾವಿಸುತ್ತದೆ. ಹೊರಗಡೆ, ಗಾಳಿಯ ಮುಕ್ತಸಂಚಾರ ಇರುವಲ್ಲಿ ಊಟ ಮಾಡಿದರೆ ನಮ್ಮ ಘ್ರಾಣಶಕ್ತಿ ಉತ್ತಮವಾಗುತ್ತದೆ. ಇದರಿಂದ ಆಹಾರದ ರುಚಿಯೂ ಹೆಚ್ಚು ಸ್ಪಷ್ಟವಾಗಿ ಮತ್ತು ಚೆನ್ನಾಗಿ ಅನುಭವವಾಗುತ್ತದೆ. ನಾವು ಆರಾಮದಲ್ಲಿದ್ದಾಗ ನಮ್ಮ ಆಹಾರವನ್ನು ಇನ್ನಷ್ಟು ಆಸಕ್ತಿಯಿಂದ ಮತ್ತು ಸಂತೋಷದಿಂದ ಆಸ್ವಾದಿಸುವುದೂ ಕಾರಣವಾಗುತ್ತದೆ''.

ಯೋಚಿಸಿದರೆ ಇದರಲ್ಲಿ ತಥ್ಯವಿರುವುದು ಹೌದು ಅಂತನಿಸುತ್ತದೆ. ವಿಕಾಸದ ದೃಷ್ಟಿಯಿಂದ ನಾವು ಪ್ರಕೃತಿಯಲ್ಲಿ ಇದ್ದಾಗ ಶಾಂತವಾಗಿರಲು ರೂಪುಗೊಂಡವರೇ ಇರಬೇಕು. ಪ್ರಕೃತಿಯ ದೃಶ್ಯಗಳು ನಮ್ಮ ನರಮಂಡಲವನ್ನು ಶಾಂತಗೊಳಿಸುತ್ತವೆ. ನಮ್ಮ ಎಲ್ಲ ಇಂದ್ರಿಯಗಳ ದಕ್ಷತೆ ಮತ್ತು ಕ್ಷಮತೆ ಹೆಚ್ಚುತ್ತದೆ. ಐದೂ ಇಂದ್ರಿಯಗಳನ್ನು ಏಕಕಾಲದಲ್ಲಿ ಬಳಸಲು ಪ್ರಯತ್ನಿಸಿದರೆ, ಬೇರೆ ಯಾವುದರ ಬಗ್ಗೆಯೂ ಅನಾವಶ್ಯಕವಾಗಿ ಯೋಚಿಸುವುದು ತನ್ನಿಂತಾನೆ ತಗ್ಗುತ್ತದೆ. ಅಂದರೆ ಸಂಪೂರ್ಣವಾಗಿ ಒಂದೊಂದು ಕ್ಷಣವನ್ನೂ ಆನಂದಿಸುವುದು, ಅನುಭವಿಸುವುದು ನಮಗೆ ಸಾಧ್ಯವಾಗುತ್ತದೆ. ಇದನ್ನೇ mindfulness ಎನ್ನಬಹುದು: ಐದೂ ಇಂದ್ರಿಯಗಳು ಚುರುಕಾಗಿದ್ದಾಗ ಆಹಾರವನ್ನು ಚೆನ್ನಾಗಿ ಗಮನಿಸಿ, ರುಚಿಯನ್ನು ಅನುಭವಿಸಿ ಊಟ ಮಾಡಬಲ್ಲೆವು.

ಹೀಗೆನ್ನುವಾಗ ನನಗೆ ಸಂಸ್ಕೃತದ 'ದೀರ್ಘಶಷ್ಕುಲೀಭಕ್ಷಣ ನ್ಯಾಯ' ಕೂಡ ನೆನಪಾಗುತ್ತದೆ. ಶಷ್ಕುಲೀ ಅಂದರೆ ಚಕ್ಕುಲಿ. ದೊಡ್ಡದಾದ (ಉದ್ದವಾದುದನ್ನು ಸುರುಳಿ ಸುತ್ತಿದ) ಚಕ್ಕುಲಿಯನ್ನು ತಿನ್ನುವಾಗ ಪಂಚೇಂದ್ರಿಯಗಳೂ ಸುಖವನ್ನು ಅನುಭವಿಸುತ್ತವೆ ಎಂದು ಇದರ ತಾತ್ಪರ್ಯ. ಹೇಗೆ? ಚಕ್ಕುಲಿ ದೊಡ್ಡದಾಗಿರುವುದರಿಂದ ತಿಂದು ಮುಗಿಸುವವರೆಗೆ ಕೈಯಲ್ಲಿ ಸ್ವಲ್ಪ ಹೊತ್ತು ಇರುತ್ತದಾದ್ದರಿಂದ ನಮ್ಮ ಸ್ಪರ್ಶೇಂದ್ರಿಯಕ್ಕೆ (ಚರ್ಮ) ಚಕ್ಕುಲಿಯ ಮುಳ್ಳುಗಳ ಹಿತಾನುಭವ ಆಗುತ್ತದೆ. ಚಕ್ಕುಲಿಯ ರೂಪವನ್ನು ಚಕ್ಷುರಿಂದ್ರಿಯ (ಕಣ್ಣುಗಳ ಜೋಡಿ) ಗ್ರಹಿಸುತ್ತದೆ. ರುಚಿಯನ್ನು ಜಿಹ್ವೇಂದ್ರಿಯವು (ನಾಲಗೆ) ಅನುಭವಿಸುತ್ತದೆ. ಎಣ್ಣೆಯಲ್ಲಿ ಕರಿದದ್ದಾದ್ದರಿಂದ ಮತ್ತು ಹಿಟ್ಟು ಬೆರೆಸುವಾಗ ಸೇರಿದ ಬೆಣ್ಣೆ, ಜೀರಿಗೆ ಮುಂತಾದವುಗಳ ಪರಿಮಳವನ್ನು ಘ್ರಾಣೇಂದ್ರಿಯವು (ಮೂಗು) ಅರಿತುಕೊಳ್ಳುತ್ತದೆ. ಜಗಿಯುವಾಗ ಕರುಂ ಕುರುಂ ಶಬ್ದವನ್ನು ಶ್ರೋತ್ರೇಂದ್ರಿಯ (ಕಿವಿ) ಕೇಳಿಸಿಕೊಳ್ಳುತ್ತದೆ. ಹೀಗೆ ಏಕಕಾಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳ ಜ್ಞಾನವು ಪಂಚೇಂದ್ರಿಯಗಳ ಮೂಲಕ ಆಗುವುದರಿಂದ ಅನೇಕ ವಿಷಯಗಳ ಅನೇಕ ಜ್ಞಾನಗಳು ಏಕಕಾಲದಲ್ಲಿ ಆಗಬಹುದು ಎಂಬುದಕ್ಕೆ ಈ ನ್ಯಾಯವನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ. ಇಂತಿರುವ ಚಕ್ಕುಲಿಯನ್ನು ಒಳಾಂಗಣದಲ್ಲಿ ತಿನ್ನುವುದಕ್ಕೂ ಹೊರಾಂಗಣದಲ್ಲಿ ತಿನ್ನುವುದಕ್ಕೂ ಇರುವ ವ್ಯತ್ಯಾಸವನ್ನು ನೀವೀಗ ಸುಲಭವಾಗಿ ಅಂದಾಜಿಸಬಹುದು.

ಆದ್ದರಿಂದಲೇ ನನ್ನದೊಂದು ಅಭ್ಯಾಸವಿದೆ. ಇಲ್ಲಿ ನಮ್ಮ ಮನೆಗೆ ಹತ್ತಿರವಿರುವ ಪೊಟೊಮ್ಯಾಕ್ ನದಿಯ ಗ್ರೇಟ್ ಫಾಲ್ಸ್ ಜಲಪಾತ ಪ್ರದೇಶಕ್ಕೋ ಅಥವಾ ತುಸು ದೂರದಲ್ಲಿರುವ ಶೆನ್ಯಾಂಡೋ ವ್ಯಾಲಿ ಮತ್ತು ಲುರೇ ಗುಹೆಗಳನ್ನು ತೋರಿಸಲಿಕ್ಕೋ ಯಾರನ್ನಾದರೂ (ಮನೆಗೆ ಬಂದ ಅತಿಥಿಗಳನ್ನು, ಮುಖ್ಯವಾಗಿ ಭಾರತದಿಂದ ಬಂದವರನ್ನು) ಕರೆದುಕೊಂಡು ಹೋಗುವಾಗ ಚಕ್ಕುಲಿ ಕೋಡುಬಳೆ ಕಾಂಗ್ರೆಸ್‌ಕಡ್ಲೆ, ಹಲಸಿನಕಾಯಿ/ಬಾಳೆಕಾಯಿ ಚಿಪ್ಸ್‌ನಂಥ ಯಾವುದಾದ್ರೂ ಕುರುಕಲು ತಿಂಡಿಯನ್ನು ಮುದ್ದಾಂ ಆಗಿ ತಗೊಂಡುಹೋಗುವುದು, ಅಲ್ಲಿ ಪ್ರಕೃತಿಯ ಮಡಿಲಲ್ಲಿ ಖುಲ್ಲಂಖುಲ್ಲಾ ಹೊರಾಂಗಣದಲ್ಲಿ ಅದನ್ನು ಸವಿಯುವುದು. ಅದರಲ್ಲೂ ಲುರೇ ಕೇವ್ಸ್ ನೋಡಿ ಹಿಂದಿರುಗುವಾಗ ಸ್ಕೈಲೈನ್ ಡ್ರೈವ್ ಅಂತ ಇಲ್ಲಿನ ಬ್ಲೂ-ರಿಡ್ಜ್ ಪರ್ವತಶ್ರೇಣಿಯ ನೆತ್ತಿಯ ಮೇಲೊಂದು ರಮ್ಯವಾದ ಮಾರ್ಗವಿದೆ. ಆಚೀಚೆಯ ಕಣಿವೆ ಪ್ರದೇಶವನ್ನು ನೋಡಲಿಕ್ಕೆ ಅಲ್ಲಲ್ಲಿ ವ್ಯೂಪಾಯಿಂಟ್ಸ್ ಇವೆ. ನಿರ್ದಿಷ್ಟವಾದೊಂದು ವ್ಯೂಪಾಯಿಂಟ್‌ನಲ್ಲಿ ಕಾರು ನಿಲ್ಲಿಸಿ ಕುರುಕಲು ತಿಂಡಿಯ ಭಕ್ಷಣ. ಎರಡು ವರ್ಷಗಳ ಹಿಂದೆ ನಾ.ಸೋಮೇಶ್ವರ ಮತ್ತು ಎಂ.ಎಸ್ ನರಸಿಂಹಮೂರ್ತಿಯವರನ್ನು, ಅದಕ್ಕಿಂತ ಹಿಂದೊಮ್ಮೆ ವಿಶ್ವೇಶ್ವರ ಭಟ್, ಮಂಡ್ಯ ರಮೇಶ್ ಮತ್ತು ಹೊರನಾಡು ರಾಮನಾರಾಯಣ ಜೋಯ್ಸರನ್ನು, ಅದಕ್ಕಿಂತ ಹಿಂದೆ ಪ್ರವೀಣ ಗೋಡ್ಖಿಂಡಿಯವರನ್ನು ಕರೆದುಕೊಂಡು ಹೋಗಿದ್ದಾಗ, ನನ್ನ ಅಣ್ಣ-ಅತ್ತಿಗೆ ಮತ್ತವರ ಮಗ-ಸೊಸೆ ಮೊಮ್ಮಕ್ಕಳನ್ನು ಕರೆದುಕೊಂಡು ಹೋಗಿದ್ದಾಗಲೂ, ಈ ಸಂಪ್ರದಾಯವನ್ನು ತಪ್ಪದೇ ಪಾಲಿಸಿದ್ದೇನೆ. ಹೊರಾಂಗಣದಲ್ಲಿ ತಿಂಡಿ-ತಿನಿಸಿನ ರುಚಿ ಹೆಚ್ಚು ಎಂಬ ಥಿಯರಿಯನ್ನು ಅವರಿಗೂ ಬೋಧಿಸಿದ್ದೇನೆ, ಅವರ ಅನುಭವಕ್ಕೂ ತಂದಿದ್ದೇನೆ. ಇಲ್ಲಿಗೆ ಬಂದ ಹೊಸದರಲ್ಲಿ ನಾವೊಂದಿಷ್ಟು ಕನ್ನಡಿಗರು ಸೇರಿ ಶೆನ್ಯಾಂಡೋ ವ್ಯಾಲಿಯಲ್ಲಿ ಒಮ್ಮೆ ಕ್ಯಾಂಪಿಂಗ್ ಮಾಡಿದ್ದು, ನಾಗೇಶ ಶಿವಸ್ವಾಮಿ ಎಂಬ ಸನ್ಮಿತ್ರ ಅಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ದೊಡ್ಡದೊಂದು ಬಾಣಲೆ ತುಂಬ ಉಪ್ಪಿಟ್ಟು ತಯಾರಿಸಿದ್ದು, ನಾವುಗಳು ಅದನ್ನು ಬುಭುಕ್ಷಿತರಾಗಿ ಮುಕ್ಕಿದ್ದು, ಅದರ ರುಚಿ ಈಗಲೂ ಬಾಯಿಯಲ್ಲಿ ನೀರೂರೂವುದು... ನೆನಪುಗಳ ಮೆರವಣಿಗೆ. ಅದೇ ನಾಗೇಶ-ಶಾಲಿನಿ ದಂಪತಿಯ ಮನೆಯಲ್ಲಿ ಎಷ್ಟೋ ಔತಣಗಳನ್ನು ಭಕ್ಷ್ಯಭೋಜ್ಯಗಳನ್ನು ಚಪ್ಪರಿಸಿದ್ದಿದೆ, ಆದರೆ ಕ್ಯಾಂಪಿಂಗ್ ಉಪ್ಪಿಟ್ಟು ಮಾತ್ರ ಅಷ್ಟೊಂದು ಪರಿಣಾಮಕಾರಿಯಾಗಿ ನೆನಪುಳಿಯಬೇಕಿದ್ದರೆ 'ಹೊರಾಂಗಣದಲ್ಲಿ ಆಹಾರ ಹೆಚ್ಚು ರುಚಿಕರ' ಎಂಬುದೇ ಕಾರಣ. ವನಭೋಜನ ಎಂಬ ಸತ್ಸಂಪ್ರದಾಯವನ್ನು ನಮ್ಮ ಪೂರ್ವಜರು ಆರಂಭಿಸಿದ್ದಕ್ಕೂ ಅದೇ ಮುಖ್ಯ ಕಾರಣ!

ಹಿಮಂತ ಬಿಸ್ವ ಶರ್ಮಾ: ಈಶಾನ್ಯ ಭಾರತದ ಧೀರಧುರಂಧರ

ಹಿಮಂತ ಬಿಸ್ವ ಶರ್ಮಾ ಸುದ್ದಿಯಲ್ಲಿರುವ, ದೇಶಾದ್ಯಂತ ಸದ್ದು ಮಾಡುತ್ತಿರುವ ನಾಯಕ. ಮಾತಿನ ಮಲ್ಲ, ಜಗದೇಕವೀರ, ಈಶಾನ್ಯ ರಾಜ್ಯಗಳ ಭರವಸೆಯ ನಾಯಕ, ಪ್ರಖರ ರಾಷ್ಟ್ರೀಯತಾವಾದಿ, ನಿರ್ಭಿಡೆಯ ದಕ್ಷ ಆಡಳಿತಗಾರ, ಅಪರ ಯೋಗಿ ಆದಿತ್ಯನಾಥ ಎಂದೆನಿಸಿಕೊಳ್ಳುವ ಹಿಮಂತ ಬಿಸ್ವ ಶರ್ಮಾ ಬಹಳ ಜಮಫಟ್ಟಿಯಾದ ನಾಯಕ.

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ದೇಶದಲ್ಲಿ ಮತ್ತೆ ಚುನಾವಣೆಗಳು ಸದ್ದುಮಾಡುತ್ತಿವೆ, ಆಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಇವು ಚುನಾವಣೆ ಎದುರಿಸುತ್ತಿರುವ ರಾಜ್ಯಗಳಾಗಿವೆ. ಉಳಿದೆಲ್ಲ ರಾಜ್ಯಗಳಿಗೆ ಹೋಲಿಸಿದರೆ ಕಾಂಗ್ರೆಸ್‌ಗೆ ಆಸ್ಸಾಂ ಬಹಳ ಮುಖ್ಯವಾದ ರಾಜ್ಯವಾಗಿದೆ. ಹಾಗಾಗಿಯೇ ಆ ರಾಜ್ಯದ ಚುನಾವಣಾ ವ್ಯವಹಾರಗಳ ಜವಾಬ್ದಾರಿಯನ್ನು ಸ್ವತಃ ಪ್ರಿಯಾಂಕಾ ಗಾಂಧಿಯವರಿಗೆ ವಹಿಸಲಾಗಿದೆ ಹಾಗೂ ನಮ್ಮ ಚುನಾವಣಾ ಚಾಣಾಕ್ಷ ಉಪಮುಖ್ಯಮಂತ್ರಿಗಳೂ ಅವರ ನೆರವಿಗಿರಲಿದ್ದಾರೆ. ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಮರ್ಮಾಘಾತ ನೀಡಿದ್ದ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರನ್ನು ಶತಾಯ ಗತಾಯ ಸೋಲಿಸಲೇಬೇಕು ಎನ್ನುವ ಹಠತೊಟ್ಟಂತಿದೆ ಕಾಂಗ್ರೆಸ್.

ಹಿಮಂತ ಬಿಸ್ವ ಶರ್ಮಾ ಅತ್ಯಂತ ಸುದ್ದಿಯಲ್ಲಿರುವ ಹಾಗೂ ದೇಶಾದ್ಯಂತ ಸದ್ದು ಮಾಡುತ್ತಿರುವ ನಾಯಕರಾಗಿದ್ದಾರೆ. ಮಾತಿನ ಮಲ್ಲ, ಜಗದೇಕವೀರ, ಈಶಾನ್ಯ ರಾಜ್ಯಗಳ ಭರವಸೆಯ ನಾಯಕ, ಪ್ರಖರ ರಾಷ್ಟ್ರೀಯತಾವಾದಿ, ನಿರ್ಭಿಡೆಯ ದಕ್ಷ ಆಡಳಿತಗಾರ, ಅಪರ ಯೋಗಿ ಆದಿತ್ಯನಾಥ ಎಂದೆನಿಸಿಕೊಳ್ಳುವ ಹಿಮಂತ ಬಿಸ್ವ ಶರ್ಮಾ ಬಹಳ ಜಮಫಟ್ಟಿಯಾದ ನಾಯಕ. ಈಶಾನ್ಯ ರಾಜ್ಯಗಳ ಅದರಲ್ಲೂ ಆಸ್ಸಾಮಿನ ಅತ್ಯಂತ ಜನಪ್ರಿಯ ರಾಜಕಾರಣಿ. ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯದಲ್ಲಿ ಆಸಕ್ತಿ ತೋರಿದ್ದ ಬಡ ಬ್ರಾಹ್ಮಣ ಹುಡುಗ, 'ಆಲ್ ಆಸ್ಸಾಂ ಸ್ಟೂಡೆಂಟ್ ಯೂನಿಯನ್' ಮೂಲಕ ವಿಧಾನಸಭೆಗೆ ಸ್ಪರ್ಧಿಸಿ ಸೋತಿದ್ದರು. ಮುಂದೆ ಕಾಂಗ್ರೆಸ್ ಸೇರಿ 2001ರಿಂದ 2015ರವರೆಗಿನ ಕಾಂಗ್ರೆಸ್ ಆಡಳಿತದಲ್ಲಿ ಹಣಕಾಸು, ಕೃಷಿ, ಯೋಜನೆ, ಆರೋಗ್ಯ ಮುಂತಾದ ಪ್ರಬಲ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ ಹೆಸರುಗಳಿಸಿದ ಅತ್ಯಂತ ಚಾಣಾಕ್ಷ ರಾಜಕಾರಣಿ.

2015ರಲ್ಲಿ ಬಿಜೆಪಿಗೆ ಸೇರಿದ ಶರ್ಮಾ North-East Democratic Alliance ಚುಕ್ಕಾಣಿ ಹಿಡಿದು, ಬಿಜೆಪಿಯನ್ನು ಆಸ್ಸಾಂನಲ್ಲಿ ಪ್ರಥಮ ಬಾರಿಗೆ ಅಧಿಕಾರಕ್ಕೆ ತಂದರು. ಪಕ್ಷಕ್ಕೆ ಸೇರಿ ಇನ್ನೂ ಐದು ವರ್ಷಗಳಾಗುವಷ್ಟರಲ್ಲಿ ಜನಪ್ರಿಯ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಬಾರಿಯೂ ಇವರ ನೇತೃತ್ವದಲ್ಲಿ ಬಹಳ ಕಷ್ಟವಿಲ್ಲದೇ ಬಿಜೆಪಿ ಆಸ್ಸಾಮಿನಲ್ಲಿ ಅಧಿಕಾರಕ್ಕೇರುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಬಾಂಗ್ಲಾ ವಲಸೆ, ಕಾನೂನುಬಾಹಿರವಾಗಿ ರಾಜ್ಯದಲ್ಲಿ ನಡೆಯುತ್ತಿದ್ದ ಮದರಸಾಗಳನ್ನು ಮುಲಾಜಿಲ್ಲದೆ ನಿಯಂತ್ರಣಕ್ಕೆ ತಂದ ಧೀರನೀತ. 'ಬಾಬರ್-ಔರಂಗಜೇಬ್ ಸಂತತಿಗೆ ಸರಿಯಾದ ಪಾಠ ಕಲಿಸದಿದ್ದರೆ ನಾನು ಮುಖ್ಯಮಂತ್ರಿಯಾಗಿ ಪ್ರಯೋಜನವೇನು?' ಎಂದು ಕೇಳುವ ಗಟ್ಟಿಗನೀತ. ಕಳೆದ ಲೋಕಸಭಾ ಚುನಾವಣೆಯಲ್ಲಿ ಹದಿನಾಲ್ಕರಲ್ಲಿ ಹನ್ನೊಂದು ಸ್ಥಾನಗಳನ್ನು ಬಿಜೆಪಿಗೆ ಗೆಲ್ಲಿಸಿಕೊಟ್ಟಿದ್ದಾರೆ, ಅವರು ಮುಖ್ಯಮಂತ್ರಿಯಾದ ಮೇಲೆ ಆಸ್ಸಾಂ ರಾಜ್ಯದ ಆರ್ಥಿಕತೆ ದೇಶದ ಆರ್ಥಿಕತೆಗಿಂತ ಎರಡುಪಟ್ಟು ವೇಗದಲ್ಲಿ ಬೆಳೆಯುತ್ತಿದೆ ಅಂದರೆ ಇವರ ಸಾಮರ್ಥ್ಯ ಏನು ಎನ್ನುವುದು ನಮಗೆ ಅರ್ಥವಾಗುತ್ತದೆ.

ಅದೆಲ್ಲ ಸರಿ, ಆದರೆ ಹಿಮಂತ ಬಿಸ್ವ ಶರ್ಮಾ ಕಾಂಗ್ರೆಸ್ ಬಿಟ್ಟಿದ್ದೇಕೆ ಎಂದರೆ, ಈಗ ನಮ್ಮ ಡಿ.ಕೆ. ಶಿವಕುಮಾರ್ ಯಾವ ಪರಿಸ್ಥಿತಿಯಲ್ಲಿದ್ದಾರೋ, ಶರ್ಮಾ ಅವರೂ 2015ರ ಸಮಯದಲ್ಲಿ ಅದೇ ಪರಿಸ್ಥಿತಿಯಲ್ಲಿದ್ದರು. 80 ವರ್ಷದ ತರುಣ್ ಗೊಗೋಯ್ ಅವರಿಂದ ಯುವಕ ಹಿಮಂತ ಬಿಸ್ವ ಶರ್ಮಾ ಅವರಿಗೆ ಅಧಿಕಾರ ಹಸ್ತಾಂತರದ ಒಪ್ಪಂದವಾಗಿತ್ತು. ಪಕ್ಷದಲ್ಲಿ ಯಾವುದೇ ಅಧಿಕಾರವಿಲ್ಲದಿದ್ದರೂ ಮಾತು ಮಾತ್ರ ರಾಹುಲ್ ಗಾಂಧಿಯವರದ್ದೇ ನಡೆಯುತ್ತಿದ್ದ ಕಾಲ ಅದು. ಯಾವುದೇ ವಿಷಯ, ರಾಹುಲ್ ಗಾಂಧಿಯವರನ್ನು ದಾಟಿಯೇ ಸೋನಿಯಾ ಗಾಂಧಿಯವರಲ್ಲಿಗೆ ಬರುತ್ತಿತ್ತು. ಈಗ ಕರ್ನಾಟಕ ಸರಕಾರದ ವಿಷಯದಲ್ಲಿ ವರ್ತಿಸುತ್ತಿದ್ದಂತೆ ಸಂಕ್ರಾಂತಿ, ಶಿವರಾತ್ರಿ ಎನ್ನುತ್ತಾ ನಾಯಕತ್ವ ಬದಲಾವಣೆಗೆ ರಾಹುಲ್ ಗಾಂಧಿ ದಿನ ಮುಂದೂಡುವ ತಂತ್ರವನ್ನು ಉಪಯೋಗಿಸುತ್ತಿದ್ದರು. ತಾನೂ ತೀರ್ಮಾನ ತೆಗೆದುಕೊಳ್ಳದೇ, ರಾಜ್ಯಮಟ್ಟದ ನಾಯಕರುಗಳಿಗೆ ಸೋನಿಯಾ ಗಾಂಧಿಯವರನ್ನು ತಲುಪಲೂ ಬಿಡುತ್ತಿರದ ರಾಹುಲ್‌ರ ಇದೇ ವರ್ತನೆಗೆ ಬೇಸತ್ತು ಶರ್ಮಾ ಪಕ್ಷ ಬಿಡುವ ತೀರ್ಮಾನಕ್ಕೆ ಬಂದುಬಿಟ್ಟರು. ಅದಲ್ಲದಿದ್ದರೆ, ಈತ ಸೋನಿಯಾ ಗಾಂಧಿಯವರ ನೆಚ್ಚಿನ ಭಂಟ, ಪಕ್ಷಕ್ಕೆ ಸಂಕಟ ಬಂದಾಗಲೆಲ್ಲ ಆಕೆ ಮೊದಲು ನೆನಪಿಸಿಕೊಳ್ಳುತ್ತಿದ್ದುದು ಇದೇ ಶರ್ಮಾ ಅವರನ್ನು. ಈತ ಅಷ್ಟು ಸಂಘಟನಾ ಚತುರ. ಮಾತಂತೂ ಬೆಂಕಿಯ ಕಿಡಿಗಳಂತೆ, ಆಸ್ಸಾಮಿ ಉಚ್ಚಾರದಲ್ಲಿ ಅವರ ಮಾತನ್ನು ಕೇಳುವುದೇ ಒಂದು ರೀತಿಯ ಸೊಗಸು. ವಿಭಿನ್ನ ಚುನಾವಣಾ ತಂತ್ರಗಾರಿಕೆ, ರೆಸಾರ್ಟ್ ರಾಜಕಾರಣ, ಶಾಸಕರ ಕ್ರಯ-ವಿಕ್ರಯ ಮುಂತಾದ ಪಕ್ಷ ವಹಿಸುವ ಕೈಕೊಳಕುಮಾಡಿಕೊಳ್ಳುವ ಕೆಲಸವನ್ನೆಲ್ಲಾ ಸಂತೋಷದಿಂದ ಮಾಡುತ್ತಿದ್ದ ಕಾಂಗ್ರೆಸ್ಸಿನ ನಿಷ್ಠ ಸೇವಕ.

ಆದರೆ ಏನು ಮಾಡೋಣ, ಯಾವುದೇ ಶರ್ಮಾ ಅಥವಾ ಇನ್ನೊಬ್ಬರು ಸೋನಿಯಾ ಅವರಿಗೆ ರಾಹುಲ್‌ಗಿಂತ ಹೆಚ್ಚಲ್ಲವಲ್ಲ. ಈಗ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವಂತೆ ಅಧಿಕಾರ ಹಸ್ತಾಂತರದ ವಿಷಯದಲ್ಲಿ ರಾಹುಲ್ ಗಾಂಧಿ ತಮ್ಮ ಜತೆ ಆಟವಾಡುತ್ತಿದ್ದಾರೆ ಎನ್ನುವುದು ತಿಳಿಯುತ್ತಿದ್ದ ಹಾಗೆ, 'ಹೋಗುವವರು ಹೋಗಲಿ ಬಿಡಿ' ಎನ್ನುವ ಮಾತು ರಾಹುಲ್ ಗಾಂಧಿಯವರ ಬಾಯಿಂದ ಬರುತ್ತಿದ್ದಂತೆ, ಗಂಜಿ



ಯಲ್ಲಿ ಬಿದ್ದ ನೊಣಗಳ ಹಾಗೆ ಅಲ್ಲೇ ಒದ್ದಾಡುತ್ತ ಕುಳಿತುಕೊಳ್ಳದೇ, 'ನಾನು ಸೋನಿಯಾ ಗಾಂಧಿಯವರಿಗೆ ಆತ್ಮೀಯ, ಅವರು ನನ್ನನ್ನು ಕೈಬಿಡಲಿಕ್ಕಿಲ್ಲ' ಎನ್ನುವ ಕುರುಡು ವ್ಯಾಮೋಹಕ್ಕೆ ಒಳಗಾಗದೇ, ಗಾಂಧಿ ಕುಟುಂಬಕ್ಕೆ ದೊಡ್ಡ ನಮಸ್ಕಾರ ಮಾಡಿ ವಿಳಂಬವಿಲ್ಲದೇ ಹೊರಬಿದ್ದ ಧೈರ್ಯಶಾಲಿ ನಾಯಕ ಈತ.

ಒಂದು ಕಾಲದಲ್ಲಿ ಇಡೀ ಈಶಾನ್ಯ ಭಾಗವನ್ನು ಆಳಿದ ಕಾಂಗ್ರೆಸ್, ಇಂದು ಈ ಪ್ರದೇಶದಿಂದ ಬಹುತೇಕ ಮಾಯವಾಗಿಬಿಟ್ಟಿದೆ. ಅಸ್ಸಾಂನ ಪ್ರಮುಖ ನಾಯಕರಾಗಿದ್ದ ಹಿಮಂತ ಬಿಸ್ವ ಶರ್ಮಾ ಅವರ ನಿರ್ಗಮನದೊಂದಿಗೆ ಈ ಪತನದ ಪ್ರಾರಂಭವಾಯಿತು ಅಂತ ಹೇಳಬಹುದು. ಅವರು ಈಗ ಈ ಪ್ರದೇಶದಲ್ಲಿ ಬಿಜೆಪಿಯ ಯಶಸ್ಸಿನ ಕಥೆಯ ಮುಖ್ಯ ವಾಸ್ತುಶಿಲ್ಪಿಯಾಗಿದ್ದಾರೆ. 2015ರಲ್ಲಿ ಕಾಂಗ್ರೆಸ್ ತೊರೆದ ಹಿಮಂತ ಬಿಸ್ವ ಶರ್ಮಾ ಅಸ್ಸಾಂನಲ್ಲಿ ತಾವು ಬಿಟ್ಟುಬಂದ ಪಕ್ಷದ ಸೋಲನ್ನು ಮೊದಲು ಖಚಿತಪಡಿಸಿದ್ದಲ್ಲದೆ, ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ಈ ಪ್ರದೇಶದ ಇತರ ರಾಜ್ಯಗಳಿಂದಲೂ ಕಾಂಗ್ರೆಸ್ಸನ್ನು ಕ್ರಮೇಣ ಹೊರಹಾಕಲು ಯಶಸ್ವಿಯಾದರು.

ರಾಹುಲ್ ಗಾಂಧಿ ಅವರು ಹಿಮಂತ ಪ್ರಸಂಗವನ್ನು ತಪ್ಪಾಗಿ ನಿರ್ವಹಿಸಿದ್ದಾರೆ ಎಂದು ಕಾಂಗ್ರೆಸ್‌ನ ಮಾಜಿ ನಾಯಕ ಗುಲಾಂ ನಬಿ ಆಜಾದ್ ಅವರು ಆರೋಪಿಸಿದ್ದಾರೆ. ''ಹಿಮಂತ ಬಿಸ್ವ ಶರ್ಮಾ ಅವರಿಗೆ ಬಹುಪಾಲು ಶಾಸಕರ ಬೆಂಬಲವಿದೆ ಮತ್ತು ನಿರ್ಲಕ್ಷಿಸಿದರೆ ಅವರು ಬಂಡಾಯ ಎದ್ದು ಪಕ್ಷವನ್ನು ತೊರೆಯುತ್ತಾರೆ, ಶರ್ಮಾ ಈಶಾನ್ಯ ರಾಜ್ಯಗಳಲ್ಲಿ ಅದರಲ್ಲೂ ಆಸ್ಸಾಮಿನಲ್ಲಿ ಕಾಂಗ್ರೆಸ್‌ನ ಪ್ರಮುಖ ತಂತ್ರಜ್ಞರಾಗಿದ್ದಾರೆ ಎಂದು ನಾವೆಲ್ಲ ರಾಹುಲ್ ಗಾಂಧಿಯವರಿಗೆ ಹೇಳಿದಾಗ, ಅವರನ್ನು ಕರೆದು ಮಾತನಾಡಿಸುವುದರ ಬದಲಿಗೆ 'ಹೋಗುವುದಾದರೆ ಹೋಗಲಿ ಬಿಡಿ, ನಾಯಕತ್ವದಲ್ಲಿ ಮಾತ್ರ ಯಾವುದೇ ಬದಲಾವಣೆ ಇರುವುದಿಲ್ಲ' ಎಂದು ರಾಹುಲ್ ಸ್ಪಷ್ಟವಾಗಿ ಹೇಳಿದರು'' ಎಂದು ಗುಲಾಂ ನಬಿ ಆಜಾದ್ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಆಜಾದ್ ಅವರು ಊಹಿಸಿದಂತೆ, ಬಂಡಾಯವೆದ್ದ ಶರ್ಮಾ ಸೆಪ್ಟೆಂಬರ್ 2015ರಲ್ಲಿ ಪಕ್ಷವನ್ನು ತೊರೆದ ನಂತರ ಹತ್ತು ಶಾಸಕರೂ ಅವರನ್ನು ಹಿಂಬಾಲಿಸಿದರು. ಮುಂದೆ ರಾಜ್ಯದಲ್ಲಿ ಬಿಜೆಪಿಗೆ ಸತತ ಎರಡನೇ ಗೆಲುವನ್ನು ಖಾತ್ರಿಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು ಮತ್ತು ಕಾಂಗ್ರೆಸ್ ತೊರೆದ ಕೇವಲ ಐದು ವರ್ಷಗಳೊಳಗೆ ರಾಜ್ಯದ ಮುಖ್ಯಮಂತ್ರಿಯಾಗಿ ತೋರಿಸಿದರು. ಸೋನಿಯಾ ಗಾಂಧಿ ಅವರ ನಿರ್ದೇಶನದ ಮೇರೆಗೆ ಶರ್ಮಾ ಅವರೊಂದಿಗೆ ಸಂಧಾನದ ಪ್ರಯತ್ನಗಳಲ್ಲಿ ಭಾಗಿಯಾಗಿದ್ದ ಆಜಾದ್, ''ರಾಹುಲ್ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಏನು ಮಾಡಿದ್ದಾರೆ ಅಥವಾ ಅವರ ನಿರ್ಧಾರವು ಅಸ್ಸಾಂ ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ಈಶಾನ್ಯ ರಾಜ್ಯಗಳಲ್ಲಿ ಪಕ್ಷದ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ ಅಂತ ಅವರಿಗೆ ತಿಳಿದಿರಲಿಲ್ಲ'' ಎಂದು ಬರೆದಿದ್ದಾರೆ. ''ಪಕ್ಷದ ಅಧ್ಯಕ್ಷರಾಗಿ ರಾಹುಲ್ ಗಾಂಧಿಯವರಿಗೆ ಬುದ್ಧಿಹೇಳುವ ಬದಲು, ಅಲುಗಾಡುತ್ತಿರುವ ದೋಣಿಯನ್ನು ಉಳಿಸುವಂತೆ ಹಿಮಂತ ಶರ್ಮಾರನ್ನು ವಿನಂತಿಸುವಂತೆ ನನ್ನನ್ನು ಕೇಳಿಕೊಂಡರು'' ಎಂದೂ ಆಜಾದ್ ಬರೆಯುತ್ತಾರೆ.

ಹಿಮಂತರಿಂದ ಪ್ರಾರಂಭಿಸಿ ಆಜಾದ್‌ವರೆಗೆ ರಾಹುಲ್ ಅವರ ವರ್ತನೆಯಿಂದಲೇ ಪಕ್ಷ ತೊರೆಯಬೇಕಾಗಿ ಬಂದ ಈ ಎಲ್ಲ ನಾಯಕರುಗಳಿಗೆ ರಾಹುಲ್ ಗಾಂಧಿ ಅವರ ಕಾರ್ಯವೈಖರಿಯ ಬಗ್ಗೆ ಇರುವ ದೂಷಣೆಗಳೇನು ಎನ್ನುವುದನ್ನು ತಿಳಿಯಬೇಕಾದರೆ ಅವರುಗಳ ರಾಜೀನಾಮೆ ಪತ್ರಗಳ ವಿಮರ್ಶೆ, ಸಾರ್ವಜನಿಕ ಹೇಳಿಕೆಗಳ ಹಿನ್ನೆಲೆಗಳೊಂದಿಗೆ ನೋಡಿದರೆ ಸುಳಿವು ಸುಲಭವಾಗಿ ಸಿಕ್ಕೀತು. ಹಿಮಂತ ಬಿಸ್ವ ಶರ್ಮಾ ಮತ್ತು ಗುಲಾಂ ನಬಿ ಆಜಾದ್ ಇಬ್ಬರೂ ತಮ್ಮ ರಾಜೀನಾಮೆ ಪತ್ರಗಳಲ್ಲಿ ರಾಹುಲ್ ಗಾಂಧಿ ಅವರೊಂದಿಗಿನ ಸಮಸ್ಯೆಗಳನ್ನು ಎತ್ತಿ ತೋರಿಸಿದ್ದರು. 'ಅಪಕ್ವ, ಬಾಲಿಶ, ದುರಹಂಕಾರಿ, ವಿಚಿತ್ರ, ಅನಿರೀಕ್ಷಿತ, ಗಂಭೀರವಲ್ಲದ, ಅಭದ್ರ, ವಿಲಕ್ಷಣ ಮತ್ತು ಅವಮಾನಕರ ವ್ಯಕ್ತಿತ್ವವನ್ನು ಹೊಂದಿರುವವರು' ಎನ್ನುವುದು ಪಕ್ಷವನ್ನು ತೊರೆಯುವಾಗ ಹಲವಾರು ಹಿರಿಯ ಕಾಂಗ್ರೆಸ್ ನಾಯಕರು ರಾಹುಲ್ ಗಾಂಧಿಗೆ ಬಳಸಿದ ಪದಗಳು.

ರಾಹುಲ್ ಗಾಂಧಿ ಅವರು ರಾಜಕೀಯಕ್ಕೆ ಪ್ರವೇಶಿಸಿದಾಗ, ವಿಶೇಷವಾಗಿ ಸೋನಿಯಾ ಗಾಂಧಿ ಅವರನ್ನು ಪಕ್ಷದ ಉಪಾಧ್ಯಕ್ಷರನ್ನಾಗಿ ಮಾಡಿದ ನಂತರ ಅವರು ಕಾಂಗ್ರೆಸ್‌ನ ಸಲಹಾ ಕಾರ್ಯವಿಧಾನವನ್ನು ಸಂಪೂರ್ಣ ಧ್ವಂಸಗೊಳಿಸಿದರು ಎಂದು ಶರ್ಮಾ ಹೇಳುತ್ತಾರೆ. ತರುಣ್ ಗೊಗೊಯ್ ಅವರನ್ನು ಪದಚ್ಯುತಗೊಳಿಸಲು ಬಯಸಿದ ತಮ್ಮ ಹಾಗೂ ಅಸ್ಸಾಂ ಕಾಂಗ್ರೆಸ್ ಶಾಸಕರ ಬಗ್ಗೆ ಅಹಂಕಾರದ ಧೋರಣೆ ತಳೆದು ಮುಖ್ಯಮಂತ್ರಿಗಳನ್ನು ಬದಲಾಯಿಸುವುದು ತಮ್ಮ ವಿಶೇಷಾಧಿಕಾರ ಎಂದು ಹೇಳಿದರು. ತಾವು ಅಸ್ಸಾಂನ ಜನರಿಗಿಂತ ಶಕ್ತಿಶಾಲಿ ಎಂದು ಭಾವಿಸಿದ್ದರು ಎಂದು ಅವರು ಹೇಳಿದ್ದಾರೆ. ''ಅಸಮರ್ಥ ಹಾಗೂ 'ಔಟ್‌ಡೇಟೆಡ್' ನಾಯಕ ತರುಣ್ ಗೊಗೊಯ್ ಅವರ ಬದಲಾವಣೆಗೆ ಮೊದಲೇ ಪಕ್ಷದಲ್ಲಿ ಚರ್ಚೆಯಾಗಿತ್ತು, ಆ ಬಗ್ಗೆ ಒತ್ತಾಯಿಸುವಾಗ ನನ್ನ ಮತ್ತು ನಾಯಕತ್ವದ ನಡುವೆ ಭಿನ್ನಾಭಿಪ್ರಾಯಗಳು ಉಂಟಾಗಿದ್ದವು. ವಿಪರ್ಯಾಸವೆಂದರೆ, ಮೊದಲೇ ಚರ್ಚೆಯಾದ ವಿಚಾರವಾಗಿದ್ದರೂ ಕೊನೆಯ ಕ್ಷಣದಲ್ಲಿ ರಾಹುಲ್ ಗಾಂಧಿಯವರಿಂದ ಇದಕ್ಕೆ ಪ್ರತಿರೋಧ ವ್ಯಕ್ತವಾಗಿತ್ತು. ತರುಣ್ ಗೊಗೊಯ್ ಅವರನ್ನು ಕೆಳಗಿಳಿಸಿ ಹಿಮಂತ ಶರ್ಮಾ ಅವರನ್ನು ಮುಖ್ಯಮಂತ್ರಿ ಹುದ್ದೆಗೇರಿಸುವುದನ್ನು ಸೋನಿಯಾ ಗಾಂಧಿ ಬಹುತೇಕ ದೃಢಪಡಿಸಿದ್ದರು, ಆದರೆ ಈ ನಿರ್ಧಾರಕ್ಕೆ ರಾಹುಲ್ ಗಾಂಧಿ ಅವರು ಕೆಂಪು ಧ್ವಜ ತೋರಿಸಿಬಿಟ್ಟಿದ್ದರು'' ಎಂದು ಅವರು ಹೇಳಿದ್ದಾಗಿ ವರದಿಯಾಗಿದೆ.

''ಕಾಂಗ್ರೆಸ್ಸಿನಲ್ಲಿ ಗಾಂಧಿ ಕುಟುಂಬ ಮಾತ್ರ ಉಳಿಯುವ ಸಮಯ ದೂರವಿಲ್ಲ ಎಂದು ನಾನು ಹೇಳಿದ್ದೆ, ಇದು ಈಗ ನಡೆಯುತ್ತಿದೆ. ಕಾಂಗ್ರೆಸ್‌ನ ಸಮಸ್ಯೆಯೆಂದರೆ ರಾಹುಲ್ ಗಾಂಧಿ ಅಪ್ರಬುದ್ಧ, ವಿಚಿತ್ರ ಮತ್ತು ಅನಿರೀಕ್ಷಿತ ಎಂದು ಎಲ್ಲರಿಗೂ ತಿಳಿದಿದೆ; ಆದರೆ ಕಾಂಗ್ರೆಸ್ ಅಧ್ಯಕ್ಷರು ಪಕ್ಷದ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಪಕ್ಷದ ಅಧ್ಯಕ್ಷ ಯಾರೇ ಆದರೂ ರಾಹುಲ್ ಗಾಂಧಿ ಹೆಚ್ಚಿನ ಉತ್ತರದಾಯಿತ್ವವಿಲ್ಲದೆ ಅಧಿಕಾರವನ್ನು ಮಾತ್ರ ಚಲಾಯಿಸುತ್ತಾರೆ ಎಂದು ಕಾಂಗ್ರೆಸ್ ಭಿನ್ನಮತೀಯರು ಹೇಳುತ್ತಾರೆ. ರಾಹುಲ್ ಗಾಂಧಿ ರಾಜಕೀಯಕ್ಕೆ ಕಾಲಿಟ್ಟಾಗ, ಯುವ ಕಾಂಗ್ರೆಸ್ ಅನ್ನು ಪುನರುಜ್ಜೀವನಗೊಳಿಸುವತ್ತ ತಮ್ಮ ಗಮನ ಹರಿಸಿದ್ದರು, ಯುವ ನಾಯಕರುಗಳನ್ನು ಮುನ್ನೆಲೆಗೆ ತಂದು ಪಕ್ಷದ ಭವಿಷ್ಯವನ್ನು ಭದ್ರಪಡಿಸುವ ಎಲ್ಲ ಲಕ್ಷಣಗಳೂ ಕಾಣುತ್ತಿತ್ತು. ಅದು ಎಷ್ಟರಮಟ್ಟಿಗೆ ಎಂದರೆ, ಪಕ್ಷದ ಹಳೆಯ 'ಸಾರ್ಜೆಂಟ್'ಗಳೆಲ್ಲ ಆಗಾಗ್ಗೆ ರಾಹುಲ್‌ರಿಂದ ಅವಮಾನಕ್ಕೊಳಗಾಗುತ್ತ ಅವರನ್ನು ದೂಷಿಸಿರುವುದೂ ಇತ್ತು. ಆದರೆ ಈಗ ಪಕ್ಷದಲ್ಲಿ ತಮಗೆ ಸ್ಪರ್ಧೆಯೊಡ್ಡಬಹುದಾದ ಯುವ ಪ್ರತಿಭೆಗಳನ್ನು ನಿರ್ಲಕ್ಷಿಸಲಾಗುತ್ತಿದೆ, ಜ್ಯೋತಿರಾದಿತ್ಯ ಸಿಂಧಿಯಾ ಅವರು ಕಾಂಗ್ರೆಸ್ ತೊರೆದರು, ಅಸ್ಸಾಂ ಮತ್ತು ಮಧ್ಯಪ್ರದೇಶದಂತೆ, ರಾಹುಲ್ ಅವರು ರಾಜಸ್ಥಾನದ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವಾಗ ಅಶೋಕ್ ಗೆಹ್ಲೋಟ್ ಅವರಿಗೆ ಆದ್ಯತೆ ನೀಡಿದರು. ಇದು ಅಂತಿಮವಾಗಿ ಸಚಿನ್ ಪೈಲಟ್ ಅವರ ದಂಗೆಗೆ ಕಾರಣವಾಯಿತು. ಆದರೆ, ಶರ್ಮಾ ಮತ್ತು ಸಿಂಧಿಯಾ ಪ್ರಕರಣಗಳಂತಲ್ಲದೆ, ಇದು ಪೈಲಟ್ ರಾಜೀನಾಮೆಗೆ ಕಾರಣವಾಗಲಿಲ್ಲ ಅಷ್ಟೇ. ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಎಲ್ಲಾ ಹಿರಿಯ ಮತ್ತು ಅನುಭವಿ ನಾಯಕರನ್ನು ಬದಿಗಿರಿಸಲಾಯಿತು, ಯುವ ಮುಖಗಳು ಪಕ್ಷವನ್ನು ತೊರೆದಾಯಿತು ಮತ್ತು ಅನನುಭವಿ ಹೊಗಳಿಕೆಗಾರರ ಹೊಸ ಗುಂಪು ಕಾಂಗ್ರೆಸ್ ಅನ್ನು ನಡೆಸಲು ಪ್ರಾರಂಭಿಸಿತು ಮತ್ತು ಇಂದು ಅವರ ಭದ್ರತಾ ಸಿಬ್ಬಂದಿ ಸಹ ಪಕ್ಷದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ'' ಎಂದು ಪಕ್ಷ ತೊರೆದ ಆಜಾದ್‌ರಂಥ ಹಿರಿಯರು ಮಾತನಾಡುತ್ತಾರೆ. ಆಜಾದ್‌ಗೆ ಕೆಲವೇ ದಿನಗಳ ಮೊದಲು ಪಕ್ಷ ತೊರೆದ ಮತ್ತೊಬ್ಬ ಕಾಂಗ್ರೆಸ್ ನಾಯಕ ಜೈವೀರ್ ಶೇರ್‌ಗಿಲ್ ಕೂಡ, ''ಒಂದು ವರ್ಷದಿಂದ ಪ್ರಯತ್ನಿಸಿದರೂ ಗಾಂಧಿ ಕುಟುಂಬವನ್ನು ಭೇಟಿ ಮಾಡಲು ನನಗೆ ಸಾಧ್ಯವಾಗಲಿಲ್ಲ'' ಎಂದು ಹೇಳಿದರು. ವೇಣುಗೋಪಾಲ್ ಅವರನ್ನು ಬಿಟ್ಟರೆ ರಾಹುಲ್ ಅವರ ಇನ್ನೊಬ್ಬ ಆಪ್ತ ಯಾರೆಂದರೆ ರಣದೀಪ್ ಸುರ್ಜೇವಾಲಾ ಮಾತ್ರ.

''ಕಾಂಗ್ರೆಸ್ಸಿನಲ್ಲಿ ಒಂದು ಕುಟುಂಬದ ಆರಾಧನೆ ಮಾತ್ರ ನಡೆಯುತ್ತಿತ್ತು, ಈಗ ಬಿಜೆಪಿಯಲ್ಲಿ ಮಾತೃಭೂಮಿಯ ಆರಾಧನೆ ನಡೆಯುತ್ತಿದೆ; ಇಪ್ಪತ್ತೆರಡು ವರ್ಷಗಳನ್ನು ಕಾಂಗ್ರೆಸ್ಸಿನಲ್ಲಿ ವ್ಯರ್ಥವಾಗಿ ಕಳೆದಿದ್ದಕ್ಕೆ ಬೇಸರವಿದೆ'' ಎನ್ನುತ್ತಾರೆ ಶರ್ಮಾ. ದೇಶದ ಈಶಾನ್ಯ ಭಾಗದ ರಾಜಕೀಯ ಚಿತ್ರಣವನ್ನೇ ಬದಲಿಸಿದ ಇಂಥ ಧುರಂಧರನ ರಾಜ್ಯಕ್ಕೆ ಚುನಾವಣಾ ಉಸ್ತುವಾರಿಯಾಗಿ ನಮ್ಮ ಉಪಮುಖ್ಯಮಂತ್ರಿಗಳನ್ನು ನೇಮಿಸಲಾಗಿದೆ. ಪಕ್ಷದಲ್ಲಿ ಈಗ ತಾವು ಅನುಭವಿಸುತ್ತಿರುವ ಸಂಕಟವನ್ನು ಒಂದು ಕಾಲದಲ್ಲಿ ಅಲ್ಲಿನ ಮುಖ್ಯಮಂತ್ರಿಯವರು ಅನುಭವಿಸಿದವರೇ ಆಗಿದ್ದಾರೆ, ಅಲ್ಲಿಂದ ಹೊರಬಿದ್ದು ಈಗ ರಾಜಕೀಯದ ಉತ್ತುಂಗದಲ್ಲಿದ್ದಾರೆ ಎನ್ನುವುದು ಶಿವಕುಮಾರ್ ಅವರಿಗೂ ತಿಳಿದ ವಿಷಯವೇ ಆಗಿದೆ. ಶಿವಕುಮಾರ್ ಅವರು ಹಿಮಂತರಿಂದ ಏನಾದರೂ ಕಲಿಯುವ ಪ್ರಯತ್ನ ಮಾಡಿ ಅದೇ ದಾರಿಯಲ್ಲಿ ತಾವೂ ನಡೆಯುತ್ತಾರೋ, ಅಥವಾ ಪ್ರಾರ್ಥನೆಯನ್ನೇ ಮುಂದುವರಿಸುತ್ತಾರೋ ಎನ್ನುವುದನ್ನು ಕಾದುನೋಡಬೇಕಿದೆ. ಹಿಮಂತ ಅವರು ಪ್ರಯತ್ನದಲ್ಲಿ ಹೆಚ್ಚು ನಂಬಿಕೆ ಇಟ್ಟವರು, ಪ್ರಾರ್ಥನೆಗೆ ಪ್ರಯತ್ನಕ್ಕಿಂತ ಹೆಚ್ಚು ಶಕ್ತಿ ಇದೆ ಎಂದು ನಂಬುವವರು ನಮ್ಮ ಡಿ.ಕೆ. ಶಿವಕುಮಾರ್. ಈ ಬಾರಿ ಪ್ರಾರ್ಥನೆಯೋ ಅಥವಾ ಪ್ರಯತ್ನವೋ ಎನ್ನುವ ಕುತೂಹಲವಂತೂ ಇದೆ.

ಬೋರ್ಡ್ ಆಫ್ ಪೀಸ್: ವಿಶ್ವಸಂಸ್ಥೆಗೆ ಪರ್ಯಾಯವೇ?

ವಿಶ್ವಪರ್ಯಟನೆ
ಪ್ರಕಾಶ ಹೆಗಡೆ
vveditoped@gmail.com

ಯುನೈಟೆಡ್ ನೇಷನ್ಸ್ ಎಂಬುದು 1945ರಲ್ಲಿ ಸ್ಥಾಪಿತವಾದ ಜಾಗತಿಕ ಸಂಸ್ಥೆ. ಇದನ್ನು ನಾವು 'ವಿಶ್ವಸಂಸ್ಥೆ' ಅಥವಾ 'ಸಂಯುಕ್ತ ರಾಷ್ಟ್ರ ಸಂಸ್ಥೆ' ಎಂದು ಕರೆಯುವುದು ವಾಡಿಕೆ. ಇದು ವಿಶ್ವಶಾಂತಿ, ಭದ್ರತೆ, ಮಾನವ ಹಕ್ಕುಗಳ ರಕ್ಷಣೆ, ಆರ್ಥಿಕ-ಸಾಮಾಜಿಕ ಅಭಿವೃದ್ಧಿ ಮತ್ತು ರಾಷ್ಟ್ರಗಳ ನಡುವಿನ ಸಹಕಾರವನ್ನು ಉತ್ತೇಜಿಸುವ ಪ್ರಮುಖ ಉದ್ದೇಶವನ್ನು ಹೊಂದಿರುವ ಸಂಸ್ಥೆ. ವಿಶ್ವಸಂಸ್ಥೆಯ ಇಂದಿನ ಪಾತ್ರವು ಬಹುತೇಕ 'ಪೇಪರ್ ಟೈಗರ್'ನಂತಾಗಿದೆ ಎಂಬ ಅಭಿಪ್ರಾಯ ಹಲವಾರು ದೇಶಗಳಲ್ಲಿ ಮೂಡಿದೆ. ಉದ್ದೇಶಗಳು ಮಹತ್ವದ್ದಾಗಿದ್ದರೂ, ಅವುಗಳನ್ನು ಜಾರಿಗೆ ತರುವ ಶಕ್ತಿ ಮತ್ತು ಪರಿಣಾಮಕಾರಿ ಅಧಿಕಾರ ಈ ಸಂಸ್ಥೆಗೆ ಇಲ್ಲ ಎಂಬ ಟೀಕೆ ಹೆಚ್ಚಾಗಿದೆ. ಕೆಲವರಿಗೆ ಇದು ಭಾರಿ ವೆಚ್ಚದಾಯಕವಾಗಿರುವ ಬಿಳಿಯಾನೆಯಂತೆ ಕಾಣುತ್ತಿದ್ದು, ನಿರ್ಣಯಗಳನ್ನು ಜಾರಿಗೊಳಿಸುವಲ್ಲಿ ದಂತವಿಲ್ಲದ ಹುಲಿಯಂತಿದೆ. ಪರಿಣಾಮವಾಗಿ ಅನೇಕ ರಾಷ್ಟ್ರಗಳು ವಿಶ್ವಸಂಸ್ಥೆಗೆ ಹಿಂದಿನಂತೆ ಮಹತ್ವ ನೀಡುತ್ತಿಲ್ಲ, ಅಮೆರಿಕ ಸೇರಿದಂತೆ ಕೆಲವು ಶಕ್ತಿಶಾಲಿ ದೇಶಗಳು ಕೂಡ ಈ ಸಂಸ್ಥೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಇಂಥ ಪರಿಸ್ಥಿತಿಯಲ್ಲಿ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಚೆಕ್‌ಮೇಟ್' ದಾಳವನ್ನು ಉರುಳಿಸಿದ್ದಾರೆ. ಗಾಜಾ ಯುದ್ಧವನ್ನು ಅಂತ್ಯಗೊಳಿಸುವ ತಮ್ಮ ಯೋಜನೆಯನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಘೋಷಿಸಿದ ಅವರು, ಮೊದಲ ಬಾರಿಗೆ 'ಬೋರ್ಡ್ ಆಫ್ ಪೀಸ್' ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾರೆ. ನಂತರ, ಈ ಮಂಡಳಿಯ ವ್ಯಾಪ್ತಿಯನ್ನು ಗಾಜಾ ಮಾತ್ರವಲ್ಲದೆ, ಜಗತ್ತಿನ ಇತರ ಸಂಘರ್ಷಗಳ ಪರಿಹಾರಕ್ಕೂ ವಿಸ್ತರಿಸಲಾಗುವುದೆಂದು ಹೇಳಿಕೆ ನೀಡಿದ್ದಾರೆ. ಟ್ರಂಪ್ ಈ ಮಂಡಳಿಯ ಪ್ರಥಮ ಅಧ್ಯಕ್ಷರಾಗಿದ್ದು, ಜಗತ್ತಿನಾದ್ಯಂತ ಶಾಂತಿಯನ್ನು ಉತ್ತೇಜಿಸುವ ಮತ್ತು ಸಂಘರ್ಷಗಳನ್ನು ಪರಿಹರಿಸುವ ಹೊಣೆಗಾರಿಕೆಯನ್ನು ಈ ಮಂಡಳಿಗೆ ನೀಡಲಾಗುತ್ತದೆ. ಸದಸ್ಯ ರಾಷ್ಟ್ರಗಳಿಗೆ ಸಾಮಾನ್ಯವಾಗಿ 3 ವರ್ಷಗಳ ಅವಧಿಯ ಸದಸ್ಯತ್ವ ಮಾತ್ರ ಇರುತ್ತದೆ; ನಂತರ ಮಂಡಳಿಯ ಚೇರ್ಮನ್ನರ ಅನುಮತಿಯ ಮೇರೆಗೆ ಈ ಅವಧಿಯನ್ನು ನವೀಕರಿಸಬಹುದು. ಆದರೆ ಮಂಡಳಿಯ ಚಟುವಟಿಕೆಗಳಿಗೆ ಹಣಕಾಸು ನೆರವಿನ ರೂಪದಲ್ಲಿ ದೇಶವೊಂದು ಒಂದು ಬಿಲಿಯನ್ ಡಾಲರ್‌ನಷ್ಟು ಹಣವನ್ನು ಪಾವತಿಸಿದರೆ ಶಾಶ್ವತ ಸದಸ್ಯತ್ವವನ್ನು ಪಡೆಯಲು ಅವಕಾಶವಿರುತ್ತದೆ ಎಂದು ಕರಡು ಸಂವಿಧಾನದಲ್ಲಿ ಹೇಳಲಾಗಿದೆ. ಮಂಡಳಿಯ ಸನ್ನದಿನ (ಚಾರ್ಟರ್) ಪ್ರಕಾರ, ಅದರ ಅಧ್ಯಕ್ಷರಾಗಿರುವ ಡೊನಾಲ್ಡ್ ಟ್ರಂಪ್ ಅವರಿಗೆ ವ್ಯಾಪಕ ಕಾರ್ಯನಿರ್ವಾಹಕ ಅಧಿಕಾರಗಳಿದ್ದು, ಕೆಲವು ನಿಯಂತ್ರಣಗಳ ಅಧೀನದಲ್ಲಿಯೇ ನಿರ್ಣಯಗಳನ್ನು 'ವೀಟೋ' ಮಾಡುವ ಹಾಗೂ ಸದಸ್ಯರನ್ನು ಪದಚ್ಯುತಗೊಳಿಸುವ ಶಕ್ತಿಯೂ ಇದೆ. ಸನ್ನದಿನಲ್ಲಿಯೇ ಹೇಳಿರುವಂತೆ, 'ಬೋರ್ಡ್ ಆಫ್ ಪೀಸ್' ಸಜ್ಜಿಕೆಯು ಅಂತಾರಾಷ್ಟ್ರೀಯ ಕಾನೂನುಗಳ ಚೌಕಟ್ಟಿನೊಳಗೆ ಶಾಂತಿನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಿದೆ.

ದಾವೋಸ್‌ನಲ್ಲಿ World Economic Forum ವೇಳೆ ಆಯೋಜಿಸಿದ್ದ ಸಮಾರಂಭದಲ್ಲಿ ಸದರಿ ಶಾಂತಿ ಮಂಡಳಿಯನ್ನು ಟ್ರಂಪ್ ಅನಾವರಣಗೊಳಿಸಿದರು. ಅವರೇ ಉಲ್ಲೇಖಿಸಿದ್ದಂತೆ, ಮಂಡಳಿಗೆ 59 ದೇಶಗಳು ಒಪ್ಪಿಗೆ ಕೊಟ್ಟಿದ್ದರೂ, ಸಮಾರಂಭದಲ್ಲಿ ಉಪಸ್ಥಿತರಿದ್ದು ಸಹಿಹಾಕಿದವರು 19 ದೇಶಗಳ ಪ್ರತಿನಿಧಿಗಳು ಮಾತ್ರ. ಈ ಪೈಕಿ ಅಮೆರಿಕದೊಂದಿಗೆ ಮೈತ್ರಿ ಹೊಂದಿರುವ ಮಧ್ಯಪ್ರಾಚ್ಯ ರಾಷ್ಟ್ರಗಳು, 'ನ್ಯಾಟೋ' ಒಕ್ಕೂಟದ ಸದಸ್ಯರಾದ ಟರ್ಕಿಯೆ ಮತ್ತು ಹಂಗೇರಿ, ಏಷ್ಯಾದ ಕೆಲವು ರಾಷ್ಟ್ರಗಳು ಮತ್ತು ಪೂರ್ವ ಯುರೋಪ್ ರಾಷ್ಟ್ರಗಳು ಸೇರಿವೆ. ರಷ್ಯಾ ಮತ್ತು ಚೀನಾ ಇನ್ನೂ ತಮ್ಮ ನಿರ್ಧಾರವನ್ನು ಪ್ರಕಟಿಸಿಲ್ಲ, ಇವೆರಡೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ 'ವೀಟೋ' ಅಧಿಕಾರ ಹೊಂದಿರುವ ಸದಸ್ಯದೇಶಗಳಾಗಿರುವುದರಿಂದ, ವಿಶ್ವಸಂಸ್ಥೆಯಲ್ಲಿ ತಮ್ಮ ಶಕ್ತಿಯನ್ನು ಕುಂದಿಸುವಂತಾಗುವ ಯಾವುದೇ ಹೊಸ ಉಪಕ್ರಮಗಳ ಬಗ್ಗೆ ಅವು ಎಚ್ಚರಿಕೆಯಿಂದ ವರ್ತಿಸುವ ಸಾಧ್ಯತೆಯಿದೆ. ಜಪಾನ್ ತನ್ನ ಸ್ಪಷ್ಟ ನಿಲುವನ್ನು ಸಾರ್ವಜನಿಕವಾಗಿ ಇನ್ನೂ ಪ್ರಕಟಿಸಿಲ್ಲ.

ಟ್ರಂಪ್ ಅವರ ಆಕ್ರಮಣಕಾರಿ, ಏಕಪಕ್ಷೀಯ ಮತ್ತು 'ಅಮೆರಿಕ ಮೊದಲು' ಎನ್ನುವ ವಿದೇಶಾಂಗ ನೀತಿಯ ಶೈಲಿಯಿಂದ ಅಸಮಾಧಾನಗೊಂಡಿರುವ ಅಮೆರಿಕದ ಕೆಲವು ಮಿತ್ರರಾಷ್ಟ್ರಗಳಿಂದ ಎಚ್ಚರಿಕೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ನ್ಯಾಟೋ' ಒಕ್ಕೂಟದ ದೇಶಗಳ ಪೈಕಿ ನಾರ್ವೆ, ಡೆನ್ಮಾರ್ಕ್ ಮತ್ತು ಸ್ವೀಡನ್ 'ಇಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದರೆ, ಫ್ರಾನ್ಸ್ ಮತ್ತು ಇಟಲಿ ದೇಶಗಳು ಈ ಪ್ರಸ್ತಾವನೆಯನ್ನು ಪರಿಣಾಮಕಾರಿಯಾಗಿ ತಿರಸ್ಕರಿಸುತ್ತಿವೆ. ಜರ್ಮನಿ, ಬ್ರಿಟನ್ ಮತ್ತು ಕೆನಡಾ ಮಾತ್ರ ಇನ್ನೂ ಎಚ್ಚರಿಕೆಯ ನಿಲುವಿನಲ್ಲಿದ್ದು, ಸ್ಪಷ್ಟ ನಿರ್ಧಾರವನ್ನು ಕೈಗೊಂಡಿಲ್ಲ. ವಿಶ್ವಸಂಸ್ಥೆಯಂಥ ಸ್ಥಾಪಿತ ಬಹುಪಕ್ಷೀಯ ವ್ಯವಸ್ಥೆಯ ಹೊರಗೆ ಕಾರ್ಯನಿರ್ವಹಿಸುವ ಅಮೆರಿಕ ನೇತೃತ್ವದ ಈ ಮಂಡಳಿಯ ಬಗ್ಗೆ 'ನ್ಯಾಟೋ' ಒಳಗಡೆ ವ್ಯಾಪಕ ಅನುಮಾನಗಳಿವೆ, ಅಸಹಜ ಅಭಿಪ್ರಾಯಗಳಿವೆ ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ. ಉಕ್ರೇನ್ ತಾನು ರಷ್ಯಾದೊಂದಿಗೆ ಒಂದೇ ಮಂಡಳಿಯಲ್ಲಿ ಸೇರಿಕೊಳ್ಳುವ ಬಗ್ಗೆ ದ್ವಂದ್ವದಲ್ಲಿದೆ. ಅಂತೆಯೇ, ವ್ಯಾಟಿಕನ್‌ನ ಪೋಪ್‌ರವರಿಗೂ ಆಮಂತ್ರಣವಿದ್ದು, ಅವರು ಈ ಪ್ರಸ್ತಾವನೆಯನ್ನು ಇನ್ನೂ ಪರಿಶೀಲಿಸುತ್ತಿದ್ದಾರೆ.

ಈ ಹಂತದಲ್ಲಿ ಭಾರತವು ಟ್ರಂಪ್ ಅವರ 'ಬೋರ್ಡ್ ಆಫ್ ಪೀಸ್'ಗೆ ಸೇರುವ ಬಗ್ಗೆ ಯಾವುದೇ ಅಧಿಕೃತ ಒಪ್ಪಿಗೆಯನ್ನೂ ನೀಡಿಲ್ಲ ಅಥವಾ ನಿರಾಕರಣೆಯನ್ನೂ ಪ್ರಕಟಿಸಿಲ್ಲ. ಭಾರತದ ನಿಲುವು ಸಾಮಾನ್ಯವಾಗಿ ಜಾಗರೂಕವಾಗಿರುವಂಥದ್ದೂ, ತಂತ್ರಾತ್ಮಕವಾಗಿರುವಂಥದ್ದೂ ಆಗಿರುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ವಿಶ್ವಸಂಸ್ಥೆ ಹಾಗೂ ಇತರ ಬಹುಪಕ್ಷೀಯ ಸಂಸ್ಥೆಗಳ ಪಾತ್ರವನ್ನು ದುರ್ಬಲಗೊಳಿಸುವ

ಯಾವುದೇ ಹೊಸ ವ್ಯವಸ್ಥೆಗಳ ಬಗ್ಗೆ ಭಾರತವು ಎಚ್ಚರ ವಹಿಸುತ್ತದೆ. ಶಾಂತಿ, ಸಂವಾದ ಮತ್ತು ಅಂತಾರಾಷ್ಟ್ರೀಯ ಕಾನೂನುಗಳಿಗೆ ಬದ್ಧವಾಗಿರುವುದನ್ನು ಭಾರತವು ಒತ್ತಿಹೇಳುತ್ತದೆಯಾದರೂ, ಒಂದು ದೇಶದ ನಾಯಕತ್ವದಡಿ ಕಾರ್ಯನಿರ್ವಹಿಸುವ ಮತ್ತು ಸ್ಪಷ್ಟ ಕಾನೂನು ಅಧಿಕಾರವಿಲ್ಲದ ವೇದಿಕೆಗೆ ಸೇರುವುದಕ್ಕೆ ಭಾರತವು ಸಂಶಯಪಡುವ ಸಾಧ್ಯತೆ ಹೆಚ್ಚಿದೆ. ಜತೆಗೆ, ರಷ್ಯಾ, ಚೀನಾ ಹಾಗೂ ಪಶ್ಚಿಮ ರಾಷ್ಟ್ರಗಳ ನಡುವೆ ಸಮತೋಲನ ಕಾಯ್ದುಕೊಳ್ಳುವ ಭಾರತದ ವಿದೇಶಾಂಗ ನೀತಿಯ ಹಿನ್ನೆಲೆಯಲ್ಲಿ, ಭಾರತವು ತ್ವರಿತ ನಿರ್ಧಾರಕ್ಕಿಂತ ಪರಿಸ್ಥಿತಿಯನ್ನು ಗಮನಿಸಿ ಲೆಕ್ಕಾಚಾರ ಮಾಡುವ ಮಾರ್ಗವನ್ನೇ ಅನುಸರಿಸುವ ಸಾಧ್ಯತೆ ಹೆಚ್ಚು. ಸದಸ್ಯತ್ವವು ವಿಷಭರಿತ ಪಾತ್ರೆಯಂತೆ ಇರುವುದರಿಂದ, 2003ರಲ್ಲಿ ಉತ್ತರ ಇರಾಕ್‌ನಲ್ಲಿ ಶಾಂತಿಪಾಲನೆಗೆ ಭಾರತೀಯ ಸೇನಾದಳವನ್ನು ಕಳುಹಿಸಬೇಕೆಂಬ ಅಮೆರಿಕದ ಆಹ್ವಾನವನ್ನು ವಾಜಪೇಯಿಯವರು ಜಾಣ್ಮೆಯಿಂದ ತಪ್ಪಿಸಿಕೊಂಡಂತೆ, ಈಗಲೂ ನವದೆಹಲಿಯು ಈ ಪ್ರಸ್ತಾವವನ್ನು ದೂರವಿಡಬೇಕು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಕಳೆದ ನವೆಂಬರ್‌ನಲ್ಲಿ 'ಬೋರ್ಡ್ ಆಫ್ ಪೀಸ್' ಅನ್ನು ಅನುಮೋದಿಸಿದೆ. ಆದರೆ ಈ ಅನುಮೋದನೆ 2027ರವರೆಗೆ ಮಾತ್ರ ಸೀಮಿತವಾಗಿದ್ದು, ಅದರ ಕಾರ್ಯವ್ಯಾಪ್ತಿ ಸಂಪೂರ್ಣವಾಗಿ ಗಾಜಾ ಪ್ರದೇಶದ ಮೇಲೆಯೇ ಕೇಂದ್ರೀಕೃತವಾಗಿರಬೇಕು ಎಂದು ನಿರ್ಧರಿಸಲಾಗಿದೆ. ಈ ನಿರ್ಣಯಕ್ಕೆ ರಷ್ಯಾ ಮತ್ತು ಚೀನಾ ತಟಸ್ಥವಾಗಿ ಮತ ಹಾಕಿದ್ದು, ಅಮೆರಿಕ ರೂಪಿಸಿದ ನಿರ್ಣಯದಲ್ಲಿ ಗಾಜಾಪಟ್ಟಿ ಪ್ರದೇಶದ ಭವಿಷ್ಯದಲ್ಲಿ ವಿಶ್ವಸಂಸ್ಥೆಗೆ ಸ್ಪಷ್ಟವಾದ ಪಾತ್ರವನ್ನು ನೀಡಲಾಗಿಲ್ಲ ಎಂಬ ಅಸಮಾಧಾನವನ್ನು ಅವು ವ್ಯಕ್ತಪಡಿಸಿವೆ.

'ಬೋರ್ಡ್ ಆಫ್ ಪೀಸ್' ಎಂಬ ವ್ಯವಸ್ಥೆಯು ವಿಶ್ವಸಂಸ್ಥೆಯ ಪ್ರಾಮುಖ್ಯವನ್ನು ಹಂತಹಂತವಾಗಿ ಕುಗ್ಗಿಸುವ ಸಾಧ್ಯತೆಯನ್ನು ಹೊಂದಿದೆ ಎಂಬ ಆತಂಕವನ್ನು ಅನೇಕ ರಾಷ್ಟ್ರಗಳು ವ್ಯಕ್ತಪಡಿಸುತ್ತಿವೆ. ವಿಶ್ವಸಂಸ್ಥೆಯು ಬಹುಪಕ್ಷೀಯತೆ, ಸಮಾನ ಸದಸ್ಯತ್ವ ಮತ್ತು ಅಂತಾರಾಷ್ಟ್ರೀಯ ಕಾನೂನುಗಳ ಆಧಾರದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದ್ದರೆ, 'ಬೋರ್ಡ್ ಆಫ್ ಪೀಸ್' ಸಜ್ಜಿಕೆಯು ಒಂದು ದೇಶದ ನಾಯಕತ್ವದಡಿ, ಆಯ್ದ ರಾಷ್ಟ್ರಗಳೊಂದಿಗೆ ಕಾರ್ಯನಿರ್ವಹಿಸುವ ಏಕಪಕ್ಷೀಯ ವೇದಿಕೆಯಾಗುವ ಅಪಾಯವಿದೆ. ಇಂಥ ವ್ಯವಸ್ಥೆಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ಶಾಂತಿಪಾಲನಾ ಕಾರ್ಯಾಚರಣೆಗಳು ಮತ್ತು ರಾಜತಾಂತ್ರಿಕ ಪ್ರಕ್ರಿಯೆಗಳನ್ನು ಅಪ್ರಸ್ತುತಗೊಳಿಸಿ, ಜಾಗತಿಕ ಆಡಳಿತವನ್ನು ಕೆಲವೇ ಶಕ್ತಿಶಾಲಿ ರಾಷ್ಟ್ರಗಳ ನಿಯಂತ್ರಣಕ್ಕೆ ತಳ್ಳಬಹುದು. ದೀರ್ಘಾವಧಿಯಲ್ಲಿ ಇದು ವಿಶ್ವಸಂಸ್ಥೆಯ ವಿಶ್ವಾಸಾರ್ಹತೆ, ಪ್ರಭಾವ ಮತ್ತು ಅಸ್ತಿತ್ವವೇ ಪ್ರಶ್ನಿಸಲ್ಪಡುವ ಮಟ್ಟಿಗೆ ಅದನ್ನು ದುರ್ಬಲಗೊಳಿಸುವ ಸಾಧ್ಯತೆಯಿದೆ ಎಂಬುದು ಪ್ರಮುಖ ಚಿಂತೆಯಾಗಿದೆ.

ಡೊನಾಲ್ಡ್ ಟ್ರಂಪ್ ಅವರ 'ಬೋರ್ಡ್ ಆಫ್ ಪೀಸ್' ಎಂಬ ಪರಿಕಲ್ಪನೆಯು ಶಾಂತಿಯ ಆದರ್ಶವನ್ನು ಪ್ರತಿಪಾದಿಸುವುದಾಗಿ ಹೇಳಿಕೊಂಡರೂ, ಅದರ ಅರ್ಥ ಮತ್ತು ಅನುಷ್ಠಾನವು ಬಹಳ ವಿವಾದಾತ್ಮಕವಾಗಿದೆ. ಟ್ರಂಪ್ ಅವರ ದೃಷ್ಟಿಯಲ್ಲಿ ಶಾಂತಿ ಅಂದರೆ ನೈತಿಕತೆ ಅಥವಾ ಅಂತಾರಾಷ್ಟ್ರೀಯ ಸಹಮತಕ್ಕಿಂತಲೂ ಅಮೆರಿಕದ ಶಕ್ತಿ, ಪ್ರಾಬಲ್ಯ ಮತ್ತು ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ನೀತಿ. ಅವರ ಆಡಳಿತದಲ್ಲಿ ಶಾಂತಿ ಮಾತುಕತೆಯ ಜತೆಗೆ, ಕಠಿಣ ಆರ್ಥಿಕ ನಿರ್ಬಂಧಗಳು, ಸೇನಾ ಒತ್ತಡ ಮತ್ತು 'ಬಲದ ಮೂಲಕ ಶಾಂತಿ' ಎಂಬ ತತ್ವವು ಸ್ಪಷ್ಟವಾಗಿ ಕಾಣಿಸಿಕೊಳ್ಳುವುದನ್ನು ನಾವೆಲ್ಲರೂ ನೋಡಿದ್ದೇವೆ, ಅನುಭವಿಸಿದ್ದೇವೆ. ಆದ್ದರಿಂದ ಟ್ರಂಪ್ ಅವರ 'ಬೋರ್ಡ್ ಆಫ್ ಪೀಸ್' ಸಜ್ಜಿಕೆಯು ಶಾಂತಿಯ ಸಾಂಪ್ರದಾಯಿಕ ಅರ್ಥಕ್ಕಿಂತ ಮಿಗಿಲಾಗಿ ಅಮೆರಿಕದ ಶಕ್ತಿ ಮತ್ತು ಪ್ರಭುತ್ವವನ್ನು ಜಗತ್ತಿನ ಮೇಲೆ ಹೇರುವ ಸಾಧನವೆಂದು ಹಲವರು ವಿಶ್ಲೇಷಿಸುತ್ತಾರೆ.

(ಲೇಖಕರು ಚಾರ್ಟರ್ಡ್ ಅಕೌಂಟೆಂಟ್ ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬುಮ್ರಾ ಆಡಬೇಕಾದ ಟೀಮು: 'ರೆಸ್ಟ್' ಆಫ್ ಇಂಡಿಯಾ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಚಿತ್ರರಂಗ ಮತ್ತು ವಿಮರ್ಶಕರ ಮಧ್ಯೆ ಕಿರಿಕ್ ಅನ್ನೋದು ಸರ್ವೇಸಾಧಾರಣ ಅನ್ನೋದು ಎಲ್ಲರಿಗೂ ಗೊತ್ತು. ಮೊದಲೆಲ್ಲ ಮಾಧ್ಯಮದವರು ಏನೇ ಬರೆದ್ರೂ, ಅದನ್ನ ಸಮಾಧಾನಚಿತ್ತದಿಂದಲೇ ಚಿತ್ರತಂಡದವರು ತಗೋತಾ ಇದ್ರು. ಅಸಮಾಧಾನ ಇದ್ರೂ, ಅದನ್ನ ಹೇಳಬೇಕಾದ ರೀತಿಯಲ್ಲಿ ಹೇಳ್ತಾ ಇದ್ರು. ಈಗ ಅದು ಸಾಕಷ್ಟು ಬದಲಾಗಿದೆ. ವಿಮರ್ಶೆ ಬರೆಯುವವರ ಬಗ್ಗೆ ಕೀಳಾಗಿ ಮಾತಾಡೋದು, ಅವರನ್ನ ಟ್ರೋಲ್ ಮಾಡೋದು ಆಗ್ತಿದೆ. ಅದರಲ್ಲೂ ಸ್ಟಾರ್ ಸಿನಿಮಾಗಳಾದ್ರೆ, ಅವರ ಕಡೆಯವರು ಮತ್ತು ಪೇಯ್ಡ್ ಅಭಿಮಾನಿಗಳ ಕಾಟಕ್ಕೆ ವಿಮರ್ಶಕರು ಕಂಗಾಲಾಗಿದ್ದಾರೆ. ಇತ್ತೀಚಿಗೆ ಇದರ ಹಾವಳಿ ಹೆಚ್ಚಾಗಿದೆ. ಆದರೆ ಇದುವರೆಗೆ ಕೇವಲ ಒಳಗೊಳಗೇ ಇದ್ದ ಈ ಬೆಳವಣಿಗೆ ಈಗ ಇನ್ನೊಂದು ಆಯಾಮಕ್ಕೆ ತಿರುಗಿಕೊಂಡಿದೆ. ಆ ವಾರ ಬಿಡುಗಡೆ ಆಗ್ತಾ ಇರೋ ಸ್ಟಾರ್ ಸಿನಿಮಾ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಯಾರಾದ್ರೂ ನೆಗೆಟಿವ್ ಆಗಿ ಮಾತಾಡಿದ್ರೆ, 'ನೀವು ಕನ್ನಡ ಸಿನಿಮಾಗಳನ್ನ ಬೆಂಬಲಿಸಲ್ಲ' ಅಂತ ವರಾತ ತೆಗೆಯುತ್ತಾರೆ. ಕೆಲವು ಚಿತ್ರಗಳು ಈ ವಿಷಯದಲ್ಲಿ ಈಗ ಒಂದು ಹೆಜ್ಜೆ ಮುಂದೆ ಹೋಗಿವೆ. ಚಿತ್ರಕ್ಕೆ ಸಂಬಂಧಪಟ್ಟವರೊಬ್ಬರು ಎಲ್ಲ ವಿಮರ್ಶಕರಿಗೂ ಇದೊಂದು ರಿಕ್ವೆಸ್ಟ್ ಅಂತ ಹೇಳುತ್ತಲೇ, 'ಸಿನಿಮಾ ನೋಡಿ ಚೆನ್ನಾಗಿದೆ ಅನ್ನಿಸಿದ್ರೆ, ಹಾಗೆ ರಿವ್ಯೂ ಮಾಡಿ, ಇಷ್ಟ ಆಗದಿದ್ರೆ ನಮಗೆ ಕಾಲ್ ಮಾಡಿ ಡಿಸ್ಕಸ್ ಮಾಡಿ, ನಾವು ನಿಮಗೆ ಎಕ್ಸ್‌ಪ್ಲೇನ್ ಮಾಡ್ತೀವಿ, ಅದಕ್ಕೆ ತಕ್ಕಂತೆ ರಿವ್ಯೂ ಮಾಡಿ; ಸುಮ್ನೆ ಸಿನಿಮಾ ನೋಡಿ ಹೆಂಗೆಂಗೋ ರಿವ್ಯೂ ಮಾಡಬೇಡಿ' ಎಂಬ ಎಚ್ಚರಿಕೆ ಸಂದೇಶವನ್ನು ರವಾನಿಸುತ್ತಾರೆ. ಇದನ್ನು ಕೇಳಿ ಕಂಗಾಲಾಗೋ ಅನೇಕ ವಿಮರ್ಶಕರು 'ಎಲ್ಲಿಗೆ ಬಂತಪ್ಪಾ ವಿಮರ್ಶೆಯ ಪರಿಸ್ಥಿತಿ, ಈ ಹುಟ್ಟಿಗೆ ವಿಮರ್ಶೆ ಬೇರೆ ಮಾಡ್ಬೇಕಾ' ಅನ್ನುತ್ತಾ 'ನಿಮ್ಮ ಸಿನಿಮಾ ನೋಡೋದೇ ಬೇಡ ಬಿಡಿ' ಅನ್ನೋ ನಿರ್ಧಾರಕ್ಕೆ ಬರುತ್ತಿದ್ದಾರೆ.

ಲೂಸ್ ಟಾಕ್ ▶▶ ಜಸ್ಪ್ರೀತ್ ಬುಮ್ರಾ

- **ಏನ್ ಸರ್, ನಿಮ್ದು ಆಡೋದಕ್ಕಿಂತ ಬರೀ ರೆಸ್ಟ್ ತಗೊಳ್ಳೋದೇ ಜಾಸ್ತಿ ಆಯ್ತಲ್ಲ?**
- – ನಿಜ ಬಿಡಿ. ಅದಕ್ಕೇ ಈಗ ಬಿಸಿಸಿಐನವರು 'ನೀನು ಇಂಡಿಯಾಗೆ ಆಡೋದಕ್ಕಿಂತ ರೆಸ್ಟ್ ಆಫ್ ಇಂಡಿಯಾಗೆ ಆಡೋದೇ ಬೆಸ್ಟು' ಅಂತಿದ್ದಾರೆ.
- **ಕರೆಕ್ಟಾಗೇ ಹೇಳಿದ್ದಾರೆ ಬಿಡಿ. ಅಂದಹಾಗೆ, ಗಂಭೀರ್ ಕಾಲದಲ್ಲಿ ಸೀನಿಯರ್ ಪ್ಲೇಯರ್ಸ್‌ಗೆ ಬೆಲೆನೇ ಇಲ್ವಂತೆ?**
- – ನಮ್ ದೇಶದಲ್ಲಿ ಸೀನಿಯರ್ ಸಿಟಿಜನ್ಸು, ಸೀನಿಯರ್ ಪ್ಲೇಯರ್ಸು ಯಾರಿಗೂ ಬೆಲೆ ಇಲ್ಲ ಬಿಡಿ
- **ನೆಕ್ಸ್ಟ್ ಮ್ಯಾಚ್ ಆಡ್ತೀರಾ ಅನ್ನೋ ಗ್ಯಾರಂಟಿನಾದ್ರೂ ಇದೆಯಾ ನಿಮಗೆ?**
- – ಇಂಡಿಯನ್ ಟೀಮಲ್ಲಿ ಹರ್ಷಿತ್ ರಾಣಾ ಪ್ಲೇಸ್ ಬಿಟ್ರೆ ಬೇರೆ ಯಾವ್ದಕ್ಕೂ ಜೀವನದಲ್ಲಿ ಗ್ಯಾರಂಟಿ ಇಲ್ಲ ಕಣ್ರೀ
- **ನೀವು ಅಷ್ಟು ಪರ್‌ಫೆಕ್ಟ್ ಆಗಿ ಯಾರ್ಕರ್ ಹಾಕಿ ವಿಕೆಟ್ಸ್ ಎಗರಿಸ್ತೀರಲ್ಲ ಅದೆಂಗೆ ಸಾಧ್ಯ?**
- – ಅದೂ, ನಾನು ಸಣ್ಣೋನಿದ್ದಾಗ ಲಗೋರಿ ಜಾಸ್ತಿ ಆಡ್ತಾ ಇದ್ದೆ.
- **ಕೊಹ್ಲಿ, ರೋಹಿತ್ ಇದ್ರೂನೂ 'ಒನ್ ಡೇ' ಮ್ಯಾಚ್‌ಗಳನ್ನ ಇಂಡಿಯಾ ಯಾಕೆ ಸೋಲ್ತಾ ಇದೆ?**
- – ಅವರ್ ಮಾತ್ರ ಆಡಿದ್ರೆ ಆಯ್ತಾ, ಉಳಿದೋರೂ ಆಡಬೇಕಲ್ವಾ. ಆದ್ರೂ ನಮ್ಗೂ 'ಒಂದು ದಿನ' ಬರುತ್ತೆ, ನೋಡ್ತಾ ಇರಿ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಕರೋನಾ ಕಾಲದಲ್ಲಿ ಇಡೀ ನೇಶನ್ ಕರೋನಾಗೆ ವ್ಯಾಕ್ಸಿನೇಶನ್ ಹಾಕಿಸಿಕೊಂಡು, ಈಗ ಯಾಕಾದರೂ ಕೋವಿಶೀಲ್ಡ್ ವ್ಯಾಕ್ಸಿನ್ ಹಾಕಿಸಿಕೊಂಡೆವೋ ಅಂತ ಪಶ್ಚಾತ್ತಾಪ ಪಡುವ ಧಾವಂತದಲ್ಲಿ ಇರುವಾಗ ಯಾವನೋ ಒಬ್ಬ ಹುಚ್ಚ ನಾನು ಎಲ್ಲರಿಗೂ ಏಡ್ಸ್ ಕಾಯಿಲೆ ಹರಡಿಸಿಬಿಡ್ತೀನಿ ಎನ್ನುವ ಕೆಟ್ಟಬುದ್ಧಿಗೆ ಇಳಿದಿದ್ದ. ಏಡ್ಸ್ ಸೋಂಕು ಇರೋ ಬ್ಲಡ್ ಅನ್ನು ಸಿರಿಂಜ್‌ನಲ್ಲಿ ಹಾಕಿಕೊಂಡು ರಸ್ತೆಯಲ್ಲಿ ಹೋಗೋ ಬರೋವ್ರಿಗೆಲ್ಲಾ, 'ಇದು ಎಚ್‌ಐವಿ ಪಾಸಿಟಿವ್ ಇರೋ ಬ್ಲಡ್ಡು, ಚುಚ್ಚಿಬಿಡ್ತೀನಿ, ಚುಚ್ಚಿಬಿಡ್ತೀನಿ' ಅಂತ ಹೆದರಿಸ್ತಾ ಇದ್ದ. ಅವನನ್ನು ನೋಡಿ ಎಲ್ಲರೂ ದೂರ ಓಡಿಹೋಗುತ್ತಿದ್ದರು. ಅಷ್ಟರಲ್ಲಿ ಸೋಮು ಬಂದು, 'ಅಲ್ಲಿ ಯಾವನೋ ಹುಚ್ಚ ತಿರುಗಾಡ್ತಾ ಇದ್ದಾನೆ. ಏಡ್ಸ್ ಇರೋ ಬ್ಲಡ್‌ನ ಇಂಜೆಕ್ಷನ್ ಸಿರಿಂಜ್‌ಗೆ ಹಾಕ್ಕೊಂಡು, ಎಲ್ಲರಿಗೂ ಚುಚ್ಚಿ ಬಿಡ್ತೀನಿ, ಚುಚ್ಚಿಬಿಡ್ತೀನಿ ಅಂತ ಹೆದರಿಸ್ತಾ ಇದ್ದಾನೆ. ನೀನು ಮಾತ್ರ ಆ ಕಡೆ ಹೋಗ್ಬೇಡ' ಅಂತ ಖೇಮುಗೆ ಹೇಳಿದ. ಅದಕ್ಕೆ ಖೇಮು, 'ಅಯ್ಯೋ ಅಂಥವರಿಗೆಲ್ಲಾ ನಾನು ತಲೆಕೆಡಿಸಿಕೊಳ್ಳಲ್ಲ, ನಾನ್ ನೋಡ್ಕೊತೀನಿ ಬಿಡು' ಅಂತ ಆ ಹುಚ್ಚ ಓಡಾಡ್ತಾ ಇದ್ದ ರೋಡಿಗೇ ಹೋದ. 'ಲೋ, ಬ್ಯಾಡ ಕಣೋ, ಅವನೇನಾದ್ರೂ ಚುಚ್ಚಿಬಿಟ್ರೆ ನಿಂಗೆ ಏಡ್ಸ್ ಬರುತ್ತೆ' ಅಂತ ಜತೆಗಿದ್ದವರು ಹೇಳಿದರೂ ಕೇಳದೇಹೋದ ಖೇಮು. ಅವನ ಹತ್ರ ಬಂದ ಹುಚ್ಚ, ಎಲ್ಲರಿಗೂ ಹೆದರಿಸಿದಂತೆಯೇ ಅವನಿಗೂ, 'ಚುಚ್ಚಿ ಬಿಡ್ತೀನಿ, ಚುಚ್ಚಿಬಿಡ್ತೀನಿ' ಅಂತ ಹೆದರಿಸಿದ. ಅದಕ್ಕೆ ಖೇಮು ಕೂಲಾಗಿ, 'ಆಯ್ತು ಚುಚ್ಕೋ' ಅಂದ. ಹುಚ್ಚನಿಗೆ ಕೊಂಚ ಗಾಬರಿ ಆಯ್ತು. 'ಲೋ, ಇದು ಏಡ್ಸ್ ಇರೋ ರಕ್ತ, ಚುಚ್ಚಿದ್ರೆ ನಿಂಗೂ ಏಡ್ಸ್ ಬರುತ್ತೆ, ಸತ್ತೋಗ್ತೀಯ' ಅಂದ. ಅದಕ್ಕೆ ಖೇಮು ಇನ್ನೂ ಕೂಲಾಗಿ ಹೇಳಿದ 'ಅಯ್ಯೋ, ಚುಚ್ಕೊಳ್ಳೋಲೇ, ನಾನ್ ಕಾಂಡೋಮ್ ಹಾಕ್ಕೊಂಡಿದೀನಿ'.

ಲೈನ್ ಮ್ಯಾನ್

- **ಕುಡಿದು ಟೈಟ್ ಆದವರನ್ನ ಮಾತಾಡಿಸುವಾಗ ಏನಂತ ಸಂಬೋಧಿಸಬೇಕು?**
- – ಯುವರ್ 'ಹೈ' ನೆಸ್
- **ಫಿಲಾಸಫಿ**
- – ಮನುಷ್ಯ ಸತ್ತಾಗ ಅವನು ಹೇಗೆ ಬದುಕಿದ ಅನ್ನೋ 'ಪ್ರಶ್ನೆ'ಗಿಂತ ಅವನ 'ಉತ್ತರ'ಕ್ರಿಯೆ ಬಗ್ಗೆನೇ ಎಲ್ಲರೂ ಜಾಸ್ತಿ ತಲೆ ಕೆಡಿಸ್ಕೊತಾರೆ
- **ಕೆಲವು ಹೋಟೆಲ್‌ಗಳ ಚಿಕನ್ ಡಿಶ್‌ಗಳಲ್ಲಿ ನಾರಿನ ಪೀಸೇ ಜಾಸ್ತಿ ಇರುತ್ತೆ**
- – ಮಾಂಸದ ಜತೆ ನಾರೂ ಹೊಟ್ಟೆ ಸೇರಿತು ಅನ್ನೋ ಥರ
- **ಮನೆ ಕಟ್ಟೋ ಕೂಲಿ ಕಾರ್ಮಿಕರ ಕಷ್ಟ**
- – 'ಕಟ್ಟು'ಪಾಡು
- **ಎಣ್ಣೆ ಹೊಡೆದು ಕವನ ಹೇಳಿ ಟಾರ್ಚರ್ ಕೊಡುವ ಸಾಹಿತಿಯ ಪುಣ್ಯಕೋಟಿ ಗೋವಿನ ಸ್ಟೈಲ್ 'ನೋವಿನ ಹಾಡು'**
- – ಗದ್ಯವಿದೆಕೋ... ಪದ್ಯವಿದೆಕೋ.. ಗುಂಡೆದೆಯ ಬಿಸಿ ಮದ್ಯವಿದೆಕೋ.. ಕಂಡ ಕಂಡವರನ್ನು ಕಾಡುವ ಅಖಂಡ ಕಾವ್ಯವ ಸಹಿಸಿಕೋ...
- **ಟಿಕೆಟ್ ರೇಟ್ ದುಬಾರಿ ಮಾಡಿ, 'ಕನ್ನಡ ಸಿನಿಮಾ ನೋಡಿ, ಕನ್ನಡ ಸಿನಿಮಾ ಬೆಳೆಸಿ' ಅನ್ನೋ ಚಿತ್ರತಂಡದವರಿಗೆ ಒಂದು ಪ್ರಶ್ನೆ**
- – ಅಷ್ಟೊಂದು ಖರ್ಚು ಮಾಡಿಕೊಂಡು ನಿಮ್ಮನ್ನ ಬೆಳೆಸೋಕೆ ನಾವೇನು ಅಂಬಾನಿ ವಂಶಸ್ಥರಾ, ಇಲ್ಲ ಮೈಸೂರು ಅಂಬಾರಿ ವಂಶಸ್ಥರಾ?
- **ಸ್ಲೀಪ್ ಸೈಕಲ್ ಸರಿ ಮಾಡಿಕೊಂಡು, ನಿದ್ದೆ ಮಾಡೋದು ಹೇಗೆ ಅಂತ ಹೇಳಿಕೊಡೋ ಕ್ಲಾಸಸ್ ಮಾಡ್ತಾ ಇರೋ ಕಾಲ ಇದು**
- – ನಮ್ ಕಾಲದಲ್ಲಿ ನಾವು ಸ್ಕೂಲಿಗೆ ಹೋದಾಗ ಕ್ಲಾಸಲ್ಲೇ ನಿದ್ದೆ ಮಾಡ್ತಿದ್ವಪ್ಪ
- **ಒಬ್ಬ 'ಸುಳ್ಳು' ಹೇಳೋದ್ ನೋಡಿ ಅವನ ಜತೆಗಿರೋ ಜನರೆಲ್ಲ ಅಂಥವರೇ ಅಂತ ಡಿಸೈಡ್ ಮಾಡೋದು**
- – 'ಜನ'ರ'ಲೈಸ್'
- **'ತುಪ್ಪ' ತಿಂದು ಕೊಬ್ಬು ಜಾಸ್ತಿ ಆದವರು ಏನ್ ಮಾಡ್ತಾರೆ?**
- – 'ಘೀ'ಳಿಡುತ್ತಾರೆ
- **ಕುರುಡನೊಬ್ಬನ ಮೇಲೆ ಯಾರಾದ್ರೂ ಕೇಸು ಹಾಕಿದ್ರೆ, ವಿಚಾರಣೆ ಎಲ್ಲಿ ನಡೆಯುತ್ತೆ?**
- – 'ಐ' ಕೋರ್ಟ್‌ನಲ್ಲಿ
- **ಕುಡುಕನೊಬ್ಬನ ಮೇಲೆ ಯಾರಾದ್ರೂ ಕೇಸು ಹಾಕಿದ್ರೆ, ವಿಚಾರಣೆ ಎಲ್ಲಿ ನಡೆಯುತ್ತೆ?**
- – 'ಹೈ' ಕೋರ್ಟ್ ನಲ್ಲಿ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 11

ನನ್ನೂರ ಜನರ ಆಶೀರ್ವಾದದಿಂದ ಬದುಕಿದ್ದೇನೆ: ಎಚ್‌ಡಿಡಿ

ಹಾಸನದಲ್ಲಿ ಜೆಡಿಎಸ್‌ನಿಂದ ಬೃಹತ್ ಸಮಾವೇಶ | ಜೆಡಿಎಸ್ ಮುಗಿಸಲು ಹವಣಿಸುತ್ತಿರುವ ಕಾಂಗ್ರೆಸ್ ಕನಸು ಅಸಾಧ್ಯ
ತಳಮಟ್ಟದಿಂದ ಹಂತಹಂತವಾಗಿ ಬೆಳೆದ ಪಕ್ಷ | ಸಮಾವೇಶದಲ್ಲಿ ಸೇರಿದ ಕಾರ್ಯಕರ್ತರ ಕಂಡು ಕುಮಾರಸ್ವಾಮಿ ಭಾವುಕ

ಹಾಸನ: ನನ್ನನ್ನು ಜಿಲ್ಲೆಯ ಜನರೇ ಬೆಳೆಸಿದ್ದಾರೆ. 93ನೇ ವಯಸ್ಸಿನಲ್ಲೂ ಬದುಕಿರಲು ಜನರ ಆಶೀರ್ವಾದವೇ ಕಾರಣ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಭಾವುಕರಾಗಿ ನುಡಿದರು.

ಹಾಸನದಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶದಲ್ಲಿ ಭಾಗಿಯಾಗುವ ಮುನ್ನ ಹೊಳೆನರಸೀಪುರ ತಾಲೂಕು ಹರದನಹಳ್ಳಿಯಲ್ಲಿಂದು ಬೆಳಗ್ಗೆ ಕುಲ ದೇವರು ದೇವೇಶ್ವರನಿಗೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದರು.

ಕಾಂಗ್ರೆಸ್ ಪಕ್ಷವು ಎರಡೂವರೆ ವರ್ಷಗಳಲ್ಲಿ ಜಿಲ್ಲೆ ಒಂದರಲ್ಲೇ ಹೆಜ್ಜೆ ಇಟ್ಟು, ಎರಡು ಬಾರಿ ಸಮಾವೇಶ ನಡೆಸಿ ಜೆಡಿಎಸ್ ಮುಗಿಸಲು ಪ್ರಯತ್ನಿಸಿದೆ. ಜಿಲ್ಲೆಯ ಜನರ ಬೆಂಬಲದಿಂದಲೇ ಜೆಡಿಎಸ್ ರಾಜ್ಯದಲ್ಲಿ ಹಂತ ಹಂತವಾಗಿ ಬೆಳೆದಿದೆ. ತಾವು ಸಾಮಾನ್ಯ ಶಾಸಕರಾಗಿ ಆಯ್ಕೆಯಾಗಿ, ನಂತರ ಹಂತ ಹಂತವಾಗಿ ಪ್ರಧಾನಮಂತ್ರಿ ಹುದ್ದೆವರೆಗೂ ಹೋಗುವ ಅವಕಾಶ ದೊರೆತಿದೆ. ರಾಜಕೀಯ ಜೀವನದ 65 ವರ್ಷಗಳಲ್ಲಿ ನೋವು-ನಲಿವು ಎರಡನ್ನೂ ಅನುಭವಿಸಿದ್ದೇನೆ. ಈ ಹಿನ್ನೆಲೆಯಲ್ಲೇ ಪಕ್ಷ ಉಳಿಸಬೇಕೆಂಬ ಉದ್ದೇಶದಿಂದ ಎಲ್ಲರೂ ಸೇರಿ ಸಮಾವೇಶ ಆಯೋಜನೆ ಮಾಡಿದ್ದೇವೆ ಎಂದರು.

ಭಾವುಕರಾದ ಕುಮಾರಸ್ವಾಮಿ: ಜೆಡಿಎಸ್ ಬೃಹತ್ ಜನತಾ ಸಮಾವೇಶದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಸೇರಿದ್ದನ್ನು ಕಂಡು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾವುಕರಾದರು.

ಜೆಡಿಎಸ್ ಜನತಾ ಸಮಾವೇಶಕ್ಕೆ ಸೇರಿದ್ದ ಜನಸಾಗರದ ಪ್ರೀತಿ-ಅಭಿಮಾನ ಕಂಡು ಕುಮಾರಸ್ವಾಮಿ ಅವರ ಕಣ್ಣಲ್ಲಿ ಆನಂದಬಾಷ್ಪ ಮೂಡಿತು. ಅವರು ವೇದಿಕೆಗೆ ಆಗಮಿಸುತ್ತಿದ್ದಂತೆ ಲಕ್ಷಾಂತರ ಕಾರ್ಯಕರ್ತರು ಜೋರಾಗಿ ಚಪ್ಪಾಳೆ ತಟ್ಟಿ, ಶಿಳ್ಳೆ ಹೊಡೆದು, ಕೇಕೆ ಹಾಕುವ ಮೂಲಕ ಆತ್ಮೀಯ ಸ್ವಾಗತ ಕೋರಿದರು. ಸಮಾವೇಶದಲ್ಲಿ ಕಾರ್ಯಕರ್ತರ ಅಪಾರ ಪ್ರೀತಿ ಕಂಡು ಕುಮಾರಸ್ವಾಮಿ ಕಣ್ಣೀರು ಹಾಕಿದರು.

ಕೇಸು ಹಾಕಿ ಹೆದರಿಸಲಾಗಲ್ಲ- ರೇವಣ್ಣ: ಕೇಸು ಹಾಕಿ ನನ್ನನ್ನು ಹೆದರಿಸಲು ಸಾಧ್ಯವಿಲ್ಲ, ನಾನು ಹೆದರುವುದೂ ಇಲ್ಲ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಕಾಂಗ್ರೆಸ್ ಸರಕಾರಕ್ಕೆ ಎಚ್ಚರಿಕೆ ನೀಡಿದರು. ದೇವೇಗೌಡರು ಹಾಗೂ ಕುಮಾರಸ್ವಾಮಿ ಕುಟುಂಬವನ್ನು ಮುಗಿಸುತ್ತೇವೆ ಎಂಬುದು ಕಾಂಗ್ರೆಸ್ ನಾಯಕರ ಕನಸು. ನನ್ನನ್ನು ಹೆದರಿಸಿದರೆ ನಾನು ಹೆದರುವವನು ಅಲ್ಲ, ರಾಜಕೀಯ ದ್ವೇಷದಿಂದ ಕೇಸ್ ಹಾಕಿ ಹೆದರಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಈ ಸಮಾವೇಶದಿಂದಲೇ ಕಾಂಗ್ರೆಸ್ ಪಕ್ಷದ ನಿರ್ನಾಮ ಆರಂಭವಾಗಲಿದೆ. ವಚನ ಭ್ರಷ್ಟತೆ ಯಾರಿಗಾದರೂ ಸೇರಿದ್ದರೆ ಅದು ಕಾಂಗ್ರೆಸ್ಗೆ ಮಾತ್ರ ಎಂದು ಕಿಡಿಕಾರಿದರು. ಬಿಜೆಪಿ ಯಾರನ್ನು ಪ್ರಧಾನ ಕಾರ್ಯದರ್ಶಿ ಮಾಡಿದೆ. ಲೋಕಸಭೆ ಹಾಗೂ ಮಹಾ ನಗರಪಾಲಿಕೆ ಚುನಾವಣೆಯಲ್ಲಿ ಅವರು ಯಾರೊಂದಿಗೆ ಇದ್ದರು, ನಿಮ್ಮ ಪ್ರಧಾನ ಕಾರ್ಯದರ್ಶಿ ಜಿಲ್ಲೆಯಲ್ಲಿ ಯಾವ ಪಕ್ಷದಲ್ಲಿದ್ದಾರೆ ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ ಎಂದು ಮಾಜಿ ಶಾಸಕ ಪ್ರೀತಂಗೌಡ ಅವರ ಹೆಸರು ಹೇಳದೆ ಪ್ರಶ್ನಿಸಿದರು.



ಜೆಡಿಎಸ್ ಪಕ್ಷ 25 ವರ್ಷ ಪೂರೈಸಿರುವ ಹಿನ್ನೆಲೆ ಹಾಸನದಲ್ಲಿ ಬೃಹತ್ ಸಮಾವೇಶ ನಡೆಯಿತು. ಈ ವೇಳೆ ವರಿಷ್ಠ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಕುಮಾರಸ್ವಾಮಿ, ಎಚ್.ಡಿ.ರೇವಣ್ಣ, ನಿಖಿಲ್ ಕುಮಾರಸ್ವಾಮಿ, ಟಿ.ಎ.ಶರವಣ ಸೇರಿ ಹಲವರಿದ್ದರು.

ಸಹಸ್ರಾರು ಜನರು ಭಾಗಿ

ಹಾಸನದಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶಕ್ಕೆ ಜಿಲ್ಲೆಯ ಮೂಲೆ-ಮೂಲೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು. ಜಿಲ್ಲೆಯಿಂದ ಜನರನ್ನು ಕರೆತರಲು 900ಕ್ಕೂ ಹೆಚ್ಚು ಸಾರಿಗೆ ಬಸ್‌ಗಳು ಹಾಗೂ 300ಕ್ಕೂ ಹೆಚ್ಚು ಖಾಸಗಿ ವಾಹನಗಳನ್ನು ನಿಯೋಜಿಸಲಾಗಿತ್ತು. ಪ್ರತಿ ತಾಲೂಕಿನಿಂದಲೂ ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಕುಮಾರಸ್ವಾಮಿ ಹಾಗೂ ದೇವೇಗೌಡರನ್ನು ನೇರವಾಗಿ ನೋಡುವ ಉತ್ಸಾಹದಿಂದ ಜನರು ನೂಕು-ನುಗ್ಗಲಿಗೆ ಮುಂದಾದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಶಿವಲಿಂಗೇಗೌಡ ವಿರುದ್ಧ ರೇವಣ್ಣ ಕಿಡಿ

ನಾನು ಒಬ್ಬರನ್ನು ಸಾಕಿಕೊಂಡು, ದುಡ್ಡು ಕೊಟ್ಟು, ಮೂರು ಬಾರಿ ಗೆಲ್ಲಿಸಿಕೊಂಡು ಬಂದೆ. ದೇವೇಗೌಡರ ಮಾತು ಕೇಳದೆ ಆ ಗಿರಾಕಿಗೆ ಟಿಕೆಟ್ ಕೊಟ್ಟೆ. ದೇವೇಗೌಡರ ಹೆಸರು ಹೇಳಿದರೆ ಓಟು ಹಾಕಲ್ಲ, ದುಡ್ಡು ಕೊಟ್ಟರೆ ಮಾತ್ರ ಓಟು ಹಾಕ್ತಾರೆ ಎಂದು ದೇವೇಗೌಡರ ಎದುರಲ್ಲೇ ಮಾತನಾಡಿದ್ದಾರೆ ಎಂದು ಅರಸೀಕೆರೆ ಶಾಸಕ ಶಿವಲಿಂಗೇಗೌಡರ ವಿರುದ್ಧ ಎಚ್.ಡಿ.ರೇವಣ್ಣ ಕಿಡಿ ಕಾರಿದರು.

ಸಮಾಚಾರ ಸಣ್ಣದಲ್ಲ

ದಂಡುಪಾಳ್ಯ ಗ್ಯಾಂಗ್‌ನ ಮತ್ತೊಬ್ಬನ ಬಂಧನ

ಮಂಗಳೂರು: ಉರ್ವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುಮಾರು 29 ವರ್ಷಗಳ ಹಿಂದೆ ನಡೆದಿದ್ದ ಭೀಕರ ಜೋಡಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ದಂಡುಪಾಳ್ಯ ಗ್ಯಾಂಗ್‌ನ ಚಿಕ್ಕ ಹನುಮಂತಪ್ಪ (ಅಲಿಯಾಸ್ ಕೆ.ಕೃಷ್ಣಪ್ಪ) ಎಂಬಾತನನ್ನು ಆಂಧ್ರಪ್ರದೇಶದ ಮದನಪಳ್ಳೆಯಲ್ಲಿ ಬಂಧಿಸಲಾಗಿದೆ. ಕಳೆದ 29 ವರ್ಷಗಳಿಂದ ಪೊಲೀಸರ ಕಣ್ಣು ತಪ್ಪಿಸಿ ತಲೆಮರೆಸಿಕೊಂಡಿದವನನ್ನು ಪತ್ತೆ ಮಾಡಲಾಗಿದ್ದು, ಕಾರ್ಯಾಚರಣೆಯಲ್ಲಿ ಮಹಿಳಾ ಪೇದೆ ಲಲಿತಾ ಪ್ರಮುಖ ಪಾತ್ರ ವಹಿಸಿದ್ದಾರೆ. 1997ರ ಅಕ್ಟೋಬರ್ 11ರಂದು ಮಂಗಳೂರಿನ ಉರ್ವ ಮಾರಿಗುಡಿ ಕ್ರಾಸ್ ಬಳಿಯ 'ಅನ್ವರ್ ಮಹಲ್' ಎಂಬ ಮನೆಗೆ ನುಗ್ಗಿದ್ದ ದಂಡ ಪಾಳ್ಯ ಗ್ಯಾಂಗ್, ಮನೆಯಲ್ಲಿದ್ದ ಲೂಯಿಸ್ ಡಿಮೆಲ್ಲೊ (80) ಮತ್ತು ರಂಜಿತ್ ವೇಗಸ್ (19) ಎಂಬುವರನ್ನು ಹತ್ಯೆ ಮಾಡಿ ಚಿನ್ನಾಭರಣಗಳನ್ನು ದೋಚಿದ್ದರು. ಹಳೆ ಪ್ರಕರಣವನ್ನು ಭೇದಿಸುವಲ್ಲಿ ಮಹಿಳಾ ಕಾನ್‌ಸ್ಟೆಬಲ್ ಲಲಿತಾ ಲಕ್ಷ್ಮಿ ಪಾತ್ರ ದೊಡ್ಡದಿದೆ. ಸತತ ಶ್ರಮವಹಿಸಿ, ಹಳೆಯ ಕೋರ್ಟ್ ದಾಖಲೆಗಳನ್ನು ಪರಿಶೀಲಿಸಿ, ಆರೋಪಿ ತನ್ನ ಹೆಸರು ಬದಲಿಸಿಕೊಂಡಿರುವುದನ್ನು ಪತ್ತೆಹಚ್ಚಿದ್ದು, ಆರೋಪಿ ಸೆರೆಗೆ ಸಾಧ್ಯವಾಯಿತು.

ಉಗ್ರ ಸಂಘಟನೆಗೆ ಸಂಚು: 10 ವರ್ಷ ಶಿಕ್ಷೆ

ಶಿರಸಿ: ಯುವಕರನ್ನು ತೀವ್ರವಾದದತ್ತ ಸೆಳೆಯುವ ಹಾಗೂ ಪಾಕ್ ಮೂಲದ ಉಗ್ರ ಸಂಘಟನೆ ಲಷ್ಕರ್-ಇ-ತಯ್ಯಾಬ ಸೇರ್ಪಡೆಗೊಳಿಸುವ ಸಂಚು ರೂಪಿಸಿದ್ದ ಆರೋಪದಡಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಿವಾಸಿಯೊಬ್ಬನಿಗೆ ವಿಶೇಷ ಎನ್‌ಐಎ ನ್ಯಾಯಾಲಯ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿ ಸಯ್ಯದ್ ಎಂ.ಇದ್ರಿಸ್ ಎಂದು ಗುರುತಿಸಲಾಗಿದ್ದು, ಭಾರತೀಯ ದಂಡ ಸಂಹಿತೆ ಹಾಗೂ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ನ್ಯಾಯಾಲಯ ತೀರ್ಪು ನೀಡಿದೆ. ಜೈಲು ಶಿಕ್ಷೆ ಜತೆ ಅಪರಾಧಿಗೆ 70 ಸಾವಿರ ರು. ದಂಡ ವಿಧಿಸಿದೆ. ಈ ಪ್ರಕರಣವು ಮೊದಲಿಗೆ 2020ರ ಎಪ್ರಿಲ್‌ನಲ್ಲಿ ಪಶ್ಚಿಮ ಬಂಗಾಳ ಪೊಲೀಸರಿಂದ ದಾಖಲಾಗಿದ್ದು, ನಂತರ ಹೆಚ್ಚಿನ ತನಿಖೆಗಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ಹಸ್ತಾಂತರಿಸಲಾಗಿತ್ತು. ತನಿಖೆಯ ವೇಳೆ ಎನ್‌ಐಎ ಶಿರಸಿಯಲ್ಲಿ ಸಯ್ಯದ್ ಇದ್ರಿಸ್ ಹಾಗೂ ಜಮ್ಮುಕಾಶ್ಮೀರ ನಿವಾಸಿ ಅಲ್ತಾಫ್ ಅಹ್ಮದ್ ರಾಥೆರ್ ಎಂಬ ಆರೋಪಿಗಳನ್ನು ಬಂಧಿಸಿತ್ತು. ಎನ್‌ಐಎ ಆರೋಪದಂತೆ, ಈ ಇಬ್ಬರು ತಾನಿಯಾ ಪರ್ವೀನ್ ಎಂಬ ಮಹಿಳೆಯೊಂದಿಗೆ ಸೇರಿ ಪ.ಬಂಗಾಳದಲ್ಲಿ ಲಷ್ಕರ್-ಇ-ತಯ್ಯಬ ಉಗ್ರ ಸಂಘಟನೆಯ ಘಟಕ ಸ್ಥಾಪಿಸಲು ಸಂಚು ರೂಪಿಸಿದ್ದರು.

ರಾಜ್ಯದ 42,345 ಬಡ ಕುಟುಂಬಕ್ಕೆ ಮನೆಭಾಗ್ಯ

← ಮೊದಲ ಪುಟದಿಂದ

ಒಂದು ಮನೆಗೆ 4 ರಿಂದ 5 ಲಕ್ಷ ರೂಪಾಯಿಯನ್ನು ಕೊಡೋದು ರಾಜ್ಯ ಸರಕಾರ. ಕೇಂದ್ರಸರಕಾರ ಒಂದು ಲಕ್ಷಕ್ಕಿಂತಲೂ ಕಡಿಮೆ ಮೊತ್ತ ಕೊಡುತ್ತಿದೆ. ಆದರೆ, ಹೆಸರು ಮಾತ್ರ ಪ್ರಧಾನ ಮಂತ್ರಿ ಆವಾಸ್ ಯೋಜನೆ. ಹಣ ನಮ್ಮದು, ಹೆಸರು ಮಾತ್ರ ಕೇಂದ್ರದ್ದು ಎಂದು ಟೀಕಿಸಿದರು.

ಕೇಂದ್ರ ಸರಕಾರವು ಮನರೇಗಾ ಹೆಸರು ಬದಲಾವಣೆ ಮಾಡಿರುವುದನ್ನು ವಿರೋಧಿಸಿ ದೇಶದಲ್ಲಿ ನಡೆಯುತ್ತಿರುವ ಹೋರಾಟ ನಿಲ್ಲದು.
-ಮಲ್ಲಿಕಾರ್ಜುನ ಖರ್ಗೆ
ರಾಜ್ಯ ಸಭೆ ಪ್ರತಿಪಕ್ಷದ ನಾಯಕ

ಮತ್ತೆ ಭಾಷಣ ಸಂಘರ್ಷ

← ಮೊದಲ ಪುಟದಿಂದ

ಗಣರಾಜ್ಯೋತ್ಸವದ ಭಾಷಣವನ್ನು ಸರಕಾರ ರವಾನಿಸಿದ್ದು, ಈ ಭಾಷಣ ದಲ್ಲಿದ್ದ ಕೆಲ ಅಂಶಗಳನ್ನು ತಿದ್ದುಪಡಿ ಮಾಡದಿದ್ದರೆ, ನಾನೇ ಸಿದ್ಧಪಡಿಸಿದ ಭಾಷಣವನ್ನು ಓದುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ರೀತಿ ಪಟ್ಟು ಹಿಡಿದ ಬಳಿಕ ಕೆಲವೊಂದಷ್ಟು ಅಂಶಗಳಿಗೆ ತಿದ್ದುಪಡಿ ತರಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದರೆ ತಿದ್ದುಪಡಿಯಾಗಿರುವ ಅಂಶದಲ್ಲಿಯೂ ಕೇಂದ್ರದ ವಿರುದ್ಧದ ಕೆಲ ವಾಕ್ಯಗಳಿರುವುದರಿಂದ ಅದನ್ನು ಓದುವರೋ ಇಲ್ಲವೋ ಎನ್ನುವ ಕುತೂಹಲ ಇದೀಗ ಎಲ್ಲರಲ್ಲಿದೆ.

27ಕ್ಕೆ ಲೋಕಭವನ ಚಲೋ: ಮೂರು ದಿನದ ರಜೆಯ ಬಳಿಕ ಮಂಗಳವಾರದಿಂದ ಜಂಟಿ ಅಧಿವೇಶನ ಆರಂಭವಾದರೂ 27ರಂದು ಅಧಿವೇಶನ ನಡೆಯುವುದು ಬಹುತೇಕ ಅನುಮಾನ ಎನ್ನಲಾಗುತ್ತಿದೆ. ಕೇಂದ್ರ ಸರಕಾರ ಜಾರಿಗೊಳಿಸಿರುವ ವಿಬಿ ರಾಮ್ ಜಿ ಕಾಯಿದೆಯನ್ನು ರದ್ದುಪಡಿಸಿ, ನರೇಗಾ ಯೋಜನೆ ಮರುಸ್ಥಾಪಿಸಬೇಕು ಎಂದು ಕಾಂಗ್ರೆಸ್ ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ.

ಮೂಲಗಳ ಪ್ರಕಾರ ಮನರೇಗಾ ಮರು ಜಾರಿಗೆ ಕೇಂದ್ರ ಒತ್ತಾಯಿಸಲು ಜ.27 ರಂದು ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ. ಬಳಿಕ 'ಮನರೇಗಾ ಬಚಾವ್ ಸಂಗ್ರಾಮ' ಹೆಸರಿನಲ್ಲಿ ಲೋಕಭವನ ಚಲೋ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿದೆ. ಈ ರ‍್ಯಾಲಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಭಾಗವಹಿಸುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ. ಪ್ರತಿಭಟನಾ ರ‍್ಯಾಲಿಯಲ್ಲಿ ವಿಧಾನಮಂಡಲ ಅಧಿವೇಶನದಲ್ಲಿ ಭಾಷಣ ಓದದ ರಾಜ್ಯಪಾಲರ ನಡೆಯನ್ನು ಖಂಡಿಸಲಾಗುತ್ತಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು, ಪದಾಧಿಕಾರಿಗಳು ಸೇರಿ ಸಾವಿರಾರು ಮಂದಿ ಭಾಗವಹಿಸಲಿದ್ದಾರೆ ಎಂದು ತಿಳಿದುಬಂದಿದೆ.

ದಾವೋಸ್‌ನಿಂದ ವಾಪಸಾದ ಡಿಕೆ

ದಾವೋಸ್‌ನಲ್ಲಿ ನಡೆಯುತ್ತಿರುವ ಎಕನಾಮಿಕ್ ಫೋರಂನಲ್ಲಿ ಭಾಗವಹಿಸಲು ತೆರಳಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ಮುಂಜಾನೆ ವಾಪಸಾಗಿದ್ದಾರೆ. ಆರಂಭದಲ್ಲಿ ರಾಜ್ಯದಲ್ಲಿರುವ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಡಿಕೆಶಿ ತಮ್ಮ ಪ್ರವಾಸವನ್ನೇ ರದ್ದುಪಡಿಸಿದ್ದರು. ಆದರೆ ಪ್ರವಾಸ ರದ್ದು ಮಾಡಿದ್ದು ತೀವ್ರ ವಿರೋಧಕ್ಕೆ ಕಾರಣವಾಗಿದ್ದರಿಂದ ಸ್ವಿಟ್ಜರ್ ಲ್ಯಾಂಡ್‌ಗೆ ತೆರಳಿದ್ದರು. ಇದೀಗ ಭಾನುವಾರ ವಾಪಸಾಗಿದ್ದು, ಭಾನುವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿ ದಾವೋಸ್ ಪ್ರವಾಸದಲ್ಲಿನ ಒಡಂಬಡಿಕೆ, ಹೂಡಿಕೆ ಸೇರಿದಂತೆ ವಿವಿಧ ವಿಷಯಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ರೀಲ್ಸ್ ಗ್ಯಾಂಗ್‌ನಿಂದ ಜನಾರ್ದನ ರೆಡ್ಡಿ ಮನೆಗೆ ಬೆಂಕಿ

ಎಂಟು ಜನರ ಬಂಧನ, ಎಲ್ಲ ಆಯಾಮಗಳಲ್ಲೂ ತನಿಖೆ: ಎಸ್‌ಪಿ ಸುಮನ್

ಬಳ್ಳಾರಿ: ರೀಲ್ಸ್, ಫೋಟೊ ಶೂಟ್ ಮಾಡಲು ಜನಾರ್ದನ ರೆಡ್ಡಿ ಪತ್ನಿ ಅರುಣಾ ಅವರ ಒಡೆತನದ ಜಿ ಸ್ಕ್ವೇರ್‌ನ ಮಾದರಿ ಮನೆಗೆ ಬಂದಿದ್ದ ಹುಡುಗರು ಹೊತ್ತಿಸಿದ ಬೆಂಕಿಯಿಂದ ಅಗ್ನಿ ಅವಘಡ ಸಂಭವಿಸಿದೆ. 8 ಜನರನ್ನು ಬಂಧಿಸಲಾಗಿದ್ದು, ಕೂಲಂಕಷ ತನಿಖೆ ನಡೆಸಲಾಗುವುದು ಎಂದು ಬಳ್ಳಾರಿಯ ಎಸ್ಪಿ ಸುಮನ್ ಪೆನ್ನೇಕರ್ ತಿಳಿಸಿದ್ದಾರೆ.

ಬೆಂಕಿಗೆ ಆಹುತಿಯಾದ ಮನೆಯನ್ನು ಶನಿವಾರ ಬೆಳಗ್ಗೆ ಪರಿಶೀಲನೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನೆ ಹಲವು ವರ್ಷಗಳಿಂದ ಪಾಳು ಬಿದ್ದಿದೆ. ಮನೆಯಲ್ಲಿ ಕಸ ಬಿದ್ದಿದೆ. ಗಾಜುಗಳು ಪುಡಿಯಾಗಿವೆ. ಇಲ್ಲಿ ಯಾರೂ ವಾಸವಿಲ್ಲ. ಸಿಸಿಟಿವಿಯೂ ಇಲ್ಲ. ಭದ್ರತೆಗೆಂದು ಭದ್ರತಾ ಸಿಬ್ಬಂದಿಯನ್ನೂ ಇಲ್ಲಿ ನಿಯೋಜಿಸಿಲ್ಲ ಎಂಬುದು ಕಂಡು ಬಂದಿದೆ. ಅಗ್ನಿ ಅವಘಡ ಪ್ರಕರಣದ ತನಿಖೆಯಲ್ಲಿ ನಾವು ಈಗಾಗಲೇ ಒಂದು ಹಂತಕ್ಕೆ ತಲುಪಿದ್ದೇವೆ. ನಮಗೆ ಅನುಮಾನ ಇದ್ದ 8 ಮಂದಿಯನ್ನು ಬಂದಿಸಿದ್ದೇವೆ. ಇದರಲ್ಲಿ 6 ಮಂದಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಿದ್ದಾರೆ. ಇದರಲ್ಲಿ ಹಲವರು ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದು, ಕೆಲವರು ಶಾಲೆ ಬಿಟ್ಟವರಿದ್ದಾರೆ. ಫ್ಯಾನ್ಸಿ ಸ್ಟೋರ್‌ಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ. ಇಬ್ಬರು ಮುಂಬೈನಿಂದ ಬಂದವರೂ ಇದ್ದಾರೆ. ಇವರೆಲ್ಲರೂ ಕೂಲಿ ಕಾರ್ಮಿಕರ, ಚಾಲಕರ ಮಕ್ಕಳು. ಯಾವುದೇ ಉದ್ದೇಶ ಇಟ್ಟುಕೊಂಡು ಈ ಕೃತ್ಯ ಮಾಡಿರುವ ಬಗ್ಗೆ ನಮಗೆ ಖಚಿತವಾಗಿಲ್ಲ. ಆದರೂ ನಾವು ಯಾವುದೇ ಸಾಧ್ಯತೆಗಳನ್ನು ಅಲ್ಲಗೆಳೆಯುವುದಿಲ್ಲ. ಸಮಗ್ರ ತನಿಖೆ ಮಾಡುತ್ತೇವೆ ಎಂದರು.

ರೀಲ್ಸ್, ಫೋಟೊ ಶೂಟ್ ಮಾಡಲು ಹುಡುಗರ ಗುಂಪು ಈ ಮನೆಗೆ ಆಗಾಗ ಬರುತ್ತಿತ್ತು. ಬೇರೆ ಬೇರೆಯವರೂ ಇಲ್ಲಿಗೆ ಬಂದು ಹೋಗುತ್ತಿದ್ದರು. ಬಂಧಿತರ ಮೊಬೈಲ್ ಪರಿಶೀಲನೆಯಿಂದ ನಮಗೆ ಇದೆಲ್ಲವೂ ಗೊತ್ತಾಗಿದೆ. ಇದಕ್ಕೆ ಪೂರಕವಾಗಿ ಮನೆಯಲ್ಲಿ ಸಿಗರೇಟ್ ತುಣುಕುಗಳು, ಬೆಂಕಿಪೊಟ್ಟಣಗಳು ಅಲ್ಲಲ್ಲಿ ಬಿದ್ದಿರುವುದು ಕಂಡುಬಂದಿದೆ. ಗುಂಪಿನಲ್ಲಿದ್ದ ಬಾಲಕನೊಬ್ಬ ಮನೆಯಲ್ಲಿದ್ದ ವಸ್ತುವೊಂದಕ್ಕೆ ಬೆಂಕಿ ಹೊತ್ತಿಸಿದ್ದಾನೆ. ಆದರೆ, ಬೆಂಕಿ ನಿಯಂತ್ರಣಕ್ಕೆ ಬಾರದೆ ಇಡೀ ಮನೆಗೆ ವ್ಯಾಪಿಸಿದೆ ಎಂದರು.

ಬೆಂಕಿ ತಗುಲಿದ ಬಳ್ಳಾರಿ ಹೊರವಲಯದಲ್ಲಿರುವ ಜನಾರ್ದನ ರೆಡ್ಡಿ ಅವರ ಜಿಸ್ಕ್ವೇರ್ ಮನೆಯನ್ನು ಎಸ್‌ಪಿ ಸುಮನ್ ಪನ್ನೇಕರ್ ಪರಿಶೀಲನೆ ನಡೆಸಿದರು.

ಜನಾರ್ದನ ರೆಡ್ಡಿ ಅವರ ಲೇಔಟ್‌ನಲ್ಲಿ ಯಾವುದೇ ಭದ್ರತೆ, ಸಿಸಿಟಿವಿಯೂ ಇರಲಿಲ್ಲ. ಇಂಥ ವ್ಯವಸ್ಥೆ ಮಾಡಿಕೊಳ್ಳುವ ಜವಾಬ್ದಾರಿ. ನಗರದ ಹೊರವಲಯದ ಲೇಔಟ್‌ಗಳಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿದೆ. ಅದರ ನಿಯಂತ್ರಣಕ್ಕೆ ರಾತ್ರಿ ಗಸ್ತು, ಪೊಲೀಸ್ ಭದ್ರತೆ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುತ್ತೇವೆ.
-ಸುಮನ್ ಪೆನ್ನೇಕರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕೆಂಡದ ರಾಯಚೂರಿಗೆ ಮಾರಕ ರೋಗದ ಸ್ಥಾವರ

ಶಕ್ತಿನಗರದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಚಿಂತನೆ | ಕೇಂದ್ರದ ತಂಡದಿಂದ ಸ್ಥಳ ಪರಿಶೀಲನೆ | ಸಾರ್ವಜನಿಕರಿಂದ ಆಕ್ರೋಶ

ಬಸವರಾಜ ನಾಗಡದಿನ್ನಿ, ರಾಯಚೂರು

ರಾಯಚೂರು ಜಿಲ್ಲೆ ಎಂದರೆ ಆಳುವ ಸರಕಾರಗಳಿಗೆ ಮೊದಲಿನಿಂದಲೂ ಕೊಂಚ ತತ್ಸಾರ. ಸದ್ಯ ಈ ಪರಿ ಮುಂದುವರಿದಿದ್ದು, ಜನರಿಗೆ ಮಾರಕ ಆಗುವ ಯೋಜನೆಗಳನ್ನೆ ಜಿಲ್ಲೆಯಲ್ಲಿ ಹಾಕಿಕೊಳ್ಳಲಾಗುತ್ತಿದೆ. ಈಗಾಗಲೇ ಆರ್‌ಟಿಪಿಎಸ್, ವೈಟಿಪಿಎಸ್ ಹಾರೂಬೂದಿ, ಘಟಕಗಳಿಂದ ಬೀಸುವ ಬಿಸಿ ಗಾಳಿಗೆ ಸುತ್ತಮುತ್ತಲ್ಲಿನ ಗ್ರಾಮಸ್ಥರು ಬೇಸತ್ತಿದ್ದು, ಅದಕ್ಕಿಂತಲೂ ಮಾರಕ ಆಗುವ ಅಣು ವಿಕಿರಣ ಸ್ಥಾವರವನ್ನು ಜನತೆ ಕಾಣುವ ದಿನಗಳು ಸನ್ನಿಹಿತದಲ್ಲಿವೆ.

ಹೌದು. ರಾಯಚೂರಿನಲ್ಲಿ ಅಣು ವಿಕಿರಣ ವಿದ್ಯುತ್ ಪ್ಲಾಂಟ್ ಸ್ಥಾಪನೆಗೆ ಸರಕಾರ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಶಕ್ತಿನಗರದ ಆರ್‌ಟಿಪಿಎಸ್‌ಗೆ ತಜ್ಞರ ತಂಡ ಭೇಟಿ ನೀಡಿ ಸುಮಾರು 1300 ಎಕರೆ ಜಮೀನಿನಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ ಪರಿಶೀಲನೆ ನಡೆಸಿದೆ. ಪ್ಲಾಂಟ್ ಸ್ಥಾಪನೆ ಕಾರ್ಯಸಾಧ್ಯತೆ ಕುರಿತು ಚರ್ಚಿಸಿರುವುದು ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದೆ. ಕೇಂದ್ರ ವಿದ್ಯುತ್ ಪ್ರಾಧಿಕಾರದ ಅಧಿಕಾರಿಗಳು ಕೇಂದ್ರ ಸರಕಾರಕ್ಕೆ ನೀಡುವ ವರದಿ ಮೇಲೆ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಭವಿಷ್ಯ ಅಡಗಿದೆ.

ಶಕ್ತಿನಗರದಲ್ಲಿ ಎಂಟು ಉಷ್ಣ ವಿದ್ಯುತ್ ಸ್ಥಾವರಗಳಿಂದ ನಿತ್ಯ 1720 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುತಿದ್ದು, ಯರಮರಸ್ ಸೂಪರ್ ಕ್ರಿಟಿಕಲ್ ಥರ್ಮಲ್ ಉತ್ಪಾದನಾ ಕೇಂದ್ರದಲ್ಲಿ ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸಲಾಗುತಿದ್ದು, ಈ ಎರಡು ಉಷ್ಣ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಯಚೂರು ನಗರ ಸದಾ ಕಾದ ಕೆಂಡದಂತೆ ತಾಪಮಾನ ಇರುತ್ತದೆ. ಸಾಲದೆಂಬಂತೆ ಇದೀಗ ಮಾನವ, ಜೀವ ಸಂಕುಲಗಳಿಗೆ ಮಾರಕವಾಗಿರುವ ಅಣು ವಿದ್ಯುತ್ ಉತ್ಪಾದನೆ ಮಾಡುವ ಚಿಂತನೆಯಲ್ಲಿರುವ ಸರಕಾರ ರಾಯಚೂರಿನ ನಾಗರಿಕರಿಗೆ ಗಾಯದ ಮೇಲೆ ಬರೆ ಎಳೆಯಲು ಮುಂದಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ರಾಯಚೂರು ಜಿಲ್ಲೆಯಲ್ಲೂ ಈ ಹಿಂದೆ ಲಿಂಗಸೂಗೂರು ತಾಲೂಕಿನ ಹಲಕಾವಟಗಿ ಮತ್ತು ಮಾನ್ವಿ ತಾಲೂಕಿನ ಕರಡಿಗುಡ್ಡ ಗ್ರಾಮ ವ್ಯಾಪ್ತಿಯಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಸ್ಥಳ ಪರಿಶೀಲಿಸಲಾಗಿತ್ತು. ಸ್ಥಾವರಕ್ಕೆ ಆರ್‌ಟಿಪಿಎಸ್‌ನಿಂದ ಕೇಳಿದ ಜಮೀನು ಹಂಚಿಕೆಗೆ ಜಿಲ್ಲಾಡಳಿತ ಮತ್ತು ಕಂದಾಯ ಇಲಾಖೆ ಯಾವುದೇ ಪ್ರತಿಕ್ರಿಯೆ ನೀಡದ ಕಾರಣ, ಉದ್ದೇಶದ ಯೋಜನೆ ಸ್ಥಗಿತಗೊಂಡಿತ್ತು. ಅಣು ವಿದ್ಯುತ್ ಸ್ಥಾವರ ಸ್ಥಾಪನೆಯ ಆತಂಕ ನಿವಾರಣೆ ನಿಟ್ಟುಸಿರು ಬಿಡುವ ಹಂತದಲ್ಲಿ ಈಗ ಕೃಷ್ಣ ನದಿ ದಂಡೆಯಲ್ಲಿರುವ ಆರ್‌ಟಿಪಿಎಸ್‌ನಲ್ಲಿ ಅಣುಸ್ಥಾವರ ಸ್ಥಾಪನೆಗೆ ಕಾರ್ಯ ಸಾಧ್ಯತೆಗಳ ಪರಿಶೀಲನೆಗೆ ತಂಡದ ಆಗಮನ ಮತ್ತೆ ಆತಂಕಗೊಳ್ಳುವಂತೆ ಮಾಡಿದೆ.

ಸ್ಥಳ ಪರಿಶೀಲನೆಗೆ ಕೇಂದ್ರ ವಿದ್ಯುತ್ ಪ್ರಾಧಿಕಾರದ ತಂಡ ಆಗಮಿಸಿ, ಪರಿಶೀಲನೆ ಮಾಡಿದೆ. ಸ್ಥಳ ಲಭ್ಯತೆ, ವಿಮಾನ ನಿಲ್ದಾಣ ಇರುವ ಬಗ್ಗೆ ಅವರು ಪರಿಶೀಲಿಸಿದ್ದಾರೆ. ಕಾರ್ಯರೂಪಕ್ಕೆ ಬರುತ್ತೋ ಇಲ್ಲವೋ ಗೊತ್ತಿಲ್ಲ. ಈ ಜಾಗ ಸೂಕ್ತವೆಂದಾರೆ ಇನ್ನೂ ಅನೇಕ ತಜ್ಞರ ತಂಡಗಳು ಆಗಮಿಸಿ ಪಿಜಿಬಲಿಟಿ ನೋಡುತ್ತಾರೆ. ಅಣು ವಿದ್ಯುತ್ ಉತ್ಪಾದನಗೆ ಅನುಮತಿ ಸಿಕ್ಕರೂ, ಕಾರ್ಯಾರಂಭಕ್ಕೆ ಇನ್ನೂ 15ರಿಂದ 20 ವರ್ಷ ಬೇಕಾಗಬಹುದು.
- ಎಚ್ ಆರ್ ರಮೇಶ
ಕಾರ್ಯನಿರ್ವಾಹಕ ನಿರ್ದೇಶಕ ಆರ್‌ಟಿಪಿಎಸ್

ಆರ್‌ಟಿಪಿಎಸ್ ಅಧಿಕಾರಿಗಳಲ್ಲೂ ಆತಂಕ

ಕೇಂದ್ರ ವಿದ್ಯುತ್ ಪ್ರಾಧಿಕಾರದ ಮೂವರು ಸದಸ್ಯರ ತಂಡ ಸ್ಥಳ ಮತ್ತು ಕಾರ್ಯಸಾಧ್ಯತೆ ಪರಿಶೀಲನೆಗೆ ಆಗಮಿಸಿರುವುದು ಗಮನಾರ್ಹವಾಗಿದೆ. ಆರ್‌ಟಿಪಿಎಸ್ ವ್ಯಾಪ್ತಿಯಲ್ಲಿ ಈ ಹಿಂದೆ ಸೌರಶಕ್ತಿ ಉತ್ಪಾದನಾ ಕೇಂದ್ರ ಆರಂಭಕ್ಕೆ ಪರಿಶೀಲಿಸಲಾಗಿತ್ತು. ಆದರೆ ಈಗ ಏಕಾಏಕಿ ಅಣುಸ್ಥಾವರ ಸ್ಥಾಪನೆ ಕಾರ್ಯಸಾಧ್ಯತೆ ಪರಿಶೀಲನೆ ಕೇಂದ್ರದ ಉದ್ದೇಶದ ಬಗ್ಗೆ ಅನುಮಾನ ಹೆಚ್ಚುವಂತೆ ಮಾಡಿದೆ. ಈ ತಂಡ ಆಗಮನದ ಹಿನ್ನೆಲೆಯಲ್ಲಿ ನಾಗರಿಕರಲ್ಲದೆ ಸ್ವತಃ ಆರ್‌ಟಿಪಿಎಸ್ ಅಧಿಕಾರಿಗಳೇ, ಅಣುಸ್ಥಾವರ ವಿದ್ಯುತ್ ಸ್ಥಾವರ ಸ್ಥಾಪನೆಗೆ ಬಗ್ಗೆ ಆತಂಕ ವ್ಯಕ್ತ ಪಡಿಸಿದ್ದಾರೆ.

ಹೋರಾಟದ ಎಚ್ಚರಿಕೆ

ಅಣು ವಿಕಿರಣಗಳಿಂದ ಮನುಷ್ಯರಷ್ಟೆ ಅಲ್ಲದೆ ಜಲ ಚರಗಳ ಜೀವಕ್ಕೆ ಅಪಾಯವಾಗಲಿದೆ. ರಾಜ್ಯದಲ್ಲಿ ವಿದ್ಯುತ್‌ನ ಕೊರತೆ ಇಲ್ಲ. ಪವನ, ಜಲ ಮತ್ತು ಸೌರ ಶಕ್ತಿಯಿಂದ ವಿದ್ಯುತ್ ಸಿಗುತ್ತಿದೆ. ಶತ್ರು ರಾಷ್ಟ್ರಗಳು ಇಂತಹ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತವೆ. ಅಂತಹ ಸಂದರ್ಭ ಬಂದರೆ ನೂರು ಕಿ.ಮೀ.ವ್ಯಾಪ್ತಿ ಜನರ ಜೀವಕ್ಕೆ ಕುತ್ತೊದಗಿ ಬರಲಿದೆ. ಕ್ಯಾನ್ಸರ್ ಸೇರಿದಂತೆ ದೀರ್ಘಕಾಲಿನ ರೋಗ ಜನ ಬಲಿಯಾಗಬೇಕಾಗುತ್ತದೆ. ಅಣು ತ್ಯಾಜ್ಯ ವಿಲೇವಾರಿಯೂ ಬಹು ದೊಡ್ಡ ಸಮಸ್ಯೆಯಾಗಿ ಕಾಡ ಲಿದ್ದು, ಮಾನವ, ಜೀವ ಸಂಕುಲಕ್ಕೆ ಮಾರಕವಾಗಿರುವ ಯೋಜ ನೆಯ ವಿರುದ್ಧ ದೊಡ್ಡ ಆಂದೋಲನ ಆಗಬೇಕಾಗುತ್ತದೆ ಎಂದು ರಾಸಾಯನಶಾಸ್ತ್ರ ಪ್ರಾಧ್ಯಾಪಕ ಡಾ.ರಜಾಕ್ ಉಸ್ತಾದ್ ಎಚ್ಚರಿಕೆ ನೀಡಿದ್ದಾರೆ.

ಕ್ಯಾನ್ಸರ್ ಸೇರಿ ಹಲವು ಮಾರಕ ಕಾಯಿಲೆ

ಒಂದೊಮ್ಮೆ ಅಣು ವಿದ್ಯುತ್ ಉತ್ಪಾದನೆಗೆ ಅನುಮತಿ ಸಿಕ್ಕರೆ ರಾಯಚೂರು ಜಿಲ್ಲೆಯ ಜನರ ಜೀವಕ್ಕೆ ಮಾರಕವಾಗಿ ಪರಿಣಮಿಸಲಿದೆ. ನಗರದಿಂದ 18 ಕಿ.ಮೀ ದೂರದಲ್ಲಿರು ಆರ್‌ಟಿಪಿಎಸ್ ಮತ್ತು ಕೇವಲ 8 ಕಿ.ಮೀ ಅಂತರದಲ್ಲಿರು ವೈಟಿಪಿಎಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಂದ ನಗರದ ಜನತೆ ಸೇರಿದಂತೆ ಸುತ್ತಲಿನ ಗ್ರಾಮಗಳ ಜನರು ಹಾರೂ ಬೂದಿಯಿಂದ ಉಸಿರಾಟದ ತೊಂದರೆ, ಟಿಬಿಯಂತಹ ರೋಗಗಳಿಗೆ ತುತ್ತಾಗಿದ್ದು, ಬೆಳೆಗಳ ಮೇಲೂ ದುಷ್ಪರಿಣಾಮ ಬೀರಿದೆ. ಇನ್ನೂ ಬಿಸಿಲಿನ ತಾಪ ಹೇಳುವಂತಿಲ್ಲ. ಅಣು ವಿದ್ಯುತ್ ಸ್ಥಾವರದಿಂದ ಕ್ಯಾನ್ಸರ್ ಸೇರಿ ಹಲವು ಮಾರಣಾಂತಿಕ ರೋಗಗಳು ಜನರನ್ನು ಬಾಧಿಸಲಿವೆ. ಜಲಚರಗಳಿಗೂ ಕೂಡ ಹಾನಿಯಾಗಲಿದೆ.

ದಿಲ್ಲಿ ಗಣತಂತ್ರ ಪರೇಡ್‌ಗೆ ಕ್ಷಣಗಣನೆ

← ಮೊದಲ ಪುಟದಿಂದ

ಇದು ಸಾಂಪ್ರದಾಯಿಕ ಹಾಗೂ ಅಣ್ವಸ್ತ್ರಗಳೆರಡನ್ನೂ ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದ್ದು, ಬೃಹತ್ ವಿಮಾನವಾಹಕ ನೌಕೆಗಳನ್ನು ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿದೆ. ಇದು ಅತ್ಯಂತ ವೇಗವಾಗಿ ಮತ್ತು ಕೆಳಮಟ್ಟದ ಪಥದಲ್ಲಿ ಚಲಿಸುವುದರಿಂದ ಹಾಗೂ ದಿಢೀರ್ ತಿರುವುಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರುವುದರಿಂದ, ಶತ್ರುಗಳ ಯಾವುದೇ ಅತ್ಯಾಧುನಿಕ ರಾಡಾರ್ ವ್ಯವಸ್ಥೆಗಳಿಗೂ ಇದನ್ನು ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ. ಇದು ಹಿಂದೂ ಮಹಾಸಾಗರದಲ್ಲಿ ಭಾರತದ ಪ್ರಾಬಲ್ಯವನ್ನು ಮತ್ತಷ್ಟು ಹೆಚ್ಚಿಸಲಿದೆ.

ಐರೋಪ್ಯ ಒಕ್ಕೂಟಕ್ಕೆ ಮಣೆ: ಈ ಬಾರಿಯ ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ನೇತೃತ್ವದಲ್ಲಿ ಒಕ್ಕೂಟದ ನಾಯಕರು ಭಾಗವಹಿಸಲಿದ್ದಾರೆ. ಅವರ ಎದುರು ಈ ಸ್ವದೇಶಿ ನಿರ್ಮಿತ ಅಸ್ತ್ರ ಪ್ರದರ್ಶನಗೊಳ್ಳುತ್ತಿರುವುದು ಭಾರತದ ರಕ್ಷಣಾ ವರ್ಚಸ್ಸನ್ನು ಹೆಚ್ಚಿಸಲಿದೆ. ಪರೇಡ್ ಬೆನ್ನಿಗೇ ಐರೋಪ್ಯ ಒಕ್ಕೂಟದೊಂದಿಗೆ ಭಾರತ ಬಹುಕೋಟಿ ಮೊತ್ತದ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿದೆ. ಇದು ಇದುವರೆಗಿನ ಎಲ್ಲ ಒಪ್ಪಂದಗಳಿಗಿಂತ ಅತಿ ದೊಡ್ಡದು ಎಂದು ವ್ಯಾಖ್ಯಾನಿಸಲಾಗಿದೆ.

ರಾಜಧಾನಿಯಲ್ಲಿ ಸರ್ಪಗಾವಲು: ವಂದೇ ಭಾರತ್ ಗೀತೆಗೆ 150 ವರ್ಷ ಹಾಗೂ ಆಪರೇಷನ್ ಸಿಂಧೂರ ವಿಷಯಗಳನ್ನಿಟ್ಟುಕೊಂಡು ಈ ಬಾರಿ ಗಣರಾಜ್ಯೋತ್ಸವ ಆಚರಿಸಲಾಗುತ್ತಿದೆ. ಉಗ್ರರ ಬೆದರಿಕೆ ಹಿನ್ನೆಲೆಯಲ್ಲಿ ಈ ಬಾರಿ ಗಣರಾಜ್ಯೋತ್ಸವಕ್ಕೆ ಬಿಗಿ ಭದ್ರತೆ ಕಲ್ಪಿಸಲಾಗಿದೆ.

ವಿರಾಮ
ಪ್ರತಿ ಭಾನುವಾರ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಜಿ.ಆ/05/2025-26 ದಿನಾಂಕ:22-01-2026
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ ನೂತನ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ, ಹೊಸಪೇಟೆಗೆ 2024-25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ಅವಶ್ಯವಿರುವ ವಿವಿದ ವೈದ್ಯಕೀಯ ಪಿಠೋಪಕರಣಗಳನ್ನು ಸರಬರಾಜು ಮಾಡಲು ಇ-ಸಂಗ್ರಹಣ ಕೋಶದ ವೆಬ್ ಸೈಟ್(https://kppp.karnataka.gov.in) ಮೂಲಕ ಅಲ್ಪಾವಧಿ ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್ ದಾರರು ದಿನಾಂಕ: 23-01-2026 ರಿಂದ ದಿನಾಂಕ:07-02-2026 ರ ಸಮಯ ಸಾಯಂಕಾಲ 05:00ಗಂಟೆಯವರೆಗೆ ಟೆಂಡರನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.224.20ಲಕ್ಷ) (INDENT NUMBER:DHFWS/2025-26/IND2106)
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394-227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.
ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/492

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ರಿನೇಸನಸ್ ಹೋಟೆಲ್ ಎದುರು, ಬೆಂಗಳೂರು-560009. ದೂ.: 080-43344334
ಫ್ಯಾಕ್ಸ್: (080)43344376, ವೆಬ್‌ಸೈಟ್: www.kstdc.co
ಸಂಖ್ಯೆ: ಕರಾಪ್ರಅನಿ/ಹೋ/128/2025-26 ದಿನಾಂಕ: 23.01.2026
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯ ಅಧೀನದಲ್ಲಿರುವ ಹೋಟೆಲ್ ಮಯೂರ ಹೊಯ್ಸಳ ಯಾತ್ರಿನಿವಾಸ ಕಟ್ಟಡದಲ್ಲಿ ಖಾಲಿ ಇರುವ 210sq.ft ಮಳಿಗೆಯನ್ನು ಬಾಡಿಗೆ ಆಧಾರದಲ್ಲಿ ನೀಡುವ ಕುರಿತು ಆಸಕ್ತ/ಅರ್ಹ ಸಂಸ್ಥೆಯವರು ಭಾಗವಹಿಸುವ ಕುರಿತು ಟೆಂಡರ್ ಅನ್ನು ಆಹ್ವಾನಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.
ಟೆಂಡರ್ ಸಂಖ್ಯೆ: KSTDC/2025-26/AUCTION3 ವಿವರಣೆ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಹೋಟೆಲ್ ಮಯೂರ ಹೊಯ್ಸಳ ಯಾತ್ರಿನಿವಾಸ ಕಟ್ಟಡದಲ್ಲಿ ಖಾಲಿ ಇರುವ 210sqft ಮಳಿಗೆಯನ್ನು ಬಾಡಿಗೆ ಆಧಾರದಲ್ಲಿ ನೀಡುವ ಕುರಿತು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 27.02.2026 ರಂದು 15.00 ಗಂಟೆವರೆಗೆ.
ಆಸಕ್ತ/ಅರ್ಹ ಬಿಡ್‌ದಾರರು ಟೆಂಡರ್ ದಾಖಲೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣ: https://kppp.karnataka.gov.inಗೆ ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:+91 8023010900, +91 8023010901, ಇ-ಮೇಲ್:hphelpdesk.blr@intarvo.com ನ್ನು ಸಂಪರ್ಕಿಸುವುದು.
ಸಹಿ/- ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕ.ರಾ.ಪ್ರ.ಅ.ನಿ

ಸಮಾಚಾರ ಸಣ್ಣದಲ್ಲ

ಚಾರ್ಮಾಡಿಯಲ್ಲಿ 10 ಕಿ.ಮೀ ಸಂಚಾರ ದಟ್ಟಣೆ

ಚಿಕ್ಕಮಗಳೂರು: ಏಕ ಕಾಲದಲ್ಲಿ ಮೂರು ರಸ್ತೆ ಅಪಘಾತಗಳು ಸಂಭವಿಸಿದ್ದು, ಇದರಿಂದ ಚಾರ್ಮಾಡಿ ಘಾಟಿ ಪ್ರದೇಶದಲ್ಲಿ ಶನಿವಾರ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಚಾರ್ಮಾಡಿ ಘಾಟಿಯಲ್ಲಿ ಮೂರು ಅಪಘಾತಗಳು ನಡೆದಿವೆ. ಒಂದೆಡೆ ಚಾಲಕನ ನಿಯಂತ್ರಣ ತಪ್ಪಿ ಖಾಲಿ ಸಿಲಿಂಡರ್ ತುಂಬಿದ್ದ ಲಾರಿ ಪಲ್ಟಿಯಾಗಿದೆ. ಚಾರ್ಮಾಡಿ ಘಾಟಿಯ ಅಣ್ಣಪ್ಪ ಸ್ವಾಮಿ ದೇಗುಲದ ಬಳಿ, ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿಯಾಗಿದೆ. ರಸ್ತೆ ಪಕ್ಕದ ತಡೆಗೋಡೆಯಿಂದಾಗಿ ಲಾರಿ ಪ್ರಪಾತಕ್ಕೆ ಬೀಳುವುದು ಸ್ವಲ್ಪದರಲ್ಲೇ ತಪ್ಪಿದೆ. ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದ್ದು, ಕೂಡಲೇ ಸ್ಥಳೀಯರು ಆಸ್ಪತ್ರೆಗೆ ದಾಖಲು ಮಾಡಿ ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ಖಾಲಿ ಸಿಲಿಂಡರ್ ಲಾರಿ ಪಲ್ಟಿಗೂ ಮುನ್ನ ಸ್ವಲ್ಪ ಹೊತ್ತಿನ ಹಿಂದೆ ಮತ್ತೊಂದು ಲಾರಿ ಪಲ್ಟಿಯಾಗಿ ರಾಷ್ಟ್ರೀಯ ಹೆದ್ದಾರಿ 173 ರಲ್ಲಿ ಭಾರಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಇದರಿಂದ ಚಿಕ್ಕಮಗಳೂರು-ದಕ್ಷಿಣ ಕನ್ನಡ ಜಿಲ್ಲೆ ತೆರಳುವ ಸವಾರರು ಪರದಾಡಿದರು.

ರಾಜೀವ್‌ಗೌಡ ಜಾಮೀನು ಅರ್ಜಿ ವಜಾ

ಶಿಡ್ಲಘಟ್ಟ: ಪೌರಾಯುಕ್ತೆಗೆ ಧಮ್ಕಿ ಹಾಕಿದ ಪ್ರಕರಣದಲ್ಲಿ ರಾಜೀವ್‌ಗೌಡಗೆ ಡಬಲ್ ಶಾಕ್ ಎದುರಾಗಿದ್ದು, ಹೈಕೋರ್ಟ್ ಬಳಿಕ ಚಿಂತಾಮಣಿ ಕೋರ್ಟ್‌ನಲ್ಲೂ ಜಾಮೀನು ಅರ್ಜಿ ವಜಾ ಆಗಿದೆ. 22ರಂದು ಹೈಕೋರ್ಟ್ ರಾಜೀವ್ ಗೌಡ ಜಾಮೀನಿಗೆ ಅರ್ಹರಲ್ಲ ಎಂದು ಖಾರವಾಗಿಯೇ ಪ್ರಶ್ನಿಸಿದ್ದ ನ್ಯಾಯಾಧೀಶರು ಜಾಮೀನು ವಜಾಗೊಳಿಸಿ ಆದೇಶ ನೀಡಿದ್ದರು. ಆ ಬಳಿಕವೂ ಆರೋಪಿಯು ಅದೇ ಪ್ರಕರಣಕ್ಕೆ ಸಂಬಂಧಿಸಿ ಚಿಂತಾಮಣಿ ನ್ಯಾಯಾಲಯದಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ವೇಳೆ ನ್ಯಾಯಾಲಯವು ಆರೋಪಗಳ ಗಂಭೀರತೆ, ಮಹಿಳಾ ಅಧಿಕಾರಿಯ ಗೌರವ ಮತ್ತು ಮಾನಹಾನಿಗೆ ಧಕ್ಕೆ ತರುವ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿತು. ಈ ಹಂತದಲ್ಲಿ ನ್ಯಾಯಾಲಯದ ಹಸ್ತಕ್ಷೇಪ ಅನಾವಶ್ಯಕ ಎಂದು ತಿಳಿಸಿ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ. ಮಹಿಳಾ ಸುರಕ್ಷತೆ ಮತ್ತು ಗೌರವದ ವಿಚಾರಕ್ಕೆ ಸಂಬಂಧಿಸಿದ ಈ ಪ್ರಕರಣ ರಾಜಕೀಯ ಹಾಗೂ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಮುಂದಿನ ಬೆಳವಣಿಗೆಗಳತ್ತ ಎಲ್ಲರ ಗಮನ ಸೆಳೆಯಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಸಾದ್ಲಾಪೂರ, ಬೀದರ್
- **ಸಮಸ್ಯೆಯೇನು?** ಸಾದ್ಲಾಪೂರದ ದಲಿತರ ಓಣಿಯಲ್ಲಿ ಮೂಲಸೌಕರ್ಯ ಕಲ್ಪಿಸುವ ಕುರಿತು.
- **ಪರಿಹಾರ:** ಬೀದರ್ ಜಿಲ್ಲೆ ಬಸವಕಲ್ಯಾಣ ತಾಲೂಕಿನ ಸಾದಾಪೂರ ಗ್ರಾಮದ ದಲಿತರ ಕೇರಿಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ದುರಸ್ತಿ ಸೇರಿ ಹಲವರು ಕಾಮಗಾರಿ ಕೈಗೊಳ್ಳುವಂತೆ ಸ್ಥಳೀಯರೊಬ್ಬರು ಪತ್ರ ಬರೆದು ಆಗ್ರಹಿಸಿದ್ದರು. ಯರಬಾಗ ಪಿಡಿಒ ಸ್ಥಳ ಪರಿಶೀಲನೆ ನಡೆಸಿ, ಕುಡಿಯುವ ನೀರಿನ ಪೈಪ್‌ಲೈನ್ ದುರಸ್ತಿ ಮಾಡಿಸಿದ್ದಾರೆ.

ದಿನ ವಿಶೇಷ

25 ಜನವರಿ 2026 ಭಾನುವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-18
» ತಿಥಿ	: ಸಪ್ತಮಿ
» ನಕ್ಷತ್ರ	: ರೇವತಿ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಶುಕ್ಲಪಕ್ಷ

ಬಡವರನ್ನು ಮುಖ್ಯವಾಹಿನಿಗೆ ತರಲು ಗ್ಯಾರಂಟಿ ಆಸರೆ

ಬಡವರಿಗೆ 42,345 ಮನೆಗಳ ಹಸ್ತಾಂತರ | ಹುಬ್ಬಳ್ಳಿ ಕಾರ್ಯಕ್ರಮದಲ್ಲಿ ಹಕ್ಕು ಪತ್ರ ವಿತರಿಸಿದ ಸಿಎಂ ಸಿದ್ದರಾಮಯ್ಯ

ಹುಬ್ಬಳ್ಳಿ: ಕೊಳೆಗೇರಿ ಜನರೂ ಮುಖ್ಯವಾಹಿನಿಗೆ ಬರಬೇಕು. ಇದಕ್ಕಾಗಿ ಇಷ್ಟು ಬೃಹತ್ ಪ್ರಮಾಣದಲ್ಲಿ ಮನೆ ವಿತರಣೆ ಮಾಡುತ್ತಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಇರುವುದೇ ಬಡವರನ್ನು ಮುಖ್ಯವಾಹಿನಿಗೆ ತರಲು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಸತಿ ಇಲಾಖೆ, ರಾಜ್ಯ ಗೃಹ ಮಂಡಳಿ, ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಮಂಟೂರ ರಸ್ತೆಯಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಿರ್ಮಿಸಿರುವ 42,345 ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಿ ಮಾತನಾಡಿದ ಅವರು, ಮೊದಲ ಬಾರಿ ಸಿಎಂ ಆಗಿದ್ದಾಗ ನಮ್ಮ ಕಾಂಗ್ರೆಸ್ ಸರಕಾರ 1,45,8000 ಮನೆಗಳನ್ನು ಕಟ್ಟಿ ಇತಿಹಾಸ ನಿರ್ಮಿಸಿ ವಸತಿ ಕ್ರಾಂತಿ ಮಾಡಿದ್ದೆವು. ಎರಡನೇ ಬಾರಿ ಸಿಎಂ ಆದ ಬಳಿಕ 2024ರಲ್ಲಿ 36789 ಮನೆಗಳನ್ನು ಮೊದಲನೇ ಹಂತದಲ್ಲಿ ವಿತರಿಸಿದ್ದ ನಮ್ಮ ಸರಕಾರ ಎರಡನೇ ಹಂತದಲ್ಲಿ 45 ಸಾವಿರ ಮನೆಗಳನ್ನು ಹಂಚಿಕೆ ಮಾಡಿದೆ ಎಂದು ಹೇಳಿದರು.

ಕಳೆದ 10 ವರ್ಷಗಳಿಂದ ಪ್ರಧಾನಿ ಮೋದಿಯವರು ಏನು ಮಾಡಿದ್ದಾರೆ ಎನ್ನುವುದನ್ನು ಜನರಿಗೆ ತಿಳಿಸಬೇಕು. ಈ ವಿಷಯವನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತರಬೇಕು ಎಂದು ಸವಾಲು ಹಾಕಿದರು. ನಾವು ಹೇಳಿದ್ದನ್ನೆಲ್ಲಾ ಮಾಡಿ ನುಡಿದಂತೆ ನಡೆದಿದ್ದೇವೆ. ಅವರು ಹೇಳಿದ್ದನ್ನು ಮಾಡದೆ ನಮ್ಮ ಬಗ್ಗೆ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ವಿದೇಶದಿಂದ ಕಪ್ಪು ಹಣ ತಂದು ಎಲ್ಲರ ಖಾತೆಗೆ 15 ಲಕ್ಷ ಹಾಕ್ತೀವಿ ಅಂದರು. ಹಾಕಿದ್ರಾ? ಮಹದಾಯಿ, ಕೃಷ್ಣ ಮೇಲ್ದಂಡೆ, ಭದ್ರಾ ಮೇಲ್ದಂಡೆ ಎಲ್ಲದರಲ್ಲೂ ಕೇಂದ್ರ ಸರಕಾರ ಮಾತು ತಪ್ಪಿದೆ. ರಾಜ್ಯದ ಜನತೆಗೆ ವಂಚಿಸಿದೆ ಎಂದ ಅವರು, ಪ್ರಹ್ಲಾದ್ ಜೋಶಿಯವರು ಇದಕ್ಕೆಲ್ಲಾ ಉತ್ತರಿಸಬೇಕು ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ,

ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ ಮನೆಗಳನ್ನು ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಕ್ಕು ಪತ್ರ ವಿತರಿಸಿದರು. ಈ ವೇಳೆ ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಇದ್ದರು.

ಮನರೇಗಾ ಹೆಸರು ಬದಲಾವಣೆ ಮಾಡಿರುವುದನ್ನು ವಿರೋಧಿಸಿ ನಡೆಯುತ್ತಿರುವ ಹೋರಾಟ ನಿಲ್ಲದು. ಮನರೇಗಾ ಕಾನೂನು ಬದಲಾಯಿಸಿ 125 ದಿನಗಳನ್ನು ಕೊಡುವುದಾಗಿ ಹೇಳಿದೆ. ಇದು ಹೇಗೆ ಸಾಧ್ಯ? ರಾಜ್ಯ ಸರಕಾರದ ಮೇಲೆ ಹೆಚ್ಚಿನ ಬಾರ ಹಾಕಿದೆ. ಎಲ್ಲರೂ ಒಂದಾಗಿ ಕೇಂದ್ರದ ವಿರುದ್ಧ ಹೋರಾಟ ಮಾಡಬೇಕಾದ ಸಂದರ್ಭ ಬಂದಿದೆ. ಆದ್ದರಿಂದ ಬಡವರ ಪರ ಇರುವ ಕಾಂಗ್ರೆಸ್ ಸರಕಾರಕ್ಕೆ ಬೆಂಬಲ ನೀಡಬೇಕು. ಈಗಲೇ ಹೋರಾಟ ಮಾಡದಿದ್ದರೆ ಮುಂದೊಂದಿ ದಿನ ಸ್ವಾತಂತ್ರ್ಯ, ಸಂವಿಧಾನ ಕಳೆದುಕೊಂಡು ಗುಲಾಮರಾಗಬೇಕಾದ ಸ್ಥಿತಿ ಬರಲಿದೆ ಎಂದರು.

ಈ ವೇಳೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಸಚಿವರಾದ ಸತೀಶ್ ಜಾರಕಿಹೊಳಿ, ಎಚ್.ಸಿಮಹದೇವಪ್ಪ, ಎಚ್.ಕೆ.ಪಾಟೀಲ್, ಕೆ.ಎಚ್. ಮುನಿಯಪ್ಪ, ಸಂತೋಷ್ ಲಾಡ್, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಸಲೀಂ ಅಹ್ಮದ್, ಎಚ್.ಎಫ್. ಜಕ್ಕಪ್ಪನವರ ಸೇರಿದಂತೆ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು, ಮುಖಂಡರು ಉಪಸ್ಥಿತರಿದ್ದರು.

ಮನರೇಗಾ ಹೆಸರಲ್ಲಿ ಕೇಂದ್ರ ರಾಜಕೀಯ

ಮನರೇಗಾ ಯೋಜನೆಯನ್ನು 2005ರಲ್ಲಿಯೇ ಜಾರಿಗೆ ತರಲಾಗಿದೆ. ಹೆಸರು ಬದಲಾವಣೆ ಮಾಡಿ, ರಾಜಕೀಯ ಮಾಡುತ್ತಿದ್ದಾರೆ. ಜಾತಿ, ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಬಿಜೆಪಿ ಮಾಡುತ್ತಿದೆ. ಐದು ಗ್ಯಾರಂಟಿ ಯೋಜನೆಗಳ ಬಗ್ಗೆಯೂ ಅಪಪ್ರಚಾರ ಮಾಡಿತು. ಆದರೆ, ಈಗ ದೇಶದಲ್ಲಿಯೇ ಕರ್ನಾಟಕ ನಂಬರ್ 1 ಸ್ಥಾನದಲ್ಲಿ ಇದೆ. ಅದಕ್ಕಾಗಿ 1.16 ಲಕ್ಷ ಕೋಟಿ ಖರ್ಚು ಮಾಡಿದೆ. ಇಷ್ಟೆಲ್ಲಾ ಆದರೂ ಸರಕಾರದ ಬೊಕ್ಕಸ ಖಾಲಿ ಎಂದು ಬಿಜೆಪಿ ಸುಳ್ಳು ಹಂಚುತ್ತಾ ತಿರುಗುತ್ತಿದೆ. ರೈತರ ಪಂಪ್ ಸೆಟ್‌ಗಳಿಗೆ 2500 ಕೋಟಿಯ ಸಬ್ಸಿಡಿಯನ್ನು ಪ್ರತಿ ವರ್ಷ ಕೊಡುತ್ತಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

> ಒಂದು ಮನೆಗೆ 4 ರಿಂದ 5 ಲಕ್ಷ ರು. ಕೊಡೋದು ರಾಜ್ಯ ಸರಕಾರ. ಕೇಂದ್ರ ಕೊಡೋದು ಒಂದು ಲಕ್ಷಕ್ಕಿಂತ ಕಡಿಮೆ. ಆದರೆ, ಹೆಸರು ಮಾತ್ರ ಪ್ರಧಾನ ಮಂತ್ರಿ ಆವಾಸ್ ಯೋಜನೆ. ರಾಜ್ಯ ಸರಕಾರದ ಹಣ ಹೆಸರು ಮಾತ್ರ ಕೇಂದ್ರದ್ದು. ನಮ್ಮ ಸರಕಾರ ಬಂದ ಬಳಿಕ 5500 ಕೋಟಿ ರು. ಹಣವನ್ನು ಎರಡು ವರ್ಷದಲ್ಲಿ ಮನೆಗಳಿಗಾಗಿ ಖರ್ಚು ಮಾಡಿದ್ದೇವೆ.
>
> -ಸಿದ್ದರಾಮಯ್ಯ ಮುಖ್ಯಮಂತ್ರಿ

ಬದುಕು ಬೆಳಗಲು ಪುಸ್ತಕ ಬೇಕು

ವೀರಲೋಕ ಪುಸ್ತಕ ಸಂತೆಗೆ ಬರಗೂರು ರಾಮಚಂದ್ರಪ್ಪ ಚಾಲನೆ

ಬೀದರನ ಸಾಯಿ ಸ್ಕೂಲ್ ಆವರಣ ದಲ್ಲಿ ಆಯೋಜನೆ ಮಾಡಿರುವ ವೀರಲೋಕ ಪುಸ್ತಕ ಸಂತೆಗೆ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಚಾಲನೆ ನೀಡಿದರು. ಈ ವೇಳೆ ಡಾ.ಬಸವಲಿಂಗ ಪಟ್ಟದೇವರು, ಹುಲಸೂರ್ ಮಠದ ಶಿವಾನಂದ್ ಮಹಾಸ್ವಾಮಿ, ಸಚಿವ ರಹೀಂ ಖಾನ್, ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ನಟ ನೆನಪಿರಲಿ ಪ್ರೇಮ್ ಸೇರಿ ಹಲವರಿದ್ದರು.

ಬೀದರ್: ಜಗತ್ತನ್ನು ಬೆಳಗಲು ಸೂರ್ಯ ಬೇಕು. ಹಾಗೆಯೇ ಬದುಕನ್ನು ಬೆಳಗಲು ಪುಸ್ತಕ ಬೇಕು. ಜನರ ಬಳಿಗೆ ಪುಸ್ತಕಗಳನ್ನು ಕೊಂಡೊಯ್ಯುವ ಕೆಲಸ ಪುಸ್ತಕ ಸಂತೆಯ ಉದ್ದೇಶವಾಗಿದೆ ಎಂದು ಹಿರಿಯ ಸಾಹಿತಿ ಪ್ರೊ. ಬರಗೂರ ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಬೀದರ್‌ನ ಸಾಯಿ ಸ್ಕೂಲ್ ಆವರಣದಲ್ಲಿ ವೀರಲೋಕ ಪುಸ್ತಕರ ಪ್ರಕಾಶನ ಆಯೋಜನೆ ಮಾಡಿರುವ ವೀರಲೋಕ ಪುಸ್ತಕ ಸಂತೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರ ತುಂಬಾ ಮುಖ್ಯವಾದದ್ದು. ಜಗತ್ತಿನಲ್ಲಿ ಮಾತಿಗೆ ಎಷ್ಟು ಶಕ್ತಿ ಇದೆಯೋ ಮೌನಕ್ಕೂ ಅಷ್ಟೇ ಶಕ್ತಿ ಇದೆ. ನಾವೆಲ್ಲರೂ ಪುಸ್ತಕಗಳ ಜತೆಗೆ ಮೌನವಾಗಿ ಮಾತಾಡಬೇಕಿದೆ. ಜನರಲ್ಲಿ ಅಕ್ಷರ ಪ್ರೇಮ ಬಿತ್ತಿ, ಸಾಹಿತಿಗಳಿಗೆ ನಿರಂತರವಾಗಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿರುವ ವೀರಕಪುತ್ರ ಶ್ರೀ ನಿವಾಸ ಅವರ ಪ್ರಯತ್ನ ಶ್ಲಾಘನೀಯ ಎಂದರು. ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳು ಸೇವಾ ಕ್ಷೇತ್ರಗಳೆಂದು ಗುರುತಿಸಿಕೊಂಡಿವೆ. ಆದರೆ ಇಂದಿನ ದಿನಮಾನಗಳಲ್ಲಿ ಉದ್ಯಮ ಕ್ಷೇತ್ರಗಳಾಗಿ ಬದಲಾವಣೆ ಆಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ವೇಳೆ ವೀರಕಪುತ್ರ ಶ್ರೀನಿವಾಸ ಮಾತನಾಡಿ, ಕನ್ನಡದ ಲೇಖಕರು ಸರಕಾರ ಮತ್ತು ಸರಕಾರದ ಸಂಸ್ಥೆ ಪುಸ್ತಕ ಕೊಳ್ಳುವುದನ್ನು ಎದುರು ನೋಡುವ ಸ್ಥಿತಿ ಉಳಿದಿರುವುದು ಬೇಸರದ ಸಂಗತಿ. ಸರಕಾರ ಪುಸ್ತಕ ಖರೀದಿ ಮಾಡಿದರಷ್ಟೇ ಉಳಿಯಬಹುದು ಎಂಬ ಭಾವನೆಯೂ ಇದೆ. ಈ ಮನಸ್ಥಿತಿಯಿಂದ ಹೊರಗೆ ಬರಬೇಕಾಗಿದೆ. ಆದಾಯದ ಮೂಲಗಳನ್ನು ಹುಡುಕಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿಯೇ ಪುಸ್ತಕ ಸಂತೆ ಹುಟ್ಟಿಕೊಂಡಿದೆ. ಹಿಂದಿನ ಮೂರೂ ಪುಸ್ತಕ ಸಂತೆಗಳು ಅದ್ಭುತ ಯಶಸ್ಸು ಪಡೆದಿವೆ. ಬೀದರಿನಲ್ಲಿ ನಡೆಯುತ್ತಿರುವ ನಾಲ್ಕನೇ ಸಂತೆಯ ಸಂಭ್ರಮ ಖುಷಿಯುಂಟು ಮಾಡಿದೆ ಎಂದರು.

ಈ ಸಂದರ್ಭದಲ್ಲಿ ಡಾ.ಬಸವಲಿಂಗ ಪಟ್ಟದೇವರು, ಹುಲಸೂರ್ ಮಠದ ಶಿವಾನಂದ್ ಮಹಾಸ್ವಾಮಿ, ಸಚಿವ ರಹೀಂ ಖಾನ್, ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ನಟ ನೆನಪಿರಲಿ ಪ್ರೇಮ್, ನಟಿ ಸುಲಕ್ಷಾ, ಸುರೇಶ್ ಚೆನ್ನಶೆಟ್ಟಿ, ವೀರಕಪುತ್ರ ಶ್ರೀನಿವಾಸ್, ಪ್ರತಿಮಾ ಬೆಹೆನ್ ಜಿ, ಬಾಬುರಾವ್ ಮಲ್ಕಾಪುರೆ, ಗುರುನಾಥ್ ರಾಜಗಿರಾ ಹಾಗೂ ಸಂತೋಷ್ ಹಾನಗಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> ಡಿಜಿಟಲ್ ಯುಗದಲ್ಲಿಯೂ ಪುಸ್ತಕಗಳ ಮಹತ್ವ ಕಡಿಮೆಯಾಗಿಲ್ಲ. ಪುಸ್ತಕ ಓದುವ ಹವ್ಯಾಸದಿಂದ ಚಿಂತನಾ, ವಿವೇಕ, ಶಕ್ತಿ, ಸಂಸ್ಕಾರ ಹಾಗೂ ಸೃಜನಶೀಲತೆಯನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳು, ಯುವಜನರು ಹಾಗೂ ಸಾರ್ವಜನಿಕರು ಪುಸ್ತಕಗಳನ್ನು ತಮ್ಮ ಜೀವನದ ಅವಿಭಾಜ್ಯ ಭಾಗವಾಗಿಸಿಕೊಂಡು, ದಿನನಿತ್ಯ ಓದುವ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು. ಪುಸ್ತಕ ಸಂತೆಗಳು ಜ್ಞಾನ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಮಹತ್ವದ ವೇದಿಕೆಯಾಗಿದೆ.
>
> -ಶೈಲೇಂದ್ರ ಬೆಲ್ದಾಳೆ ಶಾಸಕ

> ಪುಸ್ತಕ ಓದುವುದರಿಂದ ಜ್ಞಾನ ಹೆಚ್ಚುತ್ತದೆ. ಸುಂದರ ಸಮಾಜ ನಿರ್ಮಾಣ ಮಾಡಲು ಜ್ಞಾನ ಬೇಕು. ಬದಲಾವಣೆಯ ಮೂಲ ಕಾರಣ ಸಾಹಿತ್ಯವಾಗಿದೆ. ಅಂಬೇಡ್ಕರ್ ಅವರು ಸಂವಿಧಾನ ಬರೆಯುವುದಕ್ಕೆ ಅವರಲ್ಲಿನ ಜ್ಞಾನವೇ ಕಾರಣವಾಗಿದೆ.
>
> -ಈಶ್ವರ್ ಖಂಡ್ರೆ ಸಚಿವ

ಗೌರ್ನರ್‌ಗೆ ಮುತ್ತಿಗೆ ಪ್ರಜಾಪ್ರಭುತ್ವದ ಕಗ್ಗೊಲೆ

ಕಾಂಗ್ರೆಸ್ ಶಾಸಕರ ಗೂಂಡಾ ವರ್ತನೆ ಖಂಡನೀಯ: ಸಂಸದ ಯದುವೀರ್

ಮೈಸೂರು: ವಿಧಾನಮಂಡಲ ಅಧಿವೇಶನದಲ್ಲಿ ರಾಜ್ಯಪಾಲರಿಗೆ ಅವಮಾನ ಮಾಡಿರುವುದನ್ನು ರಾಜ್ಯದ ಜನ ಗಮನಿಸಿದ್ದಾರೆ. ಕಾಂಗ್ರೆಸ್ ಶಾಸಕರು ಗೂಂಡಾಗಳಂತೆ ವರ್ತಿಸಿರುವುದು ಖಂಡನೀಯ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯಪಾಲರು ಸಂವಿಧಾನಾತ್ಮಕವಾಗಿ ಜವಾಬ್ದಾರಿ ನಿಭಾಯಿಸಿ ಹೋಗಿದ್ದಾರೆ. ಆದರೆ, ಅವರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಇದನ್ನು ಖಂಡಿಸುತ್ತೇವೆ ಎಂದರು.

ಚಾಮುಂಡಿ ಬೆಟ್ಟದಲ್ಲಿ ಪ್ರಸಾದ್ ಯೋಜನೆ ಕಾಮಗಾರಿ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ. ಅಲ್ಲಿನ ಗ್ರಾಮಸ್ಥರು ಕೂಡ ಕಾಮಗಾರಿಯನ್ನು ವಿರೋಧಿಸಿದ್ದಾರೆ. ದೇವಸ್ಥಾನದ ಪಕ್ಕದಲ್ಲೇ ಕೆಲಸ ನಡೆಯುತ್ತಿದ್ದು, ಇದರಿಂದ ಗೋಪುರಕ್ಕೆ ತೊಂದರೆ ಆಗಬಹುದು. ಯಾವ ರೀತಿ ಕಾಮಗಾರಿ ಕೈಗೊಳ್ಳಲಾಗಿದೆ ಎಂಬುದನ್ನು ಮೊದಲು ತಿಳಿಸುವ ಕೆಲಸವನ್ನು ಜಿಲ್ಲಾಡಳಿತ ಮಾಡಬೇಕು ಎಂದು ಹೇಳಿದರು.

ಚಾಮುಂಡಿಬೆಟ್ಟದ ಅಭಿವೃದ್ಧಿ ಕೂಡ ಆಗಬೇಕಿದೆ. ನನ್ನ ಅನುಮತಿಗಿಂತ ಕಾಮಗಾರಿಗೆ ವಿರೋಧ ಮಾಡಿರುವವರ ಅನುಮತಿ ತುಂಬಾ ಮುಖ್ಯ. ಅಧಿಕಾರಿಗಳು ತರಾತುರಿಯಲ್ಲಿ ಕಾಮಗಾರಿ ನಡೆಸುತ್ತಿರುವುದು ಏಕೆಂದು ಗೊತ್ತಿಲ್ಲ. ಜನರ ಅಭಿಪ್ರಾಯವನ್ನು ಪಡೆದು ಕಾಮಗಾರಿ ಮುಂದುವರೆಸಲಿ ಎಂದರು.

ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯದ ಸ್ತಬ್ಧಚಿತ್ರ ಭಾಗವಹಿಸುತ್ತಿಲ್ಲ. ಈ ಬಗ್ಗೆ ಸರಿಯಾಗಿ ಪತ್ರ ವ್ಯವಹಾರ ನಡೆದಿಲ್ಲ. ಆದ್ದರಿಂದ ಸಾಕಷ್ಟು ಗೊಂದಲ ಉಂಟಾಗಿದೆ ಎಂದು ದೂರಿದರು.

> ಮೈಸೂರು-ಕುಶಾಲನಗರ ರೈಲು ಮಾರ್ಗ ನಿರ್ಮಾಣ ಯೋಜನೆಯನ್ನು ರೈಲ್ವೆ ಇಲಾಖೆಯು ರದ್ದುಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಯದುವೀರ್, ಯೋಜನೆಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರಕಾರ ಹಸ್ತಾಂತರಿಸಿಲ್ಲ. ಈ ಬಗ್ಗೆ ಪುನರ್ ಪರಿಶೀಲಿಸುವಂತೆ ರೈಲ್ವೆ ಇಲಾಖೆ ಗಮನಕ್ಕೆ ತಂದಿದ್ದೇನೆ. ಆ ಭಾಗಕ್ಕೆ ರೈಲು ಅಗತ್ಯವಿದೆ. ರಾಜ್ಯ ಸರಕಾರವೂ ಸಹಕಾರ ನೀಡಲಿ ಎಂದರು.
>
> -ಯದುವೀರ್ ಒಡೆಯರ್ ಸಂಸದ

ಕಾಂಗ್ರೆಸ್ ಸೇಡಿನ ರಾಜಕಾರಣ: ಕಾಗೇರಿ

ಕಲಬುರಗಿ: ರಾಜ್ಯ ಕಾಂಗ್ರೆಸ್ ಸರಕಾರವು ರಾಜ್ಯಪಾಲರ ಹುದ್ದೆಯನ್ನು ಕೇಂದ್ರ ಸರಕಾರದ ವಿರುದ್ಧ ಸೇಡು ತೀರಿಸಿಕೊಳ್ಳುವ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ. ಸದನದಲ್ಲಿ ರಾಜ್ಯಪಾಲರಿಗೆ ಅಗೌರವ ತೋರುವ ಮೂಲಕ ಸಾಂವಿಧಾನಿಕ ಹುದ್ದೆಗೆ ಅಪಮಾನ ಮಾಡಲಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಗಂಭೀರವಾಗಿ ಆರೋಪಿಸಿದರು.

ಸೇಡಂನಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಸರಕಾರದ ನಡೆ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿದೆ. ಅಧಿವೇಶನದಲ್ಲಿ ಸರಕಾರ ಬರೆದುಕೊಟ್ಟ ಭಾಷಣವನ್ನು ಓದುವುದು ರಾಜ್ಯಪಾಲರ ಸಂಪ್ರದಾಯ. ಹಾಗೆಂದ ಮಾತ್ರಕ್ಕೆ ಕೇಂದ್ರದ ಯೋಜನೆಗಳ ವಿರುದ್ಧ ರಾಜಕೀಯ ಪ್ರೇರಿತ ಟೀಕೆಗಳನ್ನು ಮಾಡಬೇಕೆಂದಿಲ್ಲ. ರಾಜ್ಯಪಾಲರಿಗೆ ತಮ್ಮದೇ ಆದ ವಿವೇಚನಾಧಿಕಾರವಿದೆ. ವಿಶೇಷ ಅಧಿವೇಶನದಲ್ಲಿ ರಾಜಕೀಯ ಮಾಡಲು ಹೊರಟಿದ್ದ ಕಾಂಗ್ರೆಸ್ ಸರಕಾರದ ಉದ್ದೇಶವನ್ನು ಅರಿತೇ ಅವರು ಕೆಲವು ಅಂಶಗಳನ್ನು ಕಡಿತಗೊಳಿಸಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಅವರೊಂದಿಗೆ ನಡೆದುಕೊಂಡ ರೀತಿ ಇಡೀ ರಾಜ್ಯ ತಲೆತಗ್ಗಿಸುವಂತೆ ಮಾಡಿದೆ ಎಂದು ವಿಷಾದಿಸಿದರು.

ರಾಜ್ಯಪಾಲರು ಸದನದಿಂದ ತೆರಳುವಾಗ ಕಾಂಗ್ರೆಸ್ ಶಾಸಕರು ಗೂಂಡಾಗಳಂತೆ ವರ್ತಿಸಿ ಅವರನ್ನು ತಡೆದಿದ್ದಾರೆ. ಇದು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಅಂಟಿದ ಕಳಂಕ. ದರ್ಪ ತೋರಿದ ಶಾಸಕರನ್ನು ವಿಧಾನಸಭಾಧ್ಯಕ್ಷರು ತಕ್ಷಣವೇ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಉದ್ಯೋಗ ಖಾತ್ರಿಯಲ್ಲಿ ಪಾರದರ್ಶಕತೆ ಜಾರಿ

ಮನರೇಗಾ ವ್ಯವಸ್ಥೆಯಲ್ಲಿದ್ದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಮೋದಿ ಸರಕಾರವು ತಂತ್ರಜ್ಞಾನ ಆಧಾರಿತ ಪಾರದರ್ಶಕ ವ್ಯವಸ್ಥೆ ಜಾರಿಗೆ ತಂದಿದೆ. ಇದರಿಂದ ಕಾಂಗ್ರೆಸ್‌ಗೆ ಹೊಟ್ಟೆ ಉರಿ ಆರಂಭವಾಗಿದೆ. ಕೆಲಸದ ದಿನಗಳನ್ನು 100 ರಿಂದ 125ಕ್ಕೆ ಏರಿಸಲಾಗಿದೆ. ವಾರದೊಳಗೆ ವೇತನ ಪಾವತಿಸುವ ನಿಯಮ ಜಾರಿಗೆ ತರಲಾಗಿದೆ. ಬಡವರ ಹಿತದೃಷ್ಟಿಯಿಂದ ತಂದ ಬದಲಾವಣೆಗಳನ್ನು ಮುಚ್ಚಿಟ್ಟು ಸುಳ್ಳು ಆರೋಪ ಮಾಡುವುದು ಸರಕಾರದ ರಾಜಕೀಯ ದಿವಾಳಿತನ ಎಂದು ಸಂಸದ ವಿಶ್ವೇಶ್ವರ ಕಾಗೇರಿ ವ್ಯಂಗ್ಯವಾಡಿದರು.

ಐಸಿಹಾಸಿಕ ಕೋಟೆ ಮೇಲೆ ಅತಿಕ್ರಮಣದ ಕರಾಳ ಛಾಯೆ | ಅತಿಕ್ರಮಣ ತೆರವುಗೊಳಿಸುವ ಕೋರ್ಟ್ ಆದೇಶಕ್ಕೆ ಕಿಮ್ಮತ್ತಿಲ್ಲ

ಇಚ್ಛಾಶಕ್ತಿ ಕೊರತೆ: ಅವನತಿಯತ್ತ ಕಲಬುರಗಿ ಕೋಟೆ

ಾ ದೇವೇಂದ್ರ ಜಾಡಿಕಲಬುರಗಿ

ಕಾಕತೀಯರ ಕಾಲದಲ್ಲಿ ನಿರ್ಮಾಣಗೊಂಡು, ಬಹಮನಿ ಸುಲ್ತಾನರ ವೈಭವದ ರಾಜಧಾನಿಯಾಗಿದ್ದ ಐತಿಹಾಸಿಕ ಕಲಬುರಗಿ ಕೋಟೆ ಸದ್ಯ ಅತಿಕ್ರಮಣಕಾರರ ಕಪಿಮುಷ್ಟಿಯಲ್ಲಿ ಸಿಲುಕಿದೆ. ವಿಶ್ವದ ಎರಡನೇ ಅತಿದೊಡ್ಡ ಜಾಮಿಯಾ ಮಸೀದಿ ಹಾಗೂ ವಿಶ್ವವಿಖ್ಯಾತ ಉದ್ದದ ಫಿರಂಗಿ ಹೊಂದಿರುವ ಕೋಟೆ, ಆಡಳಿತದ ನಿರ್ಲಕ್ಷ್ಯ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ನಿಧಾನವಾಗಿ ಕಣ್ಮರೆಯಾಗುತ್ತಿದೆ.

ಕೋಟೆಯೊಗೆ 282 ಅಕ್ರಮ ಮನೆ: 1970ರ ದಶಕದಿಂದ ಆರಂಭವಾದ ಕೋಟೆಯೊಳಗಿನ ಅತಿಕ್ರಮಣ, ಇಂದು ವ್ಯವಸ್ಥಿತ ರೂಪ ಪಡೆದುಕೊಂಡಿದ್ದು, ಇದಕ್ಕೆ ಪಾಲಿಕೆಯ ಪರೋಕ್ಷ ಬೆಂಬಲವಿದೆ ಎನ್ನುವ ಆರೋಪಗಳು ಕೇಳಿಬರುತ್ತಿವೆ. ಕೋಟೆಯೊಳಗಿನ 282 ಅಕ್ರಮ ಮನೆಗಳನ್ನು ತೆರವುಗೊಳಿಸಬೇಕು ಎಂದು ರಾಜ್ಯ ಹೈಕೋರ್ಟ್, ಸರಕಾರ, ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆಗೆ ಹಲವು ಬಾರಿ ಕಟ್ಟುನಿಟ್ಟಿನ ಆದೇಶ ನೀಡಿದ್ದರೂ, ಇಂದಿಗೂ ಅವು ಕಾಗದದ ಮೇಲೆಯೇ ಉಳಿದಿವೆ.

ಇನ್ನೂ ಅಚ್ಚರಿಯ ಸಂಗತಿಯೆಂದರೆ, ಸ್ಮಾರಕದ ಒಳಭಾಗದಲ್ಲೇ ಅಕ್ರಮ ವಾಸಿಗಳಿಗೆ ವಿದ್ಯುತ್, ನೀರು, ರಸ್ತೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ. ಇದು ಅತಿಕ್ರಮಣಕ್ಕೆ ನೇರ ಬೆಂಬಲ ನೀಡಿದಂತೆ ಎನ್ನುವ ಟೀಕೆಗಳು ಕೇಳಿಬರುತ್ತಿವೆ. ಕೆಲವರ ಇಚ್ಛಾಶಕ್ತಿಯ ಕೊರತೆಯಿಂದ, ವಿಶ್ವವಿಖ್ಯಾತವಾಗಬೇಕಿದ್ದ ಐತಿಹಾಸಿಕ ಪರಂಪರೆಗೆ ಅನ್ಯಾಯವಾಗುತ್ತಿರುವುದು ನಿರಾಕರಣೀಯ ಸತ್ಯ.

ಧೂಳು ಹಿಡಿಯುತ್ತಿದೆ ಪುನರ್ವಸತಿ ಯೋಜನೆ: ಒತ್ತುವರಿದಾರರನ್ನು ನಗರದ ಜಾಫರಾಬಾದ್ ಪ್ರದೇಶಕ್ಕೆ ಸ್ಥಳಾಂತರಿಸಲು ಜಾಗ ಗುರುತಿಸಲಾಗಿದ್ದು, ಡಿಪಿಆರ್ ಕೂಡ ಸಿದ್ಧವಾಗಿದೆ. ಆದರೆ, ಆ ಪ್ರಸ್ತಾವನೆಗೆ ಜೀವ ತುಂಬುವ ಕಾರ್ಯ ಮಾತ್ರ ನಡೆಯುತ್ತಿಲ್ಲ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಭಾಷಣದಲ್ಲಿ ಕಲಬುರಗಿ ಕೋಟೆಯ ಐತಿಹಾಸಿಕ ಮಹತ್ವವನ್ನು ಉಲ್ಲೇಖಿಸಿದ್ದರೂ, ಅದರಿಂದ ಸ್ಥಳೀಯ ಆಡಳಿತಕ್ಕೆ ಯಾವುದೇ ಚಲನೆ ಬಂದಿಲ್ಲ. ಕೆಕೆಆರ್‌ಡಿಬಿ ನೂರಾರು ಕೋಟಿ ರು.ಅನುದಾನವನ್ನು ಆವಿಷ್ಕಾರ ಹೆಸರಿನಲ್ಲಿ ಬಳಸುತ್ತಿರುವ ಆರೋಪಗಳ ನಡುವೆಯೇ, ಕೋಟೆಯ ಪುನರುತ್ಥಾನಕ್ಕೆ ಕನಿಷ್ಠ 100 ಕೋಟಿ ರು.ಅನುದಾನ ನೀಡಲು ಇಚ್ಛಾಶಕ್ತಿ ತೋರಿಸದಿರುವುದು ಇತಿಹಾಸ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಹಂಪಿ ಆಗದ ಕಲಬುರಗಿ, ಇಚ್ಛಾ ಶಕ್ತಿ ಕೊರತೆ: ಹಂಪಿ, ಪಟ್ಟದಕಲ್ಲು ಮಾದರಿಯಲ್ಲಿ ಕಲಬುರಗಿ ಕೋಟೆ ಅಭಿವೃದ್ಧಿಯಾಗದಿರುವುದಕ್ಕೆ ಹಣವಿಲ್ಲ ಎನ್ನುವುದು ಕಾರಣವಲ್ಲ. ಇತಿಹಾಸಕ್ಕೆ ಆದ್ಯತೆ ನೀಡದ ರಾಜಕೀಯ ಮನಸ್ಥಿತಿಯೇ ಮೂಲ ಕಾರಣ ಎನ್ನುವುದು ಸ್ಪಷ್ಟವಾಗಿದೆ. ಪರಂಪರೆಯನ್ನು ಉಳಿಸಿದರೆ ಓಟು ಸಿಗುವುದಿಲ್ಲ ಎಂಬ ಭ್ರಮೆಯಲ್ಲೇ ಆಡಳಿತ ಇತಿಹಾಸವನ್ನು ಬಲಿ ಕೊಡುತ್ತಿರುವ ಆರೋಪಗಳು ಕೇಳಿಬರುತ್ತಿವೆ.

ಆಗಬೇಕಿರುವ ತುರ್ತು ಕಾರ್ಯಗಳು: ಕಲಬುರಗಿ ಕೋಟೆಯನ್ನು ಕೇವಲ ಸ್ಮಾರಕವಲ್ಲ, ಪ್ರವಾಸಿ ತಾಣವನ್ನಾಗಿ ರೂಪಿಸಲು ಈ ಕೆಳಗಿನ ಮೂಲಸೌಕರ್ಯ ಅಗತ್ಯವಿದೆ. ಬಯಲು ರಂಗಮಂದಿರ ನಿರ್ಮಾಣ, ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ, ಕಾವಲುಗಾರರ ನೇಮಕ, ಮಳಖೇಡ, ನಾಗಾವಿ, ಸನ್ನತಿ ಸೇರಿಸಿ ಪಾರಂಪರಿಕ ಪ್ರವಾಸಿ ಸರಕ್ಯೂಟ ರಚನೆ ಮಾಡಬೇಕಿದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತ ಈಗಲಾದರೂ ಎಚ್ಚೆತ್ತುಕೊಳ್ಳಬೇಕಿದೆ. ಹಂಪಿ ಮತ್ತು ಪಟ್ಟದಕಲ್ಲು ಮಾದರಿಯಲ್ಲಿ ಕಲಬುರಗಿ ಕೋಟೆಯನ್ನು ಅಭಿವೃದ್ಧಿಪಡಿಸದಿದ್ದರೆ, ಮುಂದಿನ ಪೀಳಿಗೆಗೆ ಇತಿಹಾಸದ ಬದಲು ಕೇವಲ ಕಲ್ಲುಗಳ ರಾಶಿಯನ್ನು ತೋರಿಸುವ ಸಂದರ್ಭ ಬರಲಿದೆ. ಸ್ಮಾರಕಗಳ ರಕ್ಷಣೆ ಕೇವಲ ಇಲಾಖೆಯ ಕೆಲಸವಲ್ಲ ಅದು ಸರಕಾರದ ನೈತಿಕ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯೂ ಹೌದು. ಸರಕಾರ ವಿವಿಧ ಕ್ಷೇತ್ರಗಳಿಗೆ ಅನೇಕ ಭಾಗ್ಯ ಯೋಜನೆಗಳನ್ನು ಘೋಷಿಸಿದೆ. ಆದರೆ, ಇತಿಹಾಸ ಉಳಿಸಲು ಕಲಬುರಗಿ ಕೋಟೆಗೆ ಒತ್ತುವರಿದಾರರಿಂದ ಮುಕ್ತಿ ಭಾಗ್ಯ ಯಾವಾಗ? ಎಂಬ ಪ್ರಶ್ನೆ ಇತಿಹಾಸ ಪ್ರೇಮಿಗಳನ್ನು ಕಾಡುತ್ತಿದೆ.



ಯುನೆಸ್ಕೋ ಕನಸಿಗೆ ಅತಿಕ್ರಮಣದ ಶಾಪ

ಕಲಬುರಗಿ, ಬೀದರ್ ಹಾಗೂ ವಿಜಯಪುರದ ಸ್ಮಾರಕಗಳನ್ನು ಸೇರಿಸಿ ಡೆಕ್ಕನ್ ಸುಲ್ತಾನೇಟ್ ಹೆಸರಿನಲ್ಲಿ ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಸಂಬಂಧ ಡೋಸಿಯರ್ ಈಗಾಗಲೇ ಸಿದ್ಧವಾಗಿದ್ದು, ಕೇಂದ್ರ ಸಂಸ್ಕೃತಿ ಮಂತ್ರಾಲಯಕ್ಕೆ ಸಲ್ಲಿಕೆಯಾಗಿದೆ. ಆದರೆ, ಕೋಟೆಯೊಳಗಿನ ಅತಿಕ್ರಮಣ ತೆರವಾಗದ ಹೊರತು ಜಾಗತಿಕ ಮಾನ್ಯತೆ ಕೇವಲ ಕನಸೇ? ಎಂದು ಇತಿಹಾಸಕಾರರು ಮತ್ತು ಹೋರಾಟಗಾರರು ಪ್ರಶ್ನಿಸುತ್ತಿದ್ದಾರೆ.

ಧೂಳಲ್ಲಿ ಮಲಗಿರುವ ಬಾರಹ ಗಜ, ಗಿನ್ನಿಸ್‌ಗೆ ದಾರಿ ಇಲ್ಲ

ವಿಶ್ವದ ಅತಿ ಉದ್ದದ ಪಂಚಲೋಹದ ಫಿರಂಗಿಗಳಲ್ಲಿ ಒಂದಾಗಿರುವ 29 ಅಡಿ ಉದ್ದ, 75 ಟನ್ ತೂಕದ ಬಾರಹ ಗಜ ತೋಪು, ನಿರ್ವಹಣೆ ಇಲ್ಲದೆ ಇಂದು ಧೂಳು ಹಿಡಿದಿದೆ. 1.5 ಕಿ.ಮೀ ದೂರದವರೆಗೆ ಮದ್ದು ಸಿಡಿಸುವ ಸಾಮರ್ಥ್ಯವಿದ್ದರೂ, ಗಿನ್ನಿಸ್ ಪಟ್ಟಿಗೆ ಸೇರಿಸಲು ಸರಕಾರ ಪ್ರಯತ್ನ ಮಾಡಿಲ್ಲ. ಒಂದೇ ಕೋಟೆಯಲ್ಲಿದ್ದ 26 ತೋಪುಗಳಲ್ಲಿ 17 ಮಾತ್ರ ಉಳಿದಿವೆ. ಉಳಿದವುಗಳ ಕುರಿತು ಆಡಳಿತಕ್ಕೆ ಲೆಕ್ಕವೇ ಇಲ್ಲ ಎಂದು ಇತಿಹಾಸಕಾರರು ಅಸಮಾಧಾನ ಹೊರಹಾಕಿದ್ದಾರೆ.

> ಹೈಕೋರ್ಟ್ ಆದೇಶವಿದ್ದರೂ 282 ಅಕ್ರಮ ಮನೆಗಳನ್ನು ತೆರವುಗೊಳಿಸದಿರುವುದು ಆಡಳಿತದ ದಿವಾಳಿತನದ ಸ್ಪಷ್ಟ ಉದಾಹರಣೆ. ಸ್ಮಾರಕದೊಳಗೆ ಸೌಲಭ್ಯ ನೀಡಿ ಒತ್ತುವರಿದಾರರನ್ನು ಪೋಷಿಸುವುದು ಇತಿಹಾಸಕ್ಕೆ ಮಾಡಿದ ಅಪರಾಧ. ಸರಕಾರ ತಕ್ಷಣವೇ ಪುನರ್ವಸತಿ ಕಲ್ಪಿಸಿ, ಕೋಟೆಯ ಅಭಿವೃದ್ಧಿಗೆ ಮುಂದಾಗಬೇಕು.
>
> - ಮುತ್ತಣ್ಣ ಎಸ್.ನಡಗೇರಿ, ಹೋರಾಟಗಾರ

ಸಮಾಚಾರ ಸಣ್ಣದಲ್ಲ

ಭೀಕರ ಅಪಘಾತ: ತಾಯಿ, ಮಗ ಸಾವು

ಬೆಂಗಳೂರು: ಡಿ ಮಾರ್ಟ್‌ಗೆ ಹೋಗಿ ಬರುತ್ತಿದ್ದ ತಾಯಿ ಮತ್ತು ಮಗ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಗುಂಡೇನಹಳ್ಳಿ ಗೇಟ್ ಬಳಿ ಸಂಭವಿಸಿದೆ. ಶೈಲಜಾ(45), ಪ್ರಜ್ವಲ್(26) ಮೃತ ತಾಯಿ, ಮಗ. ತ್ಯಾಮಗೊಂಡ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ತಾಯಿ ಮತ್ತು ಮಗ ಡಿ ಮಾರ್ಟ್‌ಗೆ ಹೋಗಿ ದಿನಸಿ ಸಾಮಗ್ರಿಗಳನ್ನು ತೆಗೆದುಕೊಂಡು ಮನೆಗೆ ವಾಪಸ್ ಆಗುತ್ತಿದ್ದರು. ಈ ವೇಳೆ ನೆಲಮಂಗಲ ತಾಲೂಕಿನ ಗುಂಡೇನಹಳ್ಳಿ ಗೇಟ್ ಬಳಿ ವೇಗವಾಗಿ ಬಂದ ಟಾಟಾ ಏಸ್ ವಾಹನ ತಾಯಿ, ಮಗ ಇದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹ್ಯಾಪಿನೆಸ್ ಪೆರೇಡ್ ಇಂದು

ಬೆಂಗಳೂರು: ಸಂಚಾರ ಪೊಲೀಸರ ಸಹಯೋಗದೊಂದಿಗೆ ನಗರದಲ್ಲಿ ಹ್ಯಾಪಿನೆಸ್ ಪೆರೇಡ್ ಹ್ಯಾಪಿ ಎಐಆರ್ ಜ.25ರಂದು ಮಧ್ಯಾಹ್ನ 12ರಿಂದ ನಡೆಯಲಿದೆ. ಸಂತೋಷವನ್ನು ಹರಡುವ ಮತ್ತು ಮಾನಸಿಕ ಯೋಗಕ್ಷೇಮದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಇಟ್ಟುಕೊಂಡು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೆಲವು ಜನನಿಬಿಡ ಸಾರ್ವಜನಿಕ ಸ್ಥಳಗಳಲ್ಲಿ ಫ್ಲ್ಯಾಶ್ ಮಾಬ್‌ಗಳು, ಸಂಗೀತ, ನೃತ್ಯ ಮತ್ತು ಸಣ್ಣ ಹ್ಯಾಪಿನೆಸ್ ಗುಡಿಗಳನ್ನು ವಿತರಿಸಲಾಗುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ. ಮಧ್ಯಾಹ್ನ 12ಕ್ಕೆ ಹಳೆಯ ವಿಮಾನ ನಿಲ್ದಾಣ ರಸ್ತೆಯ ಕೆಂಪ್ ಫೋರ್ಟ್ ಮಾಲ್‌ನಲ್ಲಿ ಪ್ರಾರಂಭವಾಗಲಿದೆ. ಇಂದಿರಾನಗರ, ಕೋರಮಂಗಲ, ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಸಂಜೆ ಎಂ.ಜಿ ರಸ್ತೆಗಳಲ್ಲಿ ಪರೇಡ್ ಸಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

10,365 ಲಿಂಗತ್ವ ಅಲ್ಪಸಂಖ್ಯಾತರು

ರಾಜ್ಯದಲ್ಲಿನ ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿಗತಿ ಕುರಿತ ಸಮೀಕ್ಷಾ ವರದಿ ಸರಕಾರಕ್ಕೆ ಸಲ್ಲಿಕೆ | ಸಮಾನ ಅವಕಾಶ ನೀಡಲು ಆಗ್ರಹ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರಿಗೂ ಸಮಾನ ಅವಕಾಶ ಹಾಗೂ ಸರಕಾರಿ ಯೋಜನೆಗಳನ್ನು ತಲುಪಿಸಬೇಕು ಎನ್ನುವ ಶಿಫಾರಸ್ಸನ್ನು ಸರಕಾರಕ್ಕೆ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷಾ ವರದಿಯಲ್ಲಿ ಸ್ಪಷ್ಟಪಡಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಹುನಿರೀಕ್ಷಿತ ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷಾ ವರದಿ ರಾಜ್ಯ ಸರಕಾರಕ್ಕೆ ಸಲ್ಲಿಕೆಯಾಗಿದ್ದು, ಇದರಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಪೂರಕವಾಗಿ ರುವ ಹಲವು ಶಿಫಾರಸ್ಸುಗಳನ್ನು ವರದಿಯಲ್ಲಿ ಪ್ರಸ್ತಾಪಿಸಲಾ ಗಿದೆ. ಪ್ರಮುಖವಾಗಿ, ವಸತಿ ನಿಲಯಗಳಲ್ಲಿ ಆದ್ಯತೆಯ ಮೇರೆಗೆ ಲಿಂಗತ್ವ ಅಲ್ಪಸಂಖ್ಯಾತರನ್ನು ದಾಖಲಾತಿ ಮಾಡಿ ಕೊಳ್ಳಲು ಕ್ರಮವಹಿಸಬೇಕು. ಲಿಂಗತ್ವ ಅಲ್ಪಸಂಖ್ಯಾತ ಮಕ್ಕ ಳಿಗೆ ವಿದ್ಯಾರ್ಥಿ ವೇತನ ನೀಡಲು ಯೋಜನೆ, ಲಿಂಗತ್ವ ಅಲ್ಪ ಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ತರಬೇತಿ ನೀಡುವುದು, ಆರೋಗ್ಯ, ಉದ್ಯೋಗ ಮತ್ತು ಕೌಶಲ್ಯ ಅಭಿ ವೃದ್ಧಿ ತರಬೇತಿ, ವಸತಿ ಮತ್ತು ಮೂಲಭೂತ ಸೌಕರ್ಯ, ಲಿಂಗತ್ವ ಅಲ್ಪಸಂಖ್ಯೆತರ ಕ್ಷೇಮಾಭಿವೃದ್ಧಿ ಬೋರ್ಡ್ ಸ್ಥಾಪಿಸುವುದು, ಸಾಮಾಜಿಕ ವಿಷಯಗಳಿಗೆ, ಹಾಲಿ ಇರುವ ಸರಕಾರಿ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಲಿಂಗತ್ವ ಅಲ್ಪಸಂಖ್ಯಾತರಿಗೆ ವಿಸ್ತರಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ಸಮೀಕ್ಷೆ ನಡೆಸಿದ ಸಮಯದಲ್ಲಿ 2025-26ನೇ ಸಾಲಿನಲ್ಲಿ ನಡೆದ ಸಮೀಕ್ಷೆಯಿಂದ ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟ 10,250 ಜನ ಲಿಂಗತ್ವ ಅಲ್ಪಸಂಖ್ಯಾತರು, 18 ವರ್ಷದೊಳಗಿನ 115 ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳು ಒಟ್ಟು 10365 ಲಿಂಗತ್ವ ಅಲ್ಪಸಂಖ್ಯಾತರು ಇರುವುದು ಬೆಳಕಿಗೆ ಬಂದಿದೆ. ಈ ಸಮೀಕ್ಷೆಯಲ್ಲಿ ಸಾಮಾಜಿಕ ಸ್ಥಿತಿಗತಿ, ಶೈಕ್ಷಣಿಕ ಮಾಹಿತಿ, ವಾಸ ಸ್ಥಳ, ವಲಸೆ ಮಾಹಿತಿ, ಕುಟುಂಬದವರಿಂದ ಸ್ವೀಕಾರ ಹಾಗೂ ಕುಟುಂಬದ ಮೇಲಿನ ಅವಲಂಬನೆ ಮಾಹಿತಿ, ಉದ್ಯೋಗ, ಆದಾಯದ ಮಾಹಿತಿ, ಸರಕಾರಿ ಸೌಲಭ್ಯ ಪಡೆದಿರುವ ಮಾಹಿತಿ, ಮನೆ, ನಿವೇಶನ, ಕೃಷಿ ಭೂಮಿ ಹೊಂದಿರುವ ಮಾಹಿತಿ, ಅವರ ದೃಢೀಕರಣಕ್ಕಾಗಿ ಶಸ್ತ್ರ ಚಿಕಿತ್ಸೆಗೊಳಗಾದ ಮಾಹಿತಿ, ಆರೋಗ್ಯದ ಸ್ಥಿತಿಗತಿ ಮಾಹಿತಿ, ಕೌಶ್ಯಲ ತರಬೇತಿ ಮಾಹಿತಿ, ವಾಸದ ಮನೆಗಳು ಹಾಗೂ ಮೂಲಭೂತ ಸೌಕರ್ಯಗಳ ಮಾಹಿತಿಯನ್ನು ಕಲೆಹಾಕಲಾಗಿದೆ.

ಹೆಚ್ಚು ಲಿಂಗತ್ವ ಅಲ್ಪಸಂಖ್ಯಾತರಿರುವ ಜಿಲ್ಲೆಗಳು

ಜಿಲ್ಲೆ	ಸಂಖ್ಯೆ
ವಿಜಯಪುರ	1,428
ಚಿಕ್ಕಬಳ್ಳಾಪುರ	1,252
ಬೆಂಗಳೂರು ನಗರ	757
ಕೋಲಾರ	638
ಬೆಳಗಾವಿ	618

ಸಮೀಕ್ಷೆಯ ಉದ್ದೇಶವೇನು?: ಲಿಂಗತ್ವ ಅಲ್ಪಸಂಖ್ಯಾತರ ಎಲ್ಲಾ ಪ್ರವರ್ಗಗಳು ಎದುರಿಸುವ ಸಮಸ್ಯೆಗಳಾದ ಭಯ, ಅವಮಾನ, ಲಿಂಗ ತಾರತಮ್ಯತೆ, ಸಾಮಾಜಿಕ ತಾರತಮ್ಯ, ಖಿನ್ನತೆ, ಆತ್ಮಹತ್ಯಾ ಪ್ರವೃತ್ತಿ ಇದರಿಂದ ಇವರನ್ನು ಹೊರತರಲು, ಲಿಂಗತ್ವ ಅಲ್ಪಸಂಖ್ಯಾತರು ಕಿರುಕುಳಕ್ಕೆ ಒಳಗಾಗಿದ್ದು ಸಮಾಜದಿಂದ ದೂರ ಉಳಿದಿದ್ದು, ಸಮಾಜದಲ್ಲಿ ಇವರಿಗೆ ನೆಲೆ ಕಲ್ಪಿಸುವುದು ಮೂಲ ಉದ್ದೇಶವಾಗಿದೆ. ಈ ಸಮುದಾಯದವರನ್ನು ಮುಖ್ಯವಾಹಿನಿಗೆ ತರಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಮೂಲಹಂತದ ಸಮೀಕ್ಷೆಯನ್ನು ಕೈಗೊಳ್ಳಬೇಕಾಗಿದೆ.

ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿಯನ್ನು ಒದಗಿಸಲು ಈ ಸಮುದಾಯದ ಜನಸಂಖ್ಯೆ, ಶೈಕ್ಷಣಿಕ ಮಟ್ಟದ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಮಾಹಿತಿ, ಸಾಮಾಜಿಕ ನ್ಯಾಯ ಸ್ಥಾಪನೆ ಹಾಗೂ ಸಬಲೀಕರಣ ಬೇಕಿರುವ ಕ್ರಮ ಹಾಗೂ ದತ್ತಾಂಶವನ್ನು ಪಡೆಯಲು ಈ ಸಮೀಕ್ಷೆ ನಡೆಸಲಾಗಿತ್ತು.

ರಾಜ್ಯದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿಗತಿ ಅರಿಯಲು, ಪುನರ್‌ವಸತಿ ಕಲ್ಪಿಸಲು ಮತ್ತು ಸರಕಾರದ ಸೌಲಭ್ಯಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಅವರ ನಿಖರ ಮಾಹಿತಿ ಸಂಗ್ರಹಿಸುವುದಕ್ಕಾಗಿ ಮೂಲಹಂತದ ಸಮೀಕ್ಷೆ ನಡೆಸಲಾಗಿತ್ತು. ಈಗ ಬಂದಿರುವ ವರದಿಯನ್ನು ಆಧರಿಸಿ ಸರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಿದೆ.

- ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಜೈಲು ಹಕ್ಕಿಗಳಿಗೆ ಮನೆ ಊಟ, ಹೊದಿಕೆಗೆ ಬ್ರೇಕ್

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳ ಹಿತದೃಷ್ಟಿ ಹಾಗೂ ಜೈಲುಗಳ ಭದ್ರತೆಯ ದೃಷ್ಟಿಯಿಂದ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು ಮಹತ್ವದ ಸುತ್ತೋಲೆಯೊಂದನ್ನು ಹೊರಡಿಸಿದೆ.

ಇನ್ನು ಮುಂದೆ ಕೈದಿಗಳಿಗೆ ಖಾಸಗಿ ಮೂಲಗಳಿಂದ ಅಥವಾ ಮನೆಯಿಂದ ತರುವ ಸಿದ್ಧ ಆಹಾರ ಹಾಗೂ ಹಾಸಿಗೆ-ಹೊದಿಕೆ ಪಡೆಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ನಿಯಮವು ರಾಜ್ಯದ ಎಲ್ಲಾ ಕೇಂದ್ರ, ಜಿಲ್ಲಾ ಹಾಗೂ ತಾಲೂಕು ಕಾರಾಗೃಹಗಳಿಗೆ ಅನ್ವಯವಾಗಲಿದೆ.

ಮನೆಯವರಿಂದ ಅಥವಾ ಸಂದರ್ಶಕರಿಂದ ಶಿಕ್ಷಿತ ಕೈದಿಗಳು ಯಾವುದೇ ರೀತಿಯ ತಯಾರಿಸಿದ ಆಹಾರ ಸ್ವೀಕರಿಸುವಂತಿಲ್ಲ. ಕೇವಲ ಬಾಳೆಹಣ್ಣು, ಸೇಬು, ಮಾವು, ಪೇರಲೆ ಮತ್ತು ಚಿಕ್ಕೂ (ಸಪೋಟ) ಹಣ್ಣುಗಳನ್ನು ಮಾತ್ರ ತರಲು ಅವಕಾಶ ನೀಡಲಾಗಿದೆ. ಅದು ಕೂಡ ವಾರಕ್ಕೆ ಒಮ್ಮೆ, ಸಂದರ್ಶನದ ಸಮಯದಲ್ಲಿ ಗರಿಷ್ಠ 1 ಕೆ.ಜಿ.ಯಷ್ಟು ಮಾತ್ರ ನೀಡಲು ಅನುಮತಿ ನೀಡಲಾಗಿದೆ ಎಂದು ಇಲಾಖೆಯ ಮಹಾನಿರ್ದೇಶಕ ಅಲೋಕ್ ಕುಮಾರ್ ಅವರು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಜೈಲಿನಲ್ಲಿರುವ ಕೈದಿಗಳಿಗೆ ಇಲಾಖೆಯ ನಿಯಮಾವಳಿಗಳ ಪ್ರಕಾರವೇ ಹಾಸಿಗೆ, ದಿಂಬು ಹಾಗೂ ಹೊದಿಕೆಗಳನ್ನು ನೀಡಲಾಗುತ್ತದೆ. ಇನ್ನು ಮುಂದೆ ಖಾಸಗಿಯಾಗಿ ಮನೆಯಿಂದ ಹಾಸಿಗೆ ಅಥವಾ ಬೆಡ್‌ಶೀಟ್‌ಗಳನ್ನು ತರುವಂತಿಲ್ಲ. ಇನ್ನು ಬಟ್ಟೆಗಳ ವಿಚಾರಕ್ಕೆ ಬಂದರೆ, ಜೈಲಿನ ಸಮವಸ್ತ್ರವನ್ನೇ ಧರಿಸುವುದು ಕಡ್ಡಾಯ. ಆದರೆ, ಪ್ರವೇಶದ ಸಮಯದಲ್ಲಿ ಒಂದು ಜತೆ ಹೊರ ಉಡುಪು ಹಾಗೂ ಮೂರು ಜತೆ ಒಳ ಉಡುಪುಗಳನ್ನು ಇಟ್ಟುಕೊಳ್ಳಲು ಅವಕಾಶವಿದೆ. ಕೋರ್ಟ್‌ಗೆ ಹಾಜರುಪಡಿಸುವಾಗ ಅಥವಾ ಸ್ಥಳಾಂತರದ ವೇಳೆ ಮಾತ್ರ ಅಧಿಕಾರಿಗಳ ಅನುಮತಿ ಮೇರೆಗೆ ಖಾಸಗಿ ಬಟ್ಟೆ ಬಳಸಬಹುದಾಗಿದೆ.

ಅಕ್ರಮ ತಡೆಗೆ ಕ್ರಮ

ಜೈಲುಗಳಲ್ಲಿ ಮಾದಕ ವಸ್ತುಗಳ ಸಾಗಾಟ ತಡೆಗಟ್ಟಲು, ಶಿಸ್ತು ಕಾಪಾ ಡಲು ಮತ್ತು ನೈರ್ಮಲ್ಯದ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಬಟ್ಟೆ ಅಥವಾ ವಸ್ತುಗಳು ಕಂಡುಬಂದಲ್ಲಿ ಅವುಗಳನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು. ಅನಾರೋಗ್ಯದ ಕಾರಣದಿಂದ ಯಾರಿಗಾದರೂ ವಿನಾಯಿತಿ ಬೇಕಿದ್ದರೆ, ಜೈಲು ಅಧೀಕ್ಷಕರು ವೈದ್ಯಕೀಯ ವರದಿಗಳ ಆಧಾರದ ಮೇಲೆ ಲಿಖಿತ ಕಾರಣ ನೀಡಿ ಮಾತ್ರ ಅನುಮತಿ ನೀಡಲು ಅವಕಾಶವಿದೆ. ಈ ನಿಯಮಗಳು ತಕ್ಷಣದಿಂದಲೇ ಜಾರಿಗೆ ಬರಲಿದೆ.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ಸಂಖ್ಯೆ. 801/2025

ಅರ್ಜಿದಾರರು : 1. ಗಿರಿಗೌಡ ಬಿನ್ ಲೇಟ್ ನಾರಾಯಣಗೌಡ ವಯಸ್ಸು ಸುಮಾರು 72 ವರ್ಷಗಳು, ವಾಸ: ಬಿಳಿದಾಳೆ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು : 1. ತಹಶೀಲ್ದಾರ್ ರವರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲೂಕು, ಕನಕಪುರ 2. ಗ್ರಾಮಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಂದೆ, 5 ರಿಂದ 7ನೇ ಅರ್ಜಿದಾರರ ತಾತನವರಾದ ನಾರಾಯಣಗೌಡ ಬಿನ್ ಲೇಟ್ ಮುನಿತಿಮ್ಮ ರವರು ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಬಿಳಿದಾಳೆ ಗ್ರಾಮದಲ್ಲಿರುವ ದಿನಾಂಕ 20.01.1991 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28.03.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದು ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು.
ಕೆ. ವಿ.ಮಹದೇವಯ್ಯ ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/01/2026

PUBLIC NOTICE

The public are hereby notified that my client **SMT. MANJULA R,** D/o S Ramaiah, W/o Muniraju C, Aged about 55 years, Residing at No.1, S Bingipura Kachanaikanahalli, Hulimangala post Jigani Hobli, Bangalore-560105 is owner of the property bearing in Site No.28, property No.182, katha No.182/2B, situated at S Bingipura Village, Jigani Hobli, Anekal Taluk, Bangalore Urban District, totally measuring 4400 sq.ft., My client have lost the release deed document No.JGN-1-07578/2019-2020, stored in CD No.JGND807 Book I, dated:20-1-2020 registered before the sub registrar, Jigani, Bangalore, while misplaced in the house at S Bingipura, Jigani, Bangalore In spite of my client's best efforts he could not able to trace out the same. In this regard my client has given a police complaint through website to Crime Branch Bangalore rural Police, Lost Report No.2025653/2025 dated 24-01-2026.

If any persons found the above said Document, please inform/ handover to below mentioned address or to my client ***within 7 days*** from the date of this publication. If any persons misuse the said document, he or she will be prosecuted by my client.

A. VIJIKUMAR, Advocate
M/s. Next Gen Legal Services
No.13/154, 2nd Floor, 1st Cross, 5th Main, Shankara Mutt Main Road, Chamarajpet, Bangalore-560 018
Phone: 9845309040, 9945309040

PUBLIC NOTICE

My Client, **RAJESH KUMAR MEHTA,** No. FF 8, Atria Villa, Near Dattatreya Temple, Vyalikaval, Bengaluru-03, has lost or misplaced the following documents:-

[1] Original Sale deed copy Khaneshmari, No.726/1, Site No.M, E-Katha No.150200102600120379 Sy No. 56/1, at Attibele Village, Anekal Taluk Property No.726/1M document No.2681/18-19 dated 28-07-2018 in the Sub-registered in Attibele Bangalore Rural.

[2] Document (Duplicate) N0.954/2015-16, Book No.1, Attibele Sub-registered Bangalore Rural.

SCHEDULE: All that piece and parcel of Immovable property bearing Khaneshmari No. 726/1, Site No.M, E-Katha No.1502001026001- 20379, property No.726/1M, Presently Attibele Municipal Katha Assessment No.1385/726/1M, measuring East to West 30 feet (9.14 Meter) North to South 49 feet(12.19 Meter) totally measuring 1200 Sq feet(111.48 Sq Meter) carved out of converted Survey No.56/1, Vide its Order ALN.49/65/66, Dated 20-10-1967, Situated at Attibele Village, Attibele Grama Panchayathi, Attibele Hobli, Anekal Taluk, Bangalore District and bounded on: **East by :** Site No.N (726/1N), **West by :** Site No. L (726/1L), **North by :** Site No.F (726/1E & F), **South by :** Road, above documents not able to trace despite of her best efforts and she has lodged the police above documents are untraceable despite of the best efforts and police complaints have been lodged on **16-01-2026 Lost report no 2011591/ 2026 and on 19-01-2026 Lost report No.2016273/ 2026 respectively.**

If the above said documents are found by anybody please hand over to above address or near by Police Station. Contact No. 9945767999

PRANAY SHARMA.Y, Advocate
No.102, Krishna Prasad Apartment Dattatreya Temple Road, Pipeline Main Road Malleshwaram, Bengaluru-03, Mob: 8553647502
Email: Adv.pranaysharma@gmail.com

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ಸಂಖ್ಯೆ. 800/2025

ಅರ್ಜಿದಾರರು : 1. ಗಿರಿಗೌಡ ಬಿನ್ ಲೇಟ್ ನಾರಾಯಣಗೌಡ ವಯಸ್ಸು ಸುಮಾರು 72 ವರ್ಷಗಳು, ವಾಸ: ಬಿಳಿದಾಳೆ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು : 1. ತಹಶೀಲ್ದಾರ್ ರವರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲೂಕು, ಕನಕಪುರ 2. ಗ್ರಾಮಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ [illegible]

ಅರ್ಜಿದಾರರ ಪರ ವಕೀಲರು.
ಕೆ. ವಿ.ಮಹದೇವಯ್ಯ ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/01/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ
ಸಿ.ಮಿಸ್.ನಂ. 850/2025

ಶ್ರೀಮತಿ ನಿಂಗಮ್ಮ ಬಿನ್. ಲೇಟ್ ಲಿಂಗೇಗೌಡ, ವಯಸ್ಸು 70 ವರ್ಷ, ವಾಸ : ಕೊಟ್ಟಗಾಳು ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು:

..**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಟ್ಟಗಾಳು ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

..**ಎದುರುದಾರರು**

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಾಯಿ ಮತ್ತು 6ನೇ ಅರ್ಜಿದಾರರ ಅತ್ತೆಯವರಾದ ಶ್ರೀಮತಿ ನಿಂಗಮ್ಮ ಕೋಂ ಲೇಟ್ ಲಿಂಗೇಗೌಡ ರವರು ದಿನಾಂಕ: 29.07.2018 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಟ್ಟಗಾಳು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 10.02.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 22ನೇ ಜನವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 22/01/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ
ಸಿ.ಮಿಸ್.ನಂ. 851/2025

1. ಶ್ರೀಮತಿ ಸಾವಿತ್ರಮ್ಮ ಬಿನ್. ಲೇಟ್ ಬಸವರಾಜು ವಯಸ್ಸು 44 ವರ್ಷ, ವಾಸ : ಗೊಲ್ಲಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

...**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ಗೊಲ್ಲಹಳ್ಳಿ ಸರ್ಕಲ್, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...**ಎದುರುದಾರರು**

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ಸಿದ್ದಪ್ಪ ಬಿನ್ ಲೇಟ್ ಲಿಂಗಪ್ಪ ರವರು ದಿನಾಂಕ : 25.09.1974 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಗೊಲ್ಲಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 11/02/2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 23ನೇ ಜನವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/01/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ
ಸಿ.ಮಿಸ್.ನಂ. 903/2025

ಶ್ರೀ ಮುನಿರಾಜು, ಬಿನ್. ಲೇಟ್ ಮಾರಯ್ಯ ವಯಸ್ಸು 50 ವರ್ಷ, ವಾಸ : ಮುನೇಶ್ವರದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು:

...**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಮುನೇಶ್ವರದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

...**ಎದುರುದಾರರು**

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ ಲಕ್ಕಮ್ಮ ಕೋಂ ಲೇಟ್ ಮಾರಯ್ಯ ರವರು ದಿನಾಂಕ: 11.07.2014 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮುನೇಶ್ವರದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 12.02.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 22ನೇ ಜನವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 22/01/2026

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ: 927/2025

ಅರ್ಜಿದಾರರು: 1. ಶ್ರೀಮತಿ, ಜಯಮ್ಮ ಕೋಂ ಲೇಟ್. ಪುಟ್ಟಸ್ವಾಮಿ. ಸಿ., ವಾಸ : ಮನೆ ನಂ.32, ಎ ಮುಖ್ಯ ರಸ್ತೆ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಹನುಮಂತ ನಗರ ಬೆಂಗಳೂರು ದಕ್ಷಿಣ, ಬೆಂಗಳೂರು-560050. ಮತ್ತು ಇತರರು

V/S

ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ಪ್ರಮಾಣ ನೋಂದಣ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, 2. ಗ್ರಾಮ ಲೇಕ್ಕಾಧಿಕಾರಿಗಳು, ಮುರುಕಣಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ) ಬೆಂಗಳೂರು ದಕ್ಷಿಣ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 2 ಮತ್ತು 4 ಮತ್ತು 6 ರಿಂದ 9ನೇ ಅರ್ಜಿದಾರರ ತಂದೆ ಮತ್ತು 1, 3 ಮತ್ತು 5ನೇ ಅರ್ಜಿದಾರರ ಮಾವನವರಾದ "ದಿವಂಗತ ದುರ್ಗೇಗೌಡ ಬಿನ್ ಲೇಟ್. ಮಾರೇಗೌಡ ರವರು ಮುರುಕಣಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ) ಬೆಂಗಳೂರು ದಕ್ಷಿಣ ಜಿಲ್ಲೆ ಯಲ್ಲಿ ದಿನಾಂಕ: 25/07/1977 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 13-02-2026 ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

2026 ನೇ ಜನವರಿ 22ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಶಿವಾನಂದ. ವಿ. ಇ., ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 22-01-2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ
ಸಿ.ಮಿಸ್.ನಂ. 849/2025

ಶ್ರೀಮತಿ ನಿಂಗಮ್ಮ ಬಿನ್. ಲೇಟ್ ಲಿಂಗೇಗೌಡ, ವಯಸ್ಸು 70 ವರ್ಷ, ವಾಸ : ಕೊಟ್ಟಗಾಳು ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು:

..**ಅರ್ಜಿದಾರರು**

ವಿರುದ್ಧ

1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಟ್ಟಗಾಳು ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

..**ಎದುರುದಾರರು**

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಂದೆ ಮತ್ತು 6ನೇ ಅರ್ಜಿದಾರರ ಮಾವನವರಾದ ಶ್ರೀ ಲಿಂಗೇಗೌಡ ಬಿನ್ ಲೇಟ್ ಬಸವೇಗೌಡ ರವರು ದಿನಾಂಕ: 18.11.1994 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಟ್ಟಗಾಳು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 10.02.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 22ನೇ ಜನವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 22/01/2026

ಹಿಟ್ ಆ್ಯಂಡ್ ರನ್‌ಗೆ ಡೆಲಿವರಿ ಬಾಯ್ ಬಲಿ

ಬೆಂಗಳೂರು: ಹಿಟ್ ಅಂಡ್ ರನ್‌ಗೆ ಡೆಲಿವರಿ ಬಾಯ್ ಬಲಿಯಾಗಿರುವ ಘಟನೆ ಕೆ.ಆರ್. ಪುರಂನ ಭಟ್ಟರಹಳ್ಳಿ ಸಿಗ್ನಲ್ ಬಳಿ ನಡೆದಿದೆ. ನೇಪಾಳ ಮೂಲದ ಸುರೇಂದರ್ ಬಹದ್ದೂರ್ (38) ಮೃತ ದುರ್ದೈವಿ. ಬೆಳಗ್ಗೆ 3:30ರ ಸುಮಾರಿಗೆ ಅಪಘಾತ ನಡೆದಿದೆ. ಕಳೆದ ಮೂರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಸುರೇಂದರ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದು, ಡೆಲಿವರಿ ಕೊಡಲು ತೆರಳುತ್ತಿದ್ದ ವೇಳೆ ಕಾರೊಂದು ಸ್ಕೂಟಿಗೆ ಗುದ್ದಿ ಪರಾರಿಯಾಗಿದೆ. ಅಪಘಾತದ ಪರಿಣಾಮ ಸುರೇಂದರ್ ಮೃತಪಟ್ಟಿದ್ದಾರೆ. ಹಿಟ್ ಅಂಡ್ ರನ್ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಘಟನೆ ಸಂಬಂಧ ಕೆ.ಆರ್. ಪುರಂ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಪಘಾತ ಎಸಗಿ ಪರಾರಿಯಾಗಿರುವ ಕಾರು ಚಾಲಕನಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಪೇದೆ ಸೆರೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೇಬಲ್ ಕಾಲೇಜು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಬೆಳಕಿಗೆ ಬಂದಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ತವ್ಯದಲ್ಲಿದ್ದ ವೇಳೆ ಆರ್.ಟಿ.ನಗರ ಠಾಣೆಯ ಕಾನ್‌ಸ್ಟೇಬಲ್ ಯಮುನಾ ನಾಯಕ್ ಎನ್ನುವಾತ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಲಾಗಿದ್ದು, ಸದ್ಯ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಉಪ್ಪಾರಪೇಟೆ ಪೊಲೀಸರು, ಯಮುನಾ ನಾಯಕ್ ನನ್ನು ಬಂಧಿಸಿದ್ದಾರೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ವೇಳೆ ಯಮುನಾ ನಾಯಕ್, ಪ್ರಥಮ ಪಿಯು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದು, ಈ ಸಂಬಂಧ ವಿದ್ಯಾರ್ಥಿನಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ. ಈ ದೂರಿನ ಮೇರೆಗೆ ಉಪ್ಪಾರಪೇಟೆ ಪೊಲೀಸರು, ಪೋಕ್ಸೋ ಪ್ರಕರಣ ದಾಖಲಿಸಿಕೊಂಡು ಆರೋಪಿ ಪೇದೆ ಯಮುನಾ ನಾಯಕ್ ನನ್ನು ಬಂಧಿಸಿದ್ದಾರೆ.

ಮಗನ ಅನೈತಿಕ ಸಂಬಂಧಕ್ಕೆ ತಾಯಿ ಸಹಕಾರ: ನವವಿವಾಹಿತೆ ಆರೋಪ

ಬೆಂಗಳೂರು: ನವವಿವಾಹಿತರ ನಡುವಿನ ವೈವಾಹಿಕ ಕಲಹ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಪತ್ನಿಯ ಕುಟುಂಬಸ್ಥರಿಂದ ಪತಿ ಹಲ್ಲೆಗೊಳಗಾದ ಘಟನೆ ಆನೇಕಲ್‌ನ ಅತ್ತಿಬೆಲೆಯಲ್ಲಿ ನಡೆದಿದೆ.

ಪತಿ ಆರೋಪಕ್ಕೆ ಪ್ರತ್ಯಾರೋಪ ಮಾಡಿರುವ ಪತ್ನಿ, ಆತನಿಗೆ ಅನೈತಿಕ ಸಂಬಂಧವಿದ್ದು, ಅವನ ತಾಯಿಯೂ ಸಹಕರಿಸಿರುವುದಾಗಿ ಆರೋಪಿಸಿದ್ದಾಳೆ. ಅಂತರ್ಜಾತಿ ವಿವಾಹವಾಗಿದ್ದ ಅಂಬರೀಶ್ ಮತ್ತು ನಂದಿನಿ ನಡುವೆ ಮದುವೆಯಾಗಿ ತಿಂಗಳೊಳಗೇ ವೈಮನಸ್ಸು ಉಂಟಾಗಿತ್ತು. ಈ ಹಿನ್ನೆಲೆ ನವವಿವಾಹಿತೆಯ ಮಾವ ಸಂಪಂಗಿ, ಅಂಬರೀಶ್ ಮೇಲೆ ಹಲ್ಲೆ ನಡೆಸಿದ್ದ. ನಂತರ ನಂದಿನಿ ಮತ್ತು ಆಕೆಯ ಕುಟುಂಬಸ್ಥರು ಸೇರಿ ಅಂಬರೀಶ್‌ನೊಡನೆ ಜಗಳಕ್ಕಿಳಿದಿದ್ದರು. ಅದಲ್ಲದೆ ಆತನ ಬಳಿಯಿದ್ದ ಮೊಬೈಲ್, ಚೈನ್, ರಿಂಗ್ ಕಸಿದುಕೊಂಡು 4 ಲಕ್ಷ ರು.ಗೆ ಬೇಡಿಕೆ ಇಟ್ಟು, 15 ಸಾವಿರ ರು. ಹಣ ಕಿತ್ತುಕೊಂಡು ಕೊಲೆ ಬೆದರಿಕೆ ಹಾಕಿ ದ್ದಾರೆಂದು ಆತ ಆರೋಪಿಸಿದ್ದ. ಹಲ್ಲೆಯಿಂದ ಗಂಭೀಯವಾಗಿ ಗಾಯಗೊಂಡಿದ್ದ ಅಂಬರೀಶ್ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ.

ಪತ್ನಿಯಿದ್ದರೂ ಪ್ರೇಯಸಿಯರನ್ನರಸಿ ಹೋಗಿದ್ದ ಪತಿ: ಇದಕ್ಕೆ ಪ್ರತಿಯಾಗಿ ನವವಿವಾಹಿತೆ ನಂದಿನಿ ತನ್ನ ಪತಿ ಮತ್ತು ಅತ್ತೆ ವಿರುದ್ಧ ಗಂಭೀರ ಆರೋಪಗಳನ್ನು ಹೊರಿಸಿದ್ದಾಳೆ. ಮದುವೆಗೆ ಮೊದಲು ಹಾಗೂ ಮದುವೆಯ ನಂತರವೂ ಪತಿ ಮತ್ತೊಬ್ಬ ಯುವತಿಯೊಂದಿಗೆ ಪ್ರೇಮ ಸಂಬಂಧ ಹೊಂದಿದ್ದು, ತನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದ ಎಂದು ನಂದಿನಿ ಆರೋಪಿಸಿದ್ದಾಳೆ. ಪತಿ ಕುಡಿದು ಮನೆಗೆ ಬಂದು ನಿತ್ಯ ಹಲ್ಲೆ ನಡೆಸುತ್ತಿದ್ದನಲ್ಲದೆ, ಅತ್ತೆಯೂ ಆತನೊಂದಿಗೆ ಸೇರಿ ಕಿರುಕುಳ ನೀಡುತ್ತಿದ್ದರೆಂದು ನಂದಿನಿ ಹೇಳಿದ್ದಾಳೆ. ಪತಿಯ ರಾಸಲೀಲೆಗೆ ಅತ್ತೆಯೂ ಸಾಥ್ ಕೊಟ್ಟಿದ್ದಾರೆಂದು ಆರೋಪಿಸಿರುವ ನಂದಿನಿ, ತನ್ನ ವಿವಾಹ ನಿಶ್ಚಿತಾರ್ಥ ವೇಳೆ ನಂದಿನಿ ಧರಿಸಿದ್ದ ಸೀರೆಯನ್ನು ಪತಿಯ ತಾಯಿಯೇ ಐರನ್ ಮಾಡಿ ಮಗನ ಮೂಲಕ ಅವನ ಪ್ರೇಯಸಿಗೆ ಗಿಫ್ಟ್ ಕೊಟ್ಟಿದ್ದಾರೆಂದು ಹೇಳಿದ್ದಾಳೆ. ಮದುವೆಗೆ ಮೊದಲು ತನ್ನ ಜಾತಿ ಕುರಿತು ಪತಿ ಮತ್ತು ಅತ್ತೆಗೆ ಸಂಪೂರ್ಣವಾಗಿ ತಿಳಿದಿದ್ದರೂ, ಮದುವೆಯ ಬಳಿಕ ಪದೇ ಪದೇ ಜಾತಿ ನಿಂದನೆ ಮಾಡಿ ಕಿರುಕುಳ ನೀಡಲಾಗುತ್ತಿತ್ತು ಎಂದು ನಂದಿನಿ ದೂರಿದ್ದಾಳೆ.

ರೈಲು ಡಿಕ್ಕಿಯಾಗಿ ಬಾಲಕ ಸಾವು

ಬೆಂಗಳೂರು: ಮನೆಯಲ್ಲಿ ಸಾಕಿದ್ದ ಪ್ರೀತಿಯ ಶ್ವಾನ ಎರಡು ದಿನಗಳಿಂದ ನಾಪತ್ತೆಯಾಗಿದ್ದ ಹಿನ್ನೆಲೆ ನಾಯಿ ಹುಡುಕಲು ಹೋಗಿದ್ದ ಬಾಲಕನಿಗೆ ರೈಲು ಡಿಕ್ಕಿಯಾಗಿ ಸಾವನಪ್ಪಿರುವ ಘಟನೆ ಬೆಂಗಳೂರು ಹೊರವಲಯ ನೆಲಮಂಗಲದ ಮುದ್ದಲಿಂಗನಹಳ್ಳಿ ಗೇಟ್ ಬಳಿ ಸಂಭವಿಸಿದೆ. ಯೋಗೇಂದ್ರ(16) ಮೃತ ಬಾಲಕ. ಶ್ರೀನಿವಾಸ್ ಮತ್ತು ಚನ್ನಮ್ಮ ದಂಪತಿ ಮಗ ಯೋಗೇಂದ್ರ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ಎರಡು ದಿನಗಳ ಹಿಂದೆ ಸಾಕು ನಾಯಿ ಕಾಣೆಯಾಗಿತ್ತು. ನಾಯಿ ಕಾಣೆಯಾದ ಹಿನ್ನೆಲೆ ಮನನೊಂದಿದ್ದ ಯೋಗೇಂದ್ರ ಬೆಳಗ್ಗೆ ತಂದೆ-ತಾಯಿಗೆ ತಿಳಿಸದೆ ಶ್ವಾನವನ್ನು ಹುಡುಕಲು ತೆರಳಿದ್ದ ವೇಳೆ ರೈಲು ಡಿಕ್ಕಿಯಾಗಿ ಮೃತಪಟ್ಟಿದ್ದಾನೆ. ಇನ್ನು ಯೋಗೇಂದ್ರ ಲಾಂಗ್ ಜಂಪ್ ಕ್ರೀಡಾ ಪಟುವಾಗಿದ್ದ. ಶಾಲಾ ಹಂತದಲ್ಲಿ ಹಲವಾರು ಪ್ರಶಸ್ತಿ ಗಳಿಸಿದ್ದು, ಉತ್ತಮ ವಿದ್ಯಾಭ್ಯಾಸದ ಜತೆಗೆ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ಘಟನಾ ಸ್ಥಳಕ್ಕೆ ಯಶವಂತಪುರ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಪೋಷಕರಿಗೆ ಮೃತದೇಹ ಹಸ್ತಾಂತರ ಮಾಡಲಾಗಿದೆ. ಶವಗಾರದ ಬಳಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಘಟನೆ ಸಂಬಂಧ ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಬಾಂಗ್ಲಾ ವಲಸಿಗರ ಮಾಹಿತಿ ನೀಡುತ್ತಿದ್ದ ವ್ಯಕ್ತಿಗೆ ಪೊಲೀಸರ ಕಿರುಕುಳ

ವಿಧಾನಸೌಧ ಮುಂದೆ ವಿಷ ಸೇವಿಸಿದ ವ್ಯಕ್ತಿ

ಬೆಂಗಳೂರು: ದೇಶದ ಭದ್ರತೆಯ ದೃಷ್ಟಿಯಿಂದ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ವಲಸಿಗರ ಬಗ್ಗೆ ಮಾಹಿತಿ ನೀಡಿದ ವ್ಯಕ್ತಿಯೊಬ್ಬರು, ಇದೀಗ ಪೊಲೀಸರಿಂದಲೇ ಕಿರುಕುಳ ಅನುಭವಿಸುತ್ತಿರುವುದಾಗಿ ಆರೋಪಿಸಿ ವಿಧಾನಸೌಧದ ಮುಂಭಾಗ ಅತೀವ ಮನನೊಂದು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲು ಸಹಕರಿಸಿದ ಡಾ.ನಾಗೇಂದ್ರಪ್ಪ ಎಂಬುವವರು, ಪೊಲೀಸರ ನಡವಳಿಕೆಯಿಂದ ಬೇಸತ್ತು ಅನಿವಾರ್ಯವಾಗಿ ತಮ್ಮ ಜೀವನವನ್ನು ಅಂತ್ಯಗೊಳಿಸಲು ಮುಂದಾದ ಆಘಾತಕಾರಿ ದೃಶ್ಯಕ್ಕೆ ವಿಧಾನಸೌಧದ ಪ್ರವೇಶ ದ್ವಾರ ಸಾಕ್ಷಿಯಾಯಿತು.

ಪೊಲೀಸರ ವಿರುದ್ಧ ಗಂಭೀರ ಆರೋಪ: ನಾಗೇಂದ್ರಪ್ಪ ಅವರ ಹೇಳಿಕೆಯ ಪ್ರಕಾರ, ಪ್ರತಿದಿನ ಸುಮಾರು 20ಕ್ಕೂ ಹೆಚ್ಚು ಪೊಲೀಸರು ಹಾಗೂ ಮೂರು ಪೊಲೀಸ್ ವಾಹನಗಳು ಇವರ ಮನೆಯ ಬಳಿ ಬಂದು ನಿಲ್ಲುತ್ತಿದ್ದವಂತೆ. ಅಷ್ಟೇ ಅಲ್ಲದೆ, ನಾಗೇಂದ್ರಪ್ಪ ಅವರಿಗೆ ದೈಹಿಕವಾಗಿ ಹಲ್ಲೆ ಮಾಡಿ, ಅವರ ಹೆಂಡತಿ ಮತ್ತು ಮಕ್ಕಳಿಗೂ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂಬ ಮಾತುಗಳು ಕೇಳಿಬಂದಿವೆ. 'ಬಾಂಗ್ಲಾದೇಶದವರನ್ನು ಓಡಿಸಲು ಹೋರಾಟ ಮಾಡಿದ್ದೇ ನಾನು ಮಾಡಿದ ತಪ್ಪಾ?' ಎಂದು ಅವರು ಕಣ್ಣೀರಿಡುತ್ತಾ ಪ್ರಶ್ನಿಸಿದ್ದಾರೆ. ನಿರಂತರ ಕಿರುಕುಳದಿಂದ ಬೇಸತ್ತ ನಾಗೇಂದ್ರಪ್ಪ ಅವರು ನ್ಯಾಯ ಕೋರಿ ವಿಧಾನಸೌಧಕ್ಕೆ ಆಗಮಿಸಿದ್ದರು. ಅಲ್ಲಿನ ಪ್ರವೇಶ ದ್ವಾರದ ಬಳಿ ಹಠಾತ್ ಆಗಿ ತಮ್ಮ ಬಳಿ ಇದ್ದ ದ್ರವವನ್ನು ಸೇವಿಸಲು ಮುಂದಾದರು. ಇದನ್ನು ಗಮನಿಸಿದ ಭದ್ರತಾ ಸಿಬ್ಬಂದಿ ತಕ್ಷಣವೇ ಕಾರ್ಯಪ್ರವೃತ್ತರಾಗಿ ಅವರ ಕೈಯಲ್ಲಿದ್ದ ಬಾಟಲಿಯನ್ನು ಕಿತ್ತುಕೊಂಡಿದ್ದಾರೆ. ಕೂಡಲೇ ಅವರನ್ನು ಪೊಲೀಸ್ ವಾಹನದಲ್ಲಿ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸದ್ಯ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಒಬ್ಬ ವ್ಯಕ್ತಿ ಸಾರ್ವಜನಿಕ ಹಿತದೃಷ್ಟಿಯಿಂದ ಮಾಹಿತಿ ನೀಡಿದಾಗ ಅವರಿಗೆ ರಕ್ಷಣೆ ನೀಡಬೇಕಾದ ಪೊಲೀಸರೇ ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ.

ಘಟನೆಯ ಹಿನ್ನೆಲೆ

ಡಾ.ನಾಗೇಂದ್ರಪ್ಪ ಅವರು ಕಳೆದ ಕೆಲವು ಸಮಯದಿಂದ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶದ ವಲಸಿಗರ ಕುರಿತು ಮಾಹಿತಿಯನ್ನು ಕಲೆಹಾಕಿ ಅಧಿಕಾರಿಗಳಿಗೆ ನೀಡುತ್ತಿದ್ದರು. ದೇಶದ ಹಿತದೃಷ್ಟಿಯಿಂದ ತಾವು ಈ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದರು. ಆದರೆ, ಈ ಮಾಹಿತಿ ನೀಡಿದ ನಂತರ ಸೂಲದೇವನಹಳ್ಳಿ ಪೊಲೀಸರಿಂದ ತಮಗೆ ಮತ್ತು ತಮ್ಮ ಕುಟುಂಬಕ್ಕೆ ನಿರಂತರವಾಗಿ ಕಿರುಕುಳ ನೀಡಲಾಗುತ್ತಿದೆ ಎಂದು ನಾಗೇಂದ್ರಪ್ಪ ಗಂಭೀರ ಆರೋಪ ಮಾಡಿದ್ದಾರೆ.

ಮಾಣೆಕ್ ಷಾ ಕವಾಯತು ಮೈದಾನದ ಪಥಸಂಚಲನದಲ್ಲಿ 1,100 ಮಂದಿ ಭಾಗಿ

ಗಣರಾಜ್ಯೋತ್ಸವ: ಸಂಚಾರ ವ್ಯವಸ್ಥೆಯಲ್ಲಿ ಮಾರ್ಪಾಡು

ಬೆಂಗಳೂರು: ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಕಬ್ಬನ್ ರಸ್ತೆಯಲ್ಲಿರುವ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಕವಾಯತು ಮೈದಾನದಲ್ಲಿ ಸೋಮವಾರ ವಿಶೇಷ ಕವಾಯತು ಹಾಗೂ ರಾಜ್ಯಪಾಲರಿಂದ ಧ್ವಜಾರೋಹಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮೈದಾನದ ಒಳಗಡೆ ಮತ್ತು ಸುತ್ತಮುತ್ತಲು ಬಂದೋಬಸ್ತ್ ಹಾಗೂ ಸಂಚಾರ ಮಾರ್ಪಾಡುಗಳನ್ನು ಮಾಡಲಾಗಿದೆ.

ಪಥಸಂಚಲನದಲ್ಲಿ ಆರ್ಮಿ, ಏರ್‌ಫೋರ್ಸ್, ಸಿಆರ್‌ಪಿಎಫ್ ಮಹಿಳಾ, ತಮಿಳುನಾಡು ರಾಜ್ಯ ಪೊಲೀಸ್, ಸ್ಕೌಟ್ಸ್ - ಗೈಡ್ಸ್, ಎನ್‌ಸಿಸಿ, ಸೇವಾದಳ ಹಾಗೂ ವಿವಿಧ ಶಾಲೆಗಳ ಮಕ್ಕಳನ್ನೊಳಗೊಂಡಂತೆ ಒಟ್ಟು 37 ತುಕಡಿಗಳಲ್ಲಿ ಸುಮಾರು 1100 ಮಂದಿ ಭಾಗವಹಿಸಲಿದ್ದಾರೆ. ಶಾಲಾ ಮಕ್ಕಳ ಒಟ್ಟು 2 ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸುಮಾರು 1400 ಮಕ್ಕಳು ಭಾಗವಹಿಸಲಿದ್ದಾರೆ. ಸೋಮವಾರ ಬೆಳಗ್ಗೆ 8:30 ರಿಂದ 10:30ರವರೆಗೆ ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಕಾಮರಾಜರಸ್ತೆ ಜಂಕ್ಷನ್‌ವರೆಗೆ ಎರಡೂ ದಿಕ್ಕುಗಳಲ್ಲಿನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯವಾಗಿ ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಗೆ ಸಂಚರಿಸುವ ವಾಹನಗಳು ನೇರವಾಗಿ ಸಫೀನಾ ಪ್ಲಾಜಾ-ಎಡತಿರುವು ಪಡೆದು ಮೈನ್‌ಗಾರ್ಡ್ ರಸ್ತೆ- ಆಲೀಸ್ ಸರ್ಕಲ್- ಡಿಸ್ಪೆನ್ಸರಿ ರಸ್ತೆ-ಕಾಮರಾಜರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್ ಬಲಕ್ಕೆ ತಿರುವು ಪಡೆದು, ಕಾಮರಾಜ ರಸ್ತೆ- ಕಬ್ಬನ್ ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು, ಕಬ್ಬನ್ ರಸ್ತೆ ಮುಖಾಂತರ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದಾಗಿದೆ. ಕಬ್ಬನ್ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಜಂಕ್ಷನ್‌ನಿಂದ ಬಿ.ಆರ್.ವಿ. ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ಮಣಿಪಾಲ್ ಸೆಂಟರ್ ಬಳಿ ನಿರ್ಬಂಧಿಸಿದ್ದು, ಸದರಿ ವಾಹನಗಳು ವೆಬ್ ಜಂಕ್ಷನ್ ಬಳಿ ಬಲ ತಿರುವು ಪಡೆದು ಎಂ.ಜಿ. ರಸ್ತೆಯ ಮೂಲಕ ಮೆಯೋ ಹಾಲ್, ಕಾವೇರಿ ಎಂಪೋರಿಯಂ, ಅನಿಲ್ ಕುಂಬ್ಳೆ ವೃತ್ತದಲ್ಲಿ ಬಲ ತಿರುವು ಪಡೆದು ಮುಂದೆ ಸಾಗಬಹುದು.

ಅನಿಲ್ ಕುಂಬ್ಳೆ ವೃತ್ತದಿಂದ ಕಬ್ಬನ್ ರಸ್ತೆ ಕಡೆಗೆ ಬರುವ ವಾಹನಗಳು ನೇರವಾಗಿ ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸಾಗಿ, ಬಲಕ್ಕೆ ತಿರುವು ಪಡೆದು-ಇನ್ಫೆಂಟ್ರಿರಸ್ತೆ- ಸಫೀನಾ ಪ್ಲಾಜಾಕ್ಕೆ ಸಾಗಿ ಎಡಕ್ಕೆ ತಿರುವು ಪಡೆದು ಮೈನ್‌ಗಾರ್ಡ್ ರಸ್ತೆ-ಆಲಿ ಸರ್ಕಲ್-ಡಿಸ್ಪೆನ್ಸರಿರಸ್ತೆ- ಕಾಮರಾಜರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್‌ನಿಂದ ಬಲಕ್ಕೆ ತಿರುವು ಪಡೆದು ಕಾಮರಾಜ ರಸ್ತೆ- ಕಬ್ಬನ್ ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು, ಕಬ್ಬನ್ ರಸ್ತೆ ಮುಖಾಂತರ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದಾಗಿದೆ.

ವಿಶೇಷ ಸೂಚನೆಗಳು

- ಮಾಣೆಕ್ ಷಾ ಪರೇಡ್ ಮೈದಾನ ಹಾಗೂ ಸುತ್ತಮುತ್ತ ವಾಹನಗಳ ನಿಲುಗಡೆಗೆ ಸ್ಥಳಾವಕಾಶ ಕೊರತೆ ಇರುವುದರಿಂದ ಹಾಗೂ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಾರ್ವಜನಿಕರು, ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮತ್ತು ಮೆಟ್ರೋ ಸೇವೆ ಬಳಸಬೇಕು.
- ಯಾವುದೇ ಸಹಾಯಕ್ಕಾಗಿ ಪೊಲೀಸರು ಸದಾ ನಿಮ್ಮೊಂದಿಗಿರುತ್ತಾರೆ. ದಯವಿಟ್ಟು ಸ್ಥಳದಲ್ಲಿರುವ ಪೊಲೀಸರನ್ನು ಸಂಪರ್ಕಿಸಿ ಅಥವಾ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಬಹುದಾಗಿದೆ.
- ಭದ್ರತಾ ದೃಷ್ಟಿಯಿಂದ ಪರೇಡ್‌ಗೆ ಬರುವ ಎಲ್ಲಾ ಆಹ್ವಾನಿತರು ಹಾಗೂ ಸಾರ್ವಜನಿಕರು ಮೊಬೈಲ್ ಫೋನ್, ಹೆಲ್ಮೆಟ್, ಕ್ಯಾಮೆರಾ, ರೇಡಿಯೋ, ಕೊಡೆ ಮುಂತಾದ ವಸ್ತುಗಳನ್ನು ತರಬಾರದು.

ವಾಹನ ನಿಲುಗಡೆ ನಿಷಿದ್ಧ ರಸ್ತೆಗಳು

ಸೆಂಟ್ರಲ್ ಸ್ಟ್ರೀಟ್: ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ.
ಕಬ್ಬನ್ ರಸ್ತೆ: ಸಿ.ಟಿ.ಓ ವತ್ತದಿಂದ ಕೆ.ಆರ್. ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್ವರೆಗೆ.
ಎಂ. ಜಿ. ರಸ್ತೆ: ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ.

ಸಮಾಚಾರ ಸಣ್ಣದಲ್ಲ

ಪುಷ್ಪಪ್ರದರ್ಶನದ ಹೂ ಗೊಬ್ಬರಕ್ಕೆ ಬಳಕೆ

ಬೆಂಗಳೂರು: ಈ ಬಾರಿ ಪುಷ್ಪ ಪ್ರದರ್ಶನದಲ್ಲಿ 95ಕ್ಕೂ ಹೆಚ್ಚು ವೈವಿಧ್ಯಮಯ ಹಾಗೂ 35 ಲಕ್ಷಕ್ಕೂ ಹೆಚ್ಚು ಹೂಗಳಿಂದ ಅಲಂಕಾರ ಮಾಡಲಾಗಿದ್ದು, ಪುಷ್ಪ ಪ್ರದರ್ಶನದಲ್ಲಿ ಬಳಸಲಾದ ಹೂವುಗಳನ್ನು ಆ ಬಳಿಕ ಏನು ಮಾಡುತ್ತಾರೆ ಎನ್ನುವುದಕ್ಕೆ ಅಗತ್ಯ ಕ್ರಮಕೈಗೊಳ್ಳಲು ತೋಟಗಾರಿಕೆ ಹೆಚ್ಚುವರಿ ನಿರ್ದೇಶಕ ಎಂ. ಜಗದೀಶ್ ಕ್ರಮ ಕೈಗೊಂಡಿದ್ದಾರೆ. ಈ ಪುಷ್ಪ ಪ್ರದರ್ಶನದಲ್ಲಿ ಬಳಸಲಾಗುವ 35 ಲಕ್ಷ ವೈವಿಧ್ಯಮಯ ಹೂವುಗಳಲ್ಲಿ 23 ಲಕ್ಷ ಹೂವುಗಳು ಕುಂಡಗಳಲ್ಲಿ ಬೆಳೆಯುತ್ತವೆ. ಈ ಕುಂಡಗಳಲ್ಲಿ ಬೆಳೆಯುವ ಹೂವುಗಳಿಂದ ಬೀಜಗಳು ಪಕ್ವವಾದಾಗ, ಅವುಗಳನ್ನು ಕೊಯ್ಲು ಮಾಡಲಾಗುತ್ತದೆ, ನಂತರ ಹೊಸ ಕುಂಡಗಳಲ್ಲಿ ಸಸಿಗಳನ್ನು ಬೆಳೆಯಲಾಗುತ್ತದೆ. ಅಲಂಕಾರದಲ್ಲಿ ಬಳಸುವ ಸುಮಾರು ಒಂಬತ್ತು ಲಕ್ಷ ಹೂವುಗಳನ್ನು ಗೊಬ್ಬರವಾಗಿ ಪರಿವರ್ತಿಸಲಾಗುತ್ತದೆ. ಈ ಗೊಬ್ಬರವನ್ನು ಲಾಲ್‌ಬಾಗ್‌ನಲ್ಲಿಯೇ ಕೃಷಿಗೆ ಬಳಸಲಾಗುತ್ತದೆ ಎಂದು ಹೇಳಿದ್ದಾರೆ. ಈ ಹೂವುಗಳನ್ನು ಲಾಲ್‌ಬಾಗ್‌ನಲ್ಲಿ ನಿರ್ಮಿಸಲಾದ ಹೊಂಡಗಳಲ್ಲಿ ಹಾಕಲಾಗುತ್ತದೆ. ಬಳಿಕ ಈ ಹೂವುಗಳು ಮತ್ತು ಇತರ ಎಲೆಗಳನ್ನು ಗೊಬ್ಬರವಾಗಿ ಪರಿವರ್ತಿಸಲು ಆರರಿಂದ ಏಳು ತಿಂಗಳುಗಳು ಬೇಕಾಗುತ್ತದೆ. ಇದಕ್ಕೆ ಎರೆಹುಳುಗಳನ್ನು ಸೇರಿಸಿ, ಅದನ್ನು ಗೊಬ್ಬರವಾಗಿ ಸಂಸ್ಕರಿಸಲು ಹೊಂಡದಲ್ಲಿ ಸ್ವಲ್ಪ ನೀರನ್ನು ಸೇರಿಸುತ್ತಲೇ ಇರುತ್ತೇವೆ ಎಂದು ಮಾಹಿತಿ ನೀಡಿದ್ದಾರೆ.

ಪಿಎಸ್‌ಐ ನೇಮಕ ಹಗರಣ: ಆಸ್ತಿ ಜಪ್ತಿ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯನ್ನು ಬೆಚ್ಚಿಬೀಳಿಸಿದ್ದ ಪಿಎಸ್‌ಐ (ಪೊಲೀಸ್ ಸಬ್‌ಇನ್ಸ್‌ಪೆಕ್ಟರ್) ನೇಮಕಾತಿ ಅಕ್ರಮ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ), ಪ್ರಕರಣದ ಪ್ರಮುಖ ಆರೋಪಿಗಳಿಗೆ ಬಿಗಿಪಾಶ ಹಾಕಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ, 2002ರ ಅಡಿಯಲ್ಲಿ ಕ್ರಮ ಕೈಗೊಂಡಿರುವ ಇಡಿ ಅಧಿಕಾರಿಗಳು, ಜನವರಿ 23, 2026 ರಂದು ಮಾಜಿ ಎಡಿಜಿಪಿ ಅಮೃತ್ ಪಾಲ್ ಮತ್ತು ಹೆಡ್ ಕಾನ್ಸ್‌ಟೆಬಲ್ ಎಚ್.ಶ್ರೀಧರ್ ಅವರಿಗೆ ಸೇರಿದ ಒಟ್ಟು 1.53 ಕೋಟಿ ರು. ಮೌಲ್ಯದ ಸ್ಥಿರ ಆಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ. 2021-22ನೇ ಸಾಲಿನಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯ 545 ಪಿಎಸ್‌ಐ ಹುದ್ದೆಗಳ ಭರ್ತಿಗಾಗಿ ನಡೆಸಲಾಗಿದ್ದ ಪರೀಕ್ಷೆಯಲ್ಲಿ ಬೃಹತ್ ಮಟ್ಟದ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿತ್ತು. ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಮತ್ತು ಸಿಐಡಿಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧಾರದ ಮೇಲೆ ಇಡಿ ತನ್ನ ತನಿಖೆ ಆರಂಭಿಸಿತ್ತು.

ಸಾಲು ಸಾಲು ರಜೆ ಬಿಎಂಟಿಸಿ ಸೇವೆ

ಬೆಂಗಳೂರು: ಶನಿವಾರದಿಂದ ಸೋಮವಾರದವರೆಗೆ ಸಾಲು ಸಾಲು ರಜೆಯ ಹಿನ್ನೆಲೆ ಬೆಂಗಳೂರಿನಿಂದ ತಮ್ಮ ಊರುಗಳಿಗೆ ಪ್ರಯಾಣಿಸುವವರ ಅನುಕೂಲಕ್ಕಾಗಿ ಬಿಎಂಟಿಸಿಯು ವಿವಿಧ ಜಿಲ್ಲೆಗಳಿಗೆ ಬಸ್ ಸೇವೆಯನ್ನು ಕಲ್ಪಿಸಿದೆ. ಜನವರಿ 24 ನಾಲ್ಕನೇ ಶನಿವಾರ, ಜನವರಿ 25 ಭಾನುವಾರ ಹಾಗೂ ಜನವರಿ 26 ಸೋಮವಾರ ಗಣರಾಜ್ಯೋತ್ಸವ ಹಿನ್ನೆಲೆ ಈ ದಿನಗಳಂದು ಬ್ಯಾಂಕ್ ಸೇರಿ ಹಲವಾರು ಕಂಪನಿಗಳಿಗೆ ರಜೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಿಗಳು, ಜನರು ಈ ವೇಳೆ ತಮ್ಮ ಊರುಗಳತ್ತ ಪ್ರಯಾಣ ಮಾಡುತ್ತಿದ್ದಾರೆ. ಈ ಹಿನ್ನೆಲೆ ಜನದಟ್ಟಣೆ ನಿಯಂತ್ರಣ ಮಾಡುವ ಉದ್ದೇಶದಿಂದ ವಿವಿಧ ಜಿಲ್ಲೆಗಳಿಗೆ ಬಿಎಂಟಿಸಿ ಬಸ್ ಸೇವೆಯನ್ನು ನೀಡಲಾಗಿದೆ. ಬಿಎಂಟಿಸಿಯಿಂದ ಹೆಚ್ಚುವರಿ ಬಸ್‌ಗಳ ನಿಯೋಜನೆಯನ್ನು ಶುಕ್ರವಾರದಿಂದ ಮಾಡಲಾಗಿದ್ದು, 260ಕ್ಕೂ ಹೆಚ್ಚು ಬಸ್‌ಗಳು ಬೆಂಗಳೂರಿನಿಂದ ರಾಜ್ಯದ ವಿವಿಧೆಡೆ ಸಂಚಾರ ನಡೆಸುತ್ತಿದ್ದು, ಶನಿವಾರದಿಂದ 500ಕ್ಕೂ ಹೆಚ್ಚು ಬಿಎಂಟಿಸಿ ಬಸ್‌ಗಳ ಸಂಚಾರ ಮಾಡುತ್ತಿವೆ.

ರಾಜ್ಯ ಪೊಲೀಸರಿಂದ ನೂತನ ಯೋಜನೆ ಜಾರಿ

ಹಿರಿಯ ನಾಗರಿಕರಿಗೆ ಆಸರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ 'ಆಸರೆ' ಎಂಬ ವಿನೂತನ ಯೋಜನೆಯನ್ನು ರಾಜ್ಯ ಸರಕಾರ ಜಾರಿಗೆ ತಂದಿದೆ.

ಕರ್ನಾಟಕ ರಾಜ್ಯ ಪೊಲೀಸರು ಆಸರೆ ಎಂಬ ವಿನೂತನ ಉಪಕ್ರಮವನ್ನು ರಾಜ್ಯದಲ್ಲಿ ಒಂಟಿಯಾಗಿ ವಾಸಿಸುತ್ತಿರುವ ಮಹಿಳೆಯರಿಗೆ ಮತ್ತು ವಯೋವೃದ್ಧ ಹಿರಿಯ ನಾಗರಿಕರಿಗೆ ಅವರ ಜೀವನದಲ್ಲಿ ಒಂಟಿತನದ ಅಸುರಕ್ಷತೆ, ಅಭದ್ರತೆ, ಹಾಗೂ ಕಾಳಜಿ ವಹಿಸುವ ವಿಶ್ವಾಸದ ಕೊರತೆಯನ್ನು ನೀಗಿಸಿ ಅವರಿಗೆ ಈ ಆಸರೆ ಎಂಬ ಸಮುದಾಯ ಪೊಲೀಸ್ ಪರಿಕಲ್ಪನೆಯಡಿಯಲ್ಲಿ ಸುರಕ್ಷತೆ, ಭದ್ರತೆ, ಯೋಗಕ್ಷೇಮದ ವಿಶ್ವಾಸ ನೀಡುವಂತಹ ಮತ್ತು ಅವರು ಒಂಟಿಯಲ್ಲ ಅವರೊಂದಿಗೆ ಪೊಲೀಸ್ ಇಲಾಖೆ ಮತ್ತು ರಾಜ್ಯ ಸರಕಾರವಿದೆ ಎಂಬ ಬಲವಾದ ನಂಬಿಕೆ ಮತ್ತು ವಿಶ್ವಾಸ ಮೂಡಿಸುವಂತಹ ಮಹೋನ್ನತ ಗುರಿಯನ್ನು ಹೊಂದಿರುವ ಉತ್ತಮವಾದ ಸಮುದಾಯ ಪೊಲೀಸ್ ಪರಿಕಲ್ಪನೆಯಾದ ಆಸರೆ ಯೋಜನೆ ಜಾರಿಗೆ ತರಲಾಗಿದೆ.

ದೇಶದ ಇತರ ಭಾಗಗಳಂತೆ ಕರ್ನಾಟಕವೂ ವೇಗವಾಗಿ ಹೆಚ್ಚುತ್ತಿರುವ ಹಿರಿಯ ನಾಗರಿಕರ ಜನಸಂಖ್ಯೆಗೆ ಸಾಕ್ಷಿಯಾಗುತ್ತಿದೆ. ಹಿರಿಯ ನಾಗರಿಕರು, ವಿಶೇಷವಾಗಿ ಒಂಟಿಯಾಗಿರುವವರು ಹೆಚ್ಚಿನ ಸಾಮಾಜಿಕ, ದೈಹಿಕ, ಮಾನಸಿಕ ಮತ್ತು ಸೈಬರ್-ಸಂಬಂಧಿತ ದುರ್ಬಲತೆ ಎದುರಿಸುತ್ತಿದ್ದಾರೆ. ಇದರಿಂದಾಗಿ ಅವರು ಅಪರಾಧ, ನಿರ್ಲಕ್ಷ್ಯ, ನಿಂದನೆ ಮತ್ತು ಪ್ರತ್ಯೇಕತೆಗೆ ಗುರಿಯಾಗುತ್ತಾರೆ. ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ ಒಂಟಿಯಾಗಿ ಜೀವನ ನಡೆಸುತ್ತಿರುವ ಮಹಿಳೆಯರ ಮತ್ತು ವೃದ್ಧರ ಸಂಖ್ಯೆ ಗಣನೀಯವಾಗಿದ್ದು ಅವರನ್ನು ನೋಡಿಕೊಳ್ಳುವ ಕಾಳಜಿವಹಿಸುವ ಹಾಗೂ ಅವರ ಸುರಕ್ಷತೆಗಾಗಿ ಎಲ್ಲಾ ಕ್ರಮ ಕೈಗೊಳ್ಳುವ ಆಸರೆ ಕೈಗಳು ಇಲ್ಲದೆ ಅನಾಥ ಭಾವದಿಂದ ಯಾರಿಗೂ ಬೇಡವಾದ ಬದುಕು ಸಾಗಿಸುತ್ತಿರುವುದನ್ನು

ಗಮನಿಸಿ ರಾಜ್ಯ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಇದು ಸಮಾಜದಲ್ಲಿ ಅನೇಕ ಕಾರಣಗಳಿಂದಾಗಿ ಒಂಟಿಯಾಗಿ ವಾಸಿಸುತ್ತಿರುವ ಹಿರಿಯ ನಾಗರೀಕರು ಅದರಲ್ಲೂ ಒಂಟಿ ಮಹಿಳೆಯರ ಮಾನ, ಸ್ವತ್ತು ಹಾಗೂ ಜೀವಗಳಿಗೆ ಅನೇಕ ಸಂದರ್ಭಗಳಲ್ಲಿ ಅಪರಾಧಿಗಳ ಮತ್ತು ಅಕ್ರಮ ಎಸಗುವವರಿಗೆ ಗುರಿಯಾಗಿ ತೊಂದರೆಗೀಡಾದ ಪ್ರಕರಣಗಳು ಹೆಚ್ಚಾಗುತ್ತಿದೆ. ಇಂತಹ ಅನಾಥ ಭಾವ ಒಂಟಿತನದ ಖಿನ್ನತೆಯಲ್ಲಿ ಅಪರಾಧಗಳಿಗೆ ಸುಲಭವಾಗಿ ಬಲಿಯಾಗುವ ಮತ್ತು ತೊಂದರೆಗೆ ಸಿಲುಕಿಕೊಳ್ಳುವ ಇವರುಗಳನ್ನು ಹಾಗೂ ಅವರ ಮಾನ, ಪ್ರಾಣ ಹಾಗೂ ಸ್ವತ್ತುಗಳನ್ನು ಸಂರಕ್ಷಿಸುವ ಹಾಗೂ ಸುರಕ್ಷತೆಗೆ ಸರಕಾರವು ಮುಂದಾಗಿದೆ. ಎಲ್ಲಾ ಸಂದರ್ಭದಲ್ಲೂ ಅವರೊಂದಿಗೆ ಸರಕಾರವಿದೆ ಮನೋಸ್ಥೈರ್ಯ ತುಂಬುವ ಒಂದು ಯೋಜನೆಯಾಗಿದೆ. ವಾಸ್ತವವನ್ನು ಗುರುತಿಸಿ, ರಾಜ್ಯ ಪೊಲೀಸ್ ಇಲಾಖೆಯು ಆಸರೆ ಅನ್ನು ಮಾನವೀಯ, ಪೂರ್ವಭಾವಿ ಮತ್ತು ನಾಗರಿಕ-ಕೇಂದ್ರಿತ ಪೊಲೀಸ್ ಮಾದರಿಯಾಗಿ ಪರಿಕಲ್ಪಿಸಲಾಗಿದೆ. ರಚನಾತ್ಮಕ ಪೊಲೀಸ್ ಸಂಪರ್ಕ, ಸಮುದಾಯ ಭಾಗವಹಿಸುವಿಕೆ ಮತ್ತು ಸಾಂಸ್ಥಿಕ ಸಮನ್ವಯದ ಮೂಲಕ ಹಿರಿಯ ನಾಗರಿಕರಲ್ಲಿ ಸುರಕ್ಷತೆಯ ಮನೋಭಾವವನ್ನು ಉಂಟುಮಾಡುವುದಲ್ಲದೆ ಅವರುಗಳಿಗೆ ತಮ್ಮೊಂದಿಗೆ ಸಹಕಾರ ನೀಡಲು ಕರ್ನಾಟಕ ರಾಜ್ಯ ಪೊಲೀಸರು ಇರುತ್ತಾರೆ ಎಂಬ ಭಾವನೆ ಮೂಡಿಸಲಾಗುತ್ತದೆ.

ಕಾನೂನುಬದ್ಧ ಸಹಾನುಭೂತಿ ಒದಗಿಸಲು ಬದ್ಧ:

ಆಸರೆ ಯೋಜನೆಯ ಉಪಕ್ರಮವು ಭಾರತದ ಸಂವಿಧಾನದ ವಿಧಿ/ಕಲಂ 21 ರ ಅಡಿಯಲ್ಲಿ ಸಾಂವಿಧಾನಿಕ ಆದೇಶದಿಂದ ಬಲವನ್ನು ಪಡೆಯುತ್ತದೆ. ಸಂವಿಧಾನದ ವಿಧಿಯಲ್ಲಿ ತಿಳಿಸಿರುವಂತೆ ಭಾರತದಲ್ಲಿ ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಹಕ್ಕು ಇದೆ. ಇದಕ್ಕೆ ಹಿರಿಯ ನಾಗರಿಕರು ಸಹ ಸಂಪೂರ್ಣ ಅರ್ಹರಾಗಿರುತ್ತಾರೆ. ಈ ಆಸರೆ ಎಂಬ ಪರಿಕಲ್ಪನೆಯಿಂದ ಪೊಲೀಸ್ ಇಲಾಖೆಯು ಕಾನೂನನ್ನು ಜಾರಿಗೊಳಿಸುವುದು ಮಾತ್ರವಲ್ಲದೆ, ಹಿರಿಯರೊಂದಿಗೆ ನೆರೆಹೊರೆಯ ಜಾಗರೂಕತೆಯನ್ನು ಬಲಪಡಿಸುವ ಮೂಲಕ, ತ್ವರಿತ ಪೊಲೀಸ್ ಪ್ರತಿಕ್ರಿಯೆಯನ್ನು ಸುಗಮಗೊಳಿಸುವುದು ಮತ್ತು ಕುಟುಂಬಗಳು, ಸ್ಥಳೀಯ ಸಂಸ್ಥೆಗಳು ಮತ್ತು ಸಾಮಾಜಿಕ ಕಲ್ಯಾಣ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸುವ ಮೂಲಕ ಕಾನೂನುಬದ್ಧ ಸಹಾನುಭೂತಿಯನ್ನು ಹಿರಿಯ ನಾಗರಿಕರಿಗೆ ಒದಗಿಸಲು ಬದ್ಧವಾಗಿದೆ.

ಪೊಲೀಸ್ ಠಾಣೆಗಳ ಪಾತ್ರ ಮತ್ತು ಜವಾಬ್ದಾರಿಗಳು

- **ಪ್ರತಿಯೊಂದು ಪೊಲೀಸ್ ಠಾಣೆಯು ಆಸರೆ ಎಂಬ ಪರಿಕಲ್ಪನೆ ತಕ್ಷಣವೇ ಜಾರಿಗೊಳಿಸಬೇಕು**
- **ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಿ ಬೀಟ್‌ನಲ್ಲಿ ಒಂಟಿಯಾಗಿ ವಾಸಿಸುವ ಹಿರಿಯ ನಾಗರಿಕರ ಮನೆಗಳನ್ನು ಗುರುತಿಸಬೇಕು**
- **ಪೂರ್ಣ ವಿಳಾಸ, ಸಂಪರ್ಕ ವಿವರಗಳು, ಹತ್ತಿರದ ಸಂಬಂಧಿಗಳು ಮತ್ತು ಇತರೆ ಸಂಬಂಧಿತರ, ಸ್ನೇಹಿತರ ವಿವರ ದಾಖಲಿಸಬೇಕು**
- **ನೋಂದಣಿ ರಿಜಿಸ್ಟರ್‌ಗಳನ್ನು 15 ದಿನಗಳಿಗೊಮ್ಮೆ ಪರಿಶೀಲನೆ ಮತ್ತು ಉಪ-ವಿಭಾಗೀಯ ಪೊಲೀಸ್ ಅಧಿಕಾರಿಗೆ ವರದಿ ಸಲ್ಲಿಕೆ**

ನಮ್ಮ ಮೆಟ್ರೋ ಕಾಮಗಾರಿಗಾಗಿ ಮೇಲ್ಸೇತುವೆ ತೆರವಿಗೆ ನಿರ್ಧಾರ

ಬೆಂಗಳೂರು: ಜೆಪಿ ನಗರದ ಸುತ್ತಮುತ್ತಲ ಡಾಲರ್ಸ್ ಕಾಲೋನಿ ಸೇರಿದಂತೆ ಹಲವು ಪ್ರದೇಶವನ್ನು ಸಂಪರ್ಕಿಸುವ ಡಾಲರ್ಸ್ ಕಾಲೋನಿ ಜಂಕ್ಷನ್ ಮೇಲ್ಸೇತುವೆಯ ನೆಲಸಮಕ್ಕಾಗಿ ನಮ್ಮ ಮೆಟ್ರೋ ಟೆಂಡರ್ ಕರೆದಿದೆ.

ಜಯದೇವ ಮೇಲ್ಸೇತುವೆ ತೆರವಿನ ಬಳಿಕ ಇದೀಗ ಮತ್ತೊಂದು ಮೇಲ್ಸೇತುವೆಯನ್ನು ತೆರವುಗೊಳಿಸಲು ಮೆಟ್ರೋ ಮುಂದಾಗಿರುಯದು ವಾಹನ ಸವಾರರ, ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ. ಜೆಪಿ ನಗರದ ನಾಲ್ಕನೇ ಹಂತದಿಂದ ಕೆಂಪಾಪುರವರೆಗಿನ ಕಿತ್ತಳೆ ಮಾರ್ಗದ ಮೆಟ್ರೊ ಕಾಮಗಾರಿಯ ಹಿನ್ನೆಲೆ ಈ ನಿರ್ಧಾರಕ್ಕೆ ಮೆಟ್ರೋ ಮುಂದಾಗಿದೆ. 2018ರಲ್ಲಿ ಸುಮಾರು 25 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉದ್ಘಾಟನೆ ಗೊಂಡಿದ್ದ ಈ ಮೇಲ್ಸೇತುವೆ ಬನ್ನೇರುಘಟ್ಟ ರಸ್ತೆ, ಮೈಸೂರು ರಸ್ತೆ ಹಾಗೂ ಜಯನಗರ ಸುತ್ತಮುತ್ತಲಿನ ಪ್ರದೇಶಗಳ ಸಂಚಾರಕ್ಕೆ ಸಹಕಾರಿಯಾಗಿತ್ತು.

ಸುಮಾರು ಒಂದು ಕಿ.ಮೀ ಉದ್ದದ ಈ ಮೇಲ್ಸುತುವೆ ತೆರವುಗೊಳ್ಳಲಿರುವುದರಿಂದ ದಿನನಿತ್ಯದ ಸಂಚಾರಕ್ಕೆ ಅಡಚಣೆ ಉಂಟಾಗಲಿದೆ ಎಂದು ವಾಹನ ಸವಾರರು ಆತಂಕ ವ್ಯಕ್ತಪಡಿಸಿದ್ದಾರೆ. ಕಿತ್ತಳೆ ಮಾರ್ಗ ಮೆಟ್ರೊ ಯೋಜನೆಯಡಿ ಡಬಲ್ ಡೆಕ್ಕರ್ ಜತೆಗೆ ಮೆಟ್ರೊ ಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, ಇತ್ತೀಚೆಗೆ ಸಿವಿಲ್ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಮೂರನೇ ಹಂತದ ಮೆಟ್ರೊ ಯೋಜನೆಯಾದ ಕಿತ್ತಳೆ ಮಾರ್ಗ ಒಟ್ಟು 44.65 ಕಿಮೀ ವಿಸ್ತೀರ್ಣವನ್ನು ಹೊಂದಿದ್ದು, ಜೆಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ ಮೊದಲ ಕಾರಿಡಾರ್ ಹಾಗೂ ಹೊಸಹಳ್ಳಿ ಮೆಟ್ರೊ ನಿಲ್ದಾಣದಿಂದ ಕಡಬಗೆರೆವರೆಗೆ ಎರಡನೇ ಕಾರಿಡಾರ್‌ನ್ನು ಒಳಗೊಂಡಿದೆ. ಸ್ಥಳೀಯ ನಿವಾಸಿಗಳು ಹಾಗೂ ವಾಹನ ಸವಾರರು ಮೆಟ್ರೋ ಕಾಮಗಾರಿಯನ್ನು ಸ್ವಾಗತಿಸಿದ್ದರೂ ಕೂಡಾ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣ ಪೂರ್ಣಗೊಳ್ಳುವ ವರೆಗೆ ಸಂಚಾರ ಸಮಸ್ಯೆಯುಂಟಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ರಾಜಶೇಖರ ಹಿಟ್ನಾಳ್ ಉಚ್ಚಾಟನೆಗೆ ಛಲವಾದಿ ನಾರಾಯಣಸ್ವಾಮಿ ಆಗ್ರಹ

ಕಾಂಗ್ರೆಸ್ ದುರಾಡಳಿತ ಮೇರೆ ಮೀರಿದೆ

ಬೆಂಗಳೂರು: ಕಾಂಗ್ರೆಸ್ ದುರಾಡಳಿತ ಮೇರೆ ಮೀರಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಎಂದರೆ ಕಮಿಷನ್, ಕರಪ್ಷನ್, ಲೂಟಿ, ದುಂಡಾವರ್ತಿ ಎಂದು ಮಾತನಾಡುತ್ತಿದ್ದೆವು. ಕಾಂಗ್ರೆಸ್ ಇದೀಗ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ಅಧಿಕಾರವೊಂದಿದ್ದರೆ ಸಾಕು ಏನು ಬೇಕಾದರೂ ಮಾಡಬಹುದು. ಹೇಗೆ ಬೇಕಾದರೂ ಮೆರೆಯಬಹುದು ಎಂಬ ದುರ್ನಡತೆ ಮೈಗೂಡಿಸಿಕೊಂಡಿದೆ ಎಂದು ಟೀಕಿಸಿದರು.

ಹೊರದೇಶದಿಂದ ಪ್ರವಾಸಕ್ಕಾಗಿ ಬಂದ ಮಹಿಳೆಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿತ್ತು. ಇದೊಂದು ದೊಡ್ಡ ವಿಷಯವಾಗಿತ್ತು. ಇದು ಕೇವಲ ರಾಷ್ಟ್ರೀಯ ವಿಚಾರವಲ್ಲ; ಅಂತರರಾಷ್ಟ್ರೀಯ ವಿಚಾರ. ಇದನ್ನು ಗೌರವಾನ್ವಿತ ಎಂಪಿ (ಸಂಸದ) ರಾಜಶೇಖರ ಹಿಟ್ನಾಳ್ ಅವರು ಎಷ್ಟು ಕೇವಲವಾಗಿ ಹೇಳಿದ್ದಾರೆಂದರೆ, ಅದೊಂದು ಸಣ್ಣ (ಮೈನರ್) ಘಟನೆಯಂತೆ. ಈ ಕಾಂಗ್ರೆಸ್ಸಿನ ಸಂಸ್ಕೃತಿ ಎಂಥದ್ದೆಂದು ಗೊತ್ತಾಯಿತಲ್ಲವೇ ಎಂದು ಪ್ರಶ್ನಿಸಿದರು.

ಇಷ್ಟೊಂದು ನೀಚತನಕ್ಕೆ ಅಧಿಕಾರ ನಡೆಸುವವರು ಇಳಿದರೆ ಏನನ್ನಬೇಕು? ಒಬ್ಬರು ಮಹಿಳೆಯ ಮೇಲೆ ಆಗಿರುವ ಅತ್ಯಾಚಾರವನ್ನೇ ನಾವು ಖಂಡಿಸಬೇಕು. ಅದು ಸಣ್ಣ ವಿಷಯ ಎಂದು ಯಾರೂ ಭಾವಿಸಬಾರದು. ಅದರಲ್ಲೂ ಅವರನ್ನು ಕೊಲೆ ಮಾಡಿದ ಘಟನೆ ಎಷ್ಟೊಂದು ನೀಚತನದಿಂದ ಕಾಂಗ್ರೆಸಿನವರು ಈ ಮಾತುಗಳನ್ನು ಆಡಿದ್ದಾರೆಂದರೆ, ಅವರ ನೀಚತನಕ್ಕೆ ಜನರು ಉತ್ತರ ಕೊಡಬೇಕಿದೆ. ಬುದ್ಧಿ ಕಲಿಸುವ ಕೆಲಸ ಮಾಡಲೇಬೇಕಾಗಿದೆ. ರಾಜ್ಯ, ದೇಶದ ಮುಂದೆ ತಲೆತಗ್ಗಿಸುವ ಕೆಲಸವನ್ನು ರಾಜಶೇಖರ ಹಿಟ್ನಾಳ್ ಮಾಡಿದ್ದಾರೆ. ಮೊದಲು ಅವರು ಕ್ಷಮೆ ಕೇಳಬೇಕು. ಕರ್ನಾಟಕದ ಗೌರವ ಹರಾಜಾಗಿದೆ. ಕಾಂಗ್ರೆಸ್ ಪಕ್ಷ ಅವರನ್ನು ಉಚ್ಚಾಟನೆ ಮಾಡಿದರೆ ಪಕ್ಷ ಮಹಿಳೆಯರಿಗೆ ಗೌರವ ಕೊಡುತ್ತದೆ. ಇಂಥ ವಿಷಯದಲ್ಲಿ

ಗಂಭೀರತೆ ಹೊಂದಿದೆ ಎನ್ನಬಹುದು. ಇಲ್ಲವಾದರೆ, ನಿಮ್ಮ ಯೋಗ್ಯತೆ ಅಷ್ಟೇ ಎಂಬುದನ್ನು ನಾವು ಹೇಳಲೇಬೇಕಾಗುತ್ತದೆ ಎಂದರು.

ಪೊಲೀಸ್ ಇಲಾಖೆ ನಿರ್ಲಿಪ್ತ

ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿಯವರ ಮಾಡೆಲ್ ಹೌಸ್ ಗೆ ಬೆಂಕಿ ಹಾಕುವ ಕೆಲಸ ನಿನ್ನೆ ನಡೆದಿದೆ. ಕಾಂಗ್ರೆಸಿನ ದುರಾಡಳಿತ ಇನ್ನೂ ಯಾವ ಮಟ್ಟಕ್ಕೆ ಹೋಗಿದೆ ಎಂಬುದು ಈಗ ಗೊತ್ತಾಗುತ್ತಿದೆ. ಇವರೇ ಇವರ ಕಾರ್ಯಕರ್ತನನ್ನು ಕೊಲೆ ಮಾಡಿ, ಸರಕಾರದ ಹಣ 25 ಲಕ್ಷ ನಗದು ಕೊಟ್ಟಿದ್ದಾರೆ. ನಗದಾಗಿ ಹಣ ಕೊಡಲು ಆಗುವುದಿಲ್ಲ ಎಂದರು. ನಗದು ಕೊಡುವುದಾದರೆ, ಅದಕ್ಕೆ ಲೆಕ್ಕ ಇರಬೇಕು. ಆದಾಯ ತೆರಿಗೆ ಪಾವತಿ ಮಾಡಿರಬೇಕು. ಸರಕಾರದ ಹಣ ನೀವು ಚೆಕ್ ಮೂಲಕವೇ ಕೊಡಬೇಕಿತ್ತು. ನಾನು ಗೋಲ್ಡನ್ ಸ್ಪೂನ್ ಜೊತೆ ಹುಟ್ಟಿದ್ದಾಗಿ ಹೇಳುವ ಶಾಸಕ, ಅವನ ಕಡೆಯಿಂದ ಹಣ ಕೊಡಿಸಬೇಕಿತ್ತು. ಕೊಲೆ ಮಾಡಿದ ಅವರನ್ನೇ ಬಂಧಿಸಬೇಕಿತ್ತು. ಇವತ್ತಿನವರೆಗೆ ಬಂಧಿಸಿಲ್ಲ. ಪೊಲೀಸ್ ಇಲಾಖೆ ಏನು ಕಡುಬು ತಿನ್ನುತ್ತಿದೆಯೇ ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್ ಸರಕಾರವು ಪೊಲೀಸ್ ಇಲಾಖೆಯನ್ನು ನಿರ್ಲಿಪ್ತ ಮಾಡಿದೆ ಎಂದು ಟೀಕಿಸಿದರು.

ಸಪ್ನ ಬುಕ್‌ಹೌಸ್‌ನಲ್ಲಿ ಪುಸ್ತಕ ಸುಗ್ಗಿ, ಅಕ್ಷರ ಸುಗ್ಗಿ, ಮಾತಿನ ಹುಗ್ಗಿ ಮಾತುಕತೆ

ಕನ್ನಡ ಪುಸ್ತಕಗಳ ಮೇಲೆ ಪ್ರೀತಿ ಬೆಳೆಸಿಕೊಳ್ಳಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಪ್ನ ಬುಕ್ ಹೌಸ್‌ನಲ್ಲಿ ಪುಸ್ತಕ ಸುಗ್ಗಿ ಕಾರ್ಯಕ್ರಮದಲ್ಲಿ ಅಕ್ಷರ ಸುಗ್ಗಿ ಮಾತಿನ ಹುಗ್ಗಿ ಮಾತುಕತೆ ಕಾರ್ಯಕ್ರಮದಲ್ಲಿ ಜಾನಪದ ಗಾಯಕ ಡಾ. ಅಪ್ಪಗೆರೆ ತಿಮ್ಮರಾಜುರವರು, ಕನ್ನಡ ಪರ ಚಿಂತಕ ರಾ.ನಂ.ಚಂದ್ರಶೇಖರ್, ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಪ್ರಾಂಶುಪಾಲರಾದ ಡಾ.ಸಿ.ಚಂದ್ರಪ್ಪ, ಡಾ.ಶುಭ ಮತ್ತು ಪ್ರಾಧ್ಯಾಪಕ ಡಾ.ಬೇಲೂರು ರಘುನಂದನ, ಸಪ್ನ ಬುಕ್ ಹೌಸ್ ದೊಡ್ಡೇಗೌಡರವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಡಾ.ಅಪ್ಪಗೆರೆ ತಿಮ್ಮರಾಜು ಮಾತನಾಡಿ, ಸಪ್ನ ಬುಕ್ ಹೌಸ್ ಚರಿತ್ರೆ ನಿರ್ಮಾಣದತ್ತ ಸಾಗುತ್ತಿದೆ. ಕನ್ನಡ ಪುಸ್ತಕ ಮೇಲೆ ಪ್ರೀತಿ ಬೆಳೆಸಿಕೊಳ್ಳಬೇಕು. ಗ್ರಾಮೀಣ ಭಾಗದ ಆಚರಿಸುವ ಹಬ್ಬಗಳು ನಗರ ಪ್ರದೇಶದ ಜನರಿಗೆ ಅರಿವು ಇಲ್ಲ. ಹಳೆಯ ಸಂಪ್ರದಾಯ ಮರೆಯಾಗುತ್ತಿದೆ. ಉತ್ತಮ ಪುಸ್ತಕಗಳು ಅಭ್ಯಾಸ ಮಾಡುವವರು ಜ್ಞಾನಿಗಳಾಗಿ ಹೊರಹೊಮ್ಮುತ್ತಾರೆ. ವಿದೇಶಿಗರ ಪ್ರತಿಯೊಬ್ಬರ ಕೈಯಲ್ಲಿ ಪುಸ್ತಕ ಇರುತ್ತದೆ ಆದರೆ ನಮ್ಮಲ್ಲಿ ಪುಸ್ತಕಭಿಮಾನಿಗಳು ಇಲ್ಲ ಎಂಬ ಬೇಸರವಿದೆ ಎಂದು ಹೇಳಿದರು.

ರಾ.ನಂ.ಚಂದ್ರಶೇಖರ್ ಮಾತನಾಡಿ, ಸರಕಾರ, ವಿಶ್ವವಿದ್ಯಾಲಯ ಮಾಡುವ ಕೆಲಸ ಸಪ್ನ ಬುಕ್ ಹೌಸ್ ಮಾಡುತ್ತಿದೆ. ಕನ್ನಡ ಸಾಹಿತ್ಯ ಲೋಕಕ್ಕೆ ಉತ್ತಮ ಕೊಡುಗೆ ನೀಡಿದೆ. ನಗರ ಪ್ರದೇಶದಲ್ಲಿ ಗ್ರಂಥಾಲಯ ಸೆಸ್ ಸಂಗ್ರಹ ಮಾಡುತ್ತಾರೆ ಆದರೆ ಅದನ್ನ ಕಸ ತೆಗೆಯಲು ಖರ್ಚು ಮಾಡುತ್ತಾರೆ. ರಾಜ್ಯ ಸರಕಾರ ಕಳೆದ ನಾಲ್ಕು ವರ್ಷಗಳಿಂದ ಪುಸ್ತಕ ಖರೀದಿ ಮಾಡಿಲ್ಲ

ಸಪ್ನ ಬುಕ್ ಹೌಸ್‌ನಲ್ಲಿ ಪುಸ್ತಕ ಸುಗ್ಗಿ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು.

ಎಂಬುದು ಶೋಚನೀಯ ಸಂಗತಿ. ವರ್ಷಕ್ಕೆ 8ಸಾವಿರ ಪುಸ್ತಕ ಹೊರ ಬರುತ್ತದೆ. 685ಕೋಟಿ ಸೆಸ್ ಗ್ರಂಥಾಲಯ ಇಲಾಖೆಗೆ ಕೊಡದೇ ಬಾಕಿ ಉಳಿಸಿಕೊಂಡಿದೆ. ಅದರ ಬದಲು ಸರಕಾರ ನೇರವಾಗಿ ಗ್ರಂಥಾಲಯ ಇಲಾಖೆಗೆ ನೇರವಾಗಿ ಸೆಸ್ ತಲುಪುವಂತೆ ಮಾಡಬೇಕು ಎಂದರು.

ನಿತಿನ್ ಷಾ ಮಾತನಾಡಿ, ಸಪ್ನ ಬುಕ್ ಹೌಸ್ ಕನ್ನಡ ಪುಸ್ತಕಗಳ ಕಾಶಿಯಾಗಿದೆ. ನಮ್ಮ ಸಂಸ್ಥೆ 59ವರ್ಷಗಳಿಂದ ಕನ್ನಡ ಪುಸ್ತಕ ಲೋಕಕ್ಕೆ ಸೇವೆ ಸಲ್ಲಿಸುತ್ತಾ ಬರುತ್ತಿದೆ. ಜನವರಿ 24ರಿಂದ 8ನೇ ಫೆಬ್ರವರಿಯವರೆಗೆ ರಿಯಾಯಿತಿ ದರದಲ್ಲಿ ಪುಸ್ತಕಗಳು, ಇನ್ನಿತರೆ ವಸ್ತುಗಳ ಮೇಲೆ ನೀಡಲಾಗುತ್ತಿದೆ ಎಂದರು.

ರಂಗಚಿರಂತನ ತಂಡದವರಿಂದ ಜನಪದ ಗೀತೆ ಗಾಯನ ಮತ್ತು ದೂರದರ್ಶನ ಚಂದನ ವಾಹಿನಿಯ ಥಟ್ ಅಂಥ ಹೇಳಿ ಖ್ಯಾತಿಯ ನಾ.ಸೋಮೇಶ್ವರ ರವರಿಂದ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ತಿಪಟೂರಿನಲ್ಲಿ ಗಾಡಿಯಲ್ಲಿ ಪುಸ್ತಕ ಮಾರಾಟಗಾರ, ಪುಸ್ತಕ ಪ್ರೇಮಿ ಚಂದ್ರಪ್ಪರವರಿಗೆ ಸನ್ಮಾನಿಸಲಾಯಿತು.

ತಮಿಳುನಾಡುನಲ್ಲಿ ಪುಸ್ತಕ ಖರೀದಿ ಎಂಬ ಪ್ರಾಧಿಕಾರ ಮಾಡಿದ್ದಾರೆ. ಅದರ ಮೂಲಕ ತಮಿಳು ಭಾಷೆಯ ಪ್ರತಿ ಒಂದು ಶೀರ್ಷಿಕೆಯ 1000 ಪುಸ್ತಕ ಖರೀದಿ ಮಾಡಿ ಪ್ರತಿ ಜಿಲ್ಲೆಗೆ 70 ಸಾವಿರ ಪುಸ್ತಕ ನೀಡುತ್ತಾರೆ. ಅಲ್ಲಿನ ಸರಕಾರ ಗ್ರಂಥಾಲಯ ಸೆಸ್‌ನ್ನು ನೇರವಾಗಿ ಗ್ರಂಥಾಲಯ ನೀಡಲಾಗುತ್ತಿದೆ. ಭಾಷೆ ಮತ್ತು ಸಾಹಿತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

-ರಾ.ನಂ.ಚಂದ್ರಶೇಖರ್ ಕನ್ನಡ ಪರ ಚಿಂತಕ

ಸರಕು ಸಾಗಣೆ, ನದಿ ಪ್ರವಾಸೋದ್ಯಮಕ್ಕೆ ಉತ್ತೇಜನ

ಬೆಂಗಳೂರು: ಭಾರತದ ಒಳನಾಡಿನ ಜಲಸಾರಿಗೆ ಜಾಲವನ್ನು ವಿಸ್ತರಿಸಲು, ಪ್ರಮುಖ ಮೂಲ ಸೌಕರ್ಯ ಹೂಡಿಕೆಗಳನ್ನು ಅನುಮೋದಿಸಲು ಮತ್ತು ದೇಶದ ನದಿಗಳ ಸಂಪೂರ್ಣ ಆರ್ಥಿಕ ಸಾಮರ್ಥ್ಯ ಅನಾವರಣ ಮಾಡುವ ಉದ್ದೇಶದಿಂದ ಕೇಂದ್ರ- ರಾಜ್ಯ ಸಮನ್ವಯ ಬಲಪಡಿಸಲು ಸಮಗ್ರ ಮಾರ್ಗಸೂಚಿ ರೂಪಿಸುವುದರೊಂದಿಗೆ ಒಳನಾಡಿನ ಜಲಮಾರ್ಗ ಅಭಿವೃದ್ಧಿ ಮಂಡಳಿಯ ಐಡಬ್ಲ್ಯುಡಿಸಿ 3.0 ಮೂರನೇ ಸಭೆ ಮುಕ್ತಾಯವಾಯಿತು.

ಕೇಂದ್ರ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸುಸ್ಥಿರ ಮತ್ತು ಪರಿಣಾಮಕಾರಿ ಲಾಜಿಸ್ಟಿಕ್ಸ್‌ನ ಪ್ರಮುಖ ಆಧಾರಸ್ತಂಭವಾಗಿ ಒಳನಾಡು ಜಲಸಾರಿಗೆಯನ್ನು ಬಲಪಡಿಸುವ ಭಾರತದ ಪ್ರಯಾಣದಲ್ಲಿ ಈ ಸಭೆ ಮಹತ್ವದ ಮೈಲಿಗಲ್ಲು ಎನಿಸಿತು.

ನದಿ ಆಧಾರಿತ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಐಡಬ್ಲ್ಯುಡಿಸಿ 3.0 ರಲ್ಲಿ 1,500 ಕೋಟಿ ರು. ಗಿಂತ ಹೆಚ್ಚಿನ ಮೌಲ್ಯದ ಯೋಜನೆಗಳನ್ನು ಪರಿಗಣಿಸಲಾಯಿತು. ದೇಶಾದ್ಯಂತ ಕ್ರೂಸ್ ಪ್ರವಾಸೋದ್ಯಮ ಸರ್ಕ್ಯೂಟ್‌ಗಳ ವಿಸ್ತರಣೆಯನ್ನು ಬೆಂಬಲಿಸುವ ಕೇರಳ, ಗುಜರಾತ್, ಕರ್ನಾಟಕ, ಒಡಿಶಾ ಮತ್ತು ತೆಲಂಗಾಣದಲ್ಲಿ ನದಿ ಕ್ರೂಸ್ ಜೆಟ್ಟಿಗಳು ಸೇರಿದಂತೆ 150 ಕೋಟಿ ರು.ಗಿಂತ ಹೆಚ್ಚಿನ ಯೋಜನೆಗಳಿಗೆ ಅಡಿಪಾಯ ಹಾಕಲಾಯಿತು. ನೌಕಾಯಾನ, ಸುರಕ್ಷತೆ ಮತ್ತು ವರ್ಷಪೂರ್ತಿ ಕಾರ್ಯಾಚರಣೆ ಹೆಚ್ಚಿಸಲು 465 ಕೋಟಿ ರು.ಗಿಂತ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿಯನ್ನು ಘೋಷಿಸಲಾಯಿತು. 900 ಕೋಟಿ ರು.ಗಿಂತ ಹೆಚ್ಚಿನ ಮೌಲ್ಯದ ಪ್ರಮುಖ ಹೊಸ ಯೋಜನೆಗಳ ಬಗ್ಗೆ ಮಂಡಳಿಗೆ ಮಾಹಿತಿ ನೀಡಲಾಯಿತು.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತದ ಸಾರಿಗೆ ಮತ್ತು ಲಾಜಿಸ್ಟಿಕ್ಸ್ ರೂಪಾಂತರದ ಕಾರ್ಯತಂತ್ರದ ಆಧಾರಸ್ತಂಭವಾಗಿ ಒಳನಾಡಿನ ಜಲಮಾರ್ಗಗಳು ಹೊರಹೊಮ್ಮಿವೆ ಎಂದು ಹೇಳಿದರು.

ಜಯದೇವ ಆಸ್ಪತ್ರೆಗೆ ಏಮ್ಸ್ ತಂಡ ಭೇಟಿ

ಬೆಂಗಳೂರು: ದೆಹಲಿಯ ಏಮ್ಸ್ ತಂಡ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಈ ವೇಳೆ ಆಸ್ಪತ್ರೆಯ ಚಿಕಿತ್ಸಾ ಸೇವೆಗಳು, ಆಡಳಿತ ವ್ಯವಸ್ಥೆ, ರೋಗಿಯ ಆರೈಕೆ ಕ್ರಮಗಳು ಮತ್ತು ಗುಣಮಟ್ಟದ ಮಾನದಂಡಗಳನ್ನು ಪರಿಶೀಲನೆ ನಡೆಸಿದರು. ಭೇಟಿಯ ವೇಳೆ ಏಮ್ಸ್ ತಂಡವು ಹೊರರೋಗಿ ವಿಭಾಗ, ಒಳರೋಗಿ ವಿಭಾಗ, ಜನರಲ್ ವಾರ್ಡ್, ಡಿಲಕ್ಸ್ ವಾರ್ಡ್, ಸ್ಪೆಷಲ್ ವಾರ್ಡ್ ವ್ಯವಸ್ಥೆ, ತೀವ್ರ ನಿಗಾ ಘಟಕಗಳು, ಹೃದಯ ಶಸ್ತ್ರಚಿಕಿತ್ಸಾ ವಿಭಾಗ, ಕಾರ್ಡಿಯಾಕ್ ಕ್ಯಾಥ್ ಲ್ಯಾಬ್, ಪ್ರಯೋಗಶಾಲೆಗಳು, ಲಾಂಡ್ರಿಗೆ ಭೇಟಿ ನೀಡಿ ಅಲ್ಲಿನ ಕಾರ್ಯವಿಧಾನದ ಬಗ್ಗೆ ತಪಾಸಣೆ ನಡೆಸಿದರು. ತಪಾಸಣೆ ವೇಳೆ ಜಯದೇವ ಆಸ್ಪತ್ರೆಯ ವೈದ್ಯರು ರೋಗಿಗಳನ್ನು ಆರೈಕೆ ಮಾಡುವ ಬಗ್ಗೆ ಮತ್ತು ಆಸ್ಪತ್ರೆಯ ಸ್ವಚ್ಛತೆ ಹಾಗೂ ನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಆಸ್ಪತ್ರೆಯ ಭೇಟಿ ನಂತರದಲ್ಲಿ ಏಮ್ಸ್‌ನ ನಿರ್ದೇಶಕ ಡಾ.ಶ್ರೀನಿವಾಸ್ ಮಾತನಾಡಿ, ಜಯದೇವ ಆಸ್ಪತ್ರೆ ಹೃದ್ರೋಗಿಗಳಿಗೆ ಉತ್ತಮ ಸೇವೆ ನೀಡುತ್ತಿದೆ. ಸಂಸ್ಕೃತಿಯಲ್ಲಿ ಜಯದೇವ ಆಸ್ಪತ್ರೆಯ ನಂಬರ್ ಒನ್ ಬ್ರ್ಯಾಂಡ್ ಆಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದು, ದೇಶದಲ್ಲೇ ಅತಿ ಹೆಚ್ಚು ಹೃದ್ರೋಗಿಗಳನ್ನು ಆರೈಕೆ ಮಾಡುತ್ತಿರುವ ಸಂಸ್ಥೆ ಆಗಿದೆ ಎಂದರು.

30 ನಿಗಮಗಳ ಶಾಸಕರಿಗೆ ಅಧಿಕಾರ ಚಿಂತೆ | ಅವಧಿ ವಿಸ್ತರಿಸಲು ಸರಕಾರ ಲೆಕ್ಕಾಚಾರ | ಆಕಾಂಕ್ಷಿಗಳ ಬೇಸರ

ನಿಗಮ, ಮಂಡಳಿ ಅವಧಿ ನಾಳೆ ಅಂತ್ಯ, ಹಾಲಿ ಅಧ್ಯಕ್ಷರ ಅಧಿಕಾರಕ್ಕೆ ಅಪಾಯವಿಲ್ಲ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯದ ನಿಗಮ, ಮಂಡಳಿಗಳ ಅಧ್ಯಕ್ಷರ ಅವಧಿ ಸದ್ಯದಲ್ಲೇ ಮುಗಿಯಲಿದ್ದು ಇನ್ನೇನೋ ಹೊಸಬರಿಗೆ ಅವಕಾಶ ಲಭಿಸಲಿದೆ ಎನ್ನುವಷ್ಟರಲ್ಲಿ ಅಚ್ಚರಿಯ ಸುದ್ದಿ ಹೊರಬಿದ್ದಿದೆ.

ಅದೇನೆಂದರೆ, ರಾಜ್ಯ ರಾಜಕಾರಣದ ಇತ್ತೀಚಿನ ಬೆಳವಣಿಗೆ ಹಿನ್ನೆಲೆಯಲ್ಲಿ ಅವಧಿ ಮುಗಿಸಿದ ಅಧ್ಯಕ್ಷರನ್ನೇ ಇನ್ನಷ್ಟು ಕಾಲ ಮುಂದುವರಿಸುವ ಬಗ್ಗೆ ಸರಕಾರ ಗಂಭೀರ ಚಿಂತನೆ ನಡೆಸಿದೆ.

ಇದರೊಂದಿಗೆ ಸುಮಾರು 35ಕ್ಕೂ ಹೆಚ್ಚು ಶಾಸಕರು ಹಾಗೂ 45ಕ್ಕೂ ಹೆಚ್ಚು ಪಕ್ಷದ ಪದಾಧಿಕಾರಿಗಳು ಹಾಗೂ ಮುಖಂಡರನ್ನು ಒಳಗೊಂಡಿದ್ದ ರಾಜ್ಯದ 80ಕ್ಕೂ ಹೆಚ್ಚು ವಿವಿಧ ನಿಗಮಗಳ ಅಧ್ಯಕ್ಷರು ಮತ್ತಷ್ಟು ಕಾಲ ಅಧ್ಯಕ್ಷರಾಗಿಯೇ ಮುಂದುವರಿಯುವ ಸಾಧ್ಯತೆ ಹೆಚ್ಚಾಗಿದೆ.

ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಬಿಎಯ ವಿವಿಧ ಪಾಲಿಕೆಗಳ ಚುನಾವಣೆಗಳ ಹಿನ್ನೆಲೆಯಲ್ಲಿ ಹಾಲಿ ಅಧ್ಯಕ್ಷರನ್ನು ಅಧಿಕಾರದಿಂದ ಬಿಡುಗಡೆಗೊಳಿಸಿದರೆ ಅದರಿಂದ ಅಡ್ಡ ಪರಿಣಾಮ ಉಂಟಾಗಬಹುದು ಎನ್ನುವ ಕಾರಣಕ್ಕೆ ಸರಕಾರ ಈ ಅಚ್ಚರಿಯ ನಿರ್ಧಾರಕ್ಕೆ ಮುಂದಾಗಿದೆ.

ಹಾಗೆಯೇ ಬಹು ಬೇಡಿಕೆಯ ಸಚಿವ ಸಂಪುಟ ಪುನಾರಚನೆ ನಡೆದರೆ ಅಥವಾ ಹೈಕಮಾಂಡ್

ತೀರ್ಮಾನಿಸಿದರೆ ನಾಯಕತ್ವ ಬದಲಾವಣೆಯಾದರೆ ಆ ಬೆಳವಣಿಗೆ ನೋಡಿ ಹೊಸಬರಿಗೆ ಅವಕಾಶ ಕೊಡೋಣ ಎಂದು ಸರಕಾರ ಆಲೋಚಿಸಿದೆ. ಈ ಹಿನ್ನೆಲೆಯಲ್ಲಿ ಇಲಾಖೆಗಳು ತಮ್ಮ ವ್ಯಾಪ್ತಿಯ ನಿಗಮ, ಮಂಡಳಿಗಳ ಅಧ್ಯಕ್ಷರ ಅವಧಿ ವಿಸ್ತರಿಸುವ ನಿಟ್ಟಿನಲ್ಲಿ ಮುಂದಿನ ಆದೇಶದವರೆಗೆ ಎಂದು ಮತ್ತೊಂದು ಆದೇಶ ಹೊರಡಿಸುವಂತೆ ಸರಕಾರದಿಂದ ಮೌಖಿಕ ಸೂಚನೆ ಕೂಡ ಹೋಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಈ ಬೆಳವಣಿಗೆಯೊಂದಿಗೆ ಹಾಲಿ ಅಧ್ಯಕ್ಷರಿಗೆ ಎದುರಾಗಿದ್ದಅಧಿಕಾರ ಅವಧಿಯ ಅಂತ್ಯದ ಆತಂಕ ನಿವಾರಣೆಯಾಗಿದ್ದು, 90ಕ್ಕೂ ಹೆಚ್ಚು ನಿಗಮ, ಮಂಡಳಿಗಳ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆ ಮೇಲೆ ಕಣ್ಣಿಟ್ಟಿದ್ದ ಆಕಾಂಕ್ಷಿಗಳಿಗೆ ಕೊಂಚ ನಿರಾಶೆ ಉಂಟಾದಂತಾಗಿದೆ ಎಂದು ಪಕ್ಷದ ಹಿರಿಯ ನಾಯಕರು ಹೇಳಿದ್ದಾರೆ.

ಶಾಸಕರ ಅಧಿಕಾರಕ್ಕೆ ಅಪಾಯವಿಲ್ಲ

ರಾಜ್ಯದಲ್ಲಿ ಸಿದ್ದರಾಮಯ್ಯ ಸರಕಾರ ಎರಡನೇ ಬಾರಿಗೆ ಅವಧಿಗೆ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ನಿಗಮ, ಮಂಡಳಿ ಅಧ್ಯಕ್ಷ,ಉಪಾಧ್ಯಕ್ಷ ಗಾದಿಗೆ ನೇಮಕ ಆರಂಭಿಸಿತ್ತು. ಮೊದಲಿಗೆ ಸಚಿವ ಸ್ಥಾನ ಕೈ ತಪ್ಪಿದ್ದ ಸುಮಾರು 30ಕ್ಕೂ ಹೆಚ್ಚು ಪ್ರಬಲ ಆಕಾಂಕ್ಷಿಗಳಿಗೆ ವಿವಿಧ ಪ್ರಮುಖ ನಿಗಮಗಳಲ್ಲಿ ಅವಕಾಶ ನೀಡಲಾಗಿತ್ತು. ಎರಡು ವರ್ಷಗಳ ಅವಧಿಗೆ ಸೀಮಿತಗೊಳಿಸಿದ್ದ ಈ ನಿಗಮಗಳ ಆದೇಶ 2024ರ ಜನವರಿ 26ಕ್ಕೆ ಹೊರಬಿದ್ದಿತ್ತು. ಹೀಗಾಗಿ ಆ ಆದೇಶದಲ್ಲಿರುವ 34 ನಿಗಮ, ಮಂಡಳಿಗಳ ಅಧ್ಯಕ್ಷರ ಅವಧಿ 2026ರ ಜನವರಿ 26ಕ್ಕೆ ಅಂದರೆ ಸೋಮವಾರಕ್ಕೆ ಅಂತ್ಯವಾಗಲಿದೆ. ಆದರೆ ಈ ಆದೇಶದಲ್ಲಿ ಮುಂದಿನ ಆದೇಶದ ವರೆಗೂ ಎನ್ನುವ ಅಂಶ ಇರುವ ಕಾರಣ ಈ ಶಾಸಕರನ್ನು ರಾಜ್ಯ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಮುಂದುವರಿಸುವ ಸಾಧ್ಯತೆ ಇದೆ. ಒಂದೊಮ್ಮೆ ಇವರನ್ನು ನಿಗಮಗಳ ಅಧ್ಯಕ್ಷ ಹುದ್ದೆಯಿಂದ ಬಿಡುಗಡೆಗೊಳಿಸಿದರೆ ಮತ್ತೆ ಇವರು ಸಂಪುಟ ಪುನಾರಚನೆ ವೇಳೆ ಅಕಾಂಕ್ಷಿಗಳಾಗಿ ಲಾಬಿ ಆರಂಭಿಸುತ್ತಾರೆ ಎನ್ನುವ ಲೆಕ್ಕಾಚಾರ ಕೂಡ ಪಕ್ಷದ ನಾಯಕರದು ಎನ್ನಲಾಗಿದೆ.

ಕಾರ್ಯಕರ್ತರ ಕುರ್ಚಿಗೆ ಕಂಟಕ ಏಕೆ?

ಸರಕಾರ ಎರಡನೇ ಕಂತಿನ ನೇಮಕದಲ್ಲಿ ಮಾಜಿ ಶಾಸಕರು, ಚುನಾವಣೆಯಲ್ಲಿ ಟಿಕೆಟ್ ವಂಚಿತರು, ಪಕ್ಷದ ವಿವಿಧ ಹಂತದಲ್ಲಿ ಪದಾಧಿಕಾರಿಗಳಾಗಿ ಸಂಘಟನೆಗೆ ಸುಧೀರ್ಘಕಾಲ ದುಡಿದವರೂ ಸೇರಿದಂತೆ ಸುಮಾರು 44 ಮಂದಿ ಮುಖಂಡರಿಗೆ ಅವಕಾಶ ನೀಡಿತ್ತು. 44 ಮುಖಂಡರಿಗೆ ವಿವಿಧ ನಿಗಮ, ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ನೀಡಿ 2024ರ ಫೆ.28ರಂದು ನೇಮಕ ಆದೇಶ ಹೊರಡಿಸಲಾಗಿತ್ತು. ಆದರೆ ಈ ಆದೇಶದಲ್ಲಿ ಬರೀ ಎರಡು ವರ್ಷಗಳ ಅವಧಿಗೆ ಮಾತ್ರ ಎನ್ನುವ ಅಂಶ ಇತ್ತೇ ವಿನಃ, ಮುಂದಿನ ಆದೇಶದ ವರೆಗೂ ಎನ್ನುವ ವಿಚಾರ ಇರಲಿಲ್ಲ. ಹೀಗಾಗಿ 44 ಮಂದಿ ಅಧ್ಯಕ್ಷರ ಅವಧಿ ಮುಂದಿನ ತಿಂಗಳಾಂತ್ಯಕ್ಕೆ ಮುಕ್ತಾಯಗೊಳ್ಳಲಿದೆ. ಆದರೆ ಸರಕಾರ ಈ ಅಧ್ಯಕ್ಷರನ್ನೂ ಇನ್ನಷ್ಟು ಕಾಲ ಮುಂದುವರಿಸುವ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಿದೆ ಎಂದು ಮುಖ್ಯಮಂತ್ರಿಗಳ ಆಪ್ತ ವಲಯ ತಿಳಿಸಿದೆ.

ಮಹಾಪುರುಷರ ಸಂದೇಶದಂತೆ ಜೀವನ ನಡೆಯಲಿ

ಮಹದೇವಪುರ: ಕನಕದಾಸ, ಅಂಬೇಡ್ಕರ್, ಬಸವಣ್ಣ, ಬಾಬು ಜಗಜೀವನ್, ವೇಮನ ಸೇರಿದಂತೆ ಮಹಾಪುರುಷರ ಪುಸ್ತಕಗಳನ್ನು ಬರೆದು ಹಂಚುವ ಕೆಲಸ ಮುಂದಿನ ದಿನಗಳಲ್ಲಿ ಮಾಡಲಾಗುತ್ತದೆ ಎಂದು ಮಾಜಿ ಸಚಿವ ಅರವಲಿಂದ ಲಿಂಬಾವಳಿ ತಿಳಿಸಿದರು.

ದೊಡ್ಡಕನ್ನೆಲ್ಲಿಯಲ್ಲಿ ಹಮ್ಮಿಕೊಂಡಿದ್ದ ಶ್ರೀ ಮಹಾಯೋಗಿ ವೇಮನ ಮತ್ತು ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಮಹಾಪುರುಷನ ತನ್ನ ಸಂದೇಶದಲ್ಲಿ ಎಲ್ಲರೂ ಸಾಮರಸ್ಯದಿಂದ ಜೀವನ ಸಾಗಿಸಿಕೊಂಡು ಹೋಗಬೇಕೆಂದು ಹೇಳಿರುವುದು. ಇದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ನಾವು ಹಿಂದೆ ಇದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಬಿಎ ಕರಡು ಮೀಸಲಾತಿ ಪ್ರಕಟಣೆ ಆಗಿದೆ. ಅಧಿಕೃತ ಪ್ರಕಟಣೆ ಒಂದು ವಾರದಲ್ಲಿ ಆಗುತ್ತೆ. ನಮ್ಮಲ್ಲಿ ಜಾತಿ ಜನಾಂಗದ ಲೆಕ್ಕಾಚಾರ ಹಾಕುತ್ತಿದ್ದಾರೆ. ಜನರ ಸೇವೆ ಮಾಡುವ ನಾಯಕ ಯಾರೇ ಆದರೂ ಯಾವುದೇ ಜಾತಿ ನೋಡದೆ ಅವರನ್ನು ಗೆಲ್ಲಿಸಿಕೊಂಡು ಬರುವ ಕೆಲಸ ಮಾಡಬೇಕು ಎಂದು ಹೇಳಿದರು.

ಸರಕಾರಿ ಮೈದಾನಗಳಲ್ಲಿ ಖಾಸಗಿ ಕಾರ್ಯಕ್ರಮ ಮಾಡಬಾರದೆಂದು ಸರಕಾರ ಸೂಚಿಸಿರುವುದು ಸರಿಯಲ್ಲ. ಗ್ರಾಮಗಳ ದೊಡ್ಡ

ದೊಡ್ಡಕನ್ನೆಲ್ಲಿಯಲ್ಲಿ ನಡೆದ ಮಹಾಯೋಗಿ ವೇಮನ ಮತ್ತು ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತ್ಯುತ್ಸವ ಕಾರ್ಯಕ್ರಮವನ್ನು ಮಾಜಿ ಸಚಿವ ಅರವಿಂದ್ ಲಿಂಬಾವಳಿ ಉದ್ಘಾಟಿಸಿದರು.

ಹಬ್ಬ ಸೇರಿದಂತೆ ಸಾರ್ವಜನಿಕರಿಗೆ ಉಪಯೋಗಕ್ಕೆ ಬರುವ ಕಾರ್ಯಕ್ರಮಗಳನ್ನು ಮೈದಾನಗಳಲ್ಲಿ ಹಮ್ಮಿಕೊಳ್ಳಲಾಗುತ್ತಿತ್ತು ಈ ರೀತಿಯ ನಿರ್ಧಾರದಿಂದ ಹಲವು ಸಮಸ್ಯೆಗಳು ಎದುರಾಗಿವೆ ಎಂದರು.

ಕರ್ನಾಟಕ ರಾಜ್ಯ ರೆಡ್ಡಿಜನಸಂಘದ ನಿರ್ದೇಶಕರು ಹಾಗೂ ರಾಜ್ಯ ಸಂಘಟನಾ ಅಧ್ಯಕ್ಷರಾದ ಎಂ.ಸಿ.ಪ್ರಭಾಕರ್ ರೆಡ್ಡಿ ಮಾತನಾಡಿ, ನಾಲ್ಕು ಸಾಲಿನ ಐದು ಸಾವಿರ ಪದ್ಯಗಳನ್ನು ವೇಮನರವರ ಬಗ್ಗೆ ರಚಿಸಿದ್ದು ಸರ್ವಜನಾಂಗದ ಸಾರಸಮ್ಯಕ್ಕೆ ಇದು ಉದಾಹರಣೆಯಾಗಿದೆ. ಬೆಂಗಳೂರು ಪೂರ್ವ ತಾಲೂಕಿನಲ್ಲಿ ಸ್ಥಳ ಗುರುತಿಸಿ ವೇಮನ ಭವನ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಬೆ.ನ.ವಿಧಾನಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ರಾಜ್ಯ ಸಭಾ ಮಾಜಿ ಸದಸ್ಯರಾದ ಕೆ.ಸಿ.ರಾಮಮೂರ್ತಿ, ಶಾಸಕರಾದ ಮಂಜುಳಾ ಲಿಂಬಾವಳಿ, ನಗರ ಮಂಡಲ ಅಧ್ಯಕ್ಷ ಶ್ರೀಧರ್ ರೆಡ್ಡಿ, ಗ್ರಾಮಾಂತರ ಅಧ್ಯಕ್ಷ ಪಿಳ್ಳಪ್ಪ, ಮಾಜಿ ಅಧ್ಯಕ್ಷರಾದ ಮನೋಹರ್ ರೆಡ್ಡಿ, ರಾಜಾರೆಡ್ಡಿ, ಮುಖಂಡರಾದ ರಾಜೇಶ್, ಅಶೋಕ್ ರೆಡ್ಡಿ, ಟೆಂಟ್ ರಮೇಶ್, ಲೋಕೇಶ್, ನಾಗೇಶ್ ಮತ್ತಿತರರಿದ್ದರು.

ಸಮಾಚಾರ ಸಣ್ಣದಲ್ಲ

ಕನ್ನಡ ತಂತ್ರಜ್ಞಾನದಲ್ಲಿ ಎಐ ಬರಬೇಕು

ಬೆಂಗಳೂರು: ನೂತನ ತಂತ್ರಜ್ಞಾನಗಳನ್ನು ಕನ್ನಡದ ಉತ್ಕೃಷ್ಟ ಬಳಕೆಗಾಗಿ ಅಣಿಗೊಳಿಸಿ, ಹೊಸ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಯಥಾವತ್ತಾಗಿಡುವ ಮೂಲಕ ಕೃತಕ ಬುದ್ಧಿಮತ್ತೆ ಭಾಷಾಂತರವನ್ನು ಫ್ರೀ ಎಡಿಟ್ ಮತ್ತು ಪೋಸ್ಟ್ ಎಡಿಟ್ ಮಾಡಲಾರಂಬಿಸಿದರೆ, ಕನ್ನಡದ ದೊಡ್ಡ ಭಾಷಾಂತರ ಪಡೆಗಳು ಉದ್ಭವವಾಗುವುದರಲ್ಲಿ ಸಂದೇಹವಿಲ್ಲ ಎಂದು ಭಾಷಾ ವಿದ್ವಾಂಸ ತಾರಕೇಶ್ವರ್ ಅಭಿಪ್ರಾಯಪಟ್ಟರು. ಸೇಂಟ್ ಕ್ಲಾರೆಟ್ ಸ್ವಾಯತ್ತ ವಿದ್ಯಾಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ಕಾನ್ಫರೆನ್ಸ್ ನ ನಾಲ್ಕನೇ ದಿನದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಯಾವುದೇ ಭಾಷೆ ಒಂದು ದ್ವೀಪವಾಗಿ ಉಳಿಯದೆ ಬೇರೆ ಬೇರೆ ಭಾಷೆಗಳಿಂದ ತನ್ನನ್ನು ವೃದ್ಧಿಸಿ ಕೊಳ್ಳಬೇಕಿದೆ. ನಾವು ಭಾಷಾ ಸಶಕ್ತರಾಗುವವರೆಗೂ ಕನ್ನಡವನ್ನು ಕ್ರಿಯಾಪದದೊಂದಿಗೆ ನಾಮಪದ ಮಾಡಿ ಮಾತನಾಡಬೇಕಿದೆ ಎಂದರು. ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಭಾಷಾಂತರ ಸಾಹಿತ್ಯ ಯೂಟ್ಯೂಬ್ ಹಾಗೂ ಡಿಜಿಟಲ್ ಸಾಮಾಜಿಕ ಮಾಧ್ಯಮಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಳ್ಳಬೇಕಿದೆ. ಕನ್ನಡದಲ್ಲಿ ಬಸ್ಸು ಎಂಬ ಪದವನ್ನು ಉದಾಹರಣೆ ಕೊಡುವ ಮೂಲಕ, ಹೊಸ ಪರಿಕಲ್ಪನೆಗಳು ಯಾವುದೇ ಭಾಷೆಯಿಂದ ಬಂದರೂ ಅವನ್ನು ನಾವು ಪಡೆದುಕೊಳ್ಳಬೇಕಿದೆ. ಓಟಿಟಿ ಫ್ಲ್ಯಾಟ್ ಫಾರ್ಮ್ ಆದ ನೆಟ್ ಫ್ಲೆಕ್ಸ್,ಅಮೆಜಾನ್ ಗಳಲ್ಲಿ ಚಿತ್ರಗಳು ಅರ್ಥವಾಗಲು ಸಬ್ ಟೈಟಲ್‌ಗಳು ಇರಬೇಕು. ಅವು ಹೆಚ್ಚು ಕನ್ನಡದಲ್ಲಿ ಆಗುವಂತಾಗಬೇಕು. ಜತೆಗೆ ಕನ್ನಡದ ಪಠ್ಯ ಪುಸ್ತಕಗಳೂ ದೊರೆಯುವಂತಾಗಬೇಕಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಹಾಗಾಗಿ ಭಾಷಾಂತರಗಳನ್ನು ಮುದ್ರಿತ ಅನುವಾದ ಎಂದು ನೋಡದೆ, ವಿಶಾಲಾರ್ಥದಲ್ಲಿ ಸ್ವೀಕರಿಸಬೇಕಾಗಿದೆ ಎಂದರು. ಈ ಸಂದರ್ಭದಲ್ಲಿ ಕವಿ ಡಾ. ಸತ್ಯಮೂರ್ತಿಗೂಗಿ, ಕುಮಾರ್ ಇಂದ್ರಬೆಟ್ಟ, ಮಾದೇಶ್, ಲಿಂಗರಾಜು ಎಮ್.ಎಸ್ ಸೇರಿದಂತೆ 75ಕ್ಕೂ ಹೆಚ್ಚು ಸಾಹಿತ್ಯಾ ಸಕ್ತರು ಭಾಗವಹಿಸಿದ್ದರು.

93 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

ಕೆ.ಆರ್.ಪುರ: ಮಕ್ಕಳ ತಮ್ಮ ಮೇಲೆ ವಿಶ್ವಾಸವಿಟ್ಟು ಶ್ರಮಪಟ್ಟು ಓದಿದರೆ ಅಂದುಕೊಂಡಿದನ್ನು ಸಾಧಿಸಬಹುದು ಎಂದು ಕೆ.ಆರ್.ಪುರದ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಎಂ.ಎಸ್.ರಾಧಾ ಅಭಿಪ್ರಾಯಪಟ್ಟರು. ಕೆ.ಆರ್.ಪುರದ ಶ್ರೀವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 10ನೇ ತರಗತಿಯಲ್ಲಿ ಹೆಚ್ಚು ಅಂಕಪಡೆದ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅತಿ ಹಿಂದುಳಿದ ವರ್ಗದ ಪಿಯುಸಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 93 ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಪ್ರೋತ್ಸಾಹಧನ ವಿತರಿಸಿ ಅವರು ಮಾತನಾಡಿದರು. ಶ್ರೀ ವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಕೆ.ವಿ. ಮುನಿಸ್ವಾಮಿ ಮಾತನಾಡಿ, ಕೆಲ ವರ್ಷಗಳಿಂದ ಬಡ ವಿದ್ಯಾರ್ಥಿಗಳಿಗಾಗಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಈ ವರ್ಷ ₹2.95 ಲಕ್ಷವನ್ನು 93 ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ ಎಂದರು. ಚಾರ್ಟರ್ಡ್ ಅಕೌಂಟೆಂಟ್ ನವೀನ್ ಕುಮಾರ್, ಕಾಲೇಜು ನಿರ್ದೇಶಕ ಪ್ರೊ.ವಿ.ಎಂ.ರವಿ, ಆಡಳಿತಾಧಿಕಾರಿ ಡಾ.ಪುಟ್ಟರಾಜು, ಪ್ರಾಂಶುಪಾಲ ಜಿ.ಇ.ಪ್ರಕಾಶ್, ಉಪಪ್ರಾಂಶುಪಾಲ ನಾಗಾರ್ಜುನ, ಎಚ್.ಎಂ. ಗೀತಾಂಜಲಿ ಉಪಸ್ಥಿತರಿದ್ದರು.

ವಾರ್ಡ್‌ವಾರು ಮತದಾರರ ಪಟ್ಟಿಯ ತಯಾರಿಕೆ ಕುರಿತ ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ನಿಯಮಾನುಸಾರ ಮತದಾರರ ಪಟ್ಟಿ ತಯಾರಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕಾ ಪ್ರಕ್ರಿಯೆಯನ್ನು ನಿಯಮಾನುಸಾರ ಹಾಗೂ ಪಾರದರ್ಶಕವಾಗಿ ನಡೆಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನಗರದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಜಿಬಿಎಯ ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮತದಾರರ ಪಟ್ಟಿಯ ತಯಾರಿಕೆ ಕುರಿತು ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿ, ಜಿಬಿಎ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗದಿಂದ 22ನೇ ಜನವರಿ 2026ರಂದು (ಪ್ರತಿ ಲಗತ್ತಿಸಲಾಗಿದೆ) ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದ್ದು, ಅದರಂತೆ ಎಲ್ಲಾ ಐದು ನಗರ ಪಾಲಿಕೆಗಳ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಂಡು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಮತದಾರರ ನೋಂದಣಾಧಿಕಾರಿಗಳು ಚುನಾವಣಾ ಸಂಬಂಧಿತ ಕಾರ್ಯಗಳಿಗೆ ಪ್ರತಿದಿನ 2-3 ಗಂಟೆಗಳ ಸಮಯವನ್ನು ಮೀಸಲಿಟ್ಟು ಕಾರ್ಯ ನಿರ್ವಹಿಸಬೇಕು. ಮತದಾರರ ನೋಂದಣಾಧಿಕಾರಿಗಳು (ಕಂದಾಯ ಅಧಿಕಾರಿಗಳು) ಆಸ್ತಿ ತೆರಿಗೆ ಸಂಗ್ರಹದ ಜತೆಗೆ ಚುನಾವಣಾ ಕಾರ್ಯಗಳಿಗೂ ಆದ್ಯತೆ ನೀಡಿ, ಯಾವುದೇ ಲೋಪದೋಷಗಳು ಉಂಟಾಗದಂತೆ ಮತದಾರರ ಪಟ್ಟಿಯನ್ನು ತಯಾರಿಸಬೇಕು ಎಂದು ಸೂಚನೆ ನೀಡಿದರು.

ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಸೇರ್ಪಡೆ, ತಿದ್ದುಪಡಿ ಹಾಗೂ ತೆಗೆಯುವಿಕೆ ಪ್ರಕ್ರಿಯೆ ನಡೆಸುವಾಗ ಸಂಬಂಧಿತ ದಾಖಲೆಗಳನ್ನು ಸರಿಯಾಗಿ ಶೇಖರಿಸಿಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಚುನಾವಣಾ ವಿಭಾಗದ ವಿಶೇಷ ಆಯುಕ್ತ ರಾಮಚಂದ್ರನ್ ಮಾತನಾಡಿ, 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಕಾರ್ಯದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕು. ಆಯಾ ನಗರ ಪಾಲಿಕೆ ಗಳಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿದ ಹಕ್ಕು- ಆಕ್ಷೇಪಣೆಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ನಮೂನೆ 6, 7 ಹಾಗೂ 8ಗಳನ್ನು ಸರಿಯಾಗಿ ವಿಲೇ ವಾರಿ ಮಾಡಬೇಕು. ಜಿಬಿಎ ಚುನಾವಣೆಗೆ ಸಂಬಂಧಿಸಿ ದಂತೆ ರಾಜ್ಯ ಚುನಾವಣಾ ಆಯೋಗದಿಂದ ನೇಮಕಗೊಳ್ಳುವ ವೀಕ್ಷಕರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಈ ವೇಳೆ ದಕ್ಷಿಣ, ಉತ್ತರ, ಕೇಂದ್ರ ಹಾಗೂ ಪಶ್ಚಿಮ ನಗರ ಪಾಲಿಕೆಗಳ ಅಪರ ಆಯುಕ್ತರು, ಸಹಾಯಕ ಆಯುಕ್ತರು, ಮತದಾರರ ನೋಂದಣಾಧಿಕಾರಿಗಳು, ಮತದಾರರ ಸಹಾಯಕ ನೋಂದಣಾಧಿಕಾರಿಗಳು, ಅಧಿಕಾರಿಗಳು ಇದ್ದರು.

ನಗರದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಜಿಬಿಎಯ ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮತದಾರರ ಪಟ್ಟಿಯ ತಯಾರಿಕೆ ಕುರಿತು ಸಭೆ ನಡೆಯಿತು.

ಆಯಾ ನಗರ ಪಾಲಿಕೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವಾರ್ಡ್ ಗಡಿಗಳನ್ನು ಖುದ್ದಾಗಿ ಪರಿಶೀಲನೆ ನಡೆಸಬೇಕು. ಗಡಿಗಳಲ್ಲಿ ಯಾವುದೇ ರೀತಿಯ ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳಬೇಕು. ಮತದಾರರ ಪಟ್ಟಿ ತಯಾರಿಕಾ ಪ್ರಕ್ರಿಯೆಯನ್ನು ನಿಯಮಾನುಸಾರ ಹಾಗೂ ಪಾರದರ್ಶಕವಾಗಿ ನಡೆಸಬೇಕು.

-ಮಹೇಶ್ವರ್ ರಾವ್ ಮುಖ್ಯ ಆಯುಕ್ತ

ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳಿ

ದಕ್ಷಿಣ ನಗರ ಪಾಲಿಕೆ ಆಯುಕ್ತ ರಮೇಶ್ ಮಾತನಾಡಿ, ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್ ಗಡಿಗಳನ್ನು ಗುರುತಿಸಲಾಗಿದ್ದು, ಅದರಂತೆ ಎಲ್ಲಾ ಮತದಾರರು ತಮ್ಮ ಸಂಬಂಧಿತ ವಾರ್ಡ್ ಗಡಿ ಒಳಗೇ ಬರುವಂತೆ ಖಚಿತಪಡಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಆಯಾ ನಗರ ಪಾಲಿಕೆಗಳ ವಾರ್ಡ್ ಗಡಿಗಳನ್ನು ಮ್ಯಾಪ್‌ನ್ನು ಬೂತ್ ಮಟ್ಟದ ಮೇಲ್ವಿಚಾರಕರು ಹಾಗೂ ಬಿಎಲ್‌ಒಗಳಿಗೆ ವಿತರಿಸಿ, ಅದರ ಆಧಾರದ ಮೇಲೆ ಸಮಗ್ರ ಪರಿಶೀಲನೆ ನಡೆಸಿ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಬೇಕು. ಕುಟುಂಬದ ಸದಸ್ಯರ ಮತಗಳು ಒಂದೇ ಮತಗಟ್ಟೆಯೊಳಗೆ ಬರುವಂತೆ ನೋಡಿಕೊಳ್ಳಬೇಕು. ಸ್ಥಳೀಯ ನಾಗರಿಕರು, ರಾಜಕೀಯ ಪ್ರತಿನಿಧಿಗಳು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಭೆ ನಡೆಸಿ, ಮತದಾರರು ಒಂದೇ ವಾರ್ಡ್‌ನಲ್ಲೇ ಒಳಗೊಂಡಿದ್ದಾರೆ ಎಂಬ ಮಾಹಿತಿ ನೀಡುವ ಮೂಲಕ ಯಾವುದೇ ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳುವಂತೆ ಸೂಚನೆ ನೀಡಿದರು.

ಜಾರ್ಜಿಯಾದಲ್ಲಿ ಪತ್ನಿ ಸೇರಿ ನಾಲ್ವರು ಸಂಬಂಧಿಕರ ಕಗ್ಗೊಲೆ | ಮೂರು ಮಕ್ಕಳು ಬಚಾವ್

ಭಾರತೀಯನಿಂದ ಮಾರಣಹೋಮ

ಜಾರ್ಜಿಯಾ: ಅಮೆರಿಕದ ಜಾರ್ಜಿಯಾದಲ್ಲಿ ಕೌಟುಂಬಿಕ ವಿವಾದಕ್ಕೆ ಸಂಬಂಧಿಸಿ ನಡೆದ ಗುಂಡಿನ ದಾಳಿಯಲ್ಲಿ ಭಾರತೀಯ ಮೂಲದ ಕುಟುಂಬದ ನಾಲ್ವರು ಬಲಿಯಾಗಿದ್ದಾರೆ. ಕುಟುಂಬ ಕಲಹದಿಂದ ಸಿಟ್ಟಿಗೆದ್ದ ಭಾರತೀಯ ಮೂಲದ ವಿಜಯ್ ಕುಮಾರ್ (51) ತನ್ನ ಪತ್ನಿ ಹಾಗೂ ಮೂವರು ಸಂಬಂಧಿಕರನ್ನು ಗುಂಡಿಕ್ಕಿ ಕೊಂದಿದ್ದಾನೆ. ಜಾರ್ಜಿಯಾ ರಾಜ್ಯದ ಲಾರೆನ್ಸ್‌ವಿಲ್ಲೆ ನಗರದಲ್ಲಿ ಈ ದುರ್ಘಟನೆ ನಡೆದಿದೆ.

ಅಟ್ಲಾಂಟಾ ನಿವಾಸಿಗಳಾದ ವಿಜಯ್ ಕುಮಾರ್ ಮತ್ತು ಮೀಮು ಡೋಗ್ರಾ ದಂಪತಿ ಮಧ್ಯೆ ವಾಗ್ವಾದ ಏರ್ಪಟ್ಟಿತ್ತು. ಸಿಟ್ಟಿನ ಭರದಲ್ಲಿ ವಿಜಯ ಕುಮಾರ್, ಪತ್ನಿ ಮೀಮು (43), ಸಂಬಂಧಿಕರಾದ ಲಾರೆನ್ಸ್‌ವಿಲ್ಲೆಯ ಗೌರವ್ ಕುಮಾರ್ (33), ನಿಧಿ ಚಂದರ್ (37) ಮತ್ತು ಹರೀಶ್ ಚಂದರ್ (38) ಅವರ ಮೇಲೆ ಏಕಾಏಕಿ ಗುಂಡು ಹಾರಿಸಿ ಹತ್ಯೆ ಮಾಡಿದ್ದಾನೆ ಎಂದು ಗ್ವಿನೆಟ್ ಕೌಂಟಿ ಪೊಲೀಸರು ತಿಳಿಸಿದ್ದಾರೆ. ಘಟನೆ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ.

ಘಟನೆ ಸಮಯದಲ್ಲಿ ದಂಪತಿಯ ಮೂವರು ಮಕ್ಕಳು ಬಟ್ಟೆಗಳನ್ನಿಡುವ ದೊಡ್ಡ ಕಬೋರ್ಡ್‌ನಲ್ಲಿ ಬಚ್ಚಿಟ್ಟುಕೊಂಡು ಪ್ರಾಣ ಉಳಿಸಿಕೊಂಡಿದ್ದಾರೆ.

ಪೊಲೀಸರಿಗೆ ಮಾಹಿತಿ ನೀಡಿ ಬದುಕುಳಿದರು

ಬ್ರೂಕ್ ಐವಿ ಕೋರ್ಟ್‌ನ 1000 ಬ್ಲಾಕ್‌ನಲ್ಲಿ ಗುಂಡಿನ ದಾಳಿ ನಡೆದಿರುವ ಬಗ್ಗೆ ಶುಕ್ರವಾರ ಬೆಳಗ್ಗಿನ ಜಾವ 2:30 ರ ಸುಮಾರಿಗೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಘಟನೆ ವೇಳೆ ಬಟ್ಟೆ ವಾರ್ಡ್‌ರೋಬ್‌ನಲ್ಲಿ ಬಚ್ಚಿಟ್ಟುಕೊಂಡಿದ್ದ ಕುಮಾರ್ ಮತ್ತು ಡೋಗ್ರಾ ದಂಪತಿ ಹಿರಿಯ ಪುತ್ರ, 911ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದಾನೆ. ತಕ್ಷಣವೇ ಪೊಲೀಸರು ಘಟನಾ ಸ್ಥಳಕ್ಕೆ ದೌಡಾಯಿಸಿದ್ದು ಪರಾರಿಯಾಗಲು ಯತ್ನಿಸಿದ ಆರೋಪಿಯನ್ನು ಬೆನ್ನಟ್ಟಿ ಬಂಧಿಸುವಲ್ಲಿ ಯಶಸ್ವಿಯಾದರು. ದಂಪತಿ ಕಲಹದಲ್ಲಿ ಅನಾಥರಾದ ಮೂವರು ಮಕ್ಕಳನ್ನು ಕುಟುಂಬ ಸದಸ್ಯರಿಗೆ ಒಪ್ಪಿಸಲಾಗಿದೆ. ವಿಜಯ್ ಕುಮಾರ್ ವಿರುದ್ಧ 12 ಪ್ರಕರಣ ದಾಖಲಾಗಿವೆ.

ತಂದೆಗೆ ಇರಿದು ಮಗ ಆತ್ಮಹತ್ಯೆ

ಪುತ್ತೂರು: ಕ್ಷಣಿಕ ಆವೇಶವೊಂದು ಸುಂದರ ಸಂಸಾರದಲ್ಲಿ ಕಿಚ್ಚು ಹಚ್ಚಿದ್ದು, ತಂದೆಯೊಂದಿಗೆ ಜಗಳವಾಡಿದ ಮಗ ಆತನಿಗೆ ಚೂರಿಯಿಂದ ಇರಿದು ಬಳಿಕ ತಾನು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಭೀಕರ ಘಟನೆ ರಾಮಕುಂಜ ಸಮೀಪದ ಪಾದೆಯಲ್ಲಿ ಶನಿವಾರ ಸಂಜೆ ನಡೆದಿದೆ. ರಾಮಕುಂಜ ಗ್ರಾಮದ ಪಾದೆ ನಿವಾಸಿ ವಸಂತ ಅಮೀನ್ ಅವರ ಪುತ್ರ ಮೋಕ್ಷ ಮೃತಪಟ್ಟ ದುರ್ದೈವಿ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿರುವ ವಸಂತ ಅಮೀನ್ ಅವರು ಮಂಗಳೂರಿನ ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಕೇರಳ ಮೂಲದವರಾದ ವಸಂತ ಅಮೀನ್ ಅವರು ಪಾದೆ ಎಂಬಲ್ಲಿ ನೆಲೆಸಿದ್ದರು. ಅವರ ಪುತ್ರ ಮೋಕ್ಷ ಮಂಗಳೂರಿನ ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಕಲಿಯುತ್ತಿದ್ದನು. ಜ.24ರ ಸಂಜೆ ತಂದೆ ಮತ್ತು ಮಗನ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳ ಆರಂಭವಾಗಿದೆ. ವಾಗ್ವಾದ ವಿಕೋಪಕ್ಕೆ ತಿರುಗಿದಾಗ ಆವೇಶಕ್ಕೊಳಗಾದ ಮೋಕ್ಷ, ಮನೆಯಲ್ಲಿದ್ದ ಚೂರಿಯಿಂದ ತಂದೆಗೆ ಇರಿದಿದ್ದಾನೆ. ರಕ್ತದ ಮಡುವಿನಲ್ಲಿ ತಂದೆ ಬಿದ್ದಿರುವುದನ್ನು ಕಂಡು ಮನೆಯಲ್ಲಿದ್ದ ಕೋವಿಯಿಂದ ತನ್ನ ಮೇಲೆ ತಾನೇ ಗುಂಡು ಹಾರಿಸಿಕೊಂಡಿದ್ದಾನೆ. ತೀವ್ರ ರಕ್ತಸ್ರಾವದಿಂದ ಮೋಕ್ಷ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗಾಯಾಳು ತಂದೆಯನ್ನು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ದಾಖಲಿಸಲಾ ಗಿದ್ದು, ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ. ಕಡಬ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲ್ಯಾಪ್‌ಟಾಪ್ ಬದಲಿಗೆ ನಗದು ಬಹುಮಾನ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅತಿಹೆಚ್ಚು ಅಂಕ ಪಡೆಯುವ ಮೂವರಿಗೆ ರಾಜ್ಯ ಸರಕಾರ ಇಷ್ಟು ದಿನ ನೀಡುತ್ತಿದ್ದ ಲ್ಯಾಪ್‌ಟಾಪ್ ಬದಲಿಗೆ 50 ಸಾವಿರ ನಗದು ಬಹುಮಾನ ನೀಡಲು ತೀರ್ಮಾನಿಸಿದೆ.

ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಮೊದಲ 3 ಸ್ಥಾನಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ಲ್ಯಾಪ್‌ಟಾಪ್ ಬದಲಿಗೆ, ಈಗ ನೇರವಾಗಿ 50,000 ರು. ಬಹುಮಾನವನ್ನು ನೀಡುವ ಸಂಬಂಧ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಟಾಪ್-3 ಸ್ಥಾನ ಪಡೆದ ವಿದ್ಯಾರ್ಥಿಗಳ ಆಧಾರ್‌ಗೆ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಹಣವನ್ನು ಜಮೆ ಮಾಡಲಾಗುತ್ತದೆ. 2024-25ನೇ ಶೈಕ್ಷಣಿಕ ವರ್ಷದಲ್ಲಿ ಒಟ್ಟು 758 ವಿದ್ಯಾರ್ಥಿಗಳು ಈ ಸೌಲಭ್ಯಕ್ಕೆ ಅರ್ಹರಾಗಿದ್ದಾರೆ ಎಂದು ಗುರುತಿಸಲಾಗಿದೆ. ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ಅರ್ಹ ವಿದ್ಯಾರ್ಥಿಗಳ ಪಟ್ಟಿ ಸಿದ್ಧಪಡಿಸಲಾಗಿದ್ದು, ನೇರವಾಗಿ ಅವರ ಖಾತೆಗೆ ಹಣ ತಲುಪಲಿದೆ ಎಂದು ಸ್ಪಷ್ಟಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ತಮಗೆ ಬೇಕಾದ ಶೈಕ್ಷಣಿಕ ಪರಿಕರಗಳನ್ನು ಖರೀದಿಸಲು ಇಲ್ಲವೇ ಉನ್ನತ ಶಿಕ್ಷಣದ ಶುಲ್ಕಕ್ಕೆ ಈ ಹಣವನ್ನು ಬಳಸಿಕೊಳ್ಳಲು ಸ್ವಾತಂತ್ರ್ಯ ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಜ.27ರಿಂದ ಎಸ್ಸೆಸ್ಸೆಲ್ಸಿ ಪ್ರಿಪರೇಟರಿ-2 ಶುರು

ಬೆಂಗಳೂರು: ಪ್ರಸಕ್ತ ಸಾಲಿನ ರಾಜ್ಯಮಟ್ಟದ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆ-2ರ ವೇಳಾಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಜ.27 ರಿಂದ ಫೆ.2 ರವರೆಗೆ 10ನೇ ತರಗತಿ ಪೂರ್ವಸಿದ್ಧತಾ ಪರೀಕ್ಷೆ-2 ನಡೆಯಲಿದೆ. ಜ.27ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.45 ಗಂಟೆಯವರೆಗೆ ಕನ್ನಡ ಸೇರಿದಂತೆ ಪ್ರಥಮ ಭಾಷೆ, ಜ.28 ರಂದು ಗಣಿತ, 29 ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ, 30 ರಂದು ಹಿಂದಿ ಸೇರಿದಂತೆ ತೃತೀಯ ಭಾಷೆ, ಜ.31 ರಂದು ವಿಜ್ಞಾನ, ಫೆ.2ರಂದು ಸಮಾಜ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ.

ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿ 225 ಸದಸ್ಯರ ವಂಶವೃಕ್ಷದ ಮಹಾ ಕುಟುಂಬ

ಗೋಳಿಕೈ ಗಣಪತಿ ಹೆಗಡೆಯವರಿಗೆ ಕನಕಾಭಿಷೇಕ

ವಿನುತಾ ಹೆಗಡೆ, ಶಿರಸಿ

ಕನಕಾಭಿಷೇಕ ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರ ಮತ್ತು ಅಪರೂಪದ ಧಾರ್ಮಿಕ ವಿಧಿಯಾಗಿದೆ. ಇದನ್ನು ಸಾಮಾನ್ಯವಾಗಿ ಸುವರ್ಣಾಭಿಷೇಕ ಎಂದೂ ಕರೆಯಲಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ವಂಶಸ್ಥರನ್ನು (ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು) ನೋಡಿದಾಗ ಅಥವಾ ಒಂದು ನಿರ್ದಿಷ್ಟ ವಯಸ್ಸನ್ನು ತಲುಪಿದಾಗ ಈ ಸಂಭ್ರಮವನ್ನು ಆಚರಿಸಲಾಗುತ್ತದೆ.

ನಾಲ್ಕನೇ ತಲೆಮಾರಿನ ದರ್ಶನ

ಒಬ್ಬ ವ್ಯಕ್ತಿಗೆ ಮರಿ ಮಗ ಹುಟ್ಟಿ, ಆ ಮಗುವಿಗೆ ನಾಮಕರಣವಾದ ನಂತರ ಈ ಆಚರಣೆ ನಡೆಯುತ್ತದೆ. ಅಂದರೆ, ಒಬ್ಬ ವ್ಯಕ್ತಿ ತನ್ನ ಮಗನ ಮಗನನ್ನು ನೋಡಿದಾಗ ಇದು ನಡೆಯುತ್ತದೆ. ಸಾಮಾನ್ಯವಾಗಿ 90 ರಿಂದ 100 ವರ್ಷಗಳ ಸುದೀರ್ಘ ಆಯುಷ್ಯವನ್ನು ಹೊಂದಿದವರಿಗೆ ಈ ಗೌರವ ಸಲ್ಲಿಕೆಯಾಗುತ್ತದೆ.

ವಂಶದ ಅಭಿವೃದ್ಧಿ

ಒಬ್ಬ ವ್ಯಕ್ತಿಯು ತನ್ನ ವಂಶದ ನಾಲ್ಕು ತಲೆಮಾರುಗಳನ್ನು ನೋಡುವುದು ಪೂರ್ವಜರ ಆಶೀರ್ವಾದ ಮತ್ತು ಪುಣ್ಯದ ಫಲ ಎಂದು ನಂಬಲಾಗಿದೆ.

ಧನ್ಯತಾ ಭಾವ

ಇದು ಜೀವನದ ಪೂರ್ಣತೆಯನ್ನು ಸೂಚಿಸುತ್ತದೆ. ಸಂಸಾರ ಸಾಗರದಲ್ಲಿ ತನ್ನ ಜವಾಬ್ದಾರಿಗಳನ್ನೆಲ್ಲ ಮುಗಿಸಿ, ಸುಖ-ಸಂತೋಷದಿಂದ ಕಾಲ ಕಳೆಯುತ್ತಿರುವ ಹಿರಿಯರಿಗೆ ಸಲ್ಲಿಸುವ ಗೌರವವಿದು.

ಆರೋಗ್ಯದ ಸಂಕೇತ

ಇಷ್ಟು ದೀರ್ಘಕಾಲ ಆರೋಗ್ಯವಾಗಿ ಬದುಕುವುದು ಶಿಸ್ತಿನ ಜೀವನಕ್ಕೆ ಸಾಕ್ಷಿಯಾಗಿರುತ್ತದೆ.

ವಿಧಿವಿಧಾನ ಹೇಗಿರುತ್ತದೆ?: ಹಿರಿಯ ದಂಪತಿಗಳನ್ನು ಪೀಠದ ಮೇಲೆ ಕುಳ್ಳಿರಿಸಿ, ವೇದಘೋಷಗಳ ನಡುವೆ ಚಿನ್ನದ ನಾಣ್ಯಗಳಿಂದ ಅಥವಾ ಚಿನ್ನದ ನೀರನ್ನು (ಚಿನ್ನದ ನಾಣ್ಯ ಸ್ಪರ್ಶಿಸಿದ ನೀರು) ಅವರ ತಲೆಯ ಮೇಲೆ ಅಭಿಷೇಕ ಮಾಡಲಾಗುತ್ತದೆ.

ದಾನ ಧರ್ಮ

ಈ ಸಂದರ್ಭದಲ್ಲಿ ಬಡವರಿಗೆ ಮತ್ತು ಬ್ರಾಹ್ಮಣರಿಗೆ ಅನ್ನ ದಾನ ಹಾಗೂ ವಸ್ತ್ರ ದಾನ ಮಾಡುವುದು ವಾಡಿಕೆ.

ಆಶೀರ್ವಾದ

ಕುಟುಂಬದ ಎಲ್ಲಾ ಕಿರಿಯ ಸದಸ್ಯರು ಹಿರಿಯರ ಪಾದಪೂಜೆ ಮಾಡಿ ಆಶೀರ್ವಾದ ಪಡೆಯುತ್ತಾರೆ. ಕನಕಾ ಭಿಷೇಕ ಕೇವಲ ಒಂದು ಆಚರಣೆಯಲ್ಲ, ಅದು ಹಿರಿಯರ ಮೇಲಿರುವ ಪ್ರೀತಿ, ಗೌರವ ಮತ್ತು ಕೃತಜ್ಞತೆಯನ್ನು ವ್ಯಕ್ತಪ'ಡಿಸುವ ಒಂದು ಸುಂದರ ಕ್ಷಣ. ಇಂಥ ಒಂದು ಅಪರೂಪದ ಕ್ಷಣ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ 'ಗೋಳಿಕೈ ' ಎಂಬ ಪುಟ್ಟ ಗ್ರಾಮದಲ್ಲಿ ನಾಳೆ ಅಂದರೆ ಜ.26ರ ಸೋಮವಾರ ನಡೆಯಲಿದೆ.



ಲಕ್ಷ್ಮೀ ಮತ್ತು ಗಣಪತಿ ಹೆಗಡೆ ಗೋಳಿಕೈ

ದಿವಂಗತ ಗಣಪಮ್ಮ ಮತ್ತು ಶಿವರಾಮ ಹೆಗಡೆ ಗೋಳಿಕೈ.

ಬಡತನದಿಂದ ಬೆಳಕಿನತ್ತ

ಶಿವರಾಮ ಹೆಗಡೆಯವರ ಬದುಕು ಸುಖ ಸೌಕರ್ಯಗಳಿಂದ ಆರಂಭವಾಗಲಿಲ್ಲ. ಹುಟ್ಟಿನಿಂದಲೇ ಬಡತನವನ್ನು ಕಂಡು ಬೆಳೆದ ಅವರು, ತಮ್ಮ ಮಕ್ಕಳು ಅದೇ ಹಾದಿ ಹಿಡಿಯಬಾರದೆಂಬ ದೃಢಸಂಕಲ್ಪವನ್ನು ಜೀವನದ ಧ್ಯೇಯವನ್ನಾಗಿಸಿಕೊಂಡರು. ಶ್ರಮ, ಶಿಸ್ತು ಮತ್ತು ಸತ್ಯನಿಷ್ಠೆಯನ್ನೇ ಬಲವಾಗಿ ಹಿಡಿದುಕೊಂಡು, ಉತ್ತಮ ಕೃಷಿಕರಾಗುವುದರ ಜೊತೆಗೆ, ಮಕ್ಕಳಿಗೆ ಒಳ್ಳೆಯ ತಂದೆಯಾಗಿಯೂ ಅವರು ಬೆಳೆದರು.

''ನಾಲ್ಕು ಜನ ಹೌದು ಅನ್ನುವಂತೆ ಬದುಕಬೇಕು'' ಎಂಬ ಮೌಲ್ಯವನ್ನು ತಮ್ಮ ನಡೆನುಡಿಯಲ್ಲಿ ತೋರಿಸಿದ ದಿವಂಗತ ಶಿವರಾಮ ಹೆಗಡೆ ಮತ್ತು ಗಣಪಮ್ಮ, ಮಕ್ಕಳನ್ನೆಲ್ಲಾ ಸಮಾಜಕ್ಕೆ ಉಪಯುಕ್ತರಾಗುವಂತೆ ಸಜ್ಜುಗೊಳಿಸಿದರು. ಅವರ ಬದುಕಿನ ಫಲವೇ ಇಂದು ಅವರ ವಂಶದ ಸಂತತಿಯು ಸಾಧನೆಗಳಾಗಿ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಬೆಳಗುತ್ತಿದೆ.

ವಿದ್ಯಾರ್ಜನೆಗಾಗಿ ಕಷ್ಟ ನಷ್ಟಗಳನ್ನು ಅನುಭವಿಸಿ ಸಾಧನೆಯ ಶಿಖರ ಏರಿದವರಲ್ಲಿ ದಿವಂಗತ ಕೆ. ಎಸ್. ಹೆಗಡೆ ಮೊದಲಿಗರು. ಸಾಗರದಲ್ಲಿ ಹಿರಿಯ ನ್ಯಾಯವಾದಿಗಳಾಗಿ ಸಮಾಜದಲ್ಲಿ ಗಳಿಸಿದ ಗೌರವ ಅವರಿಗೆ ಸಲ್ಲುತ್ತದೆ. ಉಳಿದ ಸಹೋದರರಿಗೆ ಅವರು ಆದರ್ಶಪ್ರಾಯರು. ಸ್ವಪ್ರಯತ್ನದ ಮೂಲಕ ಮುಂದೆ ಬಂದವರಲ್ಲಿ ಎರಡನೆಯವರು ಸುಬ್ರಾಯ. ಕಾಶೀನಾಥರ ಮಾರ್ಗದರ್ಶನದಲ್ಲಿ ದಾವಣಗೆರೆಗೆ ಬಂದು, ವ್ಯಾಪಾರ ವೃತ್ತಿಯಲ್ಲಿ ಸಾಧನೆ ಮಾಡಿದವರು ಮೋಹನ. ಮೋಹನನ ಆಶ್ರಯದಿಂದಲೇ ವಿಠಲನೂ ಕೂಡ ಸ್ವಾವಲಂಬಿಯಾಗಿ ಸುಂದರ ಬದುಕು ಕಟ್ಟಿಕೊಂಡಿದ್ದಾರೆ.

ಮೊಮ್ಮಕ್ಕಳ ಇನ್ನೊಂದು ಶಿಖರ

ಈ ಕುಟುಂಬದ ಮೊಮ್ಮಕ್ಕಳ ಸಾಧನೆಗಳು ಮತ್ತೊಂದು ಅಧ್ಯಾಯವೇ ಸರಿ. ಕುಟುಂಬದಲ್ಲಿ ಮೊದಲ ಚಿನ್ನದ ಪದಕ ಗಳಿಸಿದ ಕೀರ್ತಿ ಕಾಶೀನಾಥರ ಮಗಳು ಶ್ರೀಲಕ್ಷ್ಮಿ ಅವರಿಗೆ ಸಲ್ಲುತ್ತದೆ. ಮೈಸೂರು ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಮೂರು ಚಿನ್ನದ ಪದಕ ಪಡೆದ ಅವಳ ಪತಿ ವಿಷ್ಣು ಸಭಾಹಿತರು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು ಎನ್ನುವುದು ಕುಟುಂಬದ ಹೆಮ್ಮೆಯ ಸಂಗತಿ. ಹಿರಿಯ ಮಗ ಮಂಜುನಾಥನ ಮಗ ಅರುಣ, ಚಿಕ್ಕ ವಯಸ್ಸಿನಲ್ಲಿಯೇ ಹೆಸರು ಮಾಡಿದ ನ್ಯಾಯವಾದಿ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ ಮೊಮ್ಮಗಳು ಮೇಘಾ ಸುಬ್ರಾಯನ ಮಗಳು ಬೆಂಗಳೂರು ವಿಶ್ವವಿದ್ಯಾಲಯದ ಅಂತಿಮ ದಂತ ವೈದ್ಯಕೀಯ ಪರೀಕ್ಷೆಯಲ್ಲಿ ನಾಲ್ಕು ಚಿನ್ನದ ಪದಕ ಪಡೆದರು. ಕುಟುಂಬದ ಹಲವರು ಪ್ರಸಿದ್ಧಿ ಪಡೆದಿರುವುದು, ಸಾಧನೆ ಮಾಡಿರುವುದು ಗಣಪಮ್ಮ ಮತ್ತು ಶಿವರಾಮ ಹೆಗಡೆಯವರ ಬದುಕಿನ ಸಾರ್ಥಕತೆಯ ಜೀವಂತ ಸಾಕ್ಷಿ.

ದಂಪತಿಗೆ ಒಂದು ಡಜನ್ ಮಕ್ಕಳು !

ದಿವಂಗತ ಗೋಳಿಕೈ ಶಿವರಾಮ ಹೆಗಡೆ ಮತ್ತು ದಿವಂಗತ ಗಣಪಮ್ಮ ದಂಪತಿಗೆ 12 ಮಕ್ಕಳು. ಮಂಜುನಾಥ, ಕಾಶೀನಾಥ, ಗಣಪತಿ, ಅಣ್ಣಪ್ಪ, ರಾಮಚಂದ್ರ, ಸುಬ್ರಾಯ, ಶಿವಾನಂದ, ಸರ್ವೇಶ್ವರಿ, ಗುರುನಾಥ, ಮೋಹನ, ವಿಠ್ಠಲ, ಸವಿತಾ. ಗಂಡು ಮಕ್ಕಳು, ಮೊಮ್ಮಕ್ಕಳು ಸೇರಿ 75ಕ್ಕೂ ಹೆಚ್ಚು ಜನರ ಕುಟುಂಬ. ಗಂಡು ಮಕ್ಕಳು, ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದರೆ 225ಕ್ಕೂ ಹೆಚ್ಚು ಜನ.

ನಾಲ್ಕು ಜನ ಹೌದು ಅನ್ನುವಂತೆ ಬದುಕಬೇಕು

''ನಾಲ್ಕು ಜನ ಹೌದು ಅನ್ನುವಂತೆ ಬದುಕಬೇಕು'' ಎಂಬ ಮೌಲ್ಯವನ್ನು ತಮ್ಮ ನಡೆನುಡಿಯಲ್ಲಿ ತೋರಿಸಿದ ದಿವಂಗತ ಶಿವರಾಮ ಹೆಗಡೆ ಮತ್ತು ಗಣಪಮ್ಮ, ಮಕ್ಕಳನ್ನೆಲ್ಲಾ ಸಮಾಜಕ್ಕೆ ಉಪಯುಕ್ತರಾಗುವಂತೆ ಸಜ್ಜುಗೊಳಿಸಿದರು. ಅವರ ಬದುಕಿನ ಫಲವೇ ಇಂದು ಅವರ ವಂಶದ ಸಂತತಿಯು ಪ್ರಜ್ವಲಿಸುವ ಸಾಧನೆಗಳ ದೀಪಗಳಾಗಿ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಬೆಳಗುತ್ತಿದೆ.

ಗಣಪತಿ ಹೆಗಡೆಯವರಿಗೆ 91ರ ಹರೆಯ..!

ಒಟ್ಟು 12 ಜನ ಮಕ್ಕಳಲ್ಲಿ ಮೂರನೇಯವರಾದ ಗಣಪತಿ ಹೆಗಡೆಯವರಿಗೆ ಕನಕಾಭಿಷೇಕ ಸೋಮವಾರ ನಡೆಯಲಿದೆ. ಅವರ ಪ್ರಾಥಮಿಕ ಶಿಕ್ಷಣ ಕ್ಯಾದಗಿ ಸಮೀಪದ ಐನಕೈನಲ್ಲಿ. ಆರಂಭದಿಂದಲೂ ದುಡಿಮೆಣಕೃಷಿಯೇ ಜೀವನ. ಎರಡು ವರ್ಷ ಸಾಗರದ ಕಾಸ್ಪಾಡಿಯಲ್ಲಿ, ನಂತರ ಅತ್ತಿಕೊಪ್ಪದಲ್ಲಿ 15ಕ್ಕೂ ಹೆಚ್ಚು ವರ್ಷಗಳ ಕಾಲ ತೋಟ - ಕೃಷಿ ಕಾಯಕ. ತದ ನಂತರ ಗೋಳಿಕೈನಲ್ಲಿ ನೆಲೆಸಿದ್ದಾರೆ. ಇವರಿಗೀಗ 91ರ ಹರೆಯ..

ಸಮಾಚಾರ ಸಣ್ಣದಲ್ಲ

ಎಸ್‌ಐಆರ್ ಪ್ರಕ್ರಿಯೆ: ಅಮರ್ತ್ಯ ಸೇನ್ ಗರಂ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಅವರು, ಈ ಪ್ರಕ್ರಿಯೆಯನ್ನು ಅನಗತ್ಯ ಆತುರದಿಂದ ನಡೆಸಲಾಗುತ್ತಿದೆ ಮತ್ತು ಇದು ಪ್ರಜಾ ಪ್ರಭುತ್ವದ ಭಾಗವಹಿ ಸುವಿಕೆಗೆ ಅಪಾಯವನ್ನುಂಟು ಮಾಡಬಹುದು ಎಂದು ಶನಿವಾರ ಎಚ್ಚರಿಸಿದ್ದಾರೆ.



92 ವರ್ಷದ ಅರ್ಥಶಾಸ್ತ್ರಜ್ಞ ಸೇನ್ ಅವರು ಬೋಸ್ಟನ್‌ನಿಂದ ಪಿಟಿಐಗೆ ನೀಡಿದ ಸಂದರ್ಶನದಲ್ಲಿ, ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಜಾಸತ್ತಾತ್ಮಕ ಮೌಲ್ಯ ಮತ್ತು ಅವು ಮತದಾನದ ಹಕ್ಕುಗಳನ್ನು ಬಲಪಡಿಸಬೇಕು. ಆದರೆ ಬಂಗಾಳದ ಪ್ರಕರಣದಲ್ಲಿ ಅದು ಕಾಣೆಯಾಗಿದೆ. ಇಂತಹ ಪ್ರಕ್ರಿಯೆಯನ್ನು ಎಚ್ಚರಿಕೆಯಿಂದ ಮತ್ತು ಸಾಕಷ್ಟು ಸಮಯದೊಂದಿಗೆ ನಡೆಸಬೇಕು ಎಂದು ಅವರು ಒತ್ತಿ ಹೇಳಿದ್ದಾರೆ. ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಸಮಯದಲ್ಲಿ ತಮ್ಮದೇ ಆದ ಅನುಭವವನ್ನು ಹಂಚಿಕೊಂಡ ಸೇನ್, ಚುನಾವಣಾ ಅಧಿಕಾರಿಗಳಲ್ಲಿಯೂ ಸಹ ಸಮಯದ ಒತ್ತಡ ಸ್ಪಷ್ಟವಾಗಿತ್ತು ಎಂದಿದ್ದಾರೆ.

ಬಿಜೆಪಿ ಪಾಲಿಕೆಯಿಂದ ಬಿಜೆಪಿಗೆ ₹20ಲಕ್ಷ ದಂಡ!

ತಿರುವನಂತಪುರಂ: ಪ್ರಧಾನಿ ನರೇಂದ್ರ ಮೋದಿ ಅವರ ಶುಕ್ರವಾರದ ಭೇಟಿಯ ಸಂದರ್ಭದಲ್ಲಿ ಅಕ್ರಮವಾಗಿ ಫ್ಲೆಕ್ಸ್ ಬೋರ್ಡ್‌ಗಳು, ಧ್ವಜಗಳು ಮತ್ತು ಬ್ಯಾನರ್‌ಗಳನ್ನು ಅಳವಡಿಸಿದ್ದಕ್ಕಾಗಿ ಬಿಜೆಪಿ ನೇತೃತ್ವದ ತಿರುವನಂತಪುರಂ ಮಹಾನಗರ ಪಾಲಿಕೆ, ಆಡಳಿತ ಪಕ್ಷದ ನಗರ ಜಿಲ್ಲಾ ಸಮಿತಿಗೆ 20 ಲಕ್ಷ ರು. ದಂಡ ವಿಧಿಸಿದೆ. ಹೈಕೋರ್ಟ್ ಆದೇಶ ಉಲ್ಲಂಘಿಸಿ, ವಿಮಾನ ನಿಲ್ದಾಣದಿಂದ ಪುತ್ತರಿಕಂಡಂ ಮೈದಾನದವರೆಗಿನ ಪಾದಚಾರಿ ಮಾರ್ಗಗಳು, ರಸ್ತೆ ವಿಭಜಕಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್ ಬೋರ್ಡ್‌ಗಳು, ಧ್ವಜಗಳು ಮತ್ತು ಬ್ಯಾನರ್‌ಗಳನ್ನು ವ್ಯಾಪಕವಾಗಿ ಪ್ರದರ್ಶಿಸಿದ್ದಕ್ಕಾಗಿ ಸಾರ್ವಜನಿಕರಿಂದ ತೀವ್ರ ಟೀಕೆ ವ್ಯಕ್ತವಾದ ನಂತರ ಪಾಲಿಕೆ ಈ ನಿರ್ಧಾರ ತೆಗೆದುಕೊಂಡಿದೆ.

ಪಾಕ್: ಆತ್ಮಾಹುತಿ ಬಾಂಬ್‌ಗೆ 7 ಬಲಿ

ಇಸ್ಲಾಮಾಬಾದ್: ಪಾಕಿಸ್ತಾನದ ವಾಯವ್ಯ ಖೈಬರ್ ಪಖ್ತುಂಖ್ವ ಪ್ರಾಂತ್ಯದಲ್ಲಿ ಶುಕ್ರವಾರ ದುರಂತವೊಂದು ನಡೆದಿದೆ. ಶಾಂತಿ ಸಮಿತಿ ಸದಸ್ಯರೊಬ್ಬರ ನಿವಾಸದಲ್ಲಿ ನಡೆಯುತ್ತಿದ್ದ ವಿವಾಹ ಸಮಾರಂಭದ ವೇಳೆ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, ಕನಿಷ್ಠ 7 ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ಪಾಕಿಸ್ತಾನದ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಆತ್ಮಾಹುತಿ ಬಾಂಬ್ ದಾಳಿ ನಡೆದಿದೆ. ಘಟನೆಯಲ್ಲಿ 25 ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆತ್ಮಾಹುತಿ ಬಾಂಬ್ ಸ್ಫೋಟದ ತೀವ್ರತೆಗೆ ಮದುವೆ ಮನೆಯ ಛಾವಣಿ ಕುಸಿದು ಬಿದ್ದಿದೆ. ಇದರಿಂದ ರಕ್ಷಣಾ ಕಾರ್ಯ ನಡೆಸಲು ಪೊಲೀಸರು ಕೆಲಕಾಲ ಹೆಣಗಾಡುತ್ತಿದ್ದರು. ನಂತರ ಇದೊಂದು ಆತ್ಮಹತ್ಯಾ ದಾಳಿ ಎಂದು ಜಿಲ್ಲಾ ಪೊಲೀಸ್ ಅಧಿಕಾರಿ ಸಜ್ಜದ್ ಅಹ್ಮದ್ ಸಾಹಿಬ್ ಜಾದಾ ಅವರು ಖಚಿತಪಡಿಸಿದ್ದಾರೆ.

ನಾಡಿದ್ದು ಸಂಸತ್‌ನಲ್ಲಿ ಬಜೆಟ್ ಅಧಿವೇಶನ

ನವದೆಹಲಿ: ಸಂಸತ್‌ನ ಬಜೆಟ್ ಅಧಿವೇಶನದ ಅಂಗವಾಗಿ ಶಾಸನಗಳಿಗೆ ಸಂಬಂಧಿಸಿದಂತೆ ಮತ್ತು ಕಾರ್ಯಸೂಚಿಗಳ ಕುರಿತು ಚರ್ಚಿಸಲು ಸರ್ಕಾರ ಜ.27ರಂದು ಸರ್ವಪಕ್ಷಗಳ ಸಭೆ ಕರೆದಿದೆ. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸರ್ವಪಕ್ಷ ಸಭೆ ಕರೆದಿದ್ದಾರೆ. ಮಂಗಳವಾರ ಬೆಳಗ್ಗೆ 11ಕ್ಕೆ ಸಂಸತ್ ಭವನದ ಸಮಿತಿ ಕೊಠಡಿಯಲ್ಲಿ ಸಭೆ ನಡೆಯಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಜನವರಿ 28ರಿಂದ ಅಧಿವೇಶನ ಆರಂಭವಾಗಲಿದೆ. ಮೊದಲ ದಿನ ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಲಿದ್ದಾರೆ. ಸಂಸತ್ತಿನ ಇತಿಹಾಸದಲ್ಲಿ ಅಪರೂಪ ಎಂಬಂತೆ ಇದೇ ಮೊದಲ ಬಾರಿ ಕೇಂದ್ರ ಬಜೆಟ್ ಫೆಬ್ರುವರಿ 1ರಂದು ಭಾನುವಾರ ಮಂಡನೆಯಾಗುತ್ತಿದೆ. ಇದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸತತ ಒಂಬತ್ತನೇ ಬಜೆಟ್ ಆಗಿದೆ. ಬಜೆಟ್ ಅಧಿವೇಶನದ ಮೊದಲ ಹಂತ ಫೆಬ್ರವರಿ 13ಕ್ಕೆ ಮುಕ್ತಾಯವಾಗಲಿದೆ. ಮಾರ್ಚ್ 9ರಂದು ಬಜೆಟ್ ಅಧಿವೇಶನದ ಎರಡನೇ ಹಂತ ಶುರುವಾಗಿ, ಏಪ್ರಿಲ್ 2ರಂದು ಅಂತ್ಯಗೊಳ್ಳಲಿದೆ.

ತೆಲಂಗಾಣದಲ್ಲಿ 900ಕ್ಕೂ ಅಧಿಕ ನಾಯಿಗಳ ಹತ್ಯೆ

ಹೈದರಾಬಾದ್: ತೆಲಂಗಾಣದಲ್ಲಿ ಮತ್ತೆ 300 ನಾಯಿ ಗಳನ್ನು ಹತ್ಯೆ ಮಾಡಲಾಗಿದೆ. ಜಗಿತ್ಯಾಲ ಜಿಲ್ಲೆಯ ಪೆಗದಪಲ್ಲಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಇದರೊಂದಿಗೆ ರಾಜ್ಯದಲ್ಲಿ ಹತ್ಯೆಗೀಡಾದ ಶ್ವಾನಗಳ ಸಂಖ್ಯೆ 900ಕ್ಕೆ ಏರಿಕೆಯಾಗಿದೆ ಎಂದು ಪ್ರಾಣಿಗಳ ಹಕ್ಕುಗಳ ಹೋರಾಟಗಾರರು ತಿಳಿಸಿದ್ದಾರೆ. ಪೆಗದಪಲ್ಲಿಯಲ್ಲಿ ಜನವರಿ 22ರಂದು ವಿಷಕಾರಿ ಚುಚ್ಚುಮದ್ದು ನೀಡಿ 300 ಬೀದಿ ನಾಯಿಗಳನ್ನು ಹತ್ಯೆಗೈಯ್ಯಲಾಗಿದೆ. ಗ್ರಾಮದ ಸರಪಂಚ್ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿ ಸೇರಿ ಈ ಕೃತ್ಯ ಎಸಗಿದ್ದಾರೆ. ಶ್ವಾನಗಳನ್ನು ಕೊಲ್ಲುವುದಕ್ಕಾಗಿಯೇ ಅವರು ಕೆಲವರನ್ನು ನೇಮಿಸಿಕೊಂಡಿದ್ದಾರೆ ಎಂದೂ ಪೊಲೀಸರಿಗೆ ಹೋರಾಟಗಾರರು ದೂರು ನೀಡಿದ್ದಾರೆ. ದೂರನ್ನು ಆಧರಿಸಿ ಸರಪಂಚ್ ಹಾಗೂ ಪಂಚಾಯತಿ ಕಾರ್ಯದರ್ಶಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

---

15 ತಿಂಗಳು, 12 ರಾಜ್ಯಗಳಲ್ಲಿ ಸಿಬಿಐನಿಂದ ತೀವ್ರ ತನಿಖೆ | ನೆಲ್ಲೂರು ಎಸಿಬಿಗೆ ಚಾರ್ಜ್‌ಶೀಟ್
ಟಿಟಿಡಿ ಮಾಜಿ ಅಧಿಕಾರಿಗಳು, ರಾಜಕಾರಣಿಗಳು ಸೇರಿ 36 ಪ್ರಭಾವಿಗಳ ಹೆಸರು ಪಟ್ಟಿಯಲ್ಲಿ

ತಿರುಪತಿ ಲಡ್ಡುಗೆ ಕಲಬೆರಕೆ ತುಪ್ಪ: ಸಿಬಿಐನಿಂದ ಅಂತಿಮ ಚಾರ್ಜ್‌ಶೀಟ್

ತಿರುಪತಿ: ತಿರುಮಲ ತಿರುಪತಿ ದೇವಸ್ಥಾನಂ ಟ್ರಸ್ಟ್ ತಯಾರಿಸಿದ ತಿರುಪತಿ ಲಡ್ಡುವಿನಲ್ಲಿ ಕಲಬೆರಕೆಯಾದ ತುಪ್ಪ ಬಳಸಲಾಗಿದೆ ಎಂಬ ಪ್ರಕರಣದಲ್ಲಿ ಕೇಂದ್ರ ತನಿಖಾ ದಳ (ಸಿಬಿಐ) ತನ್ನ ಅಂತಿಮ ಚಾರ್ಜ್‌ಶೀಟ್ ಅನ್ನು ಸಲ್ಲಿಸಿದೆ. ಪವಿತ್ರ ಪ್ರಸಾದವನ್ನು ಕಳಂಕಗೊಳಿಸುವ ಭ್ರಷ್ಟಾಚಾರದ ಜಾಲದ ಬಗ್ಗೆ ಮಾಹಿತಿ ನೀಡಿದೆ ಎಂದು ವರದಿಗಳಾಗಿದೆ.

ನೆಲ್ಲೂರು ಎಸಿಬಿ ನ್ಯಾಯಾಲಯಕ್ಕೆ ಸಲ್ಲಿಸಲಾದ ಈ ಚಾರ್ಜ್‌ಶೀಟ್‌ನಲ್ಲಿ ಒಟ್ಟು 36 ಮಂದಿ ಪ್ರಮುಖ ಆರೋಪಿಗಳ ಹೆಸರು ನಮೂದಿಸಲಾಗಿದೆ. ಇವರಲ್ಲಿ ಡೇರಿ ಮಾಲೀಕರು, ಮಾಜಿ ಟಿಟಿಡಿ ಅಧಿಕಾರಿಗಳು ಸೇರಿದ್ದಾರೆ. 15 ತಿಂಗಳುಗಳ ಕಾಲ 12 ರಾಜ್ಯಗಳಲ್ಲಿ ನಡೆಸಿದ ತೀವ್ರ ತನಿಖೆಯ ನಂತರ ಈ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

2019ರಿಂದ 2024ರವರೆಗೆ ಟಿಟಿಡಿಗೆ ಅಂದಾಜು 250 ಕೋಟಿ ರು. ಮೌಲ್ಯದ ಸುಮಾರು 68 ಲಕ್ಷ ಕೆಜಿ ನಕಲಿ ತುಪ್ಪವನ್ನು ತಿರುಪತಿ ದೇಗುಲಕ್ಕೆ ಸರಬರಾಜು ಮಾಡಲಾಗಿತ್ತು. ಶುದ್ಧ ಹಾಲಿನ ತುಪ್ಪದ ಬದಲಿಗೆ ಪಾಮ್

ಎಣ್ಣೆ, ಬೀಜಗಳಿಂದ ತಯಾರಿಸಿದ ಎಣ್ಣೆ, ರಾಸಾಯನಿಕ ಮಿಶ್ರಣಗಳು, ಪ್ರಾಣಿ ಕೊಬ್ಬು ಮತ್ತು ಇತರ ಕಡಿಮೆ ದರದ ಮಿಶ್ರಣಗಳನ್ನು ಬಳಸಿ ನಕಲಿ ತುಪ್ಪ ತಯಾರಿಸಲಾಗಿತ್ತು. ಇದು ಶುದ್ಧ ತುಪ್ಪದಂತೆ ಕಾಣುವಂತೆ ಮಾಡಲಾಗಿತ್ತು ಎಂದು ಸಿಬಿಐ ಉಲ್ಲೇಖಿಸಿದೆ.

ಉತ್ತರಾಖಂಡದ ಭೋಲೆ ಬಾಬಾ ಆರ್ಗಾನಿಕ್ ಡೇರಿ (ನಿರ್ದೇಶಕರು ಪೊಮಿಲ್ ಜೈನ್ ಮತ್ತು ವಿಪಿನ್ ಜೈನ್) ಈ ನಕಲಿ ತುಪ್ಪದ ರಾಕೆಟ್‌ನ ಮುಖ್ಯ ಕೇಂದ್ರ ಎಂದು ತನಿಖೆ ಗುರುತಿಸಿದೆ. ವೈಷ್ಣವಿ ಡೇರಿ (ಸಿಇಒ ಅಪೂರ್ವ ವಿನಾಯಕಾಂತ್ ಚಾವ್ಡಾ), ಎಆರ್ ಡೇರಿ (ಎಂಡಿ ಆರ್ ರಾಜಶೇಖರನ್), ದೆಹಲಿಯ ವ್ಯಾಪಾರಿ ಅಜಯ್ ಕುಮಾರ್ ಸುಗಂಧ್ (ರಾಸಾಯನಿಕ ಸರಬರಾಜುದಾರ), ಮಾಜಿ ಟಿಟಿಡಿ ಅಧಿಕಾರಿಗಳಾದ ಪ್ರಳಯ ಕಾವೇರಿ ಮುರಳಿ ಕೃಷ್ಣ, ಆರ್‌ಎಸ್‌ಎಸ್‌ವಿಆರ್ ಸುಬ್ರಹ್ಮಣ್ಯಂ ಮತ್ತು ಇತರರು ಪ್ರಮುಖ ಆರೋಪಿಗಳು ಎಂದು ತನಿಖೆ ಗುರುತಿಸಿದೆ.

2024 ಸೆಪ್ಟೆಂಬರ್‌ನಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಜಗನ್ ಮೋಹನ್ ರೆಡ್ಡಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ತಿರುಪತಿಯಲ್ಲಿ ಭಾರೀ ಹಗರಣ ನಡೆದಿದೆ ಎಂದು ಆರೋಪಿಸಿದ್ದರು. ತಿರುಪತಿಯಿಂದಲೇ ಆಂಧ್ರಪ್ರದೇಶದ ಶುದ್ಧೀಕರಣ ಆರಂಭವಾಗಲಿದೆ ಎಂದು ಗುಡುಗಿದ್ದರು. ಆಗಲೇ ಇಡೀ ದೇಶದಲ್ಲಿ ದೊಡ್ಡ ವಿವಾದವೆದ್ದಿತ್ತು. ತಿರುಪತಿ ಲಡ್ಡು ತಿನ್ನಲು ಲಕ್ಷಾಂತರ ಭಕ್ತರು ಹಿಂಜರಿದಿದ್ದರು. ಸಿಬಿಐ ಚಾರ್ಜ್‌ಶೀಟ್‌ನಿಂದ ಜಗನ್ ಮೋಹನ್ ರೆಡ್ಡಿ ಮೇಲೆ ಯಾವ ಪರಿಣಾಮ ಬೀರಲಿದೆ ಎಂದು ಕಾದು ನೋಡಬೇಕು.

ದಾವೋಸ್‌ನಲ್ಲಿ ಅಮೆರಿಕ ವಿತ್ತ ಸಚಿವ ಬೆಸೆಂಟ್ ಸುಳಿವು
ರಷ್ಯಾದಿಂದ ಭಾರತದ ಖರೀದಿ ಕಡಿಮೆಯಾಗಿದೆಯಂತೆ!

ಶೇ.25ರ ಸುಂಕ ರದ್ದು ಮಾಡುತ್ತಾ ಅಮೆರಿಕ?

ವಾಷಿಂಗ್ಟನ್: ಕೆಲ ದಿನಗಳ ಹಿಂದಷ್ಟೇ ಭಾರತ ಅಮೆರಿಕದಿಂದ ಆಮದಾಗುವ ದ್ವಿದಳ ಧಾನ್ಯಗಳ ಮೇಲೆ 30% ಸುಂಕ ವಿಧಿಸಿತ್ತು. ಇದರಿಂದ ಪೆಟ್ಟು ತಿಂದ ಅಮೆರಿಕ ಈಗ ಭಾರತದ ಮೇಲೆ 25% ಹೆಚ್ಚುವರಿ ಸುಂಕ ತೆಗೆದುಹಾಕಲು ತಯಾರಿ ನಡೆಸಿದೆ. ಭಾರತದ ಮೇಲೆ ವಿಧಿಸಲಾದ 25% ಹೆಚ್ಚುವರಿ ಸುಂಕವನ್ನು ತೆಗೆದುಹಾಕಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಯಾರಿ ನಡೆಸಿದ್ದಾರೆ ಎಂದು ಅಮೆರಿಕದ ವಿತ್ತ ಸಚಿವ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ. ದಾವೋಸ್ ಜಾಗತಿಕ ಶೃಂಗದಲ್ಲಿ ಭಾಗವಹಿಸಿರುವ ಈ ಮಾಹಿತಿಯನ್ನು ಬಹಿರಂಗಪಡಿಸಿದರು.

ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಭಾರತದ ಮೇಲೆ 50% (25% ಹೆಚ್ಚುವರಿ) ಸುಂಕ ವಿಧಿಸಿದಾಗಿನಿಂದ ರಷ್ಯಾದಿಂದ ತೈಲ ಖರೀದಿಸುವುದು ಗಮನಾರ್ಹವಾಗಿ ಕಡಿಮೆಯಾಗಿದೆ. ಪ್ರಸ್ತುತ 50% ಸುಂಕ ಇದ್ದು, ಇದು ಶಾಶ್ವತವಾಗಿ ಇರುವುದಿಲ್ಲ ಎಂದು ಹೇಳಿದ್ದಾರೆ. ಕೆಲವೇ ದಿನಗಳ ಹಿಂದೆ ಭಾರತಕ್ಕೆ ಶೇ.500 ಸುಂಕ ಹೇರುವುದಾಗಿ ಅಮೆರಿಕ ಬಡಾಯಿ ಕೊಚ್ಚಿಕೊಂಡಿತ್ತು. ಇದೀಗ ಭಾರತ ರಷ್ಯಾದಿಂದ ತೈಲಖರೀದಿ ಕಡಿಮೆ ಮಾಡಿದೆ, ಆದ್ದರಿಂದ ಇಳಿಸುವ ಯೋಚನೆ ಮಾಡಲಾಗಿದೆ ಎಂದು ಹೇಳಿದೆ. ಭಾರತ ಇದುವರೆಗೆ ತಾನು ರಷ್ಯಾದಿಂದ ತೈಲ ಖರೀದಿ ಕಡಿಮೆ ಮಾಡಿರುವ ಮಾಹಿತಿ ನೀಡಿಲ್ಲ. ಅದರ ಬದಲು ತಿಂಗಳ ಹಿಂದೆ ಭಾರತಕ್ಕೆ ಬಂದಿದ್ದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ರಷ್ಯಾ ನಿರಂತರವಾಗಿ ಭಾರತಕ್ಕೆ ತೈಲ ಪೂರೈಸಲಿದೆ ಎಂದು ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕಚ್ಚಾತೈಲ ಬೆಲೆ ಇಳಿಕೆ?

ಅಮೆರಿಕ, ಜಿ7 ಮತ್ತು ಯುರೋಪಿ ಯನ್ ದೇಶಗಳು ರಷ್ಯಾದ ತೈಲಕ್ಕೆ ಬೆಲೆ ಮಿತಿ ವ್ಯವಸ್ಥೆ ಜಾರಿಗೆ ತಂದಿವೆ. ಈ ಮಿತಿ ಜನವರಿ 2026 ರವರೆಗೆ ಬ್ಯಾರೆಲ್‌ಗೆ ಸರಿಸುಮಾರು 47.60 ಡಾಲರ್ (4,360 ರೂ.) ಆಗಿದ್ದು, ಫೆಬ್ರವರಿ 1ರಿಂದ 44.10 ಡಾಲರ್ (4,039 ರು.)ಗೆ ಇಳಿಕೆಯಾಗಲಿದೆ. ಒಂದು ವೇಳೆ ಮಿತಿಗೊಳಿಸಿದ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿದರೆ, ವಿಮೆ, ಸಾಗಣೆ ಮತ್ತು ಹಣಕಾಸು ಮುಂತಾದ ಸೇವೆಗಳನ್ನು ಒದಗಿಸಲಾ ಗುವುದಿಲ್ಲ ಎಂದು ದೇಶಗಳು ಎಚ್ಚರಿಕೆ ನೀಡಿವೆ.

ಭಾರತದ ಮೇಲೆ ವಿಧಿಸಲಾದ 25% ಹೆಚ್ಚುವರಿ ಸುಂಕವನ್ನು ಭವಿಷ್ಯದಲ್ಲಿ ತೆಗೆದುಹಾಕಬಹುದು. ಪರಿಸ್ಥಿತಿ ಅನುಕೂಲಕರವಾಗಿದ್ದರೆ, ಮಾತುಕತೆಗಳು ಮುಂದುವರಿದರೆ, ಅಮೆರಿಕ ಭಾರತಕ್ಕೆ ಸುಂಕದ ಪರಿಹಾರ ನೀಡಬಹುದು ಎಂದು ಹೇಳಿದ್ದಾರೆ.

ಭಾರತದ ಮೇಲೆ ಯುಎಸ್ ಸುಂಕ ವಿಧಿಸಿದ್ದೇಕೆ?

ಭಾರತವು ರಷ್ಯಾದ ತೈಲ ಖರೀದಿ ಮಾಡುವ ಮೂಲಕ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಪರೋಕ್ಷವಾಗಿ ನೆರವು ನೀಡುತ್ತಿದೆ ಅನ್ನುವುದು ಟ್ರಂಪ್ ಬಲವಾದ ಆರೋಪ. ಇದೇ ಕಾರಣಕ್ಕೆ ಭಾರತದ ಮೇಲೆ ಸುಂಕ ಏರಿಸಿದ್ದಾರೆ. ಟ್ರಂಪ್ ಅಧಿಕಾರಕ್ಕೆ ಏರಿದ ಆರಂಭದಲ್ಲಿ ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ 25% ಸುಂಕ ವಿಧಿಸಿದ್ದರು. ಬಳಿಕ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡುತ್ತಿರುವುದಕ್ಕೆ ಪ್ರತಿಯಾಗಿ 25% ದಂಡದ ರೂಪದಲ್ಲಿ ಸುಂಕ ಹೇರಿದ್ದರು. ಈ ನಿರ್ಧಾರದಿಂದ ಭಾರತದ ಕೆಲವು ವಸ್ತುಗಳಿಗೆ ಈಗ 50% ಸುಂಕ ಹೇರಲಾಗಿದೆ. ಆದರೆ ಭಾರತವೂ ಅಮೆರಿಕದಿಂದ ಖರೀದಿಯಾಗುವ ಹಲವು ಕೃಷಿ ಉತ್ಪನ್ನಗಳಿಗೆ ಶೇ.30 ತೆರಿಗೆ ಹೇರಿದೆ ಎನ್ನುವುದು ಗಮನಾರ್ಹ.

ಮಾರುತಿ, ಟಾಟಾ, ಮಹೀಂದ್ರಾ, ರೆನಾಲ್ಟ್‌ನಿಂದ ಮಾರುಕಟ್ಟೆಗೆ ನವನವೀನ ವಾಹನ

2026ರಲ್ಲಿ 30ಕ್ಕೂ ಅಧಿಕ ಹೊಸ ಕಾರು ಲಗ್ಗೆ

ದೆಹಲಿ: ಭಾರತೀಯ ವಾಹನ ಮಾರುಕಟ್ಟೆಯು 2026ರಲ್ಲಿ ಪ್ರಮುಖ ಬದಲಾವಣೆಗೆ ಸಾಕ್ಷಿಯಾಗಲಿದೆ. ದೇಶದ ಪ್ರಮುಖ ವಾಹನ ತಯಾರಕ ಕಂಪನಿಗಳಾದ ಮಾರುತಿ ಸುಜುಕಿ, ಟಾಟಾ ಮೋಟಾರ್ಸ್ ಮತ್ತು ಮಹೀಂದ್ರಾ, ಮಹೀಂದ್ರಾ ಸೇರಿದಂತೆ ಹಲವು ಕಂಪನಿಗಳು ಈ ವರ್ಷ 30ಕ್ಕೂ ಅಧಿಕ ಹೊಸ ಮಾದರಿಯ ಕಾರುಗಳನ್ನು ಬಿಡುಗಡೆ ಮಾಡಲು ಸಜ್ಜಾಗಿವೆ.

ಕಳೆದ ಐದು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಒಂದೇ ವರ್ಷದಲ್ಲಿ ಇಷ್ಟೊಂದು ಪ್ರಮಾಣದ ಹೊಸ ಕಾರುಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಕಳೆದ ವರ್ಷ ಕೇಂದ್ರ ಸರಕಾರ ಜಾರಿಗೆ ತಂದ ಜಿಎಸ್‌ಟಿ ದರ ಕಡಿತದ ನಂತರ ವಾಹನ ಮಾರುಕಟ್ಟೆಯಲ್ಲಿ ಚೇತರಿಕೆ ಕಂಡುಬಂದಿದ್ದು, ಈ ಹೊಸ ಬಿಡುಗಡೆಗಳು ಮಾರುಕಟ್ಟೆಯಲ್ಲಿ ಸಂಚಲನ ಸೃಷ್ಟಿಸುವ ನಿರೀಕ್ಷೆ ಇದೆ.

ಯಾವ್ಯಾವ ಕಾರು ಲಗ್ಗೆ?: ಜನವರಿ 26ರ ಗಣರಾಜ್ಯೋತ್ಸವದಂದು ರೆನಾಲ್ಟ್ ಕಂಪನಿಯು ತನ್ನ ಜನಪ್ರಿಯ ಹೊಸ ತಲೆಮಾರಿನ ಡಸ್ಟರ್ ಎಸ್‌ಯುವಿಯನ್ನು ಅನಾವರಣಗೊಳಿಸಲಿದೆ. ಇತ್ತ ಮಾರುತಿ ಸುಜುಕಿ ತನ್ನ ಚೊಚ್ಚಲ ಎಲೆಕ್ಟ್ರಿಕ್ ವಾಹನವಾದ 'ಇ-ವಿಟಾರಾ ಎಸ್‌ಯುವಿ'ಯ ಮಾರಾಟವನ್ನು ಮುಂದಿನ ತಿಂಗಳು ಆರಂಭಿಸಲಿದೆ.

2026ರಲ್ಲಿ ಬಿಡುಗಡೆಯಾಗಲಿರುವ ಬಹುತೇಕ ಕಾರುಗಳು ಎಲೆಕ್ಟ್ರಿಕ್ (ಇವಿ) ಮಾದರಿಯದ್ದಾಗಿವೆ ಎಂಬುದು ವಿಶೇಷ. ಮುಂದಿನ ತ್ರೈಮಾಸಿಕದಲ್ಲಿ ಬಹುನಿರೀಕ್ಷಿತ 'ಸಿಯೆರಾ ಇವಿ' ಸೇರಿದಂತೆ ಎರಡು ಹೊಸ ಮಾದರಿಗಳನ್ನು ಟಾಟಾ ಮೋಟಾರ್ಸ್ ಪರಿಚಯಿಸಲಿದೆ. ಇತ್ತ ವಿಯೆಟ್ನಾಂ ಮೂಲದ ಎಲೆಕ್ಟ್ರಿಕ್ ಕಾರು ತಯಾರಕ ಕಂಪನಿ ವಿನ್‌ಫಾಸ್ಟ್ ಮೂರು ಹೊಸ ಮಾಡೆಲ್‌ಗಳನ್ನು ಭಾರತಕ್ಕೆ ತರುತ್ತಿದೆ. ಚೀನಾದ ಇವಿ ತಯಾರಕ ಲೀಪ್ ಮೋಟಾರ್, ಫ್ರಾನ್ಸ್‌ನ ಸಿಟ್ರನ್ ಜೊತೆಗೂಡಿ ಎರಡು ಕಾರುಗಳನ್ನು ಬಿಡುಗಡೆ ಮಾಡಲಿದೆ. ಇದಲ್ಲದೆ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಕೂಡ ಎಲೆಕ್ಟ್ರಿಕ್ ಎಸ್‌ಯುವಿ ಒಂದನ್ನು ಸಿದ್ಧಪಡಿಸುತ್ತಿದೆ. ಒಟ್ಟಾರೆಯಾಗಿ, ಡಿಸೆಂಬರ್ ಅಂತ್ಯದ ವೇಳೆಗೆ 31 ಹೊಸ ವಾಹನಗಳು ರಸ್ತೆಗಿಳಿಯಲಿವೆ. ಹೋಲಿಕೆ ಮಾಡಿ ನೋಡುವುದಾದರೆ 2025ರಲ್ಲಿ 19 ಕಾರುಗಳು ಬಿಡುಗಡೆಯಾಗಿದ್ದರೆ, 2021ರಿಂದ ಪ್ರತಿ ವರ್ಷ ಸರಾಸರಿ 10-11 ವಾಹನಗಳು ಬಿಡುಗಡೆಯಾಗಿದ್ದವು. ಇದಕ್ಕೆ ಹೋಲಿಸಿದರೆ ಈ ವರ್ಷ ದೊಡ್ಡ ಸಂಖ್ಯೆಯಲ್ಲಿ ಕಾರುಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ.

ಅಬುವಿನಲ್ಲಿ ತಾಪಮಾನ -7 ಡಿಗ್ರಿಗಿಳಿಕೆ

ಥಾರ್ ಮರುಭೂಮಿ ನಾಡು ರಾಜಸ್ಥಾನದಲ್ಲಿ ಅಸಾಧ್ಯ ಚಳಿ

ಜೈಪುರ: ಮರುಭೂಮಿ ನಾಡು ರಾಜಸ್ಥಾನಕ್ಕೂ ಚಳಿಯ ಭೀಕರತೆ ತಟ್ಟಿದೆ. ಮೌಂಟ್ ಅಬುನಲ್ಲಿ ತೀವ್ರವಾದ ಶೀತ ಅಲೆಗಳು ಬೀಸುತ್ತಿದ್ದು, ತಾಪಮಾನವು ಶೂನ್ಯಕ್ಕಿಂತ ಕಡಿಮೆಯಾಗಿದೆ. ರಾಜಸ್ಥಾನದಾದ್ಯಂತ ಶೀತ ಅಲೆ ಬೀಸುತ್ತಿದ್ದು, ಮೌಂಟ್ ಅಬು ತನ್ನ ಎತ್ತರದ ಕಾರಣದಿಂದಾಗಿ ಹೆಚ್ಚು ಪರಿಣಾಮ ಬೀರುತ್ತದೆ. ಸ್ಥಳೀಯ ಹವಾಮಾನ ಪ್ರವೃತ್ತಿಗಳು ಗಮನಿಸಿದಂತೆ ನಾಟಕೀಯ ತಾಪಮಾನ ಕುಸಿತಕ್ಕೆ ಹೆಸರುವಾಸಿಯಾದ ಮೌಂಟ್ ಅಬುವಿನಲ್ಲಿ ಈ ಚಳಿ ಗಂಭೀರವಾಗಿ ಎಂದು ವರದಿಗಳು ಹೇಳುತ್ತವೆ. ಜನವರಿ 2026ರ ಮಧ್ಯಭಾಗದ ವೇಳೆಗೆ, ಮೌಂಟ್ ಅಬು ಗಿರಿಶಿಖರದಲ್ಲಿ -4.4 ಡಿಗ್ರಿಯಿಂದ -7 ಡಿಗ್ರಿಯವರೆಗೆ ತಾಪಮಾನವನ್ನು ದಾಖಲಿಸಿದೆ. ಇದರಿಂದಾಗಿ ಸಣ್ಣ ಹೊಂಡಗಳು ಮತ್ತು ಮೇಲ್ಮೈಗಳಲ್ಲಿ ಮಂಜುಗಡ್ಡೆ ರೂಪುಗೊಳ್ಳುತ್ತಿದೆ. ಸ್ಥಳೀಯರು ಮತ್ತು ಪ್ರವಾಸಿಗರು ಹಿಮಪಾತದ ಪರಿಸ್ಥಿತಿಗಳನ್ನು ವೀಕ್ಷಿಸುತ್ತಿದ್ದಾರೆ. ತೆರೆದ ಪ್ರದೇಶಗಳನ್ನು ಮಂಜುಗಡ್ಡೆ ಆವರಿಸಿದೆ. ಸ್ಥಳೀಯರು ತೀವ್ರ ಚಳಿಗೆ ಪತರುಗುಟ್ಟಿ ಹೋಗಿದ್ದು, ಚಳಿಯಿಂದ ಪಾರಾಗಲು ಬೆಂಕಿಯ ಮೊರೆ ಹೋಗುತ್ತಿದ್ದಾರೆ.

ಬಾಂಗ್ಲಾ ಮಾಜಿ ಪ್ರಧಾನಿ 'ಆಡಿಯೋ' ಭಾಷಣ

ಯೂನಸ್‌ರಿಂದ ಬಾಂಗ್ಲಾದಲ್ಲಿ ರಕ್ತ ಹರಿಯುತ್ತಿದೆ: ಹಸೀನಾ

ದೆಹಲಿ/ಢಾಕಾ: ಬಾಂಗ್ಲಾ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಕಾನೂನು ಬಾಹಿರ ಮತ್ತು ಹಿಂಸಾತ್ಮಕ ಆಡಳಿತ ನಡೆಸುತ್ತಿದ್ದಾರೆ. ದೇಶದಲ್ಲಿ ಭಯೋತ್ಪಾದನೆಯನ್ನು ಹೆಚ್ಚಿಸಿ, ಕಾನೂನು ಹಾಗೂ ಪ್ರಜಾ ಪ್ರಭುತ್ವ ಇಲ್ಲದ ಯುಗಕ್ಕೆ ನೂಕಿದ್ದಾರೆ ಎಂದು ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ಆರೋಪಿಸಿದ್ದಾರೆ. ಯೂನಸ್ ಆಡಳಿತದಿಂದ ತಾಯ್ನಾಡಿನ ರಕ್ತ ಸೋರುತ್ತಿದೆ. ಹಾಗಾಗಿ ಮಧ್ಯಂತರ ಸರ್ಕಾರವನ್ನ ಕಿತ್ತೊಗೆಯಬೇಕು ಎಂದು ಬಾಂಗ್ಲಾದ ಮಾಜಿ ಪ್ರಧಾನಿ ಶೇಖ್ ಹಸೀನಾ ಕರೆ ಕೊಟ್ಟಿದ್ದಾರೆ. 2024ರಲ್ಲಿ ಬಾಂಗ್ಲಾದಲ್ಲಿ ಭಾರೀ ಹಿಂಸಾಚಾರ ನಡೆದ ನಂತರ, ಆ ದೇಶವನ್ನು ಹಸೀನಾ ತೊರೆದಿದ್ದರು. ಅದಾದ ನಂತರ ಮೊದಲ ಬಾರಿಗೆ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ದೆಹಲಿಯಲ್ಲಿ ನಡೆದ ಸಭೆಯಲ್ಲಿ ಬಾಂಗ್ಲಾದ ಜನರನ್ನು ಉದ್ದೇಶಿಸಿ ಆಡಿಯೋ ಸಂದೇಶದ ಮೂಲಕ ಮಾತನಾಡಿ, ಯೂನಸ್ ಆಡಳಿತದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಭದ್ರತಾ ಕಾರಣಗಳಿಗಾಗಿ ವಿಡಿಯೋ ಬಳಸಲಿಲ್ಲ ಎಂದು ವರದಿಯಾಗಿದೆ. ಯೂನಸ್ ಸರ್ವಾಧಿಕಾರಿ, ಕೊಲೆಗಾರ, ಅಧಿಕಾರದ ದುರಾಸೆಯಿಂದ ಆಡಳಿತ ನಡೆಸುತ್ತಿದ್ದಾರೆ. ನನ್ನ ಪದಚ್ಯುತಿ ಬಳಿಕ ಇಡೀ ರಾಷ್ಟ್ರ ಕೊಲೆಗಾರನ ಅರಾಜಕತೆಗೆ ಧುಮುಕಿದೆ. ವಿದೇಶಿ ಆಡಳಿತದ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ. ಬಾಂಗ್ಲಾದೇಶದ ನಾಗರಿಕರು ಇದಕ್ಕೆ ಅವಕಾಶ ಕೊಡಬಾರದು. ಪ್ರಜಾಪ್ರಭುತ್ವವನ್ನು ಮರಳಿ ಪಡೆಯಲು ಯಾವುದೇ ಬೆಲೆ ತೆತ್ತಾದರೂ, ಯೂನಸ್ ಸರ್ಕಾರವನ್ನ ಉರುಳಿಸಬೇಕು. ಇದಕ್ಕಾಗಿ ಎಲ್ಲರೂ ಒಟ್ಟಾಗಬೇಕು ಎಂದು ಕರೆ ನೀಡಿದರು. ಬಾಂಗ್ಲಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಹಿಂದೂಗಳು, ಕ್ರೈಸ್ತರು, ಬೌದ್ಧರನ್ನ ಗುರಿಯಾಗಿಸಿ ದಾಳಿ ನಡೆಸಲಾಗುತ್ತಿದೆ ಎಂದಿದ್ದಾರೆ. ಬಾಂಗ್ಲಾದೇಶದಲ್ಲಿ ಫೆಬ್ರವರಿ 12ಕ್ಕೆ ರಾಷ್ಟ್ರೀಯ ಚುನಾವಣೆ ನಡೆಯಲಿದೆ.

ಗೃಹ ಸಚಿವಾಲಯದಿಂದ ಮಾಹಿತಿ ಗೌಪ್ಯತೆಗೆ ಆದ್ಯತೆ

ಜನಗಣತಿ ಮೊದಲ ಹಂತಕ್ಕೆ ಕೇಂದ್ರದಿಂದ 33 ಪ್ರಶ್ನೆ ಸಿದ್ಧ

ನವದೆಹಲಿ: 2026-27ರ ಜನಗಣತಿಯ ಹಂತ 1ರಲ್ಲಿ ಕೇಳಲಾಗುವ ಪ್ರಶ್ನೆಗಳನ್ನು ವಿವರಿಸುವ ಅಧಿಕೃತ ಅಧಿಸೂಚನೆಯನ್ನು ಭಾರತ ಸರಕಾರ ಬಿಡುಗಡೆ ಮಾಡಿದೆ. ಇದನ್ನು ಮನೆ ಪಟ್ಟಿ ಮತ್ತು ವಸತಿ ಗಣತಿ ಎಂದೂ ಕರೆಯಲಾಗುತ್ತದೆ. ಗೃಹ ಸಚಿವಾಲಯ ಹೊರಡಿಸಿರುವ ಮತ್ತು ಗೆಜೆಟ್‌ನಲ್ಲಿ ಪ್ರಕಟವಾದ ಈ ಅಧಿಸೂಚನೆಯು, ದೇಶಾದ್ಯಂತ ಜನಗಣತಿ ಅಧಿಕಾರಿಗಳು ಮನೆಗಳಿಗೆ ಕೇಳುವ 33 ನಿರ್ದಿಷ್ಟ ಪ್ರಶ್ನೆಗಳನ್ನು ವಿವರಿಸಿದೆ.

ಈ ಮೊದಲ ಹಂತವು ಮನೆಗಳ ಗುಣಮಟ್ಟ, ನೀರು, ವಿದ್ಯುತ್, ಶೌಚಾಲಯ, ಅಡುಗೆ ಸೌಲಭ್ಯಗಳು, ಆಸ್ತಿಗಳು ಮುಂತಾದವುಗಳನ್ನು ಮೌಲ್ಯಮಾಪನ ಮಾಡುತ್ತದೆ. ಇದರಿಂದ ಸರಕಾರಕ್ಕೆ ಭವಿಷ್ಯದ ನೀತಿಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳನ್ನು ರೂಪಿಸಲು ಸಹಾಯವಾಗುತ್ತದೆ. ಎಲ್ಲಾ ಮಾಹಿತಿಯನ್ನು ಗೌಪ್ಯವಾಗಿಡಲಾಗುತ್ತದೆ ಮತ್ತು ಕೇವಲ ಜನಗಣನೆಯ ಉದ್ದೇಶಕ್ಕೆ ಮಾತ್ರ ಬಳಸಲಾಗುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ವಸತಿ, ನೀರು ಸರಬರಾಜು, ನೈರ್ಮಲ್ಯ, ವಿದ್ಯುತ್ ಮತ್ತು ಡಿಜಿಟಲ್ ಪ್ರವೇಶಕ್ಕೆ ಸಂಬಂಧಿಸಿದ ಸರಕಾರಿ ನೀತಿಗಳನ್ನು ರೂಪಿಸುವಲ್ಲಿ ವಸತಿ ಗಣತಿಯು ನಿರ್ಣಾಯಕ ಪಾತ್ರ ವಹಿಸುತ್ತದೆ. ಸಂಗ್ರಹಿಸಿದ ದತ್ತಾಂಶವು ಮೂಲಸೌಕರ್ಯದಲ್ಲಿನ ಅಂತರವನ್ನು ಗುರುತಿಸಲು ಸಹಾಯ ಮಾಡುತ್ತದೆ ಮತ್ತು ಭವಿಷ್ಯದ ಕಲ್ಯಾಣ ಯೋಜನೆಗಳಿಗೆ ಉತ್ತಮ ಯೋಜನೆಯನ್ನು ಖಚಿತಪಡಿಸುತ್ತದೆ.

ಛತ್ತೀಸ್‌ಗಢದಲ್ಲಿ ವಿಚಿತ್ರ ಘಟನೆ | 60 ಅಡಿ ಉದ್ದದ ಸೇತುವೆ ನಾಪತ್ತೆ
ಕೃತ್ಯದಲ್ಲಿ 15 ಮಂದಿ ಭಾಗಿ, 5 ಬಂಧನ | ಜ.18ಕ್ಕೆ ಕೃತ್ಯ ಗಮನಕ್ಕೆ

30 ಟನ್ ತೂಕದ ಸೇತುವೆಯೇ ಕಳವು

ಕೊರ್ಬಾ: ಛತ್ತೀಸ್‌ಗಢದ ಕೊರ್ಬಾ ಜಿಲ್ಲೆಯಲ್ಲಿ ಆಘಾತಕಾರಿ ಕಳ್ಳತನವೊಂದು ಬೆಳಕಿಗೆ ಬಂದಿದೆ. ನಾಲ್ಕು ದಶಕಗಳ ಹಿಂದೆ ಕಾಲುವೆಯ ಮೇಲೆ ನಿರ್ಮಿಸಲಾಗಿದ್ದ 30 ಟನ್‌ಗಳಿಗೂ ಹೆಚ್ಚು ತೂಕದ 60 ಅಡಿ ಉದ್ದದ ಕಬ್ಬಿಣದ ಸೇತುವೆಯನ್ನೇ ರಾತ್ರೋರಾತ್ರಿ ಕದ್ದೊಯ್ಯಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ಕಳ್ಳತನದಲ್ಲಿ 15 ಜನರು ಭಾಗಿಯಾಗಿದ್ದಾರೆಂದು ತನಿಖಾಧಿಕಾರಿಗಳು ತಿಳಿಸಿದ್ದು, ಖದೀಮರು ಸೇತುವೆಯನ್ನು ಕತ್ತರಿಸಿ ಸ್ಕ್ರ್ಯಾಪ್ ಆಗಿ ಮಾರಾಟ ಮಾಡಲು ಕದ್ದಿದ್ದಾರೆ. ಈ ಸಂಬಂಧ ಇದುವರೆಗೆ ಐದು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜನವರಿ 18ರಂದು, ಧೋಧಿಪಾರ ಪ್ರದೇಶದ ವಾರ್ಡ್ ಸಂಖ್ಯೆ 17 ರಲ್ಲಿ ಪಾದಚಾರಿ ಮಾರ್ಗವಾಗಿ ಬಳಸಲಾಗುತ್ತಿದ್ದ ಹಸ್ಡಿಯೊ ಎಡ ಕಾಲುವೆಯ ಮೇಲೆ ನಿರ್ಮಿಸಲಾಗಿದ್ದ ಕಬ್ಬಿಣದ ಸೇತುವೆ ಕಾಣೆಯಾಗಿರುವುದನ್ನು ನಿವಾಸಿಗಳು ಗಮನಿಸಿದ್ದಾರೆ. ನಂತರ ಈ ಸಂಬಂಧ ಸ್ಥಳೀಯ ಕಾರ್ಪೊರೇಟರ್ ಲಕ್ಷ್ಮಣ್ ಶ್ರೀವಾಸ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ಕೊರ್ಬಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಖನ್ ಪಟ್ಲೆ ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಗುರುತಿಸಲಾಗದ ಆರೋಪಿಗಳು ಸೇತುವೆಯ ಕಬ್ಬಿಣದ ಬೇಲಿಗಳನ್ನು ಕತ್ತರಿಸಲು ಗ್ಯಾಸ್ ಕಟ್ಟರ್‌ಗಳನ್ನು ಬಳಸಿದ್ದಾರೆ ಎಂದು ಅವರು ಹೇಳಿದ್ದಾರೆ. ಸಿಎಸ್‌ಇಬಿ ಪೊಲೀಸ್ ಚೌಕಿಯಲ್ಲಿ ಸ್ವೀಕರಿಸಿದ ಲಿಖಿತ ದೂರಿನ ಆಧಾರದ ಮೇಲೆ, ಈ ಪ್ರಕರಣದ ತನಿಖೆಗಾಗಿ ವಿಶೇಷ ಪೊಲೀಸ್ ತಂಡವನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ತಾಂತ್ರಿಕ ವಿಶ್ಲೇಷಣೆ, ಮಾಹಿತಿದಾರರು ನೀಡಿದ ಮಾಹಿತಿ ಮತ್ತು ನಿರಂತರ

ತನಿಖೆಯ ನಂತರ, ಪೊಲೀಸರು ಪ್ರಕರಣದಲ್ಲಿ 15 ಆರೋಪಿಗಳನ್ನು ಗುರುತಿಸಿದ್ದಾರೆ. ಅವರಲ್ಲಿ ಐದು ಮಂದಿ - ಲೋಚನ್ ಕೆವತ್ (20), ಜಯಸಿಂಗ್ ರಜಪೂತ್ (23), ಮೋತಿ ಪ್ರಜಾಪತಿ (27), ಸುಮಿತ್ ಸಾಹು (19) ಮತ್ತು ಕೇಶವಪುರಿ ಗೋಸ್ವಾಮಿ ಅಲಿಯಾಸ್ 'ಪಿಕ್ಚರ್' (22)ನನ್ನು ಬಂಧಿಸಲಾಗಿದೆ ಎಂದು ಪಟ್ಲೆ ಹೇಳಿದ್ದಾರೆ. ಪ್ರಸ್ತುತ ತಲೆಮರೆಸಿಕೊಂಡಿರುವ ಆರೋಪಿ ಕಿಂಗ್ಪಿನ್‌ಗಳಾದ ಮುಖೇಶ್ ಸಾಹು ಮತ್ತು ಅಸ್ಲಂ ಖಾನ್ ಸೇರಿದಂತೆ ಉಳಿದ 10 ಆರೋಪಿಗಳನ್ನು ಪತ್ತೆಹಚ್ಚುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ತಿಳಿಸಿದ್ದಾರೆ.

ವಿಚಾರಣೆಯ ಸಮಯದಲ್ಲಿ, ಬಂಧಿತ ಆರೋಪಿಗಳು ಕಬ್ಬಿಣವನ್ನು ಸ್ಕ್ರ್ಯಾಪ್ ಆಗಿ ಮಾರಾಟ ಮಾಡಲು ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ. ಕಾಲುವೆಯೊಳಗೆ ಅಡಗಿಸಿಟ್ಟಿದ್ದ ಸುಮಾರು ಏಳು ಟನ್ ಕಬ್ಬಿಣವನ್ನು ವಶಪಡಿಸಿಕೊಳ್ಳಲಾಗಿದೆ. ಕದ್ದ ಕಬ್ಬಿಣವನ್ನು ಸಾಗಿಸಲು ಬಳಸಿದ ವಾಹನವನ್ನು ಸಹ ವಶಪಡಿಸಿಕೊಳ್ಳಲಾಗಿದೆ, ಉಳಿದ ವಸ್ತುಗಳನ್ನು ಎಲ್ಲಿ ಮಾರಾಟ ಮಾಡಲಾಗಿದೆ ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ 18ನೇ ರಾಷ್ಟ್ರೀಯ ಉದ್ಯೋಗ ಮೇಳ
45 ಸ್ಥಳದಿಂದ ಯುವಕರು ಭಾಗಿ | ಮೇಳ ದೇಶದ ಭವಿಷ್ಯ ಬದಲಿಸಲಿದೆ: ಮೋದಿ

61,000 ಉದ್ಯೋಗ ಪತ್ರ ವಿತರಿಸಿದ ಪ್ರಧಾನಿ

ನವದೆಹಲಿ: 18ನೇ ರಾಷ್ಟ್ರೀಯ ಉದ್ಯೋಗ ಮೇಳ ಹಿನ್ನೆಲೆಯಲ್ಲಿ ಶನಿವಾರ ದೇಶಾದ್ಯಂತದ ವಿವಿಧ ಸರಕಾರಿ ಇಲಾಖೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವಕರಿಗೆ 61,000ಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿತರಿಸಿದರು. ಈ ಕಾರ್ಯಕ್ರಮವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ದೇಶದ 45 ವಿವಿಧ ಸ್ಥಳಗಳಲ್ಲಿ ಯುವಕರು ಭಾಗವಹಿಸಿದ್ದರು. ಉದ್ಯೋಗ ಮೇಳದ ಮೂಲಕ ಆರಂಭದಿಂದ ಇಲ್ಲಿಯವರೆಗೆ ಒಟ್ಟು 11 ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಇಂದಿನ ಕಾರ್ಯಕ್ರಮದಲ್ಲಿ ವಿತರಿಸಲಾದ ನೇಮಕಾತಿಗಳು ಗೃಹ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಹಣಕಾಸು ಸೇವೆಗಳ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಮಂತ್ರಾಲಯಗಳು ಮತ್ತು ಇಲಾಖೆಗಳಿಗೆ ಸಂಬಂಧಿಸಿವೆ. ವಿಶೇಷವಾಗಿ ಗೃಹ ಸಚಿವಾಲಯ ಮತ್ತು ಅರೆಸೇನಾ ಪಡೆಗಳಿಗೆ ಸಂಬಂಧಿಸಿದಂತೆ 49,200 ನೇಮಕಾತಿಗಳಿವೆ ಎಂದು ತಿಳಿಸಿದರು. ಮಹಿಳಾ ಕಾನ್‌ಸ್ಟೇಬಲ್ ನೇಮಕಾತಿ ದೊಡ್ಡ ಸಂಖ್ಯೆಯಲ್ಲಿ ನಡೆದಿದ್ದು, ಕಳೆದ 11 ವರ್ಷಗಳಲ್ಲಿ ಸರ್ಕಾರ ಜಾರಿಗೊಳಿಸಿದ ಸಕ್ರಿಯ ಕ್ರಮಗಳಿಂದ ಇದು ಸಾಧ್ಯವಾಗಿದೆ ಎಂದು ಅವರು ಹೇಳಿದರು.

ಈ ನೇಮಕಾತಿಗಳನ್ನು ರಾಷ್ಟ್ರನಿರ್ಮಾಣಕ್ಕೆ ಆಹ್ವಾನ ಎಂದು ವರ್ಣಿಸಿದ ಮೋದಿ, ಉದ್ಯೋಗ ಸೃಷ್ಟಿಗೆ ಸರ್ಕಾರದ ಬದ್ಧತೆಯನ್ನು ಈ ಮೂಲಕ ಕಾರ್ಯರೂಪಕ್ಕೆ ತರುತ್ತಿದ್ದೇವೆ ಎಂದು ತಿಳಿಸಿದರು. ದೇಶದ ಎಲ್ಲಾ ಭಾಗಗಳ ಯುವಕರು ಈ ಅವಕಾಶವನ್ನು ಪಡೆದಿದ್ದು, ವಿಶೇಷವಾಗಿ ಮಹಿಳೆಯರ ಭಾಗವಹಿಸುವಿಕೆಯು ಗಮನಾರ್ಹವಾಗಿದೆ ಎಂದರು. ಇತ್ತೀಚಿನ ದಿನಗಳಲ್ಲಿ, ಭಾರತವು ಆಧುನಿಕ ಮೂಲಸೌಕರ್ಯದಲ್ಲಿ ಅಭೂತಪೂರ್ವ ಹೂಡಿಕೆಗಳನ್ನು ಮಾಡಿದೆ. ಇದು ನಿರ್ಮಾಣಕ್ಕೆ ಸಂಬಂಧಿಸಿದ ಪ್ರತಿಯೊಂದು ವಲಯದಲ್ಲಿಯೂ ಭಾರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ ಎಂದು ಅವರು ಹೇಳಿದರು.

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಮಾತನಾಡಿ, ಉದ್ಯೋಗ ಮೇಳ 2023ರಲ್ಲಿ ಪ್ರಾರಂಭವಾಯಿತು. ನಾನು ಇಂದು ನೋಡಿದ ಅಂಕಿಅಂಶಗಳ ಪ್ರಕಾರ, 40 ವಿವಿಧ ಸ್ಥಳಗಳಲ್ಲಿ 61,656 ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಪ್ರಧಾನಿ ಹೇಳಿದಂತೆ, ಇದು ಈಗ ಸಾಂಸ್ಥಿಕ ವೇದಿಕೆಯಾಗಿದೆ ಎಂದರು.

ಇಂದು ಕೊನೆಯ ದಿನ, ಸೋಲು ತಪ್ಪಿಸಿಕೊಳ್ಳಲು ರಾಜ್ಯ ಪರದಾಟ

ರಣಜಿ: ಕರ್ನಾಟಕ 191 ಆಲೌಟ್

ಆಲೂರು: ಬೆಂಗಳೂರಿನ ಆಲೂರಿನಲ್ಲಿ ನಡೆಯುತ್ತಿರುವ ರಣಜಿ ಪಂದ್ಯದ 3ನೇ ದಿನ ಕರ್ನಾಟಕ 1ನೇ ಇನಿಂಗ್ಸ್‌ನಲ್ಲಿ 191 ರನ್‌ಗಳಿಗೆ ಆಲೌಟಾಗಿದೆ. 1ನೇ ಇನಿಂಗ್ಸ್‌ನಲ್ಲಿ 323 ರನ್ ಗಳಿಸಿದ್ದ ಮಧ್ಯ ಪ್ರದೇಶ 2ನೇ ಇನಿಂಗ್ಸ್ ಆರಂಭಿಸಿದ್ದು, ದಿನದಂತ್ಯಕ್ಕೆ 6 ವಿಕೆಟ್ ಕಳೆದುಕೊಂಡು 204 ರನ್ ಗಳಿಸಿದೆ. ಭಾನುವಾರ ಪಂದ್ಯದ ಕೊನೆಯ ದಿನವಾಗಿದ್ದು, ಈಗಾಗಲೇ ಮಧ್ಯಪ್ರದೇಶ 336 ರನ್‌ಗಳ ಭಾರೀ ಮುನ್ನಡೆ ಸಾಧಿಸಿದೆ. ಸದ್ಯದ ಪ್ರಕಾರ ರಾಜ್ಯಕ್ಕೆ ಸೋಲು ತಪ್ಪಿಸಿಕೊಳ್ಳುವುದು ಮೊದಲ ಆದ್ಯತೆ. 4ನೇ ದಿನದಾಟ ಭಾರೀ ಕುತೂಹಲ ಮೂಡಿಸಿದೆ. ಕರ್ನಾಟಕ ತನ್ನ ಬ್ಯಾಟಿಂಗ್ ವೇಳೆ ಭಾರೀ ಹಿನ್ನಡೆ ಅನುಭವಿಸಿತು. ಕೆ.ವಿ.ಅನೀಶ್ 92 ರನ್ ಗಳಿಸಿದ್ದನ್ನು ಬಿಟ್ಟರೆ, ಇತರರು ವಿಫಲರಾದರು. ಕರುಣ್ ನಾಯರ್ 12 ರನ್‌ಗಳಿಗೆ ರನೌಟಾಗಿದ್ದು ದುಬಾರಿಯಾಗಿ ಪರಿಣಮಿಸಿತು. ಶ್ರೇಯಸ್ ಗೋಪಾಲ್ 41 ರನ್ ಗಳಿಸಿದರು. ಮಧ್ಯಪ್ರದೇಶದ 2ನೇ ಇನಿಂಗ್ಸ್‌ನಲ್ಲಿ ಹಿಮಾಂಶು ಮಂತ್ರಿ 89 ರನ್ ಗಳಿಸಿ ಅಜೇಯರಾಗುಳಿದಿದ್ದಾರೆ.

ಕೆ.ವಿ. ಅನೀಶ್ ಉತ್ತಮ ಬ್ಯಾಟಿಂಗ್.

ಇಂದು ಭಾರತ–ನ್ಯೂಜಿಲೆಂಡ್ 3ನೇ ಟಿ20 ಪಂದ್ಯ

ಭಾರತ ಗೆದ್ದರೆ ಸರಣಿ ವಶ

ಗುವಾಹಟಿ: ನ್ಯೂಜಿಲೆಂಡ್ ಎದುರಿನ 5 ಪಂದ್ಯಗಳ ಟಿ20 ಸರಣಿಯಲ್ಲಿ ಸತತ ಎರಡು ಗೆಲುವು ಸಾಧಿಸಿರುವ ಭಾರತ ಭಾನುವಾರ ಮೂರನೇ ಪಂದ್ಯವನ್ನಾಡಲಿದೆ. ಈ ಪಂದ್ಯವನ್ನು ಗೆದ್ದು ಸರಣಿ ವಶಪಡಿಸಿಕೊಳ್ಳುವ ಯೋಜನೆ ಸೂರ್ಯ ಕುಮಾರ್ ಪಡೆಯದ್ದಾದರೆ, ಅತ್ತ ಸರಣಿ ಜೀವಂತ ವಿರಿಸಿಕೊಳ್ಳಲು ಸ್ಯಾಂಟ್ನರ್ ಪಡೆ ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ನಾಯಕ ಸೂರ್ಯ ಕುಮಾರ್ ಯಾದವ್ ಭರ್ಜರಿ ಲಯದಲ್ಲಿದ್ದಾರೆ.

ರಿಂಕು ಸಿಂಗ್ ಫಿನಿಶರ್ ಪಾತ್ರದಲ್ಲಿ ಮಿಂಚುತ್ತಿದ್ದಾರೆ. ಬೌಲಿಂಗ್ ಘಟಕವೂ ಬಲಿಷ್ಠವಾಗಿದೆ. ಆದರೆ ವೇಗಿ ಜಸ್‌ಪ್ರೀತ್ ಬುಮ್ರಾಗೆ ವಿಶ್ರಾಂತಿ ನೀಡಲಾಗಿದೆ. ಅಕ್ಷರ್ ಪಟೇಲ್ ಗಾಯ ಗೊಂಡಿದ್ದಾರೆ. ಆದರೆ ಅವರು ತಂಡಕ್ಕೆ ಮರಳುವ ಸಾಧ್ಯತೆಯಿದೆ. ಅವರಿಗಾಗಿ ಕುಲದೀಪ್ ಯಾದವ್ ಸ್ಥಾನ ಬಿಟ್ಟುಕೊಡಬೇಕಾಗಬಹುದು.

ಬರ್ಸಪಾರದಲ್ಲಿ ದಾಖಲೆ ಸ್ಕೋರ್‌ಗಳು: ಈ ಮೈದಾನದಲ್ಲಿ ಇದುವರೆಗೆ 7 ಅಂತಾರಾಷ್ಟ್ರೀಯ ಟಿ20 ಪಂದ್ಯಗಳು ನಡೆದಿವೆ. ತಲಾ 3 ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್ ಮತ್ತು ಚೇಸಿಂಗ್ ನಡೆಸಿದ ತಂಡಗಳು ಗೆಲುವು ಸಾಧಿಸಿದೆ. 161 ಮೊದಲ ಇನಿಂಗ್ಸ್‌ನ ಸರಾಸರಿ ಮೊತ್ತ.

ಸಂಭಾವ್ಯ ತಂಡಗಳು

ಭಾರತ: ಸ್ಯಾಮ್ಸನ್ (ವಿ.ಕೀ.), ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ಸೂರ್ಯ ಕುಮಾರ್ (ನಾಯಕ), ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ರಿಂಕು, ಹರ್ಷಿತ್, ಅರ್ಷದೀಪ್, ಕುಲದೀಪ್/ಅಕ್ಷರ್, ಚಕ್ರವರ್ತಿ.

ನ್ಯೂಜಿಲೆಂಡ್: ಕಾನ್ವೆ, ಸೀಫರ್ಟ್ (ವಿ.ಕೀ.), ರಚಿನ್, ಫಿಲಿಪ್ಸ್, ಡೆರಿಲ್, ಚಾಪ್ಮನ್, ಸ್ಯಾಂಟ್ನರ್ (ನಾಯಕ), ಮ್ಯಾಟ್ ಹೆನ್ರಿ, ಫೌಕ್ಸ್, ಸೋಧಿ, ಡಫಿ.

ಮುಖಾಮುಖಿ

27	17	10
ಒಟ್ಟು ಪಂದ್ಯಗಳು	ಭಾರತ ಜಯ	ಕಿವೀಸ್ ಜಯ

ಪಂದ್ಯಾರಂಭ: ರಾತ್ರಿ 7
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋಹಾಟ್‌ಸ್ಟಾರ್

ಹವಾಮಾನ ವರದಿ

ಗುವಾಹಟಿ, ಇಂಡಿಯಾನಾದಲ್ಲಿ ಪಂದ್ಯದ ಸಮಯದಲ್ಲಿ ಮಳೆಯ ತಾಪತ್ರಯವಿಲ್ಲ. ಪಂದ್ಯದ ದಿನದಂದು ತಾಪಮಾನವು ಸುಮಾರು 23 ಡಿಗ್ರಿ ಇರುವ ನಿರೀಕ್ಷೆಯಿದೆ, 35% ತೇವಾಂಶವಿರಲಿದೆ. ವಾತಾವರಣದಲ್ಲಿ ಮಂಜು ಮುಸುಕಿದ ಸ್ಥಿತಿ ಇರುವುದಿಲ್ಲ. ಚೆಂಡು ಚೆನ್ನಾಗಿ ಕಾಣಿಸುವ ಸಾಧ್ಯತೆಯಿದೆ. ಮಳೆಯಾಗುವ ಸಾಧ್ಯತೆಗಳಿಲ್ಲ ಎಂದು ವರದಿಗಳು ಹೇಳಿವೆ.

ಅಂಕಣ ಹೇಗಿದೆ?

ಗುವಾಹಟಿಯ ಪಿಚ್ ಬ್ಯಾಟಿಂಗ್ ಸ್ನೇಹಿಯಾಗಿರುವ ನಿರೀಕ್ಷೆಯಿದ್ದು, ಈ ಪಂದ್ಯದಲ್ಲಿ ಹೆಚ್ಚಿನ ಸ್ಕೋರಿಂಗ್ ನಿರೀಕ್ಷಿಸಬಹುದು. ಆರಂಭದಲ್ಲಿ ವೇಗದ ಬೌಲರ್‌ಗಳಿಗೆ ಸ್ವಲ್ಪ ಸಹಾಯ ಸಿಗಬಹುದು. ಆದರೆ ಬೌಲರ್‌ಗಳಿಗೆ ಕಠಿಣ ಸಮಯ ಎದುರಾಗಬಹುದು. ವಿಶೇಷವಾಗಿ ಎರಡನೇ ಇನಿಂಗ್ಸ್‌ನಲ್ಲಿ ಇಬ್ಬನಿಯು ಪ್ರಮುಖ ಪಾತ್ರ ವಹಿಸಬಹುದು. ಟಾಸ್ ಗೆದ್ದ ತಂಡ ಮೊದಲು ಬೌಲಿಂಗ್ ಆಯ್ದುಕೊಳ್ಳಬಹುದು.

ಭಾರತದಲ್ಲಿ ಆಡಲ್ಲ ಎಂದ ಬಾಂಗ್ಲಾ ವಿರುದ್ಧ ಐಸಿಸಿ ಕ್ರಮ
ಬಾಂಗ್ಲಾಕ್ಕೆ ಕಾದಿದೆ ಕಠಿಣ ಶಿಕ್ಷೆ, ಭವಿಷ್ಯದಲ್ಲಿ ಭಾರೀ ನಷ್ಟ?

ಟಿ20 ವಿಶ್ವಕಪ್: ಬಾಂಗ್ಲಾ ಹೊರಕ್ಕೆ, ಸ್ಕಾಟ್ಲೆಂಡ್‌ಗೆ ಸ್ಥಾನ

ಮುಂಬೈ: 2026ರ ಐಸಿಸಿ ಪುರುಷರ ಟಿ 20 ವಿಶ್ವಕಪ್‌ನಿಂದ ಬಾಂಗ್ಲಾದೇಶವನ್ನು ಐಸಿಸಿ ಹೊರಹಾಕಿದೆ. ಆ ಸ್ಥಾನಕ್ಕೆ ಸ್ಕಾಟ್ಲೆಂಡ್ ತಂಡ ಆಡಲಿದೆ. ಈ ಸಂಬಂಧ ಅಧಿಕೃತ ಮಾಹಿತಿಯನ್ನು ಐಸಿಸಿ ಹಂಚಿಕೊಂಡಿದೆ. ಭಾರತದಲ್ಲಿ ನಾವು ಪಂದ್ಯಗಳನ್ನು ಆಡಲ್ಲ, ಭದ್ರತಾ ಭೀತಿಯಿದೆ ಎಂದು ಬಾಂಗ್ಲಾದೇಶ ಹೇಳಿತ್ತು. ಕೊನೆಯ ಹಂತದಲ್ಲಿ ಬಾಂಗ್ಲಾ ಈ ಮಾಹಿತಿ ನೀಡಿದ್ದರಿಂದ ಐಸಿಸಿ ಕಠಿಣ ಕ್ರಮ ಕೈಗೊಂಡಿದೆ. ಬಾಂಗ್ಲಾದ ಈ ನಿಲುವಿನ ವಿರುದ್ಧ ಐಸಿಸಿ ಕಠಿಣ ಕ್ರಮ ಕೈಗೊಳ್ಳುವ ನಿರೀಕ್ಷೆಯಿದೆ. ದೀರ್ಘಕಾಲೀನವಾಗಿ ಬಾಂಗ್ಲಾಕ್ಕೆ ಬಹಳ ಕಷ್ಟಕರವಾಗಿ ಪರಿಣಮಿಸಬಹುದು.

ಇದೇ ಫೆ.7ರಿಂದ ಭಾರತ ಮತ್ತು ಶ್ರೀಲಂಕಾದಲ್ಲಿ ಟಿ20 ವಿಶ್ವಕಪ್ ಪಂದ್ಯಗಳು ನಡೆಯಲಿವೆ. ಭಾರತದಲ್ಲಿ ಪಂದ್ಯಗಳ ಆಯೋಜನೆ ವಿಚಾರವಾಗಿ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಮತ್ತು ಐಸಿಸಿ ನಡುವೆ ಜಟಾಪಟಿ ನಡೆದಿತ್ತು. ಬಾಂಗ್ಲಾದಲ್ಲಿ ಭಾರೀ ಆಂತರಿಕ ಕಲಹ ನಡೆಯುತ್ತಿದೆ. ಅಲ್ಲಿ ಭಾರತ ವಿರೋಧಿ ಧೋರಣೆ ಕಂಡುಬಂದಿದೆ. ಈ ನಡುವೆ ಐಪಿಎಲ್‌ನ ಕೆಕೆಆರ್ ತಂಡದಿಂದ ಬಾಂಗ್ಲಾ ವೇಗಿ ಮುಸ್ತಫಿಜುರ್ ರೆಹಮಾನ್‌ಗೆ ಕೊಕ್ ನೀಡಲಾಗಿತ್ತು. ಇದರ ಬೆನ್ನಲ್ಲೇ ಬಾಂಗ್ಲಾ ತಾನು ಭಾರತದಲ್ಲಿ ನಡೆಯುವ ಟಿ20 ವಿಶ್ವಕಪ್‌ನಲ್ಲಿ ಆಡಲ್ಲ ಎಂದು ಕ್ಯಾತೆ ತೆಗೆದಿತ್ತು. ಈ ಬದಲಾವಣೆ ಅನಿವಾರ್ಯವೆಂದು ಬಹಳ ಹಿಂದಿನಿಂದಲೂ ಕಂಡುಬಂದಿತ್ತು. ಐಸಿಸಿ ಈ ವಾರದ ಆರಂಭದಲ್ಲಿ ಬಿಸಿಬಿಗೆ 24 ಗಂಟೆಗಳ ಗಡುವು ನೀಡಿತ್ತು. ಐಸಿಸಿ ನೀತಿಗೆ ಸರಿಹೊಂದದ ಬೇಡಿಕೆಗಳನ್ನು ಹಿಂತೆಗೆದುಕೊಳ್ಳದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿತ್ತು. ಐಸಿಸಿ ಸಿಇಒ ಸಂಜೋಗ್ ಗುಪ್ತಾ ಅವರು ಮಂಡಳಿಗೆ ಔಪಚಾರಿಕವಾಗಿ ಪತ್ರ ಬರೆದು, ಬಿಸಿಬಿ ಮಂಡಳಿಯ ನಿರ್ಧಾರವನ್ನು ಪಾಲಿಸಲು ವಿಫಲವಾಗಿದೆ ಎಂದು ಹೇಳಿದ್ದಾರೆ.

ಬಾಂಗ್ಲಾಕ್ಕೆ ಕೈಕೊಟ್ಟ ಪಾಕ್?

ಬಾಂಗ್ಲಾ ಆಡದಿದ್ದರೆ ತಾನು ಟಿ20 ವಿಶ್ವಕಪ್ ಅನ್ನು ಬಹಿಷ್ಕರಿಸುವುದಾಗಿ ಹೇಳಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಬಾಂಗ್ಲಾದೇಶಕ್ಕೆ ಕೈಕೊಟ್ಟಂತೆ ಕಾಣುತ್ತಿದೆ. ಐಸಿಸಿ ಕ್ರಮವನ್ನು ಕಠಿಣವಾಗಿ ಟೀಕಿಸಿರುವ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ, ಪಾಕಿಸ್ತಾನ ಸರಕಾರ ನೀಡುವ ನಿರ್ದೇಶನವನ್ನು ಪಾಲಿಸುವುದಾಗಿ ತಿಳಿಸಿದೆ. ಆದರೆ ಖಚಿತವಾಗಿ ತನ್ನ ನಿಲುವನ್ನು ಪ್ರಕಟಿಸಿಲ್ಲ.

ಡಬ್ಲ್ಯೂಪಿಎಲ್: ಪ್ಲೇಆಫ್‌ಗೇರುವ ಡೆಲ್ಲಿ ಕ್ಯಾಪಿಟಲ್ಸ್ ಆಸೆ ಜೀವಂತ

ಆರ್‌ಸಿಬಿಗೆ ಮೊದಲ ಸೋಲು

ವಡೋದರಾ: ಈ ಬಾರಿಯ ಡಬ್ಲ್ಯೂಪಿಎಲ್‌ನಲ್ಲಿ ಸತತ 5 ಪಂದ್ಯಗಳನ್ನು ಗೆದ್ದಿದ್ದ ಆರ್‌ಸಿಬಿ ಶನಿವಾರ ಮೊದಲ ಸೋಲನುಭವಿಸಿತು. ಈಗಾಗಲೇ ಪ್ಲೇಆಫ್‌ನಲ್ಲಿ ತನ್ನ ಸ್ಥಾನ ಖಚಿತ ಮಾಡಿಕೊಂಡಿರುವ ಆರ್‌ಸಿಬಿಯನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ 7 ವಿಕೆಟ್‌ಗಳಿಂದ ಮಣಿಸಿತು. ಟಾಸ್ ಗೆದ್ದು ಡೆಲ್ಲಿ ಕ್ಷೇತ್ರರಕ್ಷಣೆ ಆಯ್ದುಕೊಂಡಿತು. ಆರ್‌ಸಿಬಿ ಮೊದಲು ಬ್ಯಾಟ್ ಮಾಡಿ 20 ಓವರ್‌ಗಳಲ್ಲಿ 109 ರನ್‌ಗಳಿಗೆ ಆಲೌಟಾಯಿತು.

ಇದನ್ನು ಬೆನ್ನತ್ತಿದ ಡೆಲ್ಲಿ 15.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 111 ರನ್ ಗಳಿಸಿತು. ಲಾರಾ ವೋಲ್ವಾರ್ಟ್ 38 ಎಸೆತಗಳಲ್ಲಿ 42 ರನ್ ಸಿಡಿಸಿದರು. ಜೆಮಿಮಾ ರೋಡ್ರಿಗಸ್ ನಿಧಾನಕ್ಕೆ ಆಡಿ 24 ರನ್ ಗಳಿಸಿದರು. ಪ್ರಸ್ತುತ ಪಂದ್ಯದ ಗೆಲುವು ಡೆಲ್ಲಿಗೆ ಮಹತ್ವದ್ದಾಗಿತ್ತು. ಆರ್‌ಸಿಬಿ ಈಗಾಗಲೇ ಪ್ಲೇಆಫ್‌ಗೇರಿದೆ. ಡೆಲ್ಲಿ ಗೆದ್ದಿದ್ದರಿಂದ ಅದರ ಪ್ಲೇಆಫ್ ಆಸೆ ಜೀವಂತವಾಗಿದೆ. ಇನ್ನು ಎಲ್ಲ ತಂಡಗಳಿಗೆ ತಲಾ 2 ಪಂದ್ಯಗಳು ಉಳಿದಿವೆ. ಅಗ್ರ 3 ಸ್ಥಾನಿ ತಂಡಗಳು ಪ್ಲೇಆಫ್‌ಗೇರಲಿವೆ. ಉಳಿದೆರಡು ಸ್ಥಾನಿಗಳಿಗಾಗಿ ಡೆಲ್ಲಿ, ಗುಜರಾತ್ ಪೈಪೋಟಿಯಲ್ಲಿವೆ.

ಸಂಕ್ಷಿಪ್ತ ಸ್ಕೋರ್: ಆರ್‌ಸಿಬಿ 20 ಓವರ್, 109/10 (ಸ್ಮೃತಿ 38, ನಂದಿನಿ ಶರ್ಮಾ 26ಕ್ಕೆ 3, ಕ್ಯಾಪ್ 17ಕ್ಕೆ 2). ಡೆಲ್ಲಿ 15.4 ಓವರ್, 111/3 (ವೋಲ್ವಾರ್ಟ್ 42, ಜೆಮಿಮಾ 24, ಸಯಾಲಿ 18ಕ್ಕೆ 2).

ನಿರೀಕ್ಷೆಯಂತೆ ಟಿ20, ಏಕದಿನಕ್ಕೆ ಹರ್ಮನ್ ನಾಯಕಿ, ಸ್ಮೃತಿ ಉಪನಾಯಕಿ | ಫೆ.15ರಿಂದ ಮಾ.9 ಪ್ರವಾಸ

ಮಹಿಳಾ ಕ್ರಿಕೆಟ್ ಆಸೀಸ್ ಪ್ರವಾಸ: ಉಮಾಗೆ ಸ್ಥಾನ, ಟಿ20ಗೆ ಭಾರತಿ

ದೆಹಲಿ: ಮುಂದಿನ ತಿಂಗಳು ಆರಂಭವಾಗಲಿರುವ ಆಸ್ಟ್ರೇಲಿಯಾ ಪ್ರವಾಸಕ್ಕಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶನಿವಾರ ಭಾರತ ಮಹಿಳಾ ತಂಡವನ್ನು ಪ್ರಕಟಿಸಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ತಂಡ, ಫೆಬ್ರವರಿ 15ರಿಂದ ಮಾರ್ಚ್ 9, 2026ರವರೆಗೆ ಆಸ್ಟ್ರೇಲಿಯಾ ವಿರುದ್ಧ ಮೂರು ಏಕದಿನ ಪಂದ್ಯಗಳು, ಮೂರು ಟಿ20 ಪಂದ್ಯಗಳು ಮತ್ತು ಒಂದು ಟೆಸ್ಟ್ ಪಂದ್ಯವನ್ನು ಆಡಲಿದೆ.

ವಿಕೆಟ್ ಕೀಪರ್ ಜಿ.ಕಮಲಿನಿ ಅವರನ್ನು ಪ್ರವಾಸದಿಂದ ಹೊರಗಿಡಲಾಗಿದೆ ಎಂದು ಬಿಸಿಸಿಐ ತಿಳಿಸಿದೆ. ಅವರ ಬದಲಿಗೆ ಉಮಾ ಚೆಟ್ರಿ ಭಾರತದ ಟಿ20 ಮತ್ತು ಏಕದಿನ ತಂಡಗಳಿಗೆ ಆಯ್ಕೆಯಾಗಿದ್ದಾರೆ. ಟಿ20 ತಂಡದಲ್ಲಿ ಕೇವಲ ಎರಡು ಬದಲಾವಣೆಗಳನ್ನು ಮಾಡಿದ್ದು, ಹರ್ಲೀನ್ ಡಿಯೋಲ್ ಬದಲಿಗೆ ಶ್ರೇಯಾಂಕಾ ಪಾಟೀಲ್ ಆಯ್ಕೆಯಾಗಿದ್ದಾರೆ. ಭಾರತಿ ಫುಲ್ಮಲಿ ಕೂಡ ಟಿ20 ತಂಡಕ್ಕೆ ಮರಳಿದ್ದಾರೆ. ಅವರು 2019ರಲ್ಲಿ ಕೊನೆಯ ಬಾರಿಗೆ ಟಿ20 ಮಾದರಿಯಲ್ಲಿ ಆಡಿದ್ದರು.

ಪೂರ್ಣ ವೇಳಾಪಟ್ಟಿ

ಮೊದಲ ಟಿ20, ಫೆಬ್ರವರಿ 15, ಸಿಡ್ನಿ
2ನೇ ಟಿ20, ಫೆಬ್ರವರಿ 19, ಕ್ಯಾನ್ಬೆರಾ
3ನೇ ಟಿ20, ಫೆಬ್ರವರಿ 21, ಅಡಿಲೇಡ್
ಮೊದಲ ಏಕದಿನ, ಫೆಬ್ರವರಿ 24, ಬ್ರಿಸ್ಬೇನ್
2ನೇ ಏಕದಿನ, ಫೆಬ್ರವರಿ 27, ಹೋಬರ್ಟ್
2ನೇ ಏಕದಿನ, ಮಾರ್ಚ್ 1, ಹೋಬರ್ಟ್
ಟೆಸ್ಟ್, ಮಾರ್ಚ್ 6-9, ಪರ್ತ್

ಮಹಿಳಾ ಟೆಸ್ಟ್ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನಾ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ಅಮನ್‌ಜೋತ್ ಕೌರ್, ರಿಚಾ ಘೋಷ್ (ವಿ.ಕೀ.), ಉಮಾ ಚೆಟ್ರಿ (ವಿ.ಕೀ.), ಪ್ರತೀಕಾ ರಾವಲ್, ಹರ್ಲೀನ್ ದೇವಲ್, ದೀಪ್ತಿ ಶರ್ಮಾ, ರೇಣುಕಾ, ಸ್ನೇಹ ರಾಣಾ, ಕ್ರಾಂತಿ ಗೌಡ್, ವೈಷ್ಣವಿ ಶರ್ಮಾ, ಸಯಾಲಿ ಸತ್ಘರೆ.

ಟಿ20 ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನಾ (ವಿಸಿ), ಶಫಾಲಿ ವರ್ಮಾ, ರೇಣುಕಾ ಠಾಕೂರ್, ಶ್ರೀಚರಣಿ, ವೈಷ್ಣವಿ ಶರ್ಮಾ, ಕ್ರಾಂತಿ ಗೌಡ್, ಸ್ನೇಹ ರಾಣಾ, ದೀಪ್ತಿ ಶರ್ಮಾ, ರಿಚಾ ಘೋಷ್, ಅರುಂಧತಿ ರೆಡ್ಡಿ, ಅಮನ್‌ಜೋತ್ ಕೌರ್, ಜೆಮಿಮಾ, ಭಾರತಿ ಫುಲ್ಮಲಿ, ಶ್ರೇಯಾಂಕಾ ಪಾಟೀಲ್.

ವಿಟಾಕೀಸ್

ಸಾಕ್ಷ್ಯ ಅರಸಿ ಹೊರಟ ಪಾರ್ಥ

ಪರಭಾಷೆಯಂತೆಯೇ ಕನ್ನಡದಲ್ಲಿಯೂ ಕೋರ್ಟ್ ಹಾಲ್ ಡ್ರಾಮಾ ಕಥೆಯ ಚಿತ್ರಗಳು ನಿರ್ಮಾಣವಾಗುತ್ತಿವೆ. ಈಗ ನಿರ್ದೇಶಕ ಎಂ.ಎನ್.ಶ್ರೀಹರ್ಷ ಕೂಡ ಕೋರ್ಟ್ ಹಾಲ್ ಡ್ರಾಮಾ ಜಾನರ್‌ನ ಸ್ಟೋರಿಯನ್ನು ಆಯ್ದುಕೊಂಡಿದ್ದಾರೆ. ಪಾರ್ಥನ್ ಪರಪಂಚ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಸಿರಿ ಸಿನಿಮಾಸ್ ಬ್ಯಾನರ್‌ನಲ್ಲಿ ಸೀತಾ ಹರ್ಷವರ್ಧನ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಕಿರುತೆರೆಯಲ್ಲಿ ಪ್ರಸಾರವಾಗುತ್ತಿರುವ ಅಣ್ಣಯ್ಯ ಧಾರಾವಾಹಿ ಖ್ಯಾತಿಯ ವಿಕಾಸ್ ನಾಯಕನಾಗಿ ನಟಿಸುತ್ತಿದ್ದು, ಮಂದಾರ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು ಡಿಫೆನ್ಸ್ ಲಾಯರ್ ಆಗಿ ಕಾಣಿಸಿ ಕೊಳ್ಳುತ್ತಿದ್ದು, ಸೀತಾ ಪಬ್ಲಿಕ್ ಪ್ರಾಸಿಕ್ಯೂಟರ್ ಪಾತ್ರ ಮಾಡುತ್ತಿದ್ದಾರೆ. ಉಳಿದಂತೆ ಅಮಿತ್, ಸಂಪತ್ ಮೈತ್ರೇಯ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸದ್ಯ ಪಾರ್ಥನ್ ಪರಪಂಚ ಚಿತ್ರದ ಚಿತ್ರೀಕರಣ ಕಂಠೀರವ ಸ್ಟುಡಿಯೊದಲ್ಲಿ ನಡೆಯುತ್ತಿದೆ.

ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಕೋರ್ಟ್ ರೂಮ್ ಡ್ರಾಮಾ ಕಥೆಯನ್ನು ಒಳಗೊಂಡಿದೆ. ಇದು ನೈಜತೆಗೆ ಹತ್ತಿರವಾದ ಕಥೆಯಾಗಿದ್ದು, ಎಲ್ಲರಿಗೂ ಹಿಡಿಸು ವಂತೆ ತೆರೆಗೆ ಬರಲಿದೆ. ಇಡೀ ಚಿತ್ರದ ಕಥೆ ಬೆಂಗಳೂರಿನಲ್ಲಿ ನಡೆಯುತ್ತದೆ. ಚಿತ್ರಕ್ಕಾಗಿ ಕೋರ್ಟ್ ಹಾಲ್ ಸೆಟ್ ಹಾಕಿ ಶೂಟಿಂಗ್ ನಡೆಸಲಾಗುತ್ತಿದೆ ಎಂದು ನಿರ್ದೇಶಕ ಶ್ರೀಹರ್ಷ ಹೇಳಿದರು. ಒಳ್ಳೆಯ ಕಥೆಯನ್ನು ಹೆಣೆದಿರುವ ನಿರ್ದೇಶಕರು ಒಳ್ಳೆಯ ತಂಡವನ್ನೇ ಕಟ್ಟಿದ್ದಾರೆ. ನಾನು ಈ ಸಿನಿಮಾ ವನ್ನು ನಿರ್ಮಾಣ ಮಾಡುವದರ ಜತೆಗೆ ವಕೀಲೆಯಾಗಿಯೂ ನಟಿಸುತ್ತಿದ್ದೇನೆ ಎಂದು ನಿರ್ಮಾಪಕಿ ಸೀತಾ ತಿಳಿಸಿದರು. ಪ್ರಸ್ತುತ ಕಾಲಘಟ್ಟಕ್ಕೆ ಹೊಂದುವ ಕಥೆ ಇಲ್ಲಿದೆ. ಒಂದು ಕೇಸ್ ಹೇಗೆ ಟ್ವಿಸ್ಟ್ ಅಂಡ್ ಟರ್ನ್ ಪಡೆಯುತ್ತದೆ ಎಂಬುದನ್ನು ನಿರ್ದೇಶಕರು ಬಲು ರೋಚಕವಾಗಿ ಕಟ್ಟಿಕೊಡುತ್ತಿದ್ದಾರೆ ಎಂದು ನಟ ವಿಕಾಸ್ ಹೇಳಿದರು. ಒಟ್ಟು ನಲವತ್ತೈದು ದಿನಗಳ ಚಿತ್ರೀಕರಣಕ್ಕೆ ಚಿತ್ರತಂಡ ಯೋಜನೆ ರೂಪಿಸಿದ್ದು, ಅದರಲ್ಲಿ ಬಹುತೇಕ ಭಾಗ ಕೋರ್ಟ್ ಹಾಲ್‌ನಲ್ಲಿಯೇ ನಡೆಯಲಿದೆ. ಜೈ ಆನಂದ್ ಛಾಯಾಗ್ರಹಣ, ಅನಂತ್ ಆರ್ಯನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಈವರೆಗೆ ಯಾರೂ ಊಹಿಸದ ಕಥೆ ಚಿತ್ರದಲ್ಲಿದೆ. ವಕೀಲರು ಕೇಸ್‌ಗೆ ಸಂಬಂಧಿಸಿದ ಒಂದು ಸಾಕ್ಷಿಯನ್ನು ಅರಸುತ್ತಾ ಹೋದಾಗ ಅವರಿಗೆ ಯಾವೆಲ್ಲಾ ಸವಾಲುಗಳು ಎದಿರಾಗುತ್ತವೆ ಎಂಬುದನ್ನು ಚಿತ್ರದಲ್ಲಿ ಸಸ್ಪೆನ್ಸ್ ಬೆರೆಸಿ ಕಟ್ಟಿಕೊಡಲಾಗುತ್ತಿದೆ. ಅಜ್ಞಾತವಾಸಿ, ಶಾಖಾಹಾರಿ ನಂತರ ನಾನು ಮತ್ತೊಂದು ವಿಭಿನ್ನ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ.

–**ರಂಗಾಯಣ ರಘು** ನಟ

ಮೋಡಿ ಮಾಡಿದ ಮಾವುತ

ಲಕ್ಷ್ಮೀಪತಿ ಬಾಲಾಜಿ ನಿರ್ಮಿಸಿ, ನಟಿಸಿರುವ ಮಾವುತ ತೆರೆಗೆ ಸಿದ್ಧವಾಗಿದೆ. ಅದಕ್ಕೂ ಮೊದಲೇ ಮಾವುತ ಟ್ರೇಲರ್‌ನಲ್ಲಿ ಮೋಡಿ ಮಾಡುತ್ತಿದ್ದಾನೆ. ಮಾವುತ ಕಾಡಿನ ಕಥೆ. ಕಾನನದಲ್ಲಿ ನಡೆಯುವ ಕೆಲವು ಅಕ್ರಮಗಳನ್ನು ಕಂಡು ಹಿಡಿದು ಕಾಡನ್ನು ಉಳಿಸುವ ಮಾವುತ ಹಾಗೂ ಆನೆಯ ಬಾಂಧವ್ಯದ ಕಥನಾ ಇಲ್ಲಿದೆ. ಸಾಗರ್ ಎಂಬ ಆನೆ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದೆ. ನಿರ್ದೇಶಕ ರವಿಶಂಕರ್ ನಾಗ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಮಾವುತ ನಾನು ಅಭಿನಯಿಸುತ್ತಿರುವ ಎರಡನೇ ಚಿತ್ರ. ಕಾಡಿನೊಳಗೆ ಸಾಗುವ ಕಥೆ ಇಲ್ಲಿದೆ. ಮಾವುತ ಹಾಗೂ ಆನೆಯ ಬಾಂಧವ್ಯದ ಸನ್ನಿವೇಶಗಳೇ ಈ ಚಿತ್ರದ ಹೈಲೆಟ್ ಆಗಿದೆ. ಸಾಗರ್ ಎಂಬ ಆನೆ ಈ ಚಿತ್ರದಲ್ಲಿ ಅಮೋಘವಾಗಿ ಅಭಿನಯಿಸಿದೆ. ಬಹಳ ದಿನಗಳ ನಂತರ ಕನ್ನಡದಲ್ಲಿ ಆನೆ ಪೂರ್ಣ ಪ್ರಮಾಣದಲ್ಲಿ ನಟಿಸಿರುವ ಚಿತ್ರವಿದು ಎಂಬ ಹೆಮ್ಮೆಯೂ ನಮಗಿದೆ. ನಾವು ಈ ಸಿನಿಮಾ ಮಾಡಲು ಅಂಬಾರಿ ಹೊರುತ್ತಿದ್ದ ಅರ್ಜುನ ಆನೆಯೇ ಸ್ಫೂರ್ತಿ. ನಮ್ಮ ಚಿತ್ರ ಅರ್ಜುನನಿಗೆ ಅರ್ಪಣೆ ಎಂದು ನಟ, ನಿರ್ಮಾಪಕ ಲಕ್ಷ್ಮೀಪತಿ ಬಾಲಾಜಿ ಹೇಳಿದರು. ಚಿತ್ರದಲ್ಲಿ ಐದು ಸಾಹಸ ಸನ್ನಿವೇಶಗಳಿದ್ದು, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಮಾಡಿದ್ದಾರೆ. ಜತೆಗೆ ಅರಣ್ಯಾಧಿಕಾರಿ ಪಾತ್ರದಲ್ಲಿಯೂ ಅಭಿನಯಿಸಿದ್ದಾರೆ. ಮಹಾಲಕ್ಷ್ಮಿ ಹಾಗೂ ದಿವ್ಯಾಶ್ರೀ ನಾಯಕಿಯರಾಗಿ ಬಣ್ಣ ಹಚ್ಚಿದ್ದು, ಉಳಿದಂತೆ ಲಯಕೋಕಿಲ, ಕೈಲಾಶ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಸೆಟ್ಟೇರಿದ ಇಂದಿರಾ

ಹೊಸಬರೇ ಸೇರಿ ನಿರ್ಮಿಸುತ್ತಿರುವ ಇಂದಿರಾ ಚಿತ್ರದ ಟೈಟಲ್ ಪೋಸ್ಟರ್ ರಿಲೀಸ್ ಆಗಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಭಾ.ಮ. ಹರೀಶ್, ನಿರ್ಮಾಪಕ ಟಿ.ಪಿ.ಸಿದ್ದರಾಜು, ಇಂದಿರಾ ಚಿತ್ರದ ಟೈಟಲ್ ಪೋಸ್ಟರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಇಂದಿನ ಕಾಲಘಟ್ಟಕ್ಕೆ ಹೊಂದುವ ನೀತಿಕಥೆಯೂ ಈ ಚಿತ್ರದಲ್ಲಿದ್ದು, ಅದಕ್ಕಾಗಿ ಜೆನ್ ಝೀ ಎಂಬ ಅಡಿಬರಹವೂ ಇದೆ. ಈ ಹಿಂದೆ ರಾವೆನ್ ಚಿತ್ರವನ್ನು ನಿರ್ದೇಶಿಸಿದ್ದ ನಿರ್ದೇಶಕ ವೇದ್, ಇಂದಿರಾ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಕಿರಣ್ ಫಿಲಂಸ್ ಬ್ಯಾನರ್‌ನಲ್ಲಿ ಎಂ.ಕಿರಣ್ ಕುಮಾರ್ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಇದು ಇಂದಿನ ತಲೆಮಾರಿನ ಜನತೆಗೆ ಕನೆಕ್ಟ್ ಆಗುವ ಸಿನಿಮಾ. ಈಗಾಗಲೇ ಜಗತ್ತಿನ ಅನೇಕ ದೇಶಗಳಲ್ಲಿ ಜೆನ್ ಝೀ ಯಿಂದ ಏನೇನಾಗುತ್ತಿದೆ. ಇಂದಿನ ತಲೆಮಾರು ಹೇಗೆಲ್ಲ ಯೋಚಿಸುತ್ತದೆ. ಅವರಿಂದ ಏನೆಲ್ಲ ಆಗಬಹುದು, ಎಂಬ ಹಲವು ವಿಷಯಗಳನ್ನು ಈ ಸಿನಿಮಾ ದಲ್ಲಿ ಹೇಳುತ್ತಿದ್ದೇವೆ. ಇದೊಂದು ಮಹಿಳಾ ಪ್ರಧಾನ ಕಥಾಹಂದರದ ಸಿನಿಮಾವಾಗಿದ್ದು, ಹಾಗಾಗಿಯೇ ಇಂದಿರಾ ಎಂದು ಶೀರ್ಷಿಕೆ ಆಯ್ದುಕೊಂಡಿದ್ದೇವೆ. ಇಂದಿರಾ ಸಿನಿಮಾದಲ್ಲಿ ಮನರಂಜನೆಯ ಜತೆಗೆ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವೂ ಇರಲಿದೆ. ಮಾರ್ಚ್ ನಲ್ಲಿ ಇಂದಿರಾ ಚಿತ್ರದ ಚಿತ್ರೀಕರಣ ಆರಂಭಿ ಸಲಿದ್ದೇವೆ ಎಂದು ನಿರ್ದೇಶಕ ವೇದ್ ಹೇಳಿ ದರು. ನಮ್ಮ ಚಿತ್ರಕ್ಕೆ ಇಂದಿರಾ ಎಂಬ ಶೀರ್ಷಿಕೆ ಯಿದೆ. ಆದರೆ ಈ ಸಿನಿಮಾಕ್ಕೂ ಇಂದಿರಾ ಗಾಂಧಿಯವರಿಗೂ ಯಾವುದೇ ಸಂಬಂಧ ವಿಲ್ಲ. ಇದು ರಾಜಕೀಯ ಕಥೆಯಾಧಾರಿತ ಸಿನಿಮಾವೂ ಅಲ್ಲ. ಆದರೆ ಸಿನಿಮಾದ ಕಥೆ ಯಲ್ಲಿ ಇಂದಿನ ಹಲವು ವಿದ್ಯಮಾನಗಳ ಬಗ್ಗೆ ಚರ್ಚಿಸುತ್ತಿದ್ದೇವೆ. ಸಿನಿಮಾದ ಕಥೆಗೆ ತಕ್ಕಂತೆ ಪವರ್‌ಫುಲ್ ಟೈಟಲ್ ಇರಬೇಕೆಂಬ ಕಾರಣಕ್ಕೆ ಈ ಹೆಸರಿಡಲಾಗಿದೆ ಎಂದು ನಿರ್ಮಾಪಕ ಎಂ.ಕಿರಣ್ ಕುಮಾರ್ ತಿಳಿಸಿದರು. ಇಂದಿರಾ ಚಿತ್ರದ ಪ್ರಮುಖ ಪಾತ್ರದಲ್ಲಿ ಖ್ಯಾತ ನಟಿಯೊಬ್ಬರು ಬಣ್ಣಹಚ್ಚಲಿದ್ದು, ಉಳಿದಂತೆ ದಕ್ಷಿಣ ಭಾರತದ ಖ್ಯಾತ ಕಲಾವಿದರು ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ. ಸದ್ಯ ಇಂದಿರಾ ಸಿನಿಮಾದ ಕಥೆ ಪೂರ್ಣ ಗೊಂಡಿದ್ದು, ಚಿತ್ರದ ಟೈಟಲ್ ಪೋಸ್ಟರ್ ಮತ್ತು ಟೈಟಲ್ ಟೀಸರ್ ಬಿಡುಗಡೆಯಾಗಿದೆ. ರವಿವರ್ಮ ಛಾಯಾಗ್ರಹಣ, ಧನುಶ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ಕರ್ನಾಟಕ ಪ್ರಮುಖ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಹಂಟರ್ಸ್ ಹಿಂದೆ ಪ್ರಮೋದ್

ಕನ್ನಡ ಚಿತ್ರರಂಗದಲ್ಲಿ ಬೆಲ್ ಬಾಟಮ್‌ನಂತಹ ಸೂಪರ್ ಹಿಟ್ ಸಿನಿಮಾಗಳನ್ನು ನಿರ್ಮಿಸಿರುವ ನಿರ್ಮಾಪಕ ಕೆ.ಸಿ.ಸಂತೋಷ್ ಕುಮಾರ್, ಏಳು ವರ್ಷಗಳ ಬಳಿಕ ಮರಳಿ ಬಂದಿದ್ದು, ಮತ್ತೊಂದು ಹೊಸ ಸಿನಿಮಾ ನಿರ್ಮಾಣಕ್ಕೆ ಸಿದ್ಧವಾಗಿದ್ದಾರೆ. ಹುಬ್ಬಳ್ಳಿ ಹಂಟರ್ಸ್ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ಕಳೆದ ವರ್ಷ ಎಡಗೈ ಅಪಘಾತಕ್ಕೆ ಕಾರಣ ಚಿತ್ರವನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದ ನಿರ್ದೇಶಕ ಸಮರ್ಥ್.ಬಿ.ಕಡ್ಕೋಳ್, ಹುಬ್ಬಳ್ಳಿ ಹಂಟರ್ಸ್ ಚಿತ್ರದ ಸಾರಥ್ಯ ವಹಿಸಿಕೊಂಡಿದ್ದಾರೆ.

ವಿಶೇಷ ಎಂದರೆ ನಟ ಪ್ರಮೋದ್ ಶೆಟ್ಟಿ ಹುಬ್ಬಳ್ಳಿ ಹಂಟರ್ಸ್ ಸಿನಿಮಾದಲ್ಲಿ ನಾಯಕ ನಾಯಕನಾಗಿ ನಟಿಸುತ್ತಿದ್ದಾರೆ. ಆ ಮೂಲಕ ಲಾಫಿಂಗ್ ಬುದ್ಧ ಸಿನಿಮಾದ ಬಳಿಕ ಮತ್ತೊಮ್ಮೆ ನಾಯಕನಾಗಿ ರಂಜಿಸಲಿದ್ದಾರೆ. ಮಹಾನಟಿ ಖ್ಯಾತಿಯ ಧನ್ಯಾಶ್ರೀ ಸುಜಿತ್ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಸಿನಿಮಾದ ಶೀರ್ಷಿಕೆಯೇ ಹೇಳುವಂತೆ ಇದು ಉತ್ತರ ಕರ್ನಾಟಕ ಸೊಗಡಿನ ಕಥೆಯಾಗಿದ್ದು, ಅದೇ ದಾಟಿಯ ಸಂಭಾಷಣೆಯೂ ಇರಲಿದೆ. ಸಿನಿಮಾದ ಪೋಸ್ಟರ್ ನೋಡಿದರೆ ಚಿತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳು ಬೆರೆತಿವೆ ಎಂಬುದು ತಿಳಿಯುತ್ತದೆ. ಸಮರ್ಥ್ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ರಾಹುಲ್.ವಿ. ಪಾರ್ವತಿಕರ್, ಅಮಿತ್ ಕಾರ್ವಕರ್ ಮತ್ತು ಚೇತನ್ ಮರಂಬೀದ್ ಸಂಭಾಷಣೆ ಬರೆಯುತ್ತಿದ್ದಾರೆ. ಅಭಿಮನ್ಯು ಸದಾನಂದನ್ ಛಾಯಾಗ್ರಹಣ, ಪ್ರಸನ್ನ ಕೇಶವ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಹುಬ್ಬಳ್ಳಿ ಹಂಟರ್ಸ್ ಮೂಲಕ ಸಮರ್ಥ್.ಬಿ.ಕಡ್ಕೋಳ್ ಪ್ರೇಕ್ಷಕರಿಗೆ ಮನರಂಜನೆಯ ರಸದೌತಣ ಉಣಬಡಿಸಲು ಹೊರಟಿದ್ದಾರೆ. ಗಣರಾಜ್ಯೋತ್ಸವದ ಶುಭದಿನದಂದು ಸಿನಿಮಾದ ಶೂಟಿಂಗ್ ಆರಂಭವಾಗಲಿದೆ.

ಭಾವನೆಗಳ ಹಾದಿಯಲಿ ಸೀತಾ ಪಯಣ

ಬಹುಭಾಷಾ ನಟ ಅರ್ಜುನ್ ಸರ್ಜಾ ನಟ ಮಾತ್ರವಲ್ಲ ನಿರ್ದೇಶಕರಾಗಿಯೂ ಪ್ರಸಿದ್ಧಿ ಪಡೆದಿದ್ದಾರೆ. ಜತೆಗೆ ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ಸದ್ಯ ಅರ್ಜುನ್ ಸರ್ಜಾ ಸೀತಾ ಪಯಣ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಲವ್ ಸ್ಟೋರಿಯ ಜತೆಗೆ ಸೆಂಟಿಮೆಂಟ್ ಬೆರೆತ ಈ ಚಿತ್ರದಲ್ಲಿ ನಿರಂಜನ್ ನಾಯಕನಾಗಿ ನಟಿಸಿದ್ದು, ಐಶ್ವರ್ಯಾ ಅರ್ಜುನ್ ನಾಯಕಿಯಾಗಿ ಮಿಂಚಲಿದ್ದಾರೆ.

ಉಳಿದಂತೆ ಪ್ರಕಾಶ್ ರೈ, ಸತ್ಯರಾಜ್, ಕೋವೈ ಸರಳ ಅವರಂತಹ ದೊಡ್ಡ ತಾರಾಬಳಗದ ಚಿತ್ರ ದಲ್ಲಿದೆ. ಅರ್ಜುನ್ ಸರ್ಜಾ ಅವರು ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿದ್ದು, ಧ್ರುವ ಸರ್ಜಾ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೀತಾ ಪಯಣ ಪ್ಯಾನ್ ಇಂಡಿಯಾ ಸಿನಿಮಾ ವಾಗಿದ್ದು ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ನಿರ್ಮಾಣವಾಗಿದೆ. ಫೆಬ್ರವರಿ 14ರ ಪ್ರೇಮಿಗಳ ದಿನದಂದು ಸೀತಾ ಪಯಣ ಅದ್ದೂರಿಯಾಗಿ ತೆರೆಗೆ ಬರಲಿದೆ. ಬಹಳ ದಿನಗಳ ನಂತರ ಸೀತಾ ಪಯಣ ಚಿತ್ರದಲ್ಲಿ ನಟಿಸಿದ್ದೇನೆ. ಅಪ್ಪ ಒಂದೊಳ್ಳೆಯ ಕಥೆಯನ್ನು ಹೆಣೆದು ನಿರ್ದೇಶನ ಮಾಡಿದ್ದಾರೆ. ಎಲ್ಲರೂ ಕುಟುಂಬ ಸಮೇತರಾಗಿ ಕುಳಿತು ನೋಡಬಹುದಾದ ಚಿತ್ರವಿದು. ಚಿತ್ರದ ಹಾಡುಗಳು ಈಗಾಗಲೇ ಎಲ್ಲರ ಮೆಚ್ಚುಗೆ ಪಡೆದಿವೆ. ಇನ್ನು ಎರಡು ಹಾಡುಗಳು ಶೀಘ್ರದಲ್ಲಿಯೇ ಬಿಡುಗಡೆಯಾಗಲಿವೆ ಎಂದು ಐಶ್ವರ್ಯಾ ಅರ್ಜುನ್ ತಿಳಿಸಿದರು. ಸೀತಾ ಪಯಣ ದಲ್ಲಿ ನಟಿಸಿದ್ದು ಬಹಳ ಸಂತೋಷವಾಗಿದೆ. ಇಡೀ ಚಿತ್ರತಂಡ ನಮ್ಮ ಕುಟುಂಬದಂತೆಯೇ ಇತ್ತು. ಅರ್ಜುನ್ ಸರ್ ಅವರ ಜತೆಗೆ ಕೆಲಸ ಮಾಡಿದ್ದು ಖುಷಿ ಇದೆ. ಅವರಿಂದ ತುಂಬಾ ಕಲಿತ್ತಿದ್ದೇನೆ ಎಂದು ನಟ ನಿರಂಜನ್ ಸಂತಸದಿಂದ ನುಡಿದರು. ಅನೂಪ್ ರುಬೆನ್ಸ್ ಸಂಗೀತ ನಿರ್ದೇಶನ, ಬಾಲಮುರುಗನ್ ಛಾಯಾಗ್ರಹಣ ಹಾಗೂ ಅಯೂಬ್ ಸಂಕಲನ ಈ ಚಿತ್ರಕ್ಕಿದೆ. ಶ್ರೀರಾಮ್ ಫಿಲಂಸ್ ಇಂಟರ್‌ನ್ಯಾಷನಲ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಸೀತಾ ಪಯಣದ ಕಥೆಯನ್ನು ಹದಿಮೂರು ವರ್ಷಗಳ ಹಿಂದೆಯೇ ಸಿದ್ಧ ಮಾಡಿಕೊಂಡಿದ್ದೆ. ಯಾವಾಗ ಇದನ್ನು ಚಿತ್ರದ ರೂಪದಲ್ಲಿ ತೆರೆಗೆ ತರುತ್ತೇನೋ ಎಂದು ಕಾಯುತ್ತಿದೆ. ಈಗ ಅದಕ್ಕೆ ಕಾಲ ಕೂಡಿಬಂದಿದೆ. ಅಂದುಕೊಂಡಂತೆ ಸಿನಿಮಾ ಸಿದ್ಧವಾಗಿದೆ. ನನ್ನ ಮಗಳು ಐಶ್ವರ್ಯಾ ನಾಯಕಿಯಾಗಿ ನಟಿಸಿದ್ದಾಳೆ. ಸೀತಾ ಪಯಣ, ಇದು ಬರೀ ವ್ಯಕ್ತಿಯ ಪಯಣವಲ್ಲ. ಭಾವನೆಗಳ ಜತೆಗಿನ ಸುಂದರ ಪಯಣ.

–**ಅರ್ಜುನ್ ಸರ್ಜಾ**